ಶನಿವಾರ, ಜುಲೈ 23, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿನಂದನೆ

ರಾಷ್ಟ್ರಪತಿಯಾಗಿ ಆಯ್ಕೆಯಾದ ಮೊದಲ ಆದಿವಾಸಿ ಮಹಿಳೆ ದ್ರೌಪದಿ ಮುರ್ಮು ಅವರಿಗೆ ನವದೆಹಲಿಯಲ್ಲಿ ಶುಕ್ರವಾರ ಸಿಕ್ಕಿಂನ ಬುಡಕಟ್ಟು ಮಹಿಳೆಯರು ಅಭಿನಂದನೆ ಸಲ್ಲಿಸಿದರು

ಶನಿವಾರ, ಜುಲೈ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 203 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ತಾಯ್ತನವೆಂಬುದು ಕಳ್ಳುಬಳ್ಳಿಯಾಚೆಗೂ ಹಬ್ಬುವ ಹೂಬಳ್ಳಿ. ಈ ಹೂಬಳ್ಳಿಯ ಕಥನವನ್ನು ರಂಗದ ಮೇಲೆ ತರಲಾಗುತ್ತಿದೆ..

ಚರ್ಚೆ
ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹೇರಿಕೆ ಜನವಿರೋಧಿ ಕ್ರಮ ಅಲ್ಲವೇ?

ಸಿಸೋಡಿಯಾ ವಿರುದ್ಧ ಸಿಬಿಐ ತನಿಖೆ 12

ಬಿಎಸ್‌ವೈ 'ಶಿಕಾರಿ': ಯಾರು ಗುರಿ? 7

ಸೆನ್ಸೆಕ್ಸ್	ನಿಫ್ಟಿ	₹/$
56,072 ▲	16,719 ▲	79.90 ▼

ರಾಷ್ಟ್ರ ಪ್ರಶಸ್ತಿ ಬಾಚಿದ ತಲೆದಂಡ, ಡೊಳ್ಳು, ಜೀಟಿಗೆ

ನವದೆಹಲಿ (ಪಿಟಿಐ): 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಶುಕ್ರವಾರ ಪ್ರಕಟವಾಗಿದ್ದು, 2020ನೇ ಸಾಲಿನಲ್ಲಿ ಬಿಡುಗಡೆಯಾದ ಚಿತ್ರಗಳ ಪೈಕಿ ತಮಿಳಿನ 'ಸೂರಾರೈ ಪೋಟ್ರು' ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಕನ್ನಡದ 'ತಲೆದಂಡ', 'ಡೊಳ್ಳು', 'ನಾದದ ನವನೀತ' ಹಾಗೂ ತುಳುವಿನ 'ಜೀಟಿಗೆ' ಚಿತ್ರಗಳು ರಜತ ಕಮಲ ಬಾಚಿಕೊಂಡಿವೆ. 8

ಹೇಮಾವತಿ– ನೇತ್ರಾವತಿ ನದಿ ಜೋಡಣೆಗೆ ಮರುಜೀವ

ನವದೆಹಲಿ: ಕರ್ನಾಟಕ ಸರ್ಕಾರದ ಆಕ್ಷೇಪದ ನಡುವೆಯೂ ನೇತ್ರಾವತಿ–ಹೇಮಾವತಿ ನದಿಗಳ ಜೋಡಣೆಗೆ ಪೂರ್ವ ಕಾರ್ಯ ಸಾಧ್ಯತಾ ವರದಿಯನ್ನು ಕೇಂದ್ರ ಜಲ ಶಕ್ತಿ ಸಚಿವಾಲಯ ಸಿದ್ಧಪಡಿಸಿದ್ದು, ಯೋಜನೆ ಮತ್ತೆ ಮುನ್ನೆಲೆಗೆ ಬಂದಿದೆ. 8

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕರ್ನಾಟಕ ಉದ್ಯೋಗ ನೀತಿ 2022–25ಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ

ಕನ್ನಡಿಗರಿಗೇ ಹೆಚ್ಚು ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಉದ್ಯೋಗ ನೀತಿ 2022– 25' ಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಎಲ್ಲ ರೀತಿಯ ಉದ್ಯಮಗಳು ಬಂಡವಾಳ ಹೂಡಿಕೆ ವಿಸ್ತರಣೆ ಮಾಡುವ ಸಂದರ್ಭ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸಬೇಕು ಮತ್ತು ಅವುಗಳನ್ನು ಕನ್ನಡಿಗರಿಗೇ ನೀಡಬೇಕು ಎಂಬ ಅಂಶವನ್ನು ಸೇರಿಸಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು. ಹೆಚ್ಚುವರಿ ಉದ್ಯೋಗ ಸೃಷ್ಟಿಯ ಪ್ರಮಾಣ ಶೇ 2.5 ರಿಂದ ಶೇ 3 ರಷ್ಟು ಆಗಲಿದೆ.

ಪ್ರಮುಖ ಅಂಶಗಳು

- ಹೆಚ್ಚು ಉದ್ಯೋಗ ಸೃಷ್ಟಿಸಲು ಕೈಗಾರಿಕೆಗಳಿಗೆ ಹೆಚ್ಚುವರಿ ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳಲಾಗುವುದು. ಅತಿ ಹೆಚ್ಚು ಉದ್ಯೋಗ ಸೃಷ್ಟಿಸುವ ವಲಯಗಳಾದ ಜವಳಿ, ಆಟಿಕೆ ತಯಾರಿಕೆ, ಎಫ್‌ಎಂಸಿಜಿ, ಚರ್ಮ ಉತ್ಪನ್ನಗಳು, ಆಹಾರ ಸಂಸ್ಕರಣೆ ಮತ್ತು ಆಭರಣ ಕ್ಷೇತ್ರಗಳಿಗೆ ಒತ್ತು ನೀಡಿ, ಹೂಡಿಕೆದಾರರನ್ನು ಆಕರ್ಷಿಸಲಾಗುವುದು.
- ಕೊಪ್ಪಳ ಜಿಲ್ಲೆಯಲ್ಲಿ ಆಟಿಕೆಗಳ ಕ್ಲಸ್ಟರ್, ಬೀದರ್‌ನಲ್ಲಿ ಕೃಷಿ ಉಪಕರಣಗಳ ಕ್ಲಸ್ಟರ್, ಹುಬ್ಬಳ್ಳಿಯಲ್ಲಿ ಗ್ರಾಹಕ ಬಾಳಿಕೆ ಬರುವ ಸರಕುಗಳು ಮತ್ತು ಉಪಕರಣಗಳ ಕ್ಲಸ್ಟರ್, ಧಾರವಾಡ ಜಿಲ್ಲೆಯಲ್ಲಿ ಫಾಸ್ಟ್ ಮೂವಿಂಗ್ ಮತ್ತು ಗ್ರಾಹಕ ಸರಕುಗಳ ಕ್ಲಸ್ಟರ್‌ಗಳಿಗೆ ವಿಶೇಷ ಪ್ರೋತ್ಸಾಹ.
- ಉದ್ಯೋಗಕ್ಕಾಗಿ ನಿರಂತರ ಬೇಡಿಕೆ ಮತ್ತು ರಾಜ್ಯದಲ್ಲಿ ನುರಿತ ಕಾರ್ಮಿಕ ಬಲದ ಲಭ್ಯತೆಯನ್ನು ಖಾತ್ರಿಪಡಿಸುವ ಪ್ರಾಮುಖ್ಯತೆ ನೀಡಲಾಗಿದೆ. ಈ ನೀತಿಯು ಉದ್ಯೋಗ ಸೃಷ್ಟಿಯ ಬೇಡಿಕೆ ಮತ್ತು ಪೂರೈಕೆಯ ಉಪಕ್ರಮಗಳನ್ನು ಸೂಚಿಸುತ್ತದೆ.

ಕೈಗಾರಿಕೆಗಳನ್ನು ಬಂಡವಾಳ ಹೂಡಿಕೆಯ ಪ್ರಮಾಣದ ಆಧಾರದ ಮೇಲೆ ಮಧ್ಯಮ, ಬೃಹತ್, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಕೈಗಾರಿಕೆಗಳೆಂದು ವರ್ಗೀಕರಿಸಲಾಗಿದೆ. ಹೂಡಿಕೆ ವಿಸ್ತರಣೆಯ ಸಂದರ್ಭದಲ್ಲಿ ಹೂಡಿಕೆ ಮೊತ್ತದ ಆಧಾರದಲ್ಲಿ ಹೆಚ್ಚುವರಿಯಾಗಿ ಎಷ್ಟು ಹುದ್ದೆಗಳನ್ನು ಸೃಷ್ಟಿ ಮಾಡಬೇಕು ಎಂಬ ಸಂಖ್ಯೆಗಳನ್ನೂ ನೀತಿಯಲ್ಲಿ ಸೂಚಿಸಲಾಗಿದೆ ಎಂದರು.

ಕನ್ನಡಿಗರು ಅಥವಾ ಸ್ಥಳೀಯರಿಗೆ ಎ,ಬಿ,ಸಿ ಮತ್ತು ಡಿ ದರ್ಜೆಯ ಹುದ್ದೆಗಳಲ್ಲಿ ಉದ್ಯೋಗ ನೀಡಬೇಕು. ಹಿಂದೆ ಕೇವಲ ಸಿ ಮತ್ತು ಡಿ ದರ್ಜೆಯ ಹುದ್ದೆಗಳಿಗೆ ಮಾತ್ರ ನೀಡಲಾಗುತ್ತಿತ್ತು. ಇನ್ನು ಮುಂದೆ ಎ ಮತ್ತು ಬಿ ದರ್ಜೆಗಳ ಉದ್ಯೋಗ ನೀಡುವುದೂ ಕಡ್ಡಾಯ. ಉದ್ಯೋಗ ನೀಡುವ ಸಂಬಂಧ ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆಯೋ ಇಲ್ಲವೋ ಎಂಬ ಬಗ್ಗೆ ಸರ್ಕಾರವೇ ಪರಿಶೀಲನೆ ನಡೆಸುತ್ತದೆ ಎಂದು ಮಾಧುಸ್ವಾಮಿ ಹೇಳಿದರು.

ಹೆಚ್ಚುವರಿ ಉದ್ಯೋಗ ಸೃಷ್ಟಿಯ ಪ್ರಮಾಣ: 'ಮಧ್ಯಮ' ಗಾತ್ರದ ಉದ್ಯಮಗಳು ಪ್ರತಿ ₹10 ಕೋಟಿ ಹೂಡಿಕೆಯ ಮೇಲೆ 7 ಉದ್ಯೋಗಗಳ ಬದಲಿಗೆ 10 ಉದ್ಯೋಗಗಳನ್ನು ಸೃಷ್ಟಿಸಬೇಕು. ಅಂದರೆ ಪ್ರತಿ ₹10 ಕೋಟಿ ಉದ್ಯಮಕ್ಕೆ ಇನ್ನು ಮುಂದೆ ತಲಾ 10 ಉದ್ಯೋಗಗಳನ್ನು ಸೃಷ್ಟಿಸಬೇಕು.

8ನೇ ಪುಟ ನೋಡಿ

2023ರ ಚುನಾವಣೆ: ಗೆಲ್ಲಿಸುವಂತೆ ಕ್ಷೇತ್ರದ ಜನರಿಗೆ ಬಿಎಸ್‌ವೈ ಮನವಿ

'ಶಿಕಾರಿಪುರದಿಂದ ವಿಜಯೇಂದ್ರ ಸ್ಪರ್ಧೆ'

ಪ್ರಜಾವಾಣಿ ವಾರ್ತೆ

ಶಿಕಾರಿಪುರ (ಶಿವಮೊಗ್ಗ): ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಶಿಕಾರಿಪುರ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಪರ್ಧೆ ಮಾಡುತ್ತಾರೆ ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ಘೋಷಿಸಿದರು.

ಅಂಜನಾಪುರ ಜಲಾಶಯಕ್ಕೆ ಶುಕ್ರವಾರ ಬಾಗಿನ ಅರ್ಪಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಈ ಮೂಲಕ ತಾವು ಶಿಕಾರಿಪುರದಿಂದ ಮತ್ತೆ ಸ್ಪರ್ಧಿಸುವುದಿಲ್ಲ. ಪುತ್ರ ವಿಜಯೇಂದ್ರ ಅವರೇ ತಮ್ಮ ಉತ್ತರಾಧಿಕಾರಿ ಎಂಬುದನ್ನು ಪರೋಕ್ಷವಾಗಿ ಸ್ಪಷ್ಟಪಡಿಸಿದ ಅವರು, 'ನನಗೆ ನೀಡಿದ್ದಕ್ಕಿಂತ ಹೆಚ್ಚು ಮತಗಳ ಅಂತರದಲ್ಲಿ ವಿಜಯೇಂದ್ರ ಅವರನ್ನು ಗೆಲ್ಲಿಸಬೇಕು' ಎಂದು ಮತದಾರರಲ್ಲಿ ಮನವಿ ಮಾಡಿದರು.

> **ರಾಜಕೀಯದಿಂದ ನಿವೃತ್ತಿ ಯಾಗುವುದಾಗಿ ಶಾಸಕ ಬಿ.ಎಸ್.ಯಡಿಯೂರಪ್ಪ ಹೇಳಿಲ್ಲ. ಅವರು ನಿರಂತರ ಹೋರಾಟಗಾರ. ಅವರು ಎಂದಿಗೂ ನಿವೃತ್ತಿ ಆಗುವುದಿಲ್ಲ**
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

7ನೇ ಪುಟ ನೋಡಿ

ಯಡಿಯೂರಪ್ಪ ವಿರುದ್ಧ ಕ್ರಿಮಿನಲ್ ವಿಚಾರಣೆ: ಹೈಕೋರ್ಟ್ ಆದೇಶಕ್ಕೆ ತಡೆ

ನವದೆಹಲಿ: ಅಕ್ರಮವಾಗಿ ಡಿ–ನೋಟಿಫೈ ಮಾಡಿದ ಪ್ರಕರಣದಲ್ಲಿ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಕ್ರಿಮಿನಲ್ ವಿಚಾರಣೆಗೆ ಸಂಬಂಧಿಸಿ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ಯಡಿಯೂರಪ್ಪ ಅವರ ಮೇಲ್ಮನವಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಹಾಗೂ ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠವು ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ನಡೆಯುತ್ತಿರುವ ಕ್ರಿಮಿನಲ್ ವಿಚಾರಣೆಯನ್ನು ರದ್ದುಗೊಳಿಸಬೇಕು ಎಂಬ ಯಡಿಯೂರಪ್ಪ ಮನವಿಯನ್ನು ಹೈಕೋರ್ಟ್ 2020ರ ಡಿಸೆಂಬರ್ 22ರಂದು ತಿರಸ್ಕರಿಸಿತ್ತು.

7ನೇ ಪುಟ ನೋಡಿ

ಮೆಟ್ರೊ: 5ಜಿ ನೆಟ್‌ವರ್ಕ್ ಪರೀಕ್ಷೆ ಯಶಸ್ವಿ

ಬೆಂಗಳೂರು: 5ಜಿ ನೆಟ್‌ವರ್ಕ್ ಪ್ರಾಯೋಗಿಕ ಪರೀಕ್ಷೆಯನ್ನು ನಗರದ ಎಂ.ಜಿ.ರಸ್ತೆಯಲ್ಲಿನ ಮೆಟ್ರೊ ರೈಲು ನಿಲ್ದಾಣವನ್ನು ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ (ಟ್ರಾಯ್) ನಡೆಸಿದ್ದು, ಪರೀಕ್ಷೆ ಯಶಸ್ವಿಯಾಗಿದೆ.

ಹೊರಾಂಗಣ ಸಣ್ಣ ಕೋಶಗಳು (ಒಡಿಎಸ್‌ಸಿ), ಡಿಸ್ಟ್ರಿಬ್ಯೂಟೆಡ್ ಆಂಟೆನಾ ಸಿಸ್ಟಮ್(ಡಿಎಎಸ್) ಒಳಗೊಂಡಿರುವ ವ್ಯವಸ್ಥೆಯನ್ನು ಎಂ.ಜಿ. ರಸ್ತೆಯ ನಿಲ್ದಾಣದಲ್ಲಿ ರಿಲಯನ್ಸ್ ಜಿಯೊ ಕಂಪನಿ ಜುಲೈ 5ರಂದು ಅಳವಡಿಕೆ ಮಾಡಿತ್ತು. ಜುಲೈ 21ರವರಗೆ ಪರೀಕ್ಷೆ ನಡೆಸಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

‘200 ಮೀಟರ್ ವ್ಯಾಸದಲ್ಲಿ 5ಜಿ ನೆಟ್‌ವರ್ಕ್ ಲಭ್ಯವಾಗುವಂತೆ ಅಳವಡಿಕೆ ಮಾಡಲಾಗಿತ್ತು. 1.45 ಜಿಬಿಪಿಎಸ್ ಡೌನ್‌ಲೋಡ್ ಮತ್ತು 65 ಎಂಬಿಪಿಎಸ್ ಅಪ್‌ಲೋಡ್ ವೇಗ ದಾಖಲಾಗಿದೆ. ಇದು 4ಜಿ ವೇಗಕ್ಕಿಂತ 50 ಪಟ್ಟು ಹೆಚ್ಚು ವೇಗವನ್ನು ಹೊಂದಿದೆ’ ಎಂದು ವಿವರಿಸಿದೆ.

5ಜಿ ನೆಟ್‌ವರ್ಕ್ ಅಳವಡಿಸಿರುವುದು

ವಿಮಾನ ನಿಲ್ದಾಣ, ಬಂದರು, ಮೆಟ್ರೊ ರೈಲು ನಿಲ್ದಾಣ, ರೈಲು ನಿಲ್ದಾಣಗಳಲ್ಲಿ ಪ್ರಾಯೋಗಿಕವಾಗಿ 5ಜಿ ನೆಟ್‌ವರ್ಕ್ ಅಳವಡಿಸುವ ಕಾರ್ಯವನ್ನು ಟ್ರಾಯ್ ಆರಂಭಿಸಿದೆ. 5ಜಿ ನೆಟ್‌ವರ್ಕ್ ಬಳಸಿದ ದೇಶದ ಮೊದಲ ಮೆಟ್ರೊ ಎಂಬ ಹೆಗ್ಗಳಿಕೆಗೆ ಬಿಎಂಆರ್‌ಸಿಎಲ್ ಪಾತ್ರವಾಗಿದೆ.



ರೋಹಿಣಿ ನಿಲೇಕಣಿ ಹೊಸ ಕೃತಿ ಆಗಸ್ಟ್ 4ಕ್ಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಹಿಣಿ ನಿಲೇಕಣಿ ಅವರ ಹೊಸ ಕೃತಿ ‘ಸಮಾಜ ಸರ್ಕಾರ, ಬಜಾರ್: ಎ ಸಿಟಿಜನ್– ಫಸ್ಟ್ ಅಪ್ರೋಚ್’ ಆಗಸ್ಟ್ 4ರಂದು ಬಿಡುಗಡೆಯಾಗಲಿದೆ.

ರೋಹಿಣಿ ನಿಲೇಕಣಿ

ಸಮಾಜದ ಮೂರು ವಲಯಗಳಲ್ಲಿ ಸಮತೋಲನ ಸಾಧಿಸುವ ಕುರಿತು ಕೃತಿಯಲ್ಲಿ ಬಿಂಬಿಸಲಾಗಿದೆ.

‘ಕಳೆದ ಮೂರು ದಶಕಗಳಲ್ಲಿ ಕೈಗೊಂಡಿರುವ ಪರೋಪಕಾರ ಕಾರ್ಯಗಳು ಮತ್ತು ನಾಗರಿಕ ಸಹಭಾಗಿತ್ವದ ಕಾರ್ಯಕ್ರಮಗಳಲ್ಲಿನ ಅನುಭವಗಳು ಈ ಕೃತಿಗೆ ರಚನೆ ಪ್ರೇರಣೆಯಾಗಿವೆ. ಮೂರು ಪ್ರಮುಖ ವಲಯಗಳಾದ ಸಮಾಜ, ಸರ್ಕಾರ ಮತ್ತು ಮಾರುಕಟ್ಟೆ ನಡುವೆ ಸಮತೋಲನ ಸಾಧಿಸುವ ಅಗತ್ಯದ ಬಗ್ಗೆ ನನ್ನ ಚಿಂತನೆಗಳನ್ನು ಈ ಹೊಸ ಕೃತಿಯು ಒಳಗೊಂಡಿದೆ’ ಎಂದು ರೋಹಿಣಿ ನಿಲೇಕಣಿ ತಿಳಿಸಿದ್ದಾರೆ.

‘ಚಿಂತಕರು, ಸಂಶೋಧಕರು, ಲೇಖಕರು ಸೇರಿದಂತೆ ಎಲ್ಲ ನಾಗರಿಕರು ಈ ಮೂರು ವಲಯಗಳು ವಹಿಸುತ್ತಿರುವ ಪಾತ್ರದ ಬಗ್ಗೆ ಸಮಗ್ರ ಚರ್ಚೆ ನಡೆಸಬೇಕು. ಈ ವಲಯಗಳು ಪರಸ್ಪರ ಗೌರವದಿಂದ ಕಾರ್ಯನಿರ್ವಹಿಸಬೇಕು’ ಎಂದು ವಿವರಿಸಿದ್ದಾರೆ.

ಈ ಕೃತಿಯು ಆಯ್ದ ಬುಕ್ ಸ್ಟೋರ್‌ಗಳು ಮತ್ತು ಇ-ಕಾಮರ್ಸ್ ವೇದಿಕೆಗಳಲ್ಲಿ ದೊರೆಯಲಿದೆ. ಜತೆಗೆ, www.samaajsarkaarbazaar.in ವೆಬ್‌ಸೈಟ್ ಮೂಲಕವೂ ಪಡೆಯಬಹುದಾಗಿದೆ.

35 ಮಕ್ಕಳ ರಕ್ಷಿಸಿದ್ದ ಮಹಿಳಾ ಕಾನ್‌ಸ್ಟೆಬಲ್‌ಗೆ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ ಕಳ್ಳ ಸಾಗಾಣಿಕೆ ಜಾಲಕ್ಕೆ ಸಿಲುಕಿ ಅಪಹರಣವಾಗಿದ್ದ 35 ಮಕ್ಕಳನ್ನು ರಕ್ಷಿಸಿದ್ದ ರೈಲ್ವೆ ರಕ್ಷಣಾ ಪಡೆಯ (ಆರ್‌ಪಿಎಫ್) ಬೆಂಗಳೂರು ವಿಭಾಗದ ಮಹಿಳಾ ಕಾನ್‌ಸ್ಟೆಬಲ್ ಜಿನಾ ಪಿಂಟೊ ಅವರಿಗೆ 2022ನೇ ಸಾಲಿನ ‘ಮಹಿಳಾ ಮತ್ತು ಬಾಲ ಸುರಕ್ಷಾ ಪದಕ’ ಪದಕ ಲಭಿಸಿದೆ.

ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಉತ್ತಮ ಕೆಲಸ ಮಾಡಿದ ರೈಲ್ವೆ ಇಲಾಖೆ ಸಿಬ್ಬಂದಿಗೆ ₹ 1 ಲಕ್ಷ ನಗದು ಬಹುಮಾನ ಸಮೇತ ಈ ಪದಕ ನೀಡಲಾಗುತ್ತದೆ.

ಇ-ಟಿಕೆಟ್ ಅಕ್ರಮ ಭೇದಿಸಿದ್ದ ಇನ್‌ಸ್ಪೆಕ್ಟರ್‌ಗೆ ಪದಕ: ರೈಲ್ವೆ ಇ-ಟಿಕೆಟ್ ಅಕ್ರಮ ಜಾಲ ಭೇದಿಸಿದ್ದ ರೈಲ್ವೆ ರಕ್ಷಣಾ ಪಡೆಯ (ಆರ್‌ಪಿಎಫ್) ಬೆಂಗಳೂರು ವಿಭಾಗದ ಇನ್‌ಸ್ಪೆಕ್ಟರ್ ಅಖಿಲೇಶ್ ತಿವಾರಿ ಅವರಿಗೂ ‘ಉತ್ತಮ ತನಿಖಾಧಿಕಾರಿ’ ಪದಕ ಲಭಿಸಿದೆ.

ಜಿನಾ ಪಿಂಟೊ

ಅಖಿಲೇಶ್ ತಿವಾರಿ

ಅಕ್ರಮ ಪತ್ತೆ ಮಾಡಿದ್ದ ತಿವಾರಿ, ಪ್ರಮುಖ ಆರೋಪಿಗಳಾದ ಹಮೀದ್ ಅಶ್ರಫ್ ಹಾಗೂ ಗುಲಾಂ ಮುಸ್ತಫಾ ಸೇರಿದಂತೆ 100 ಮಂದಿಯನ್ನು ಪೊಲೀಸರ ಸಹಾಯದಿಂದ ಬಂಧಿಸಿದ್ದರು. ರೈಲ್ವೆ ಇಲಾಖೆಗೆ ಆಗುತ್ತಿದ್ದ ನೂರಾರು ಕೋಟಿ ರೂಪಾಯಿ ನಷ್ಟ ತಪ್ಪಿಸಿದ್ದರು.

ತಿವಾರಿ ಅವರ ತನಿಖಾ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದ ರೈಲ್ವೆ ಇಲಾಖೆ, ₹ 50 ಸಾವಿರ ನಗದು ಬಹುಮಾನ ಸಮೇತ ಉತ್ತಮ ತನಿಖಾಧಿಕಾರಿ ಪದಕ ನೀಡಿದೆ.

ಮುಖ್ಯಮಂತ್ರಿಯವರ ಬಹುಮಹಡಿ ಬೆಂಗಳೂರು ವಸತಿ ಯೋಜನೆ

2 ಬಿಎಚ್‌ಕೆ ಫ್ಲ್ಯಾಟ್ ದರ ₹ 1 ಲಕ್ಷ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿಯವರ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ'ಯಡಿ ಎರಡು ಕೊಠಡಿ ಮತ್ತು ಅಡುಗೆಮನೆಗಳಿರುವ (ಬಿಎಚ್‌ಕೆ) ಫ್ಲ್ಯಾಟ್ ದರವನ್ನು ₹ 1 ಲಕ್ಷ ಕಡಿಮೆ ಮಾಡಿ ವಿತರಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 1 ಬಿಎಚ್‌ಕೆ ಮನೆಗೆ ಈಗಾಗಲೇ ಸಹಾಯಧನ ನೀಡಲಾಗಿದೆ ಎಂದರು.

ಒಟ್ಟು 46,499 ಬಹುಮಹಡಿ ಮನೆಗಳಲ್ಲಿ 8,096 ಫ್ಲ್ಯಾಟ್‌ಗಳ ಬೆಲೆಯನ್ನು ₹15 ಲಕ್ಷಗಳಿಂದ ₹14 ಲಕ್ಷಕ್ಕೆ ಇಳಿಸಲು ಪರಿಷ್ಕರಿಸಲು ತೀರ್ಮಾನಿಸಲಾಗಿದೆ. ಸಾರ್ವಜನಿಕರಿಂದ ಆನ್‌-ಲೈನ್ ಮೂಲಕ ಅರ್ಜಿ ಆಹ್ವಾನಿಸಿ ಮೊದಲು ಬಂದವರಿಗೆ ಆದ್ಯತೆ ಆಧಾರದಲ್ಲಿ ಮಾರಾಟ ಮಾಡಲು ಒಪ್ಪಿಗೆ ನೀಡಲಾಯಿತು.

ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ 1 ಬಿಎಚ್‌ಕೆ ಮತ್ತು 2 ಬಿಎಚ್‌ಕೆ ಫ್ಲ್ಯಾಟ್‌ಗಳನ್ನು ಪೂರ್ಣಗೊಳಿಸಲು ವಾಣಿಜ್ಯ ಬ್ಯಾಂಕ್/ಹುಡ್ಕೊ ಸಂಸ್ಥೆಯಿಂದ ಆರ್‌ಜಿಎಚ್‌ಸಿಎಲ್ ಸಂಸ್ಥೆಯ ₹250 ಕೋಟಿ ಸಾಲ ಪಡೆಯಲು ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) ಎಎಚ್‌ಪಿ ಘಟಕದಡಿ ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳಿಗೆ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯು ₹100 ಕೋಟಿ ಸಾಲ ಪಡೆಯಲು ಸರ್ಕಾರಿ ಖಾತರಿ ನೀಡಲು ಅನುಮತಿ ನೀಡಲಾಯಿತು ಎಂದು ಮಾಧುಸ್ವಾಮಿ ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆ ದಕ್ಷಿಣ ತಾಲ್ಲೂಕು ಹೊಸಕೆರೆಹಳ್ಳಿ ಸಮೀಪ ಬೆಂಗಳೂರು ಸೌತ್ ಸೆಂಟರ್‌ಗೆ 5 ಗುಂಟೆ ಜಮೀನು ಮಂಜೂರು ಮಾಡಲು ತೀರ್ಮಾನಿಸಲಾಗಿದ್ದು, ಬಡ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟಡ ನಿರ್ಮಾಣ, ಶೈಕ್ಷಣಿಕ ಉನ್ನತೀಕರಣ, ಐಎಎಸ್, ಐಪಿಎಸ್ ಚಟುವಟಿಕೆಗಳನ್ನು ಸಂಸ್ಥೆ ನಿರ್ವಹಿಸಲಿದೆ ಎಂದು ಅವರು ತಿಳಿಸಿದರು.

ಅನಂತಕುಮಾರ್ ಪ್ರತಿಷ್ಠಾನಕ್ಕೆ ಜಮೀನು

ಅನಂತಕುಮಾರ್ ಪ್ರತಿಷ್ಠಾನಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ಹೆಗ್ಗನಹಳ್ಳಿಯಲ್ಲಿ 3.10 ಎಕರೆ ಖರಾಬು ಜಮೀನು ನೀಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಇಲ್ಲಿ ಸಂಶೋಧನಾ ತರಬೇತಿ, ಹಸಿರು ಜೀವನ ಶೈಲಿ ಅಳವಡಿಕೆ ಮತ್ತು ಹಸಿರು ಸ್ವಾಸ್ಥ್ಯ ಸಮಾಜ ನಿರ್ಮಾಣ ಮುಂತಾದ ಚಟುವಟಿಕೆಗಳಿಗಾಗಿ ದಿವಂಗತ ಅನಂತಕುಮಾರ್ ಜನ್ಮದಿನದಂದೇ ಪ್ರತಿಷ್ಠಾನಕ್ಕೆ ಜಮೀನು ಮಂಜೂರು ಮಾಡಲಾಗಿದೆ.

ಅಪಘಾತ ಪ್ರಕರಣ: ಟಿಪ್ಪರ್ ಲಾರಿ ಚಾಲಕನ ಬಂಧನ

ಬೆಂಗಳೂರು: ವಿಲ್ಸನ್ ಗಾರ್ಡನ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಅಪಘಾತ ಪ್ರಕರಣ ಸಂಬಂಧ, ಟಿಪ್ಪರ್ ಲಾರಿ ಚಾಲಕ ರಾಮಸ್ವಾಮಿ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಜುಲೈ 16ರ ರಾತ್ರಿ ರಸ್ತೆಯಲ್ಲಿ ಹೊರಟಿದ್ದ ವ್ಯಕ್ತಿಯೊಬ್ಬರಿಗೆ ಲಾರಿ ಡಿಕ್ಕಿ ಹೊಡೆದಿತ್ತು. ಲಾರಿ ಚಕ್ರವು ವ್ಯಕ್ತಿಯ ಮೈ ಮೇಲೆ ಹರಿದುಹೋಗಿತ್ತು. ಸ್ಥಳದಲ್ಲೇ ಅವರು ಮೃತಪಟ್ಟಿದ್ದರು. ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಅಪಘಾತದ ಬಳಿಕ ಪರಾರಿಯಾಗಿದ್ದ ಚಾಲಕ ರಾಮಸ್ವಾಮಿ ಅವರನ್ನು ತಾಂತ್ರಿಕ ಪುರಾವೆಗಳ ಸಹಾಯದಿಂದ ಪತ್ತೆ ಮಾಡಿ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಆರ್‌.ಆರ್. ನಗರದಲ್ಲಿ ಪೌರಕಾರ್ಮಿಕರ ಭಿನ್ನ ಪ್ರಯೋಗ

ಸ್ವಚ್ಛತೆಗೆ ಹಬ್ಬದ ಸಿಂಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿನವೂ ಕಸವನ್ನು ಜನರ ಮನೆಯ ಬಾಗಿಲಿಗೆ ಹೋಗಿ ಪಡೆಯುತ್ತೇವೆ. ಆದರೂ ಕೆಲವರು ರಸ್ತೆಯ ಬದಿಯಲ್ಲಿ ತ್ಯಾಜ್ಯವನ್ನು ರಾತ್ರಿ, ಬೆಳಗಿನ ಜಾವ ಹಾಕಿಹೋಗುತ್ತಾರೆ. ಇಂತಹ ಸ್ಥಳಗಳನ್ನು ಸ್ವಚ್ಛ ಮಾಡಿ, ಸಿಂಗಾರ ಮಾಡಿ, ದೇವರ ಫೋಟೊ ಇಟ್ಟು ಕಸ ಹಾಕದಂತೆ ಅರಿವು ಮೂಡಿಸಿ, ಮನವಿ ಮಾಡುತ್ತಿದ್ದೇವೆ...'

ಬಿಬಿಎಂಪಿ ರಾಜರಾಜೇಶ್ವರಿ ನಗರ ವಾರ್ಡ್‌ನಲ್ಲಿ ಪೌರಕಾರ್ಮಿಕರು ಈ ಮನವಿಯೊಂದಿಗೆ, ರಸ್ತೆಗಳಲ್ಲಿ ಅಂದರೆ ಎಲ್ಲಿ ನಿತ್ಯವೂ ನಾಗರಿಕರು ಕಸ ಹಾಕುತ್ತಾರೋ ಅಲ್ಲಿ (ಬ್ಲ್ಯಾಕ್ ಸ್ಪಾಟ್) 'ಹಬ್ಬದ ಸಿಂಗಾರ' ಮಾಡಿದ್ದಾರೆ.

ರಸ್ತೆ ಬದಿಯನ್ನು ಸ್ವಚ್ಛಗೊಳಿಸಿ, ಬದಿಗೆ ಸುಣ್ಣ ಬಳಿದು, ಸಗಣಿಯಿಂದ ಸಾರಿಸಿದ್ದಾರೆ. ರಂಗೋಲಿ ಹಾಕಿ, ಹಲವು ದೇವರ ಚಿತ್ರಗಳನ್ನು ಇಲ್ಲಿ ಇಟ್ಟಿದ್ದಾರೆ. ಈ ಬ್ಲ್ಯಾಕ್ ಸ್ಪಾಟ್‌ನಲ್ಲಿ ಚಪ್ಪಲಿ, ಶೂ, ಬಾಳೆಕಂದಿನಿಂದ ತೋರಣ ಕಟ್ಟಿದ್ದಾರೆ.

'ಇಷ್ಟೊಂದು ರೀತಿಯಲ್ಲಿ ಸಿಂಗಾರ ಮಾಡಿದ್ದೇವೆ. ಇನ್ನಾದರೂ ಕಸ ಹಾಕುವುದನ್ನು ನಿಲ್ಲಿಸಲಿ' ಎಂದು ಪೌರಕಾರ್ಮಿಕರಾದ ರಾಮಕ್ಕ ಹೇಳಿದರು.

'ಕಸ ತೆಗೆದುಕೊಂಡು ಮನೆ ಬಾಗಿಲಿಗೇ ಬರುತ್ತೇವೆ. ದಯವಿಟ್ಟು ಕಸ ವಿಂಗಡಿಸಿ ನಮಗೆ ನೀಡಿ. ರಸ್ತೆಯಲ್ಲಿ ಸುರಿದು ಹೋದರೆ ಸೊಳ್ಳೆ ಕಾಟವಾಗುತ್ತದೆ. ನಾಯಿಗಳು ಅದನ್ನೆಲ್ಲ ಚೆಂದಿ ಮಾಡಿರುತ್ತವೆ. ಬಳಿಯಲು ನಮಗೆ ಕಷ್ಟವಾಗುತ್ತದೆ' ಎನ್ನುತ್ತಾರೆ ಪೌರಕಾರ್ಮಿಕರಾದ ಬೀರಲಿಂಗ, ರಾಮಕೃಷ್ಣ.

'ರಾಜರಾಜೇಶ್ವರಿ ನಗರ 160ನೇ ವಾರ್ಡ್‌ನಲ್ಲಿ ಕಸ ಎಸೆಯುವ ಬ್ಲ್ಯಾಕ್ ಸ್ಪಾಟ್‌ಗಳನ್ನು ನಾವು ಗುರುತಿಸಿದ್ದೇವೆ. ಅಂತಹ ಕಡೆ ಈ ರೀತಿ ಮಾಡಿ ನಾಗರಿಕರಲ್ಲಿ ಅರಿವು ಮೂಡಿಸುತ್ತಿದ್ದೇವೆ. ಕಸ ಸುರಿದರೆ ದಂಡ ಎಂಬುದನ್ನೂ ಹೇಳುತ್ತಿದ್ದೇವೆ. ಸಿಸಿಟಿವಿ ಕ್ಯಾಮೆರಾ ಸಹಾಯದಿಂದ ಯಾರು ಕಸ ಹಾಕುತ್ತಾರೆ ಎಂಬುದನ್ನು ಗುರುತಿಸುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಆರ್‌.ಆರ್. ನಗರ ವಾರ್ಡ್ ಆರೋಗ್ಯ ನಿರೀಕ್ಷಕ ಶರತ್ ಹೇಳಿದರು.

ಬಿಬಿಎಂಪಿಯ ರಾಜರಾಜೇಶ್ವರಿನಗರ ವಾರ್ಡ್‌ನಲ್ಲಿ ಪೌರ ಕಾರ್ಮಿಕರು ಕಸ ಹಾಕಬೇಡಿ ಎಂದು ರಸ್ತೆ ಬದಿಯಲ್ಲಿ ಸಿಂಗಾರ ಮಾಡಿರುವುದು

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ....

ಪ್ರಜಾವಾಣಿ ನೋಡಿಯೊ

ಸಿದ್ದರಾಮಯ್ಯಗೆ ಅಂಬೇಡ್ಕರ್ ಪ್ರಶಸ್ತಿ

ಬೆಂಗಳೂರು: ತಮಿಳುನಾಡಿನ ವಿಡುದಲೈ ಸಿರುದೈಗಳ್ (ವಿಸಿಕೆ) ಪಕ್ಷ ನೀಡುವ 'ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ'ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಆಯ್ಕೆಮಾಡಲಾಗಿದೆ.

ವಿಸಿಕೆ ಪಕ್ಷವು ಅಂಬೇಡ್ಕರ್ ಹೆಸರಿನಲ್ಲಿ ಪ್ರತಿ ವರ್ಷವೂ ಪ್ರಶಸ್ತಿ ನೀಡುತ್ತದೆ. ಈ ವರ್ಷ ಸಿದ್ದರಾಮಯ್ಯ ಅವರಿಗೆ ಈ ಪ್ರಶಸ್ತಿ ನೀಡಿ, ಗೌರವಿಸಲು ಪಕ್ಷ ತೀರ್ಮಾನಿಸಿದೆ. ಇದೇ 30ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ. ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿದ ವಿಸಿಕೆ ಪಕ್ಷದ ಸಂಸದ ತಿರುಮಾವಲವನ್, ಸಮಾರಂಭಕ್ಕೆ ಹಾಜರಾಗಿ ಪ್ರಶಸ್ತಿ ಸ್ವೀಕರಿಸುವಂತೆ ಆಹ್ವಾನ ನೀಡಿದರು. ಈ ಸಂದರ್ಭದಲ್ಲಿ ಶಾಸಕ ಬೈರತಿ ಸುರೇಶ್, ವಿಧಾನ ಪರಿಷತ್ ಸದಸ್ಯ ನಜೀರ್ ಅಹಮ್ಮದ್, ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ ಇದ್ದರು.

ಗಗನ್ ಆಯ್ಕೆ

ಕೆ.ಆರ್.ಪುರ: ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್‌ನ ಸಾಮಾಜಿಕ ಜಾಲ ತಾಣ ವಿಭಾಗದ ಅಧ್ಯಕ್ಷರಾಗಿ ಕೆ.ಆರ್. ಪುರದ ಗಗನ್ ಯಾದವ್ ಆಯ್ಕೆ ಆಗಿದ್ದಾರೆ. ಭಾರತೀಯ ಯುವ ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣದ ರಾಷ್ಟ್ರೀಯ ಅಧ್ಯಕ್ಷ ಮನು ಜೈನ್ ಅವರ ಆದೇಶ ದಂತೆ ಆಯ್ಕೆ ಮಾಡಲಾಗಿದೆ.

ಶೇಷಾದ್ರಿಪುರದಲ್ಲಿ ಕಾರಿಗೆ ಬೆಂಕಿ: ಆರೋಪಿ ಬಂಧನ

ಬೆಂಗಳೂರು: ಶಾಂತಿನಗರದ ಇ.ಡಿ ಕಚೇರಿ ಎದುರು ಕಾಂಗ್ರೆಸ್ ವತಿಯಿಂದ ಗುರುವಾರ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲೇ ಶೇಷಾದ್ರಿಪುರದಲ್ಲಿ ಕಾರಿಗೆ ಬೆಂಕಿ ಹಚ್ಚಿದ್ದ ಪ್ರಕರಣದಲ್ಲಿ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಸಂಜಯನಗರದ ನಿವಾಸಿ ಮಲ್ಲಿಕಾರ್ಜುನ್ ಬಂಧಿತ. ಯುವ ಕಾಂಗ್ರೆಸ್ ಕಾರ್ಯಕರ್ತರ ಜೊತೆ ಒಡನಾಟ ಹೊಂದಿದ್ದ ಆರೋಪಿ, ಕಾರಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದ. ಇದೀಗ ಈತನನ್ನು ಬಂಧಿಸಲಾಗಿದ್ದು, ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಪ್ರತಿಭಟನೆಯತ್ತ ಜನರ ಗಮನ ಸೆಳೆಯುವ ಉದ್ದೇಶದಿಂದ ಯುವ ಕಾಂಗ್ರೆಸ್ ಕಾರ್ಯಕರ್ತರೇ ವಿಲ್ಸನ್ ಗಾರ್ಡನ್, ಶೇಷಾದ್ರಿಪುರ ಠಾಣೆ ವ್ಯಾಪ್ತಿಯಲ್ಲಿ ಕಾರಿಗೆ ಬೆಂಕಿ ಹಚ್ಚಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ. ಇದು ಪೂರ್ವನಿಯೋಜಿತ ಕೃತ್ಯವಾಗಿದ್ದು, ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಮತಾಂತರ ಕಾಯ್ದೆ ಪ್ರಶ್ನಿಸಿದ ಪಿಐಎಲ್: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ಬಲವಂತದ ಮತಾಂತರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲಾಗಿರುವ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಕಾಯ್ದೆ ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ದೆಹಲಿಯ, 'ಇವಾನಲಿಕಲ್ ಫೆಲೋಶಿಪ್ ಆಫ್ ಇಂಡಿಯಾ' ಮತ್ತು 'ಆಲ್ ಕರ್ನಾಟಕ ಯುನೈಟೆಡ್ ಕ್ರಿಶ್ಚಿಯನ್ ಫೋರಂ ಫಾರ್ ಹ್ಯೂಮನ್ ರೈಟ್ಸ್ ಸಂಸ್ಥೆ' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿಗೆ ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

'ಈ ಕಾಯ್ದೆಯು, ಧಾರ್ಮಿಕ ಸ್ವಾತಂತ್ರ್ಯವನ್ನು ಖಾತ್ರಿಪಡಿಸುವ ಸಂವಿಧಾನದ 25ನೇ ವಿಧಿ ಮತ್ತು ಜಾತ್ಯತೀತ ತತ್ವಗಳಿಗೆ ವಿರುದ್ಧವಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಅರ್ಜಿದಾರರ ಪರ ಹಿರಿಯ ವಕೀಲ ಆದಿತ್ಯ ಸೋಂಧಿ ಹಾಗೂ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ವಾದ ಮಂಡಿಸಿದರು.

'2022ರ ಮೇ 17ರಿಂದ ಜಾರಿಗೆ ಬಂದಿರುವ ಸುಗ್ರೀವಾಜ್ಞೆ ಅಡಿಯಲ್ಲಿ ಯಾರ ವಿರುದ್ಧವೂ ಕ್ರಮ ಕೈಗೊಳ್ಳದಂತೆ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಮಧ್ಯಂತರ ಮನವಿ ಮಾಡಿದ್ದಾರೆ.

ಸರಗಳವು: ಬ್ಯಾಂಕ್ ಉದ್ಯೋಗಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನಲ್ಲಿ ಬಂದು ಮಹಿಳೆಯೊಬ್ಬರ ಸರ ಕಿತ್ತೊಯ್ದಿದ್ದ ಆರೋಪಿ ಸೋಮಶೇಖರ್ (45) ಎಂಬುವರನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆನೇಕಲ್‌ನ ಸೋಮಶೇಖರ್ ಖಾಸಗಿ ಬ್ಯಾಂಕೊಂದರಲ್ಲಿ ಕೆಲಸ ಮಾಡುತ್ತಿದ್ದ. ಜೀವನ ನಿರ್ವಹಣೆಗೆ ವೇತನ ಸಾಲದಿದ್ದರಿಂದ ಸರಗಳವು ಹಾಗೂ ಸುಲಿಗೆ ಕೃತ್ಯ ಎಸಗಲಾರಂಭಿಸಿದ್ದ. ಈತನಿಂದ ಚಿನ್ನದ ಸರ, ಕಾರು ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ, ಲ್ಯಾಪ್‌ಟಾಪ್ ಸುಲಿಗೆ ಸಹ ಮಾಡಿದ್ದ. ಈ ಹಿಂದೆ ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿ ಜೈಲಿಗಟ್ಟಿದ್ದರು. ಜಾಮೀನಿನ ಮೇಲೆ ಹೊರಬಂದಿದ್ದ ಆರೋಪಿ, ಹಳೇ ಚಾಳಿ ಮುಂದುವರಿಸಿದ್ದ' ಎಂದೂ ತಿಳಿಸಿದರು.

ಶಿಕಾರಿಪುರಕ್ಕೆ ವಿಜಯೇಂದ್ರರೇ ಅಭ್ಯರ್ಥಿ • ಬಿಜೆಪಿ ವರಿಷ್ಠರಿಗೆ ಸವಾಲು

ಬಿಎಸ್‌ವೈ ‘ಶಿಕಾರಿ’: ಯಾರು ಗುರಿ?

• ವೈ.ಗ.ಜಗದೀಶ್

ಸುದ್ದಿ ವಿಶ್ಲೇಷಣೆ

ಮುಖ್ಯಮಂತ್ರಿ ಸ್ಥಾನದಿಂದ ಇಳಿದು ಒಂದು ವರ್ಷ ಪೂರ್ಣಗೊಳ್ಳುತ್ತಿರುವ ಹೊತ್ತಿನಲ್ಲಿ ಮೌನ ಮುರಿದಿರುವ ಬಿ.ಎಸ್. ಯಡಿಯೂರಪ್ಪ, ತಮ್ಮ ರಾಜಕೀಯ ಕರ್ಮಭೂಮಿ ಶಿಕಾರಿಪುರಕ್ಕೆ ಬಿ.ವೈ. ವಿಜಯೇಂದ್ರ ಅವರೇ ಮುಂದಿನ ಅಭ್ಯರ್ಥಿ ಎಂದು ಘೋಷಿಸುವ ಮೂಲಕ ಬಿಜೆಪಿ ವರಿಷ್ಠರಿಗೆ ಸವಾಲು ಎಸೆದಿದ್ದಾರೆ.

ವೈಶ್ಯ-ವೀರಶೈವ ಸದ್ದಡಗಿದಾಗ ‘ಮಮತೆ’ಯ ಪುತ್ರನನ್ನು ವಿಧಾನಸಭೆಯೊಳಗೆ ಪ್ರತಿಷ್ಠಾಪಿಸಲೇಬೇಕೆಂಬ ಶಪಥ ಮಾಡಿದಂತಿರುವ ಯಡಿಯೂರಪ್ಪ, ಚುನಾವಣೆಗೆ ಒಂಬತ್ತು ತಿಂಗಳು ಇರುವ ಮೊದಲೇ ಆಖಾಡಕ್ಕೆ ಇಳಿದಿದ್ದಾರೆ. ಮಗನಿಗೆ ಬಿಜೆಪಿ ಟಿಕೆಟ್ ಸಿಗದಿದ್ದರೆ ಆತ ಸ್ಪರ್ಧಿಸುವುದು ಖಚಿತ ಎಂಬ ಸಂದೇಶವನ್ನೂ ಈ ಮೂಲಕ ತಮ್ಮನ್ನು ನಿರ್ಲಕ್ಷಿಸುತ್ತಾ ಬಂದಿರುವ ವರಿಷ್ಠರಿಗೆ ಸಂದೇಶವನ್ನೂ ರವಾನಿಸಿದ್ದಾರೆ.

2018ರ ಚುನಾವಣೆಯಲ್ಲಿ ಬಹುಮತ ಬರದೇ ಇದ್ದರೂ ಛಲ ಬಿಡದ ಯಡಿಯೂರಪ್ಪ, ‘ಆಪರೇಷನ್ ಕಮಲ’ ನಡೆಸಿ ಬಿಜೆಪಿಯನ್ನು ರಾಜ್ಯದಲ್ಲಿ ಮರಳಿ ಅಧಿಕಾರಕ್ಕೆ ತಂದರು. ಎರಡು ವರ್ಷ ಪೂರೈಸುತ್ತಿದ್ದಂತೆ ಅವರನ್ನು ರಾಜೀನಾಮೆಯ ನೆಪದಲ್ಲಿ ಅಧಿಕಾರದಿಂದ ಕೆಳಗಿಳಿಸಲಾಯಿತು. ಅಧಿಕಾರ ಪೂರೈಸಲು ವರಿಷ್ಠರು ಬಿಡಲಿಲ್ಲ ಎಂಬ ಅಸಮಾಧಾನ ಇಟ್ಟುಕೊಂಡೇ ಯಡಿಯೂರಪ್ಪ ಮನದಿಂದ ಹೊರಗೇ ಇಲ್ಲ. ‘ಉತ್ತರಾಧಿಕಾರಿ’ ಎಂದು ಅವರ ಕುಟುಂಬಸ್ಥರು ಬಿಂಬಿಸುವ ವಿಜಯೇಂದ್ರ ಅವರಿಗೆ ಪಕ್ಷ ಹಾಗೂ ಸರ್ಕಾರದಲ್ಲಿ ಅಯಕಟ್ಟಿನ ಹುದ್ದೆ ಕೊಡಿಸಲು ಯಡಿಯೂರಪ್ಪ ಶತಾಯಗತಾಯ ಯತ್ನಿಸುತ್ತಲೇ ಬಂದರು.

‘ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಮೇಲೆ ಒತ್ತಡ ತಂದು, ವಿಜಯೇಂದ್ರಗೆ ರಾಜಕೀಯ ಪ್ರವೇಶಕ್ಕೆ ಅವಕಾಶ ಕಲ್ಪಿಸಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ಆರಂಭಿಕ ನಲ್ಮೈದು ತಿಂಗಳು ಒತ್ತಡವನ್ನು ಹಾಕಿದರು. ಬೊಮ್ಮಾಯಿಯವರು ಈ ವಿಷಯವನ್ನು ಮೋದಿ–ಶಾ ಗಮನಕ್ಕೆ ತಂದರೂ ನಿರೀಕ್ಷಿತ ಮಟ್ಟದ ಸ್ಪಂದನ ಸಿಗಲಿಲ್ಲ. ಈ ವಿಷಯವನ್ನು ಯಡಿಯೂರಪ್ಪರಿಗೆ ಮನವರಿಕೆ ಮಾಡಿಕೊಟ್ಟ ಬೊಮ್ಮಾಯಿ, ಒತ್ತಡದಿಂದ ಪಾರಾದರು. ಆದರೆ, ಕುಟುಂಬದವರ ಒತ್ತಡದ ಕಾರಣಕ್ಕೆ ಈ ವಿಷಯದಿಂದ ಹಿಂಜರಿಯುವ ಪರಿಸ್ಥಿತಿಯಲ್ಲಿ ಯಡಿಯೂರಪ್ಪ ಕೂಡ ಇರಲಿಲ್ಲ. ಪಕ್ಷವನ್ನು ಸಂಘಟಿಸುವ ಉದ್ದೇಶದಿಂದ ರಾಜ್ಯ ಪ್ರವಾಸ ಕೈಗೊಳ್ಳುವುದಾಗಿ ಯಡಿಯೂರಪ್ಪ ಅನೇಕ ಬಾರಿ ಪ್ರಕಟಿಸಿದರು. ಆದರೆ, ಪಕ್ಷದ ವರಿಷ್ಠರಿಂದ ಸಮ್ಮತಿ ಸಿಗಲೇ ಇಲ್ಲ. ಒಂದು ವರ್ಷದಿಂದ ಈಚೆಗೆ ನಡೆದ ವಿಧಾನಸಭೆ, ರಾಜ್ಯಸಭೆ, ವಿಧಾನಪರಿಷತ್ತಿನ ಚುನಾವಣೆಗಳ ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ತಮ್ಮನ್ನು ಕಡೆಗಣಿಸಿರುವುದು ಯಡಿಯೂರಪ್ಪ ಅವರ ಸಹನೆಯನ್ನು ಕೆಣಕಿದೆ. ಜೂನ್ 20 ಮತ್ತು 21ರಂದು ಪ್ರಧಾನಿ ರಾಜ್ಯಕ್ಕೆ ಭೇಟಿ ನೀಡಿದಾಗಲೂ ಅಧಿಕೃತ ಕಾರ್ಯಕ್ರಮಗಳಿಗೆ ಆಹ್ವಾನ ನೀಡದಿರುವುದು ಅವರ ಅಸಮಾಧಾನ ಹೆಚ್ಚಲು ಕಾರಣವಾಗಿತ್ತು.

‘ಬಿಜೆಪಿಯಲ್ಲಿ ಇನ್ನು ಕುಟುಂಬ ರಾಜಕಾರಣಕ್ಕೆ ಅವಕಾಶವಿಲ್ಲ’ ಎಂದು ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅನೇಕ ಬಾರಿ ಹೇಳಿದ್ದಾರೆ. ಈಗ ಶಾಸಕರಾಗಿರುವ ಯಡಿಯೂರಪ್ಪ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿಯಲ್ಲಿ ಸದಸ್ಯ ಮಾತ್ರ ಆಗಿದ್ದಾರೆ. ಸಂಭಾವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಶಿಫಾರಸು ಮಾಡುವುದಷ್ಟೇ ಈ ಸಮಿತಿಗೆ ಇರುವ ಅಧಿಕಾರ. ಅಭ್ಯರ್ಥಿ ಘೋಷಿಸುವ ಅಧಿಕಾರ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿಗೆ ಮಾತ್ರ ಇರುವುದು. ಹೀಗಿದ್ದರೂ, ಯಡಿಯೂರಪ್ಪ ತಾವು ಪ್ರತಿನಿಧಿಸುವ ಶಿಕಾರಿಪುರ ವಿಧಾನಸಭಾ ಕ್ಷೇತ್ರಕ್ಕೆ ಮಗನೇ ಅಭ್ಯರ್ಥಿ ಎಂದು ಘೋಷಿಸಿರುವುದು ಅನೇಕರ ಹುಬ್ಬೇರಿಸಿದೆ.

2018ರ ಚುನಾವಣೆಯಲ್ಲಿಯೇ ಮೈಸೂರಿನ ವರುಣಾ ಕ್ಷೇತ್ರದಿಂದ ಸ್ಪರ್ಧಿಸುವ ತಯಾರಿಯನ್ನು ವಿಜಯೇಂದ್ರ ಹೊಂದಿದ್ದರು. ಯಡಿಯೂರಪ್ಪ ಅವರಿಗೂ ಅಪೇಕ್ಷೆ ಇತ್ತು. ಆದರೆ, ಅವಕಾಶ ನಿರಾಕರಿಸಿದ್ದ ಪಕ್ಷದ ವರಿಷ್ಠರು, ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದರು. ನಂತರ ಮಂಡ್ಯದ ಕೆ.ಆರ್. ಪೇಟೆ ವಿಧಾನಸಭೆ ಕ್ಷೇತ್ರದ ಮೇಲೆ ಕಣ್ಣಿಟ್ಟು ಅವರು ಕೆಲಸ ಮಾಡುತ್ತಿದ್ದರು. ಪ್ರತಿ ಉಪಚುನಾವಣೆ ವೇಳೆಯೂ ಅವರ ಹೆಸರು ಮುನ್ನೆಲೆಗೆ ಬರುವಂತೆ ವಿಜಯೇಂದ್ರ ‘ಅಧ್ವರ್ಯವ’ ನೋಡಿಕೊಳ್ಳುತ್ತಲೇ ಇತ್ತು. ಸಂಪುಟ ವಿಸ್ತರಣೆ ವೇಳೆ ವಿಜಯೇಂದ್ರ ಅವರು ಸಚಿವರಾಗಲಿದ್ದಾರೆ ಎಂಬ ಸುದ್ದಿಯನ್ನೂ ಹರಿಬಿಡಲಾಗಿತ್ತು. ಆದರೆ, ಅದು ಯಾವುದೂ ನಡೆಯಲೇ ಇಲ್ಲ.

ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ, ವಿಜಯೇಂದ್ರ ಅಭ್ಯರ್ಥಿ ಎಂದು ಸ್ವಯಂ ಪ್ರಕಟಿಸಿರುವ ಯಡಿಯೂರಪ್ಪ, ಜನರ ಆಶೀರ್ವಾದವನ್ನೂ ಕೋರಿದ್ದಾರೆ. ಅಲ್ಲಿಗೆ, ತಮ್ಮ ಉತ್ತರಾಧಿಕಾರಿ ವಿಜಯೇಂದ್ರ ಎಂಬುದನ್ನೂ ಬಹಿರಂಗವಾಗಿ ಹೇಳಿದ್ದಾರೆ. ಇದಕ್ಕೆ ವರಿಷ್ಠರಿಂದ ಬರಲಿರುವ ಪ್ರತಿಕ್ರಿಯೆ ಗಮನಿಸಿ, ತಮ್ಮ ಮುಂದಿನ ‘ರಾಜಕೀಯ ನಡೆ’ಯನ್ನು ನಿರ್ಧರಿಸುವ ಸೂಚನೆಯನ್ನೂ ಯಡಿಯೂರಪ್ಪ ಈ ಪ್ರಕಟಣೆಯ ಮೂಲಕ ನೀಡಿರುವುದಂತೂ ನಿಜ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.68	20,864	19,708
ಹಾರಂಗಿ	2,859	2,856.05	2,820	2,800
ಕಬಿನಿ	2,284	2,284	15,800	15,800
ಹೇಮಾವತಿ	2,922	2,921.05	11,330	1,950
ಲಿಂಗನಮಕ್ಕಿ	1,819	1,797.50	12,327	5,768
ಸೂಪಾ (ಮೀ)	564	541.45	3,379	1,852
ವಾಣಿ	594	583.60	1,998	-
ತುಂಗಭದ್ರಾ	1,633	1,632	78,428	65,923
ಮಲಪ್ರಭಾ	2079.5	2068.20	2,755	394
ಘಟಪ್ರಭಾ	2175	2,152.08	7,364	163
ಭದ್ರಾ	186	183.9	10,523	2,561
ಆಲಮಟ್ಟಿ (ಮೀ)	519.6	517.94	83,460	63,750
ನಾರಾಯಣಪುರ (ಮೀ)	492.25	491.58	60,000	63,536

*ನೆಲಮಟ್ಟದಿಂದ

ಗುಡುಗು ಸಹಿತ ಮಳೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಮತ್ತು ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ಶನಿವಾರ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಕೋಲಾರ, ಮಂಡ್ಯ, ಮೈಸೂರು ಹಾಗೂ ರಾಮನಗರ ಜಿಲ್ಲೆಗಳ ಒಂದೆರಡು ಕಡೆ ಭಾರಿ ಮಳೆಯಾಗಲಿದೆ. ಉತ್ತರ ಒಳನಾಡಿನ ಕೆಲವು ಕಡೆ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವು ಸಲ ಗುಡುಗು ಸಹಿತ ಭಾರಿ ಮಳೆಯಾಗಲಿದೆ. ಮುಂದಿನ 48 ಗಂಟೆಗಳ ಹವಾಮಾನದಲ್ಲಿ ಗಮನಾರ್ಹವಾದ ಬದಲಾವಣೆಯಿಲ್ಲ ಎಂದು ಇಲಾಖೆ ಹೇಳಿದೆ.

ELCITA

TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE

ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore-560 100 has invited tender as detailed below:

Sl. No.	Tender Name	Tender Number	Last date to apply	Closing timings hrs
1	Tender for Design, Supply, Installation, testing, and commissioning including warranty of grid connected 100kwp solar rooftop plant at 16 TPD facility, East phase, Electronics city, Bengaluru-560100.	ELCITA/ UDD/2022-23/Solar 100KWp_ 1507	02.08.2022	17.00 hrs

Details of the Tenders can be downloaded from the e-procurement website: **eproc.karnataka.gov.in under Urban Development Department - Electronics city Industrial Township Authority. Also, details are available in www.elcita.in**

For queries Contact: 080-4660 2222 / write to : project.mgr@elcita.in and tdo@elcita.in

NMDC Limited

(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad - 500 028, CIN- L13100TG1958G0I001674

CONTRACTS DEPARTMENT

E-Tender Notice (Open Tender Enquiry for Domestic Bidding)

NMDC Limited, A "NAVARATNA" Public Sector Company under Ministry of Steel, Govt. of India, invites **online bids** from experienced domestic bidders for :

1. **"Internal Painting works of Type – 1D, II, III, A, B, C & D Quarter in Donimalai Township"**
   - **Tender Enquiry No.: HO (Contracts)/ DIOM Internal Painting/2022/852 dated: 22.07.2022**
   - **MSTC Ref. No.: NMDC/HO/40/22-23/ET/285**
2. **"External Painting works of Type – 1D, II, III, A, B, C & D Quarter in Donimalai Township"**
   - **Tender Enquiry No.: HO (Contracts)/DIOM External Painting/2022/851 dated: 22.07.2022**
   - **MSTC Ref. No.: NMDC/HO/41/22-23/ET/286**

The detailed NITs and Bid documents can be viewed and /or downloaded **from 22/07/2022 to 22/08/2022 from following website links;**

1. NMDC website – **http://tenders.nmdc.co.in**
2. Central Public Procurement portal – **http://www.eprocure.gov.in/epublish/app and**
3. MSTC portal -**https://www.mstcecommerce.com/eprochome/nmdc/buyer_login.jsp**

For accessing the bid document from MSTC portal, bidder has to register as 'New Vendor' at MSTC website link **https://www.mstcecommerce.co.in/eprochome/nmdc/buyer_login.jsp** and search Tender Event No. NMDC/HO/40/22-23/ET/285 and NMDC/HO/41/22-23/ET/286. For further help refer to 'vendor guide' given in MSTC website.

The bidders are requested to submit their bids online through MSTC Limited e-procurement website.

For further clarification, the following can be contacted:
Chief General Manager (Contracts), NMDC Limited, Hyderabad, Fax No. 040-23534746, Tel No. 040-23532800, email: **contracts@nmdc.co.in**

Chief General Manager (Contracts)

हर एक काम देश के नाम इस्पाती इरादा

‘ಬಿಎಸ್‌ವೈ ನಿವೃತ್ತಿ ಘೋಷಣೆ ಬೇಡ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ನಿವೃತ್ತಿ ಘೋಷಿಸಬಾರದು. ಅವರಿಗೆ ಇನ್ನೂ ರಾಜಕೀಯ ಶಕ್ತಿ ಇದ್ದರೂ, ಅವರನ್ನು ಅಧಿಕಾರದಿಂದ ಕೆಳಕ್ಕಿಳಿಸಿದರು. ಅವರ ನಾಯಕತ್ವದಲ್ಲೇ ಪಕ್ಷ ಹೆಚ್ಚು ಸೀಟುಗಳನ್ನು ಗೆದ್ದಿತ್ತೇ ವಿನಾ ಮತ್ತೊಬ್ಬರ ಹೆಸರಿನಿಂದಲ್ಲ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಬಿಎಸ್‌ವೈ ನಿವೃತ್ತಿ ಕುರಿತು ನಗರದಲ್ಲಿ ಶುಕ್ರವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಯಡಿಯೂರಪ್ಪ ಅವರ ಹೆಸರಲ್ಲೇ ಆಪರೇಷನ್ ಕಮಲ ಮಾಡಿ, ಬಿಜೆಪಿಯವರು ಅಧಿಕಾರ ಹಿಡಿದರು. ಕಡೆಗೆ ಅವರೇ ಕಣ್ಣೀರು ಹಾಕಿಕೊಂಡು ರಾಜಭವನಕ್ಕೆ ಹೋಗಿ, ರಾಜೀನಾಮೆ ಕೊಟ್ಟು ಬರುವಂತೆ ಮಾಡಿದರು’ ಎಂದರು.

ಭ್ರಷ್ಟಾಚಾರ: ಬಹಿರಂಗ ಚರ್ಚೆಗೆ ಸಿದ್ಧ– ಡಿಕೆಶಿ: ‘ರಾಜ್ಯದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರ ಕುರಿತು ಬಿಜೆಪಿ ನಾಯಕರೊಂದಿಗೆ ಬಹಿರಂಗ ಚರ್ಚೆಗೆ ನಾನು ಸಿದ್ಧ. ಅವರು ಎಲ್ಲಿ ವೇದಿಕೆ ಸಿದ್ಧಪಡಿಸುತ್ತಾರೋ ಅಲ್ಲಿಗೆ ಬರುವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

‘ಸಚಿವ ಡಾ.ಸುಧಾಕರ್ ಬದಲು ರಾಜ್ಯದ ಬಿಜೆಪಿ ಅಧ್ಯಕ್ಷ ನಳಿನಕುಮಾರ ಕಟೀಲ್, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಜೊತೆ ಚರ್ಚಿಸಲು ಸದಾ ಸಿದ್ಧನಿದ್ದೇನೆ’ ಎಂದರು.

‘ಪೊಲೀಸ್, ಶಿಕ್ಷಣ, ಆರೋಗ್ಯ, ಕಂದಾಯ ಸೇರಿದಂತೆ ಎಲ್ಲಾ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಪಿಎಸ್ಐ, ಎಫ್‌ಡಿಎ ಹುದ್ದೆ ನೇಮಕಾತಿ ಹಗರಣ ಸೇರಿದಂತೆ ಹಲವು ಹಗರಣಗಳು ರಾಜ್ಯ ಸರ್ಕಾರವನ್ನು ಸುತ್ತಿಕೊಂಡಿವೆ. ಇದರಿಂದಾಗಿ ಜನ ಬೇಸತ್ತಿದ್ದು, ಬದಲಾವಣೆ ಬಯಸುತ್ತಿದ್ದಾರೆ. ಕಾಂಗ್ರೆಸ್ ಪ್ರತಿಭಟನೆಗೆ ದೊಡ್ಡ ಸಂಖ್ಯೆಯಲ್ಲಿ ಜನ ಸೇರುತ್ತಿರುವುದೇ ಇದಕ್ಕೆ ಸಾಕ್ಷಿ’ ಎಂದು ಹೇಳಿದರು.

ನನ್ನ ಬಗ್ಗೆ ಚಿಂತಿಸಬೇಡಿ: ಬಿಎಸ್‌ವೈ

ಶಿಕಾರಿಪುರ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನನ್ನ ಬಗ್ಗೆ ಚಿಂತಿಸುವುದು ಬೇಡ, ಅವರ ಪಕ್ಷದ ಬಗ್ಗೆ ಚಿಂತನೆ ಮಾಡಲಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿರುಗೇಟು ನೀಡಿದರು.

‘ಯಡಿಯೂರಪ್ಪ ಮಾರ್ಗದರ್ಶನ ಬೇಕು’

ಬೆಂಗಳೂರು: ಬಿಜೆಪಿಯನ್ನು ಬೇರುಮಟ್ಟದಿಂದ ಸಂಘಟಿಸಿ, ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಬಿ.ಎಸ್. ಯಡಿಯೂರಪ್ಪ ಅವರ ಮಾರ್ಗದರ್ಶನ ಪಕ್ಷಕ್ಕೆ ಮುಂದೆಯೂ ಅಗತ್ಯ ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಬಿಜೆಪಿ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಯಡಿಯೂರಪ್ಪ ಅವರ ಸಲಹೆ, ಮಾರ್ಗದರ್ಶನ ಅಗತ್ಯ. 2023ರ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಅವರು ಹೇಳಿಲ್ಲ. ರಾಜ್ಯದಲ್ಲಿ ಮತ್ತೆ ಕೇಸರಿ ಬಾವುಟ ಹಾರಬೇಕಾದರೆ ಅವರ ನಾಯಕತ್ವ ನಮಗೆ ಬೇಕು’ ಎಂದರು.

ಪಿಎಸ್‌ಐ ನೇಮಕಾತಿ ಅಕ್ರಮ: ವಿಶೇಷ ಪ್ರಾಸಿಕ್ಯೂಟರ್ ನೇಮಕ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲು ತಯಾರಿ ನಡೆಸುತ್ತಿದ್ದಾರೆ. ಇದರ ಬೆನ್ನಲ್ಲೇ, ಪ್ರಕರಣದ ಬಗ್ಗೆ ನ್ಯಾಯಾಲಯದಲ್ಲಿ ಸಮರ್ಪಕ ವಾದ ಮಂಡಿಸಲು ಪಿ. ಪ್ರಸನ್ನ ಕುಮಾರ್ ಅವರನ್ನು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಲಾಗಿದೆ.

ಜಾಮೀನು ಅರ್ಜಿಗಳ ವಜಾ: ಪಿಎಸ್‌ಐ ನೇಮಕಾತಿ ಹಗರಣದ ಏಳು ಆರೋಪಿಗಳಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ. ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗಳಾದ ಕೆ.ಸಿ. ದಿಲೀಪ್ ಕುಮಾರ್, ಎಚ್.ಆರ್. ಪ್ರವೀಣ್ ಕುಮಾರ್, ಸಿ.ಎನ್. ಶಶಿಧರ್, ಆರ್.ಶರತ್‌ಕುಮಾರ್, ಎಚ್.ಯು.ರಘುವೀರ್, ಕೆ.ಸೂರಿ ನಾರಾಯಣ ಸಲ್ಲಿಸಿದ್ದ ನಿಯಮಿತ (ರೆಗ್ಯುಲರ್) ಜಾಮೀನು ಮತ್ತು ತಲೆಮರೆಸಿಕೊಂಡಿರುವ ಆರೋಪಿಯಾದ ಬ್ಯಾಡರಹಳ್ಳಿ ಠಾಣೆಯ ಎಸ್‌ಐ ನವೀನ್ ಪ್ರಸಾದ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ವಜಾಗೊಳಿಸಲಾಗಿದೆ.

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ ಹುಮನಾಬಾದ

ಸಂಖ್ಯೆ:ಪುಸಹು/ಇಎನ್‌ಜಿ/ಸಿಆರ್/ /2022–23/330 ದಿನಾಂಕ: 18–07–2022

ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ

1) ಕಾಮಗಾರಿ / ಸರಕು / ಸೇವೆಯ ವಿವರ : INDENT No.127334,130441, 2) ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ : e-portalನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: e-portalನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು 29-07-2022, 04:00PM, 6) ಟೆಂಡರ ತೆರೆಯುವ ದಿನಾಂಕ : 30-07-2022, 04:30PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಪುರಸಭೆ ಕಾರ್ಯಾಲಯ ಹುಮನಾಬಾದ, ಬೀದರ ಜಿಲ್ಲೆ ಫೋನ್: 08483-271712, Email :itstaff_ulb_humnabad@yahoo.com, 8) ಅಂತರಜಾಲ ತಾಣದ ವಿಳಾಸ: www.eproc.karnataka.gov.in

ಸಹಿ/– ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ

ವಾ.ಸಾ.ಸಂ.ಇ/ಬೀದರ/146/ಎಂಸಿ&ಎ/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ, ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–1:ಟೆಂಡರ್–34:2022–23 ದಿನಾಂಕ: 20.07.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿ ಹೆಸರು: ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ: ಲೆಕ್ಕ ಶೀರ್ಷಿಕೆ: 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ: 1) ಚಿತ್ರದುರ್ಗ ತಾಲ್ಲೂಕು ವಿಜಾಪುರ–ಉಜ್ಜಿನಿ ರಸ್ತೆ ಕಿ.ಮೀ. 0.00ರಿಂದ 5.00ರ ವರೆಗೆ ರಸ್ತೆ ಅಭಿವೃದ್ಧಿ. (ವ.ಇಂ. 153916). ಅಂದಾಜು ಮೊತ್ತ: ರೂ. 490.00 ಲಕ್ಷಗಳು.

ಕ್ರಸಂ. 1 ರಿಂದ 3 ರ ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 10.08.2022 ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 11.08.2022 ಸಮಯ 16:00. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 12.08.2022 ಸಮಯ 16:01. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 16.08.2022 ಸಮಯ 11:00.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

RO No. 384: DIPR/CTA/MCA/2022-23 ಸಹಿ/– ಕಾರ್ಯಪಾಲಕ ಅಭಿಯಂತರರು

‘ಎಸ್‌ಡಿಪಿಐ, ಪಿಎಫ್‌ಐ ಬಿಜೆಪಿಯ ಬಿ ಟೀಂ’

ವಿಜಯಪುರ: ‘ಎಸ್‌ಡಿಪಿಐ, ಪಿಎಫ್‌ಐ ಸಂಘಟನೆಗಳು ಬಿಜೆಪಿಯ ‘ಬಿ ಟೀಂ’ ಎಂಬ ಆರೋಪ ನೂರಕ್ಕೆ ನೂರು ಸತ್ಯ’ ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಟೀಕಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ನ ವೋಟ್ ಬ್ಯಾಂಕ್ ಆಗಿರುವ ಮುಸ್ಲಿಮರನ್ನು ಎಸ್‌ಡಿಪಿಐ, ಪಿಎಫ್‌ಐ ವ್ಯವಸ್ಥಿತವಾಗಿ ಒಡೆಯುತ್ತಿವೆ. ಇದರಿಂದ ಬಿಜೆಪಿಗೆ ಚುನಾವಣೆಯಲ್ಲಿ ಲಾಭವಾಗುತ್ತಿದೆ. ದೇಶದ ಸುರಕ್ಷೆ, ಹಿಂದೂಗಳ ಸುರಕ್ಷೆ ಬಿಜೆಪಿಗೆ ಬೇಕಾಗಿಲ್ಲ. ಅಧಿಕಾರಕ್ಕೆ ಬಂದು ಮೆರೆಯಬೇಕು ಎಂಬುದು ಬಿಜೆಪಿಯ ಅಜೆಂಡ. ಹೀಗಾಗಿ ಈ ದೇಶದ್ರೋಹಿ ಸಂಘಟನೆಗಳನ್ನು ಬ್ಯಾನ್ ಮಾಡಲು ಮುಂದಾಗುತ್ತಿಲ್ಲ’ ಎಂದರು.

‘ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ಬಯಸುತ್ತೀರಾ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುತಾಲಿಕ್, ‘ಯಾವುದೇ ಚುನಾವಣೆಯಲ್ಲೂ ನಾನು ಸ್ಪರ್ಧಿಸಲ್ಲ. ಬಿಜೆಪಿಯಲ್ಲಿ ನಮ್ಮಂತ ಹಿಂದೂ ಪರ ಮುಖಂಡರು, ಕಾರ್ಯಕರ್ತರಿಗೆ ಅವಕಾಶ ಇಲ್ಲ. ಆ ಪಕ್ಷದಲ್ಲಿ ಭ್ರಷ್ಟರು, ಲೂಟಿಕೋರರು, ಲಫಂಗರಿಗೆ ಮಾತ್ರ ಅವಕಾಶ. ಬಾಗಲಕೋಟೆ ಜಿಲ್ಲೆಯ ಕೆರೂರಿನಲ್ಲಿ ಇತ್ತೀಚೆಗೆ ನಡೆದ ಗಲಭೆ ಸಂದರ್ಭದಲ್ಲಿ ಭಟ್ಕಳ ಮೂಲದ ಮಹಿಳೆ ಬುರ್ಕಾದಲ್ಲಿ ಚಾಕು ಅಡಗಿಸಿಕೊಂಡು ಬಂದು ಇರಿದಿರುವುದು ನೋಡಿದರೆ ಭಯೋತ್ಪಾದನೆ ಜೀವಂತವಾಗಿರುವುದು ಸಾಬೀತಾಗುತ್ತದೆ. ಭಟ್ಕಳದ ಮೂಲಕ ಇಸ್ಲಾಂ ಮತಾಂಧತೆ ಹರಡುತ್ತಿದೆ ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ’ ಎಂದು ಕಿಡಿ ಕಾರಿದರು.

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ

E-Mail:dudc_mnd@yahoo.co.in Ph No.08232-231111

ಸಂಖ್ಯೆ:ಎಂಯುಎನ್(7)17/2021–22 ದಿನಾಂಕ:21–07–2022

ಟೆಂಡರ್ ಪ್ರಕಟಣೆ – (ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)–ಯೋಜನೆ (ಹಂತ–4)ರಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು E-Procurement Portal ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ 1ನೇ ದರ್ಜೆ ಗುತ್ತಿಗೆದಾರರು www.e-procurement.karnataka.gov.in ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ.ಸಂ : 01. ಕಾಮಗಾರಿ ಹೆಸರು ಮತ್ತು ಇಂಡೆಂಟ್ ಸಂಖ್ಯೆ : ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ ಮತ್ತು ಮಳೆ ನೀರು ಚರಂಡಿ ಹಾಗೂ ಇನ್ನಿತರೆ ಅಭಿವೃದ್ಧಿ ಪ್ಯಾಕೇಜ್ ಕಾಮಗಾರಿಗಳು DMA/2022-23/OW/WORK_INDENT 133925. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) (Excluding GST) : 1847.07. ಇಎಂಡಿ ಮೊತ್ತ : 18.50

ಫ್ರೀ ಬಿಡ್ ಸಭೆ **ದಿನಾಂಕ:10.08.2022, ಬೆಳಿಗ್ಗೆ 11.00 ಗಂಟೆಗೆ,** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:24.08.2022, ಸಂಜೆ 5.30 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:26.08.2022.** ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ಇಲ್ಲಿನ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ ಹಾಗೂ e-procurement website www.eprocurement.karnataka.gov.in ನಲ್ಲಿಯೂ ಪಡೆಯಬಹುದಾಗಿರುತ್ತದೆ. **ಸೂಚನೆ: ಕಾರಣಾಂತರಗಳಿಂದ ಪ್ರಕಟಣೆಯಲ್ಲಿ ತಿಳಿಸಲಾಗಿರುವ ಟೆಂಡರ್ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು.**

ಸಹಿ/–ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆ, ಮಂಡ್ಯ

ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/ 224/2022–23

ಕರ್ನಾಟಕ ಸರಕಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಕಲಬುರಗಿ ನಗರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ದೂರವಾಣಿ : 08472-278661 ಇ–ಮೇಲ್ : cdpoglburban@gmail.com

ಸಂ: ಶಿಅಯೋಕನ/ಮಮಅಇ/ಐಸಿಡಿಎಸ್/ಮೊಟ್ಟೆ/ಟೆಂಡರ್/2022–23/205 ದಿನಾಂಕ: 21–07–2022

ಇ–ಪ್ರೋಕ್ಯೂರಮೆಂಟ್ ಟೆಂಡರ ಪ್ರಕಟಣೆ

ಕಲಬುರಗಿ ತಾಲೂಕಿನ ಕಲಬುರಗಿ ನಗರ ಯೋಜನೆಯ 499–ಅಂಗನವಾಡಿ ಕೇಂದ್ರದ ಫಲಾನುಭವಿಗಳಾದ 06 ತಿಂಗಳಿಂದ 06 ವರ್ಷದೊಳಗಿನ ಮಕ್ಕಳಿಗೆ, ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ವಿತರಿಸಲು ಅಗತ್ಯವಿರುವ ಕೋಳಿ ಮೊಟ್ಟೆಗಳ ಸರಬರಾಜು ಮಾಡಲು ಇ–ಟೆಂಡರನ್ನು ಅಹ್ವಾನಿಸಲಾಗಿದ್ದು, ಸದರಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ : 21–07–2022 ರಿಂದ ಕೊನೆಯ ದಿನಾಂಕ : 22–08–2022 ಸಾಯಂಕಾಲ 05:30 ಗಂಟೆಯವರೆಗೆ ಮತ್ತು ತಾಂತ್ರಿಕ ಬಿಡ್‌ನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ : 24–08–2022 ಸಮಯ : 11:00 AM ಹಾಗೂ ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ 26–08–2022 11:00 AM ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಲಬುರಗಿ ನಗರ ಕಛೇರಿ, ಇವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ : 08472–278661 ಹಾಗೂ ಇ–ಮೇಲ್ ವಿಳಾಸ : cdpoglburban@gmail.com

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಕಲಬುರಗಿ ನಗರ

ವಾ.ಸಾ.ಸಂ.ಇ/ಕಲಬುರಗಿ/404/ಎಂ.ಸಿ.&ಎ/2022–23

‘ಶಿಕಾರಿಪುರದಿಂದ ವಿಜಯೇಂದ್ರ ಸ್ಪರ್ಧೆ’

ಒಂದನೇ ಪುಟದಿಂದ

ಇದಕ್ಕೂ ಮುನ್ನ ಶಿಕಾರಿಪುರ ಪಟ್ಟಣದ ಸಾಂಸ್ಕೃತಿಕ ಭವನದಲ್ಲಿ ಸ್ವ–ಸಹಾಯ ಸಂಘಗಳ ಸದಸ್ಯೆಯರ ಚೆಕ್ ವಿತರಣಾ ಕಾರ್ಯಕ್ರಮದಲ್ಲಿಪಾಲ್ಗೊಂಡಿದ್ದ ಯಡಿಯೂರಪ್ಪ, ‘ಮುಂದಿನ ದಿನಗಳಲ್ಲಿ ಸಂಸದ ರಾಘವೇಂದ್ರ ಜೊತೆಗೆ ಮತ್ತೊಬ್ಬ ಪುತ್ರವಿಜಯೇಂದ್ರ ತಾಲ್ಲೂಕಿನಲ್ಲಿಯೇ (ಶಿಕಾರಿಪುರ) ಹೋರಾಟ ಮಾಡುತ್ತಾನೆ. ಅವನಿಗೂ ನಿಮ್ಮ ಆಶೀರ್ವಾದ ಇರಬೇಕು’ ಎಂದು ಕೈಜೋಡಿಸಿ ಪ್ರಾರ್ಥಿಸಿದ್ದರು.

ಅವರಪ್ಪನಾಣೆಗೂ ಮುಖ್ಯಮಂತ್ರಿ ಆಗೊಲ್ಲ: ‘ರಾಜ್ಯದಲ್ಲಿ ಇಬ್ಬರು ನಾಯಕರು ಮುಖ್ಯಮಂತ್ರಿಯಾಗುತ್ತೇವೆ ಎಂದು ಓಡಾಡುತ್ತಿದ್ದಾರೆ. ಅವರಿಗೆ ಕಿವಿಮಾತು ಹೇಳಲು ಇಚ್ಛಿಸುತ್ತೇನೆ. ನಿಮ್ಮ ಅಪ್ಪನ ಆಣೆಗೂ ನೀವು ಮುಖ್ಯಮಂತ್ರಿಯಾಗುವ ಪ್ರಶ್ನೆಯೇ ಇಲ್ಲ’ ಎಂದು ಯಡಿಯೂರಪ್ಪ ಅವರು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

‘ರಾಜ್ಯದಲ್ಲಿ ನೂರಕ್ಕೆ ನೂರು ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ನಮ್ಮವರೇ ಮುಖ್ಯಮಂತ್ರಿಯಾಗುತ್ತಾರೆ. ಆ ಬಗ್ಗೆ ಅನುಮಾನ ಬೇಡ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

‘ಪಕ್ಷದ ತೀರ್ಮಾನದಂತೆ ನಿರ್ಧಾರ’

‘ಶಿಕಾರಿಪುರದಿಂದ ಸ್ಪರ್ಧಿಸುವ ವಿಚಾರದಲ್ಲಿ ತಂದೆಯವರ (ಬಿಎಸ್‌ವೈ) ಮಾರ್ಗದರ್ಶನ ಹಾಗೂ ಪಕ್ಷದ ನಿರ್ಧಾರದಂತೆ ನಡೆದುಕೊಳ್ಳುತ್ತೇನೆ’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ತಂದೆಯವರ ಹೇಳಿಕೆ ಆಧರಿಸಿಯೇ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ’ ಎಂದರು.

‘ಶಿಕಾರಿಪುರದ ಮುಖಂಡರು, ಕಾರ್ಯಕರ್ತರು ತಂದೆಯ ಮೇಲೆ ಒತ್ತಡ ಹೇರಿದ್ದರು. ತಿಂಗಳ ಹಿಂದೆ ಬೆಂಗಳೂರಿಗೂ ಬಂದು, ಒತ್ತಡ ಕೂಡ ಹಾಕಿದ್ದರು. ಅದರಂತೆಯೇ ತಂದೆಯವರು ಈ ತೀರ್ಮಾನ ಪ್ರಕಟಿಸಿದ್ದಾರೆ’ ಎಂದರು.

ಇದು ಯಡಿಯೂರಪ್ಪನವರ ನಿವೃತ್ತಿ ಘೋಷಣೆ ಎಂದು ಭಾವಿಸಬೇಕಿಲ್ಲ. ಹಿಂದೆಯೂ ಪಕ್ಷ ಸಂಘಟನೆಯಲ್ಲಿ ಕೆಲಸ ಮಾಡಿರುವ ಅವರು ಮುಂದೆಯೂ ಮಾಡುತ್ತಾರೆ. ಸಿಎಂ ಸ್ಥಾನ ತ್ಯಜಿಸುವಾಗ ‘ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುತ್ತೇನೆ’ ಎಂದು ಹೇಳಿದ್ದರು. ಆ ನಿಟ್ಟಿನಲ್ಲಿ ರಾಜ್ಯದಾದ್ಯಂತ ಪ್ರವಾಸ ಕೂಡ ಮಾಡುತ್ತಾರೆ ಎಂದು ಅವರು ಪ್ರತಿಕ್ರಿಯಿಸಿದರು.

ಯಡಿಯೂರಪ್ಪ ವಿರುದ್ಧ ಕ್ರಿಮಿನಲ್ ವಿಚಾರಣೆ: ಹೈಕೋರ್ಟ್ ಆದೇಶಕ್ಕೆ ತಡೆ

ಒಂದನೇ ಪುಟದಿಂದ

ಹೈಕೋರ್ಟ್ ಆದೇಶದ ಸಿಂಧುತ್ವ ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಯಡಿಯೂರಪ್ಪ ಪರ ವಕೀಲ ಕೆ.ವಿ. ವಿಶ್ವನಾಥನ್ ವಾದ ಮಂಡಿಸಿದರು.

ಯಡಿಯೂರಪ್ಪ ವಿರುದ್ಧ ಲೋಕಾಯುಕ್ತ ಪೊಲೀಸರು ನಡೆಸುತ್ತಿದ್ದ ತನಿಖೆ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿತ್ತು.

ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯಲ್ಲಿ ಸಡಿಲಿಕೆ ಮಾಡಲಾಗದು ಎಂದಿದ್ದ ಹೈಕೋರ್ಟ್, ಸಾರ್ವಜನಿಕ ಸೇವಕರು, ಸಂಸದರು ಹಾಗೂ ಶಾಸಕರು ಶಾಮೀಲಾಗಿದ್ದಾರೆ ಎನ್ನಲಾದ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿ ಅಪರಾಧ ನ್ಯಾಯಾಲಯಗಳು ಆದೇಶಿಸಿರುವ ತನಿಖೆಯಮೇಲೆ ನಿಗಾ ಇರಿಸಬೇಕು ಎಂದು ಲೋಕಾಯುಕ್ತ ನ್ಯಾಯಾಲಯಕ್ಕೆ ಈ ಹಿಂದೆ ನಿರ್ದೇಶಿಸಿತ್ತು.

ವಾಸುದೇವ ರೆಡ್ಡಿ ಎಂಬುವವರು ಸಲ್ಲಿಸಿದ್ದ ದೂರಿನ ಆಧಾರದಲ್ಲಿ ಯಡಿಯೂರಪ್ಪ ವಿರುದ್ಧ ತನಿಖೆ ನಡೆಸುವಂತೆ 2015ರ ಫೆಬ್ರುವರಿ 18ರಂದು ಲೋಕಾಯುಕ್ತ ಪೊಲೀಸರಿಗೆ ಬೆಂಗಳೂರಿನ ಜಿಲ್ಲಾ ನ್ಯಾಯಾಲಯ ನಿರ್ದೇಶನ ನೀಡಿತ್ತು. ಇದರಂತೆ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಇದನ್ನು ರದ್ದುಗೊಳಿಸಬೇಕು ಎಂದು ಯಡಿಯೂರಪ್ಪ 2015ರ ಫೆಬ್ರುವರಿ 21ರಂದು ಅರ್ಜಿ ಸಲ್ಲಿಸಿದ್ದರು.

2006–07ರ ಅವಧಿಯಲ್ಲಿ ಹಲವಾರು ಎಕರೆ ಜಾಗವನ್ನು ಅಕ್ರಮವಾಗಿ ಡಿ–ನೋಟಿಫೈ ಮಾಡಲಾಗಿತ್ತು ಎಂದು ವಾಸುದೇವ ರೆಡ್ಡಿ ದೂರು ಸಲ್ಲಿಸಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಎಮ್‌ಪಿಇಡಿ–ಕೇಂದ್ರ)
ನೆಲ ಮಹಡಿ, ಅನೆಕ್ಸ್ ಕಟ್ಟಡ–2 ಕಟ್ಟಡ,
ನರಸಿಂಹರಾಜ ಚೌಕ, ಬೆಂಗಳೂರು – 560 002.

ಸಂಖ್ಯೆ: ಕಾಪಾಅ(ಎಮ್‌ಪಿಇಡಿ–ಕೇಂದ್ರ)/ಟೆಂಡರ್/05/2022–23 ದಿನಾಂಕ: 22.07.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಎಮ್‌ಪಿಇಡಿ–ಕೇಂದ್ರ) ಇವರು ಈ ಕೆಳಕಂಡ ಸೇವೆಗಳಿಗಾಗಿ ಅರ್ಹ ಹೆಸರಾಂತ ಸೇವಾ ಪೂರೈಕೆದಾರರನ್ನು ನೇಮಿಸಿಕೊಳ್ಳಲು (ತಾಂತ್ರಿಕ ಮತ್ತು ಆರ್ಥಿಕ) ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಯೋಜನೆಗಳ ಹೆಸರು	ಟೆಂಡರಿಗಿಟ್ಟ ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹ ಲಕ್ಷಗಳಲ್ಲಿ)
1.	ಮೂರು ವರ್ಷಗಳ ಅವಧಿಗೆ ಕೇಂದ್ರ ಕಚೇರಿಯ ಆವರಣಕ್ಕೆ ಭದ್ರತಾ ಸೇವೆಗಳನ್ನು ಒದಗಿಸುವುದು.	324.41	4.90
2.	ಮೂರು ವರ್ಷಗಳ ಅವಧಿಗೆ ಐಪಿಪಿ ಕಟ್ಟಡ, ಪುರಭವನ ಮತ್ತು ಬೃ.ಬೆಂ.ಮ.ಪಾಲಿಕೆ ಮುಖ್ಯ ಲೆಕ್ಕ ಪರಿಶೋಧಕರ ಕಚೇರಿ ಮೆಜೆಸ್ಟಿಕ್ ಇಲ್ಲಿಗೆ ಭದ್ರತಾ ಸೇವೆಗಳನ್ನು ಒದಗಿಸುವುದು.	156.86	2.36
3.	ಮೂರು ವರ್ಷಗಳ ಅವಧಿಗೆ ಐಪಿಪಿ ಕಟ್ಟಡ, ಪುರಭವನ ಮತ್ತು ಬೃ.ಬೆಂ.ಮ.ಪಾಲಿಕೆ ಮುಖ್ಯ ಲೆಕ್ಕ ಪರಿಶೋಧಕರ ಕಚೇರಿ ಮೆಜೆಸ್ಟಿಕ್ ಇಲ್ಲಿಗೆ ಸ್ವಚ್ಛತಾ ಸೇವೆಗಳನ್ನು ಒದಗಿಸುವುದು.	184.84	2.77

ಟೆಂಡರ್ ವೇಳಾಪಟ್ಟಿ: (1) ಐಎಫ್‌ಟಿ/ಆರ್‌ಎಫ್‌ಪಿ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **25.07.2022**ರಿಂದ ಲಭ್ಯವಿರುತ್ತದೆ. (2) ಆಕ್ಷೇಪಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿನಾಂಕ **27.07.2022**ರ ಸಂಜೆ **5:30** ಗಂಟೆಯವರೆಗೆ ಸಲ್ಲಿಸುವುದು. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **28.07.2022**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ (ಪಿಸಿ) ಇಲ್ಲಿ ನಡೆಸಲಾಗುವುದು. (4) ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.08.2022**ರ ಸಂಜೆ **5:30** ಗಂಟೆಯವರೆಗೆ. (5) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ: **03.08.2022**ರ ಸಂಜೆ **5:30** ಗಂಟೆಯ ನಂತರ ತೆರೆಯಲಾಗುವುದು. (6) ಆರ್ಥಿಕ ಪ್ರಸ್ತಾವನೆ ತೆರೆಯುವುದನ್ನು ಟೆಂಡರುದಾರರಿಗೆ ಮೇಲ್/ಫೋನ್ ಮೂಲಕ ನಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಎಮ್.ಪಿ.ಇ.ಡಿ–ಕೇಂದ್ರ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಶಹಾಪೂರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

ಸಂಖ್ಯೆ:ಶಿಅಯೋಶ/ಮಮಅಇ/ಐಸಿಡಿಎಸ್/ಮೊಟ್ಟೆ/ಟೆಂಡರ್/2022–23 ದಿನಾಂಕ:15.07.2022

ಶಹಾಪೂರ ತಾಲೂಕಿನ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಅಗತ್ಯವಿರುವ ಕೋಳಿ ಮೊಟ್ಟೆ ಸರಬರಾಜುಗಾಗಿ ‘ಇ– ಪ್ರೊಕ್ಯೂರ್‌ಮೆಂಟ್’ ಟೆಂಡರ್ ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ : ಮಮಇ 169 ಐಸಿಡಿ 2021, ದಿನಾಂಕ : 22.03.2022 ರಂತೆ ಶಹಾಪೂರ ತಾಲೂಕಿನ 396–ಅಂಗನವಾಡಿ ಕೇಂದ್ರದ ಫಲಾನುಭವಿಗಳಾದ 06 ತಿಂಗಳಿಂದ 06 ವರ್ಷದೊಳಗಿನ ಮಕ್ಕಳಿಗೆ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ವಿತರಿಸಲು ಅಗತ್ಯವಿರುವ ಕೋಳಿ ಮೊಟ್ಟೆಗಳ ಸರಬರಾಜು ಮಾಡಲು ದ್ವಿ–ಲಕೋಟೆ ಪದ್ಧತಿ ಪ್ರಕಾರ ನಿಬಂಧನೆಗಳಿಗೆ ಒಳಪಟ್ಟು **ಅನುಬಂಧ–2** ರಲ್ಲಿ ನಿಗಧಿಪಡಿಸಿರುವ ವೇಳಾಪಟ್ಟಿಯಂತೆ ಕರ್ನಾಟಕ ಸರ್ಕಾರದ e-Procurement Portal ಪದ್ಧತಿಯಂತೆ **http//eproc.karnataka.gov.in Online** ಮುಖಾಂತರ **ಅನುಬಂಧ–1** ರಲ್ಲಿ ತಿಳಿಸದಂತೆ ಟೆಂಡರ್ ಆಹ್ವಾನಿಸಲಾಗಿದೆ. **ಅನುಬಂಧ–1: ಕ್ರಸಂ. 1. ವಸ್ತುಗಳು / ಸರಕುಗಳು:** ಮೊಟ್ಟೆಗಳು, ಸಾರಿಗೆ ಸಹಿತ. **ಪ್ರಮಾಣ:** ಮಾಸಿಕ **5,26,501/–**ವಾರ್ಷಿಕ **63,18,012/– ಘಟಕ ಸಂಖ್ಯೆಗಳು. ವರ್ಷಕ್ಕೆ ಅಂದಾಜು ವೆಚ್ಚ (ರೂ.) 3,79,08,072/–** EMD **(ರೂ.) 5,68,621/– ವಿತರಣಾ ವೇಳಾಪಟ್ಟಿ:** ಪ್ರತಿ ತಿಂಗಳ 5ನೇ, 15ನೇ ಮತ್ತು 25ನೇ ದಿನ. **ಅನುಬಂಧ–2 (ಟೆಂಡರ್ ವೇಳಾಪಟ್ಟಿ)** (1) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://eproc.karnataka.gov.in** ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ: ಪ್ರಾರಂಭ ದಿನಾಂಕ:**15.07.2022 (2)** ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: **25.07.2022 ಬೆಳಗ್ಗೆ 11:00 ಗಂಟೆಗೆ** ಈ ಕೆಳಗಿನ ಸ್ಥಳದಲ್ಲಿ: **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗಂಜ್ ಏರಿಯಾ, ಶಹಾಪೂರ–585 223 (3)** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **11.08.2022ರಿಂದ 03:00 PM** ವರೆಗೆ **(4)** ಇ–ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲುಕೊನೆಯ ದಿನಾಂಕ ಮತ್ತು ಸಮಯ: **12.08.2022ರಿಂದ 4:30 PM** ರವರೆಗೆ **(5)** ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿತೆರೆಯುವ ದಿನಾಂಕ ಮತ್ತು ಸಮಯ: **16.08.2022, 11:00 AM** ಅನಂತರ **(6)** ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **20.08.2022 (7)** ಟೆಂಡರ್‌ಗಳನ್ನು ತೆರೆಯುವ ಸ್ಥಳ: **ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್. (8)** ಸಂವಹನಕ್ಕಾಗಿ ವಿಳಾಸ: **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗಂಜ್ ಏರಿಯಾ, ಶಹಾಪೂರ–585 223** ದೂರವಾಣಿ:585223 **ಇ–ಮೇಲ್:** cdposhorapur1@gmail.com

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಶಹಾಪೂರ

ವಾ.ಸಾ.ಸಂ.ಇ/ಯಾದಗಿರಿ/169/ಎಂಸಿಎ/2022–23

₹ 58 ಲಕ್ಷ ಮೌಲ್ಯದ 76 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕದಿಯುತ್ತಿದ್ದ ಆರೋಪಿಗಳನ್ನು ಬಂಧಿಸಿರುವ ಆಗ್ನೇಯ ವಿಭಾಗದ ಪೊಲೀಸರು, ₹58 ಲಕ್ಷ ಮೌಲ್ಯದ 76 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

‘ಮೈಕೊ ಲೇಔಟ್ ಹಾಗೂ ಬೊಮ್ಮನಹಳ್ಳಿ ಠಾಣೆ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಇವರಿಬ್ಬರು ಹಲವು ವರ್ಷಗಳಿಂದ ವಾಹನ ಕಳ್ಳತನ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ವಾಹನಗಳನ್ನು ಕದ್ದು ಕಡಿಮೆ ಬೆಲೆಗೆ ಆರೋಪಿಗಳು ಮಾರಾಟ ಮಾಡುತ್ತಿದ್ದರು. ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದು ತಿಳಿಸಿದರು.

ಹೈಕೋರ್ಟ್‌ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರಮಾಣಪತ್ರ

‘ನಕ್ಷೆ ಉಲ್ಲಂಘಿಸಿದರೆ ಕಠಿಣ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಂಜೂರಾತಿ ನಕ್ಷೆಗಳ ಉಲ್ಲಂಘನೆ ಮತ್ತು ಅನಧಿಕೃತ ಕಟ್ಟಡಗಳ ನಿರ್ಮಾಣ ಕಾಮಗಾರಿ ತಡೆಯುವಲ್ಲಿ ಹಾಗೂ ತಮ್ಮ ಜವಾಬ್ದಾರಿ ನಿರ್ವಹಣೆಯಲ್ಲಿ ವಿಫಲರಾಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಜೊತೆಗೆ ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಹೈಕೋರ್ಟ್‌ಗೆ ಬಿಬಿಎಂಪಿ ತಿಳಿಸಿದೆ.

ನಗರದ ಪರೇಶ್ ಶಾ ಹಾಗೂ ಇತರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಹೊರಡಿಸಿರುವ ಸುತ್ತೋಲೆಗಳ ಕುರಿತ ಪ್ರಮಾಣಪತ್ರವನ್ನು ಪಾಲಿಕೆ ಪರ ವಕೀಲ ಕೆ.ಎನ್.ಪುಟ್ಟೇಗೌಡ ನ್ಯಾಯಪೀಠಕ್ಕೆ ಸಲ್ಲಿಸಿದರು.

‘ಕಟ್ಟಡದ ಬೈ-ಲಾ ಅನುಷ್ಠಾನ ಮತ್ತು ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾಗುವ ಅಧಿಕಾರಿಗಳಿಗೆ ದಂಡ ವಿಧಿಸುವ ಷರತ್ತನ್ನೂ ಹೊಸ ಸುತ್ತೋಲೆಗಳಲ್ಲಿ ಸೇರ್ಪಡೆ ಮಾಡಲಾಗಿದೆ’ ಎಂದು ಅವರು ನ್ಯಾಯಪೀಠಕ್ಕೆ ವಿವರಿಸಿದರು.

‘ಕಟ್ಟಡಗಳ ಉಲ್ಲಂಘನೆಗಾಗಿ ತನ್ನ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲು ಮತ್ತು ಕಟ್ಟಡದ ಮಾಲೀಕರ ಮೇಲೆ ಸಂಪೂರ್ಣ ಜವಾಬ್ದಾರಿ ಹೊರಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಹೈಕೋರ್ಟ್, ಕಳೆದ ತಿಂಗಳಷ್ಟೇ ಆದೇಶಿಸಿತ್ತು.

ಈ ನಿಟ್ಟಿನಲ್ಲಿ ಬಿಬಿಎಂಪಿ ಇದೇ 6 ಮತ್ತು 21ರಂದು ಹೊಸ ಸುತ್ತೋಲೆಗಳನ್ನು ಹೊರಡಿಸಿ, ‘ಸುತ್ತೋಲೆಯ ಪ್ರಕಾರವೇ ವಲಯ ಆಯುಕ್ತರು ಕಾರ್ಯ ನಿರ್ವಹಿಸಬೇಕು’ ಎಂದು ಆದೇಶಿಸಿದೆ.

ಸುತ್ತೋಲೆಯ ಮುಖ್ಯಾಂಶಗಳು

- ಇತ್ತೀಚಿನ ದಿನಗಳಲ್ಲಿ ನಕ್ಷೆ ಉಲ್ಲಂಘನೆ ಮತ್ತು ಅನಧಿಕೃತ ನಿರ್ಮಾಣ ಪ್ರಕರಣ ಹೆಚ್ಚುತ್ತಿದ್ದು, ಈ ಬಗ್ಗೆ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿರುವುದರಿಂದ ಅಧಿಕಾರಿಗಳು ತಮ್ಮ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಮತ್ತು ಕಟ್ಟುನಿಟ್ಟಾಗಿ ನಿರ್ವಹಿಸಬೇಕು.
- ನಕ್ಷೆ ಮಂಜೂರಾತಿ ಉಲ್ಲಂಘಿಸಿದ ಮತ್ತು ಅನಧಿಕೃತ ಕಟ್ಟಡದ ಭಾಗವನ್ನು ತೆರವುಗೊಳಿಸಲು ವಿಫಲರಾಗುವ ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಕೆಎಂಸಿ ಕಾಯ್ದೆ ಕಲಂ 321- ಬಿ ಅಡಿಯಲ್ಲಿ ಅಗತ್ಯ ದಂಡ ವಿಧಿಸಿ ಅವರನ್ನು ಅಮಾನತಿನಲ್ಲಿ ಇರಿಸಿ ಇಲಾಖಾ ವಿಚಾರಣೆ ನಡೆಸಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಸುದ್ದಿ 2 ನಿಮಿಷ

ಚಿಂದಿ ಆಯುವ ಯುವಕ ಸಾವು: ಬೆಸ್ಕಾಂ ವಿರುದ್ಧ ಎಫ್‌ಐಆರ್

ಬೆಂಗಳೂರು: ರಾಜಕಾಲುವೆಯಲ್ಲಿ ತುಂಡರಿಸಿ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಅಪ್ಪು (25) ಎಂಬುವರು ಮೃತಪಟ್ಟಿದ್ದು, ನಿರ್ಲಕ್ಷ್ಯ ಆರೋಪದಡಿ ಬೆಸ್ಕಾಂ ವಿರುದ್ಧ ಹಲಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿ ಅಪ್ಪು ಚಿಂದಿ ಆಯುವ ಕೆಲಸ ಮಾಡುತ್ತಿದ್ದರು. ನಿತ್ಯವೂ ಬೆಳಿಗ್ಗೆ ನಗರದೆಲ್ಲೆಡೆ ಸಂಚರಿಸಿ ಚಿಂದಿ ಆಯ್ದು ಮಾರುತ್ತಿದ್ದರು. ಬಂದ ಹಣದಲ್ಲೇ ಜೀವನ ಸಾಗಿಸುತ್ತಿದ್ದರು. ಇವರ ಸಾವಿನ ಬಗ್ಗೆ ಸ್ಥಳೀಯರೊಬ್ಬರು ದೂರು ನೀಡಿದ್ದಾರೆ. ಬೆಸ್ಕಾಂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾಜಕಾಲುವೆ ಬಳಿಯೇ ವಿದ್ಯುತ್ ತಂತಿ ಹಾದು ಹೋಗಿದೆ. ಇದೇ ವಿದ್ಯುತ್ ತಂತಿ ತುಂಡರಿಸಿ ರಾಜಕಾಲುವೆಗೆ ಬಿದ್ದಿತ್ತು. ರಾಜಕಾಲುವೆ ಬಳಿ ಶುಕ್ರವಾರ ಬೆಳಿಗ್ಗೆ ಹೋಗಿದ್ದ ಅಪ್ಪು, ನೀರಿನಲ್ಲಿದ್ದ ಕಬ್ಬಿಣದ ರಾಡ್ ಹಾಗೂ ಇತರೆ ವಸ್ತುಗಳನ್ನು ಆಯ್ದುಕೊಳ್ಳಲು ಮುಂದಾಗಿದ್ದರು. ಇದೇ ವೇಳೆ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ತಿಳಿಸಿವೆ.

‘ಕೊಳೆಗೇರಿ ಪ್ರದೇಶಕ್ಕೆ ಹೊಂದಿಕೊಂಡು ರಾಜಕಾಲುವೆ ಇದ್ದು, ಇಲ್ಲಿಯ ವಿದ್ಯುತ್ ತಂತಿಗಳು ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಶುಕ್ರವಾರ ಸಹ ವಿದ್ಯುತ್ ತಂತಿ ತುಂಡರಿಸಿದ್ದರಿಂದಲೇ ಅಪ್ಪು ಮೃತಪಟ್ಟಿದ್ದಾರೆ. ಇವರ ಸಾವಿಗೆ ಬೆಸ್ಕಾಂ ನಿರ್ಲಕ್ಷ್ಯವೇ ಕಾರಣವೆಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ಬೆಸ್ಕಾಂ ಅಧಿಕಾರಿಗಳಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಬೇಕಿದೆ’ ಎಂದು ಹೇಳಿವೆ.

ಗಾಂಧಿಬಜಾರ್‌ನಲ್ಲಿ ಪಾಲಿಕೆ ಸ್ವತ್ತು ವಶ

ಬೆಂಗಳೂರು: ಗಾಂಧಿಬಜಾರ್ ಮುಖ್ಯರಸ್ತೆಯಲ್ಲಿ ಪಾಲಿಕೆ ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್ ಹಾಗೂ ಕಾಂಪೌಂಡ್ ಅನ್ನು ಪಾಲಿಕೆ ಸಿಬ್ಬಂದಿ ಶುಕ್ರವಾರ ತೆರವುಗೊಳಿಸಿದರು. 9,100 ಚದರ ಅಡಿ ಜಾಗವನ್ನು ವಶಕ್ಕೆ ಪಡೆದರು.

ಗಾಂಧಿಬಜಾರ್ ಮುಖ್ಯರಸ್ತೆಯ ಪಾಲಿಕೆ ಜಾಗದಲ್ಲಿ ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. 174, 175, 176 ಸಂಖ್ಯೆ ಸ್ವತ್ತುಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಈ ಪೈಕಿ ಹಾಲಿ ಖಾತೆದಾರರ ಹೆಸರು ನಮೂದಾಗಿರುವ ಖಾತೆಗಳನ್ನು ರದ್ದುಪಡಿಸಿ ಪಾಲಿಕೆಯ ಆಯುಕ್ತರ ಹೆಸರಿನಲ್ಲಿ ಖಾತೆಯನ್ನು ಕಚೇರಿ ದಾಖಲಾತಿಯಲ್ಲಿ ನೋಂದಾಯಿಸಲಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ನಡಾವಳಿ ಮತ್ತು ನ್ಯಾಯಾಲಯದ ಆದೇಶದಂತೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಎಂಜಿನಿಯರಿಂಗ್ ಹಾಗೂ ಕಂದಾಯ ವಿಭಾಗದ ಸಿಬ್ಬಂದಿ, ಪೊಲೀಸರ ಸಹಾಯದೊಂದಿಗೆ ವಶಪಡಿಸಿಕೊಂಡಿದ್ದಾರೆ. ಸ್ವತ್ತಿನ ಅಂದಾಜು ಮೌಲ್ಯ ₹30 ಕೋಟಿ ಎಂದು ಕಾರ್ಯಪಾಲಕ ಎಂಜಿನಿಯರ್ ಯೆರಪ್ಪರೆಡ್ಡಿ ತಿಳಿಸಿದ್ದಾರೆ.

ಎಎಪಿ: ಅಭ್ಯರ್ಥಿಗಳ ಶೋಧನಾ ಸಮಿತಿ ರಚನೆ

ಬೆಂಗಳೂರು: ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ(ಎಎಪಿ) ಎಲ್ಲಾ ವಾರ್ಡ್‌ಗಳಲ್ಲೂ ಸ್ಪರ್ಧಿಸಲು ನಿರ್ಧರಿಸಿದೆ. ಜನಸಾಮಾನ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಣಕ್ಕಿಳಿಸಲು ‘ಅಭ್ಯರ್ಥಿ ಶೋಧನಾ ಸಮಿತಿ’ ರಚಿಸಲಾಗಿದೆ ಎಂದು ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಮಾಹಿತಿ ನೀಡಿದರು.

ಬೆಂಗಳೂರು ನಗರವನ್ನು ಶೇ 40 ಕಮಿಷನ್ ಪಡೆಯುವ ಸರ್ಕಾರದಿಂದ ಮುಕ್ತಗೊಳಿಸಬೇಕು. ಇಲ್ಲಿನ ಪರಿಸರ, ಕೆರೆಗಳ ಸಂರಕ್ಷಣೆ, ಸರ್ಕಾರಿ ಆಸ್ಪತ್ರೆ, ಶಾಲೆಗಳು, ಗುಂಡಿಮುಕ್ತ ರಸ್ತೆಗಳು ಸೇರಿದಂತೆ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡುವ ಜನಸಾಮಾನ್ಯರ ಪಕ್ಷವನ್ನು ಬೆಂಬಲಿಸಬೇಕು. ಬೇರೆ ಪಕ್ಷಗಳಲ್ಲಿ ಕಡೆಗಣಿಸಲಾದ ನಾಯಕರನ್ನು ನಮ್ಮ ಪಕ್ಷ ಸ್ವಾಗತಿಸುತ್ತದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಎಂದು ಹೇಳಿದರು.

ಜೆಸಿಬಿ ಪಕ್ಷಗಳು ಹಣ ಬಲ, ತೋಳ್ಬಲದ ಜೊತೆ ಕುಟುಂಬ ರಾಜಕಾರಣ ಮಾಡುವುದರಲ್ಲಿ ತಲ್ಲೀನವಾಗಿವೆ. ಆದರೆ ಎಎಪಿ ಜನ ಸಾಮಾನ್ಯರು, ಯುವಕರು, ಮಹಿಳೆಯರು, ಸಾಮಾಜಿಕ ಹೋರಾಟಗಾರರು, ಆಟೊ ಚಾಲಕರು, ವೈದ್ಯರು, ರಂಗ ಕರ್ಮಿಗಳು, ವಕೀಲರು, ಪತ್ರಕರ್ತರು ಸೇರಿದಂತೆ ಸಮಾಜದ ಎಲ್ಲಾ ಜನರನ್ನು ಚುನಾವಣೆಯಲ್ಲಿ ಭಾಗವಹಿಸಲು ಆಹ್ವಾನಿಸುತ್ತದೆ ಎಂದರು.

ಎಎಪಿ ರಾಜ್ಯ ಕಾರ್ಯದರ್ಶಿ ಬಿ.ಟಿ. ನಾಗಣ್ಣ ನೇತೃತ್ವದಲ್ಲಿ ಅಭ್ಯರ್ಥಿ ಶೋಧನಾ ಸಮಿತಿ ರಚಿಸಲಾಗಿದೆ. ಸುರೇಶ್ ರಾಥೋಡ್, ಕುಶಲಸ್ವಾಮಿ, ಫರೀದುದ್ದೀನ್ ಷರೀಫ್, ಸಂಚಿತ್ ಸಹಾನಿ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ಬಿಬಿಎಂಪಿ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು 7669100500 ಸಂಖ್ಯೆಗೆ ಮಿಸ್ಡ್ ಕಾಲ್ ನೀಡಿ ಅಥವಾ AapAspirant@karnataka.aamaadmiparty.org ವಿಳಾಸವನ್ನುಕೆ ಇ-ಮೇಲ್ ಮೂಲಕ ಸಂಪರ್ಕಿಸಬಹುದು. ಈ ಕುರಿತು 4-5 ವಾಹನಗಳ ಮೂಲಕ ನಗರದಲ್ಲಿ ಪ್ರಚಾರ ಕೈಗೊಳ್ಳಲಾಗುವುದು.

ಬಿಬಿಎಂಪಿ: ರಾಜ್ಯ ಚುನಾವಣೆ ಆಯೋಗ ಆದೇಶ

ಮತದಾರರ ಪಟ್ಟಿ ತಯಾರಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಚುನಾವಣೆ ನಡೆಸುವ ಸಲುವಾಗಿ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಲು ಅಧಿಕಾರಿಗಳನ್ನು ನೇಮಕ ಮಾಡಿ ರಾಜ್ಯ ಚುನಾವಣೆ ಆಯೋಗ ಆದೇಶ ಹೊರಡಿಸಿದೆ.

ಬೆಂಗಳೂರು ನಗರ ಜಿಲ್ಲಾಧಿಕಾರಿ, ಬಿಬಿಎಂಪಿ ಆಡಳಿತ ವಿಶೇಷ ಆಯುಕ್ತ, ದಕ್ಷಿಣ ಹಾಗೂ ಮಹದೇವಪುರ ವಲಯದ ಜಂಟಿ ಆಯುಕ್ತರನ್ನು ಜಿಲ್ಲಾ ಚುನಾವಣಾಧಿಕಾರಿ ಎಂದು ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯನ್ನು ನಿಗದಿಪಡಿಸಲಾಗಿದೆ.

ಮುಖ್ಯಾಂಶಗಳು
- ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿ ನಿಗದಿ
- ಜಿಲ್ಲಾ ಚುನಾವಣಾ ಅಧಿಕಾರಿಗಳ ನೇಮಕ
- ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸಲು ಸೂಚನೆ

ಬಿಬಿಎಂಪಿ ಆಡಳಿತದ ವಿಶೇಷ ಆಯುಕ್ತ: ರಾಜರಾಜೇಶ್ವರಿ ನಗರ, ಶಿವಾಜಿನಗರ, ಗಾಂಧಿನಗರ, ರಾಜಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿ.

ಬಿಬಿಎಂಪಿ ದಕ್ಷಿಣ ವಲಯದ ಜಂಟಿ ಆಯುಕ್ತ: ಗೋವಿಂದರಾಜನಗರ, ವಿಜಯ ನಗರ, ಬಸವನಗುಡಿ, ಪದ್ಮನಾಭನಗರ, ಬಿ.ಟಿ.ಎಂ. ಲೇಔಟ್, ಜಯನಗರ, ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರ.

ಮಹದೇವಪುರ ಜಂಟಿ ಆಯುಕ್ತ: ಕೆ.ಆರ್. ಪುರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಹೆಬ್ಬಾಳ, ಪುಲಿಕೇಶಿನಗರ, ಸರ್ವಜ್ಞನಗರ, ಸಿ.ವಿ. ರಾಮನ್ ನಗರ ವಿಧಾನಸಭೆ ಕ್ಷೇತ್ರ.

ಬೆಂಗಳೂರು ನಗರ ಜಿಲ್ಲಾಧಿಕಾರಿ: ಯಲಹಂಕ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ, ಆನೇಕಲ್ ವಿಧಾನಸಭೆ ಕ್ಷೇತ್ರ. ವಲಯ ಜಂಟಿ ಆಯುಕ್ತರಿಗೆ ಅವರ ವ್ಯಾಪ್ತಿಯ ವಿಧಾನ ಸಭೆ ಕ್ಷೇತ್ರಗಳಿಗೆ ಅಧಿಕ ಜಿಲ್ಲಾ ಚುನಾವಣೆ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಮಹದೇವಪುರ ವಲಯದ ಉಪ ಆಯುಕ್ತರಿಗೆ ಈ ಜವಾಬ್ದಾರಿ ವಹಿಸಲಾಗಿದೆ.

ಅಧಿಕ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯ ವಾರ್ಡ್‌ವಾರು ಮತದಾರರ ಪಟ್ಟಿಯನ್ನು ತಯಾರಿಸಬೇಕು. ಚುನಾವಣೆ ಕಾರ್ಯಗಳನ್ನು ವಿಧ್ಯುಕ್ತವಾಗಿ ನಿರ್ವಹಿಸಬೇಕು ಎಂದು ಆದೇಶಿಸಲಾಗಿದೆ.

ಗರ್ವ್ ಭಕ್ಷಿಗೆ ಶೇ 95.4 ಫಲಿತಾಂಶ

ಬೆಂಗಳೂರು: ಸಿಬಿಎಸ್‌ಇ 10ನೇ ತರಗತಿ ಪಠ್ಯಕ್ರಮದ ಫಲಿತಾಂಶದಲ್ಲಿ ಬಿಟಿಎಂ ಲೇಔಟ್‌ನ ಇಕ್ರಾ ಶಾಲೆಯ ವಿದ್ಯಾರ್ಥಿಗಳಾದ ಗರ್ವ್ ಭಕ್ಷಿ ಶೇ 95.4. ಶೀತಲ್ ವಿ. ನಾಯರ್ ಹಾಗೂ ಸುವೀರ್ ಮಲ್ಹೋತ್ರ ಶೇ 92.8 ಹಾಗೂ ತನೀಶಾ ಶ್ರೀರಾಘವನ್ ಶೇ 92.4ರಷ್ಟು ಫಲಿತಾಂಶ ಪಡೆದಿದ್ದಾರೆ.

ಶಾಲೆಗೆ ಶೇ 100ರಷ್ಟು ಫಲಿತಾಂಶ ಬಂದಿದ್ದು, ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

ಗರ್ವ್ ಭಕ್ಷಿ

ಶೀತಲ್

ಸುವೀರ್

ತನಿಶಾ

ಸಿಬಿಎಸ್‌ಸಿ: ಸುಮಂತ್‌ಗೆ ಶೇ 84 ಅಂಕ

ಬೆಂಗಳೂರು: ಸಿಬಿಎಸ್‌ಸಿ ಪಠ್ಯಕ್ರಮದ 12ನೇ ತರಗತಿಯ ಫಲಿತಾಂಶವು ಶುಕ್ರವಾರ ಪ್ರಕಟವಾಗಿದ್ದು, ಬಿಟಿಎಂ ಲೇಔಟ್‌ನ ಆರ್ಕಿಡ್ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಶೇ 100 ಫಲಿತಾಂಶ ಬಂದಿದೆ.

ಶಾಲೆಯ ವಿದ್ಯಾರ್ಥಿ ಸುಮಂತ್‌ಗೆ ಶೇ 84ರಷ್ಟು ಫಲಿತಾಂಶ ಲಭಿಸಿದೆ. ಆದಿತ್ಯ ಭಾರ್ನೆ ಶೇ 82, ಎಂ.ಅತುಲ್ ಶೇ 78, ಕ್ರಿಶಿಕೇಶ್ ರೆಡ್ಡಿ ಶೇ 78ರಷ್ಟು ಫಲಿತಾಂಶ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸುಮಂತ್

‘ಟ್ರಾಮಾ ಸೆಂಟರ್’ಗೆ ಶೀಘ್ರವೇ ಅನುಮತಿ

ನಿಮ್ಹಾನ್ಸ್ ಆಸ್ಪತ್ರೆ ಮೇಲಿನ ಒತ್ತಡ ತಗ್ಗಿಸಲು ಕ್ರಮ: ಸಚಿವ ಡಾ.ಕೆ.ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆ ಅವಲಂಬಿಸುವ ರೋಗಿಗಳ ಸಂಖ್ಯೆ ಹೆಚ್ಚಿದ್ದು, ಈ ಆಸ್ಪತ್ರೆ ಮೇಲಿನ ಒತ್ತಡ ತಗ್ಗಿಸಲು ಆವರಣದಲ್ಲಿ ಟ್ರಾಮಾ ಕೇರ್ ಸೆಂಟರ್ ಆರಂಭಿಸಲಾಗುವುದು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಭರವಸೆ ನೀಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಜಯನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರಂಭಿಸಿರುವ ‘ಮಿದುಳು ಆರೋಗ್ಯ ಕ್ಲಿನಿಕ್’ ಅನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು.

‘ದಕ್ಷಿಣ ಭಾರತದ ಎಲ್ಲ ರಾಜ್ಯಗಳ ರೋಗಿಗಳೂ ಚಿಕಿತ್ಸೆಗೆ ಇಲ್ಲಿಗೇ ಬರುತ್ತಿದ್ದಾರೆ. ತೀವ್ರ ನಿಗಾ ಘಟಕದಲ್ಲಿ ಹಾಸಿಗೆ ಲಭ್ಯವಿರುವುದಿಲ್ಲ ಎಂಬ ದೂರಿದೆ. ಟ್ರಾಮಾ ಕೇರ್ ಸೆಂಟರ್ ಆರಂಭಿಸಲು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಕೇಂದ್ರದ ಆರೋಗ್ಯ ಸಚಿವರಿಂದಲೂ ಅನುಮತಿಯ ಭರವಸೆ ಲಭಿಸಿದೆ’ ಎಂದರು.

‘ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಂಬಿಬಿಎಸ್ ವೈದ್ಯರು ಮಾನಸಿಕ ರೋಗಿಗಳಿಗೆ ಚಿಕಿತ್ಸೆ ನೀಡಲು ವಿಶೇಷ ತರಬೇತಿ ಅಗತ್ಯವಿದೆ. ಬೆಂಗಳೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ನಿಮ್ಹಾನ್ಸ್‌ನ ತಜ್ಞರು ಗ್ರಾಮೀಣ ಪ್ರದೇಶದ 100 ವೈದ್ಯರಿಗೆ ತರಬೇತಿ ನೀಡಿದ್ದು, ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿ ಮಾಡಲಾಗಿದೆ. ಇದರಿಂದ ಸ್ಥಳೀಯ ಮಟ್ಟದಲ್ಲೇ ಚಿಕಿತ್ಸೆ ಪಡೆಯಬಹುದು’ ಎಂದರು.

ಶಾಸಕಿ ಸೌಮ್ಯಾರೆಡ್ಡಿ ಮಾತನಾಡಿ, ’ರಾಜ್ಯದ ಆಸ್ಪತ್ರೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನಿಯಂತ್ರಣಕ್ಕೆ ತರಬೇಕು‘ ಎಂದು ಆಗ್ರಹಿಸಿದರು.

ಕರ್ನಾಟಕ ಮಿದುಳು ಆರೋಗ್ಯ ಉಪಕ್ರಮದ ರಾಯಭಾರಿ ಕ್ರಿಕೆಟಿಗ ರಾಬಿನ್ ಉತ್ತಪ್ಪ, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್‌ಕುಮಾರ್, ನಿಮ್ಹಾನ್ಸ್ ಸಂಸ್ಥೆಯ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ, ಆರೋಗ್ಯ ಇಲಾಖೆ ನಿರ್ದೇಶಕಿ ಡಾ.ಎಂ.ಇಂದುಮತಿ ಹಾಜರಿದ್ದರು.

ಮಿದುಳು ಆರೋಗ್ಯ ಕ್ಲಿನಿಕ್ ಉದ್ಘಾಟನಾ ಸಮಾರಂಭದಲ್ಲಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಭಿತ್ತಿಪತ್ರ ಬಿಡುಗಡೆ ಮಾಡಿದರು. ಟಿ.ಕೆ.ಅನಿಲ್‌ಕುಮಾರ್, ರಾಬಿನ್ ಉತ್ತಪ್ಪ, ಡಾ.ಪ್ರತಿಮಾ ಮೂರ್ತಿ ಮೊದಲಾದವರು ಹಾಜರಿದ್ದರು

‘ರಾಬಿನ್ ಉತ್ತಪ್ಪ ರಿಯಲ್ ಹೀರೊ’

‘ರಾಯಭಾರಿ ಆಗುವಂತೆ ರಾಬಿನ್ ಬಳಿ ಮನವಿ ಮಾಡಿದಾಗ ಮರು ಮಾತಿಲ್ಲದೇ ಒಪ್ಪಿಕೊಂಡರು. ಮಾನಸಿಕ ಸದೃಢತೆ ಮುಖ್ಯ ಎನ್ನುವ ಕಾರಣಕ್ಕೆ ಕ್ರೀಡಾಪಟುಗಳನ್ನೇ ಆಯ್ಕೆ ಮಾಡಲು ನಿರ್ಧರಿಸಿದ್ದೆವು. ಕರ್ನಾಟಕ ಮಿದುಳು ಆರೋಗ್ಯ ಉಪಕ್ರಮದ ರಾಯಭಾರಿಯಾಗಲು ರಾಬಿನ್ ಅವರು ಯಾವುದೇ ಸಂಭಾವನೆ ಪಡೆಯುತ್ತಿಲ್ಲ. ಇವರೇ ರಿಯಲ್ ಹೀರೊ’ ಎಂದು ಸಚಿವ ಕೆ.ಸುಧಾಕರ್ ಶ್ಲಾಘಿಸಿದರು.

ಮುಖ್ಯಾಂಶಗಳು
- ‘ಮಿದುಳು ಆರೋಗ್ಯ ಕ್ಲಿನಿಕ್’ ಉದ್ಘಾಟನೆ
- ಕೋವಿಡ್: 25 ಲಕ್ಷ ಮಂದಿಗೆ ಆಪ್ತ ಸಮಾಲೋಚನೆ
- ಗ್ರಾಮೀಣ ಪ್ರದೇಶದ 100 ವೈದ್ಯರಿಗೆ ತರಬೇತಿ

ಲಕ್ಷಾಂತರ ರೂಪಾಯಿ ವಂಚನೆ: ವಿಜ್ಞಾನಿ ಪತ್ನಿ ದೂರು

ಬೆಂಗಳೂರು: ‘ಪತಿ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಸಹೋದ್ಯೋಗಿ ಆಗಿದ್ದ ರಾಘವೇಂದ್ರ ಎಂಬಾತ ನನ್ನ ಚಿನ್ನಾಭರಣ ದೋಚಿದ್ದಾನೆ. ಲಕ್ಷಾಂತರ ರೂಪಾಯಿ ಪಡೆದು ವಂಚಿಸಿ, ಆಸ್ತಿ ಕಬಳಿಸಲು ಯತ್ನಿಸುತ್ತಿದ್ದಾನೆ’ ಎಂದು ಆರೋಪಿಸಿ ರಾಮಲಕ್ಷ್ಮಿ ಎಂಬುವರು ಬಸವೇಶ್ವರನಗರ ಠಾಣೆಗೆ ದೂರು ನೀಡಿದ್ದಾರೆ.

‘ಯುನೈಟೆಡ್ ಟೆಲಿಕಾಂ ಕಂಪನಿಯಲ್ಲಿ ಕೆಲಸ ಮಾಡಿದ್ದ ವಿಜ್ಞಾನಿ ದಿವಂಗತ ವೆಂಕಟೇಶ್ವರ ಅವರ ಪತ್ನಿ 75 ವರ್ಷದ ರಾಮಲಕ್ಷ್ಮಿ ಇತ್ತೀಚೆಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ರಾಘವೇಂದ್ರ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬು ಹೇಳಿದರು.

ದೂರಿನ ವಿವರ: ‘ಬಸವೇಶ್ವರನಗರ ಶಾರದಾ ಕಾಲೊನಿಯಲ್ಲಿ 40 ವರ್ಷಗಳಿಂದ ವಾಸವಿದ್ದೇನೆ. ಇಬ್ಬರು ಮಕ್ಕಳಿದ್ದು, ಚೆನ್ನೈ ಹಾಗೂ ಬನ್ನೇರುಘಟ್ಟದಲ್ಲಿ ಪ್ರತ್ಯೇಕವಾಗಿ ವಾಸವಿದ್ದಾರೆ. ಆಗಾಗ ಮನೆಗೆ ಬಂದು ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಾರೆ. ಪತಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ರಾಘವೇಂದ್ರ ಸಹ ಹಲವು ವರ್ಷಗಳಿಂದ ಪರಿಚಿತ. ಈತನೂ ಆಗಾಗ ಮನೆಗೆ ಬಂದು ಹೋಗುತ್ತಿದ್ದ’ ಎಂದು ರಾಮಲಕ್ಷ್ಮಿ ದೂರಿನಲ್ಲಿ ತಿಳಿಸಿದ್ದಾರೆ.

‘ಪತಿ ತೀರಿಕೊಂಡ ಬಳಿಕ ಮನೆಗೆ ಬಂದಿದ್ದ ರಾಘವೇಂದ್ರ, ‘ನಿಮ್ಮ ಆರೋಗ್ಯ ಚೆನ್ನಾಗಿ ನೋಡಿಕೊಳ್ಳುವಂತೆ ವೆಂಕಟೇಶ್ವರ ನನಗೆ ಹೇಳಿದ್ದಾರೆ’ ಎಂದು ಸುಳ್ಳು ಹೇಳಿದ್ದ. ನಾನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದಾಗ, ಚಿನ್ನಾಭರಣ ಬಿಚ್ಚಿಸಿಕೊಂಡು ವಾಪಸು ಕೊಟ್ಟಿರಲಿಲ್ಲ. ನಾನು ವಾಸವಿರುವ ಮನೆಯ ಗಿಫ್ಟ್ ಡೀಡ್ ಅನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾನೆ. ಇದಕ್ಕೆ ಒತ್ತಾಯದಿಂದ ಹೆದರಿಸಿ ನನ್ನ ಸಹಿ ಪಡೆದಿದ್ದಾನೆ. ಅಲ್ಲದೆ, ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದ್ದಾನೆ’ ಎಂದೂ ದೂರಿನಲ್ಲಿ ಹೇಳಿದ್ದಾರೆ.

ಹಕ್ಕಿಗೀತ... ನಗರದ ಕೋರಮಂಗಲದ ಪರೇಡ್ ಮೈದಾನದಲ್ಲಿ ಬೂಟುಗಳು ಹೊಮ್ಮಿಸುವ ಶಬ್ದ ಕೇಳುವುದು ಸಹಜ. ಅಲ್ಲಿ ಪಾರಿವಾಳಗಳ ಹಿಂಡು ಒಂದೇ ಲಯದಲ್ಲಿ ರೆಕ್ಕೆ ಬಿಚ್ಚಿ ಹಾರಿದ ಸಂದರ್ಭದಲ್ಲಿ ಕ್ಯಾಮೆರಾ ಕಣ್ಣಿಗೆ ಕಂಡಿದ್ದು ಹೀಗೆ -ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

‘ನಮ್ಮ ಕ್ಲಿನಿಕ್’ಗೆ ಆಯ್ಕೆ

ಬೆಂಗಳೂರು: ಬಿಬಿಎಂಪಿ ‘ನಮ್ಮ ಕ್ಲಿನಿಕ್’ಗಳಲ್ಲಿ ಕಾರ್ಯನಿರ್ವಹಿಸಲು ವೈದ್ಯಾಧಿಕಾರಿಗಳು, ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರು, ನಾಲ್ಕನೇ ದರ್ಜೆ ನೌಕರರು ಹುದ್ದೆಗಳಿಗೆ ‘ವಾಕ್ ಇನ್’ ಆಯ್ಕೆಗೆ ಅರ್ಜಿ ಆಹ್ವಾನಿಸಲಾಗಿದೆ.

ಕೇಂದ್ರ ಸರ್ಕಾರದ 15ನೇ ಹಣಕಾಸು ಆಯೋಗದ ಯೋಜನೆಯಡಿಯಲ್ಲಿ ‘ನಮ್ಮ ಕ್ಲಿನಿಕ್’ ಸ್ಥಾಪಿಸಲಾಗುತ್ತಿದೆ. ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ‘ವಾಕ್ ಇನ್‘ ಜುಲೈ 25ರ ಸೋಮವಾರ ನಡೆಯಲಿದೆ ಎಂದು ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದ್ದಾರೆ. ವಿವರಗಳಿಗೆ 22975516.

ಲಾರಿ ಮಗುಚಿ ಯುವಕ ಸಾವು

ಬೆಂಗಳೂರು: ನಾಗರಬಾವಿ ಮೇಲ್ಸೇತುವೆಯಲ್ಲಿ ಲಾರಿಯೊಂದು ಮಗುಚಿ ಬಿದ್ದಿದ್ದರಿಂದ, ಅದರಲ್ಲಿದ್ದ ಮರದ ದಿಮ್ಮಿಗಳು ದ್ವಿಚಕ್ರ ವಾಹನಗಳ ಮೇಲೆ ಬಿದ್ದು ಹಿಂಬದಿ ಸವಾರ ಎನ್. ಮುಖೇಶ್ (23) ಎಂಬುವರು ಮೃತಪಟ್ಟಿದ್ದಾರೆ.

‘ಶುಕ್ರವಾರ ಬೆಳಿಗ್ಗೆ ಈ ಅವಘಡ ಸಂಭವಿಸಿದೆ. ಮರದ ದಿಮ್ಮಿಗಳು ಮೈ ಮೇಲೆ ಬಿದ್ದಿದ್ದರಿಂದ ತೀವ್ರ ಗಾಯಗೊಂಡು ಮುಖೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸವಾರರಾದ ಡೇವಿಡ್ (26) ಹಾಗೂ ಶಿವು (26) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಹೇಳಿದರು.

ನವ್ಯಾಗೆ ಉತ್ತಮ ಅಂಕ

ಬೆಂಗಳೂರು: ಎಚ್‌ಆರ್‌ಬಿಆರ್ ಲೇಔಟ್‌ನ ಸಿಎಂಆರ್–ಎನ್‌ಪಿಎಸ್ ಗ್ರೂಪ್ ಶಾಲೆಯ 10ನೇ ತರಗತಿ ಸಿಬಿಎಸ್‌ಇ ವಿದ್ಯಾರ್ಥಿಗಳಾದ ನವ್ಯಾ ಸುರೇಶ್ (ಶೇ 98.2), ಅಪರ್ಣಾ ಎಸ್. ಜಗದೀಶನ್ (ಶೇ 97.6) ಹಾಗೂ ನಿಶಿತಾ (ಶೇ 97) ಉತ್ತಮ ಫಲಿತಾಂಶ ಪಡೆದಿದ್ದಾರೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

ನವ್ಯಾ

ಅಪರ್ಣಾ

ನಿಶಿತಾ

‘ಶ್ರೀಲಂಕಾ ಬೆಳವಣಿಗೆ ಭಾರತಕ್ಕೆ ಎಚ್ಚರಿಕೆ ಗಂಟೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀಲಂಕಾದಲ್ಲಿನ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಭಾರತಕ್ಕೆ ಎಚ್ಚರಿಕೆಯ ಕರೆಗಂಟೆಯಾಗಿವೆ’ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ತಿಳಿಸಿದ್ದಾರೆ.

’ಶ್ರೀಲಂಕಾದಲ್ಲಿ ನಡೆದಿರುವ ಘಟನೆಗಳು ದುರದೃಷ್ಟವಶಾತ್ ಭಾರತದಲ್ಲೂ ವ್ಯಾಪಕವಾಗಿವೆ. ಅಲ್ಪಸಂಖ್ಯಾತರ ಮೇಲೆ ಹಲ್ಲೆ, ದೌರ್ಜನ್ಯ, ಹಿಂಸೆಗಳು ಹೆಚ್ಚುತ್ತಿವೆ. ಅವರ ಆಸ್ತಿ ಜಪ್ತಿ ಜತೆಗೆ, ಮನೆಗಳನ್ನು ನೆಲಸಮಗೊಳಿಸುವಂತಹ ಘಟನೆಗಳು ನಡೆಯುತ್ತಿವೆ. ಸಂವಿಧಾನವು ಅವರಿಗೆ ನೀಡಿದ ಭಾರತೀಯ ನಾಗರಿಕರು ಎನ್ನುವ ಗುರುತನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ’ ಎಂದು ದೂರಿದ್ದಾರೆ.

‘ನಮ್ಮದು ಅತಿದೊಡ್ಡ ಪ್ರಜಾಪ್ರಭುತ್ವ ಎಂದು ಜಗತ್ತಿನಾದ್ಯಂತ ಸಾರುತ್ತಲೇ ಸರ್ಕಾರದ ನೀತಿ-ನಿರ್ಧಾರಗಳನ್ನು ವಿರೋಧಿಸುವವರ ಸಾಂವಿಧಾನಿಕ ಹಕ್ಕುಗಳನ್ನು ಹತ್ತಿಕ್ಕುವ ಕೆಲಸವೂ ನಡೆದಿದೆ’ ಎಂದು ಟೀಕಿಸಿದ್ದಾರೆ.

ಪ್ರೊ.ಬಿ.ಕೆ. ಚಂದ್ರಶೇಖರ್

‘ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ, ಭ್ರಷ್ಟಾಚಾರಗಳನ್ನು ತಡೆಯಲು ವಿಫಲವಾಗಿರುವ ಸರ್ಕಾರ, ಹುಸಿ ರಾಷ್ಟ್ರೀಯತೆ, ಉಗ್ರ ರಾಷ್ಟ್ರೀಯವಾದ ಮತ್ತು ಕೋಮು ಭಾವನೆ ಹರಡುವ ಮೂಲಕ ಜನರ ಗಮನವನ್ನು ಬೇರೆಡೆಗೆ ಸೆಳೆಯುತ್ತಿದೆ. ಸರ್ಕಾರದ ನೀತಿಗಳನ್ನು ವಿರೋಧಿಸುವವರು, ವಿಮರ್ಶಿಸುವವರನ್ನು ವಿನಾಕಾರಣ ಜೈಲಿಗೆ ದೂಡುವ ಮೂಲಕ ಸಂವಿಧಾನದತ್ತ ವಾಕ್ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಬ್ರಿಟಿಷರು ಭಾರತದಲ್ಲಿ ಹಿಂದೂ ಮತ್ತು ಮುಸ್ಲಿಮರನ್ನು ಎರಡು ಪ್ರಮುಖ ಧಾರ್ಮಿಕ ಸಮುದಾಯಗಳು ಎಂದು ಗುರುತಿಸಿದರು. ಈ ಎರಡೂ ಸಮುದಾಯಗಳನ್ನು ಬಹುಸಂಖ್ಯಾತರು (ಹಿಂದೂ) ಮತ್ತು ಅಲ್ಪಸಂಖ್ಯಾತರು (ಮುಸ್ಲಿಂ) ಎಂದು ವಿಂಗಡಿಸಲಾಯಿತು. ನಂತರ ಸಂಘಪರಿವಾರದ ಹಿಂದುತ್ವದ ಕಲ್ಪನೆಗೆ ಒಂದು ಹೆಜ್ಜೆಯಷ್ಟೇ ಬೇಕಿತ್ತು. ಹೀಗಾಗಿ, ಎರಡು ಸಮುದಾಯಗಳಿಗೆ ‘ಹಿಂದೂ’ ಮತ್ತು ‘ಮುಸ್ಲಿಂ’ ಎನ್ನುವ ಅಸ್ಮಿತೆ ಅಂಟಿಸಲಾಯಿತು. ನಮ್ಮ ದೇಶವನ್ನು ಹಿಂದೂ ರಾಷ್ಟ್ರವೆಂದು ಕರೆದಿರುವುದು ಸಾವರ್ಕರ್ ಅವರ ಹಿಂದುತ್ವ ಎಂಬ ಕೋಮು ಸಿದ್ಧಾಂತದ ಕೊಡುಗೆ! ಭಾರತದ ಸಂವಿಧಾನ ಗುರುತಿಸಿರುವುದು ‘ನಾಗರಿಕ’ ಅಥವಾ ‘ಪ್ರಜೆ’ಯ ಕಲ್ಪನೆಯನ್ನೇ ಹೊರತು ಯಾವುದೇ ಧಾರ್ಮಿಕ ಸಮುದಾಯವನ್ನಲ್ಲ. ಇಂಥಾ (ಅ)ವ್ಯವಸ್ಥೆ, ಭೇದಭಾವದ ಸಮಾಜದಲ್ಲಿ ಕಾನೂನಿನ ಅಧಿಪತ್ಯ ಕಟ್ಟುಕಥೆ’ ಎಂದು ವಿವರಿಸಿದ್ದಾರೆ.

ನಗರದಲ್ಲಿ ಇಂದು

ದೇವಿ ಮುತ್ತು ಮಾರಿಯಮ್ಮ ದೇವಿಯ 41ನೇ ವರ್ಷದ ಹೂವಿನ ಕರಗ ಮಹೋತ್ಸವ: ಅಮ್ಮನವರಿಗೆ ಮಹಾ ಅಭಿಷೇಕ, ಮುತ್ತಿನ ಪಲ್ಲಕ್ಕಿಯಲ್ಲಿ ಮೆರವಣಿಗೆ, ಆಯೋಜನೆ: ದೇವಿ ಮುತ್ತು ಮಾರಿಯಮ್ಮ ದೇವಾಲಯ, ಸ್ಥಳ: ಕೃಷ್ಣಾನಂದನಗರ, ನಂದಿನಿ ಲೇಔಟ್, ಬೆಳಿಗ್ಗೆ 9

20 ಬಸವ ಅಧ್ಯಯನ ಕೇಂದ್ರಗಳ ಉದ್ಘಾಟನೆ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಅರವಿಂದ್ ಜತ್ತಿ, ಅತಿಥಿಗಳು: ವೂಡೇ.ಪಿ. ಕೃಷ್ಣ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಆಯೋಜನೆ: ಶೇಷಾದ್ರಿಪುರ ಎಜುಕೇಷನಲ್ ಟ್ರಸ್ಟ್, ಸ್ಥಳ: ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜು ಯಲಹಂಕ, ಬೆಳಿಗ್ಗೆ 10

ಶಾಸ್ತ್ರೀಯ ಸುವರ್ಣ ಸಂಭ್ರಮ, ಶ್ರೀಕಾಂತಂ ನಾಗೇಂದ್ರ ಶಾಸ್ತ್ರೀ ಅವರ ಅಭಿನಂದನಾ ಗ್ರಂಥ ಬಿಡುಗಡೆ: ಅತಿಥಿಗಳು: ಅಮರನಾಥ್, ಎ.ವಿ. ಆನಂದ, ಕಾಂಚನಾ ರೋಹಿಣಿ ಸಬ್ಬರತ್ನಂ, ಆರ್.ಎಸ್. ನಂದಕುಮಾರ್, ಪತ್ತಿ ಶ್ರೀಧರ, ಅಧ್ಯಕ್ಷತೆ: ಆನೂರು ಅನಂತಕೃಷ್ಣ ಶರ್ಮಾ, ಆಯೋಜನೆ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರೀ ಫೌಂಡೇಷನ್, ಸ್ಥಳ: ಪತ್ತಿ ಸಭಾಂಗಣ, ಎನ್. ಆರ್. ಕಾಲೊನಿ, ಬೆಳಿಗ್ಗೆ 10

ರಂಗಸೌರಭ ಭಾಗ–50 ಉದ್ಘಾಟನಾ ಸಮಾರಂಭ, ‘ಅಭಿಜ್ಞಾನ ಶಾಕುಂತಲಾ’ ಪೌರಾಣಿಕ ನಾಟಕ ಪ್ರದರ್ಶನ: ಉದ್ಘಾಟನೆ: ಎ.ಎಸ್. ಜಯರಾಮ್, ಅಧ್ಯಕ್ಷತೆ: ಟಿ.ಎಸ್. ಬೋರೇಗೌಡ, ಅತಿಥಿಗಳು: ಎಂ.ಟಿ. ಕೃಷ್ಣಪ್ಪ, ಎಂ.ಡಿ. ಲಕ್ಷ್ಮೀನಾರಾಯಣ್, ಆಯೋಜನೆ: ಶಿವಶಕ್ತಿ ಕಲಾವಿದರು ತುರುವೇಕೆರೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಮೃಣಾಲಿನಿ ಗೌಡ

ಭರತನಾಟ್ಯ ರಂಗಪ್ರವೇಶ: ಮೃಣಾಲಿನಿ ಗೌಡ, ನಿರ್ದೇಶನ: ಪೂರ್ಣಿಮಾ.ಕೆ. ಗುರುರಾಜ, ಅತಿಥಿಗಳು: ತಂಜಾವೂರ್ ಕೆ.ಪಿ.ಕೆ. ಚಂದ್ರಶೇಖರನ್ ಪಿಳ್ಳೈ, ರತ್ನಾ ಸುಪ್ರಿಯಾ ಶ್ರೀಧರನ್, ಆಯೋಜನೆ: ಕಲಾ ಸಿಂಧು, ಸ್ಥಳ: ಜೆ.ಎಸ್.ಎಸ್ ಸಭಾಂಗಣ, ಜಯನಗರ, ಸಂಜೆ 6

ಮಹಿಳೆಯರಿಗೆ ನ್ಯಾಯ, ನಮ್ಮ ನ್ಯಾಯ ವ್ಯವಸ್ಥೆ ಕುರಿತು ಉಪನ್ಯಾಸ, ಸಂವಾದ ಮತ್ತು ಕೆ.ಚಂದ್ರು ಅವರ ‘ನನ್ನ ದೂರು ಕೇಳಿ ಪುಸ್ತಕ’ ಬಿಡುಗಡೆ: ಅತಿಥಿಗಳು: ಕೆ.ಚಂದ್ರು, ಎಚ್.ಎನ್. ನಾಗಮೋಹನ ದಾಸ್, ಹೇಮಲತಾ ಮಹಿಷಿ, ಸ್ಥಳ: ಯು.ವಿ.ಸಿ.ಇ ಅಲ್ಯುಮ್ನಿ ಸಭಾಂಗಣ, ಕೆ.ಆರ್. ವೃತ್ತ, ಬೆಳಿಗ್ಗೆ 10.30

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ರಾಧಾಕೃಷ್ಣನ್ ರಾಜಗೋಪಾಲನ್, ಆಯೋಜನೆ ಮತ್ತು ಸ್ಥಳ: ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ, ಬೆಳಿಗ್ಗೆ 10.30

ಬಿ.ಎಂ. ಶ್ರೀನಿವಾಸಯ್ಯ ಸ್ಮಾರಕ 7ನೇ ರಾಷ್ಟ್ರೀಯ ಅಣಕು ನ್ಯಾಯಾಲಯದ ಸ್ಪರ್ಧೆ: ಅತಿಥಿಗಳು: ಸುದೇಶ ಪೈ, ಪಿ.ಎನ್. ದೇಸಾಯಿ, ಎಂ.ಕೆ. ರಮೇಶ್, ಪಿ.ದಯಾನಂದ್ ಪೈ, ಬಿ.ಎಸ್. ರಾಗಿಣಿ ನಾರಾಯಣ್, ಅಧ್ಯಕ್ಷತೆ: ಅವಿರಾಮ್ ಶರ್ಮಾ, ರವಿ ವೆಂಕಟೇಸಂ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಕಾನೂನು ಕಾಲೇಜ್, ಬಸವನಗುಡಿ, ಮಧ್ಯಾಹ್ನ 12.30

ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ: ಉದ್ಘಾಟನೆ: ರಿಜ್ವಾನ್ ಅರ್ಷದ್, ಅತಿಥಿಗಳು: ಪುಟ್ಟಣ್ಣ, ಹಂಸಲೇಖ, ಗಿರೀಶ್ ಎಚ್.ಎನ್., ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ: ಸರ್ಕಾರಿ ಕಲಾ ಕಾಲೇಜು, ಡಾ.ಬಿ. ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ಹಂಸಲೇಖ

‘ಸ್ವಾಮಿ ಕೊರಗಜ್ಜ’ ಯಕ್ಷಗಾನ ಪ್ರದರ್ಶನ: ಭಾಗವತರು: ಸತೀಶ್ ಶೆಟ್ಟಿ ಪಟ್ಲ, ಧೀರಜ್.ರೈ. ಸಂಪಾಜೆ, ಪ್ರಖ್ಯಾತ ಶೆಟ್ಟಿ ಅಳಿಕೆ, ಆಯೋಜನೆ: ಸೋನಾ ಇವೆಂಟ್ಸ್, ಸ್ಥಳ: ಬಂಟರ ಸಂಘ, ಅತ್ತಿಗುಪ್ಪೆ, ವಿಜಯನಗರ, ಮಧ್ಯಾಹ್ನ 2

61ನೇ ಆಡಿಕೃತ್ತಿಕಾ ಮಹೋತ್ಸವ: ಆಯೋಜನೆ: ವಲ್ಲೀದೇವಸೇನಾ ಸಮೇತ, ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನ, ಸ್ಥಳ: ಕುಮಾರ ಕೃಪಾ ಪಶ್ಚಿಮ ಬಡಾವಣೆ, ಮಧ್ಯಾಹ್ನ 3

ಪಲಿಮಾರು ಮಠದ ವಿದ್ಯಾಧೀಶತೀರ್ಥ ಶ್ರೀಪಾದರ 44ನೇ ಚಾತುರ್ಮಾಸ್ಯ ಸ್ವಾಗತ ಸಮಾರಂಭ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ.ಕೆ. ಶಿವರಾಮ್, ಆನಂದತೀರ್ಥಾಚಾರ್ ನಾಗಸಂಪಿಗೆ, ಆಯೋಜನೆ: ಉಡುಪಿ ಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 4

ಡಾ.ಎಚ್. ಗಿರಿಜಮ್ಮ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಡಾ.ಸಿ. ಎನ್. ಮಂಜುನಾಥ್, ಶಾಂತಲಾ, ಡಾ.ಎಚ್.ಎಸ್. ಅನುಪಮಾ, ಡಾ.ಆರ್. ಕೆ. ಸರೋಜ, ಅತಿಥಿಗಳು: ಬಿ.ಎಲ್. ಶಂಕರ್, ಅಪರ್ಣಾ ವಸ್ತಾರೆ, ಅಧ್ಯಕ್ಷತೆ: ಸಿ.ಆರ್. ಚಂದ್ರಶೇಖರ್, ಆಯೋಜನೆ: ಡಾ.ಎಚ್. ಗಿರಿಜಮ್ಮ ಸ್ನೇಹ ಬಳಗ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಸಂಜೆ 5.30

ಡಾ. ಸಿ.ಎನ್. ಮಂಜುನಾಥ

ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ಭರತನಾಟ್ಯ ನೃತ್ಯ ರೂಪಕ: ಪ್ರಸ್ತುತಿ: ಅರ್ಥ ನೃತ್ಯ ಕಲಾಮಂದಿರದ ವಿದ್ಯಾರ್ಥಿನಿಯರು, ನೃತ್ಯ ಸಂಯೋಜನೆ: ಸ್ಮಿತಾ ಶ್ರೀಪತಿ, ಆಯೋಜನೆ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಸಂಜೆ 6

ರಸ್ತೆ ಕಾಮಗಾರಿಗಳಿಗೆ ಟೆಂಡರ್ ಫೈನಲ್; ಕೆರೆ, ಶಿಕ್ಷಣ, ಆರೋಗ್ಯ ಸಂಬಂಧಿ ಕೆಲಸಗಳು ವಿಳಂಬ

'ಅಮೃತ'ದ ಕೆಲಸ ತಿಂಗಳಲ್ಲಿ ಶುರು

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ₹6 ಸಾವಿರ ಕೋಟಿ ವೆಚ್ಚದ ಕಾಮಗಾರಿಗಳು ಇನ್ನೆರಡು ವಾರಗಳಲ್ಲಿ ಪ್ರಾರಂಭವಾಗಲಿವೆ. ಅದರಲ್ಲೂ ನಗರದ ರಸ್ತೆಗಳು ಇನ್ನು ಮೂರು ತಿಂಗಳಲ್ಲಿ ನಳನಳಿಸಲಿವೆ. ರಸ್ತೆ ಗುಂಡಿಗಳ ಸಮಸ್ಯೆಯೇ ಎದುರಾಗುವುದಿಲ್ಲ. ಏಕೆಂದರೆ, ಅಮೃತ ನಗರೋತ್ಥಾನ ಯೋಜನೆಯಲ್ಲಿ ಅನುಮೋದನೆಗೊಂಡಿರುವ ಅಷ್ಟೂ ಕಾಮಗಾರಿಗೆ ತುರ್ತು ಟೆಂಡರ್ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ.

ಬಿಬಿಎಂಪಿಯ ಏಳು ವಿಭಾಗಗಳಲ್ಲಿ ಅಮೃತ ನಗರೋತ್ಥಾನ ಯೋಜನೆ ಅನುಷ್ಠಾನಗೊಳ್ಳಲಿದೆ. ಅನುದಾನಕ್ಕೆ ಜೂನ್ 18ರಂದು ಅನುಮೋದನೆ ನೀಡಲಾಗಿದ್ದು, ಅದರಲ್ಲಿ ವಿಧಿಸಿರುವ ಷರತ್ತಿನಂತೆ ಒಂದು ತಿಂಗಳಲ್ಲಿ ಈ ಎಲ್ಲ ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಿತ್ತು. ಅಂದರೆ ಜುಲೈ 18ರೊಳಗೆ ಮುಗಿಯಬೇಕಿತ್ತು. ಈ ನಿಟ್ಟಿನಲ್ಲಿ ತುರ್ತು ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ. ಆರೋಗ್ಯ ಮತ್ತು ಶಿಕ್ಷಣ ಇಲಾಖೆಯ ಕೆಲಸಗಳಿಗೆ ಮಾತ್ರ ಇನ್ನೂ ಚಾಲನೆ ಸಿಕ್ಕಿಲ್ಲ.

ರಸ್ತೆ ಮೂಲಸೌಕರ್ಯದಿಂದಲೇ ನಗರದ 200ಕ್ಕೂ ಹೆಚ್ಚು ರಸ್ತೆಗಳು ಅಭಿವೃದ್ಧಿಯಾಗಲಿವೆ. ಇನ್ನು ವಿಧಾನಸಭೆ ಕ್ಷೇತ್ರವಾರು ನೀಡುವ ಅನುದಾನದಲ್ಲಿ ಶಾಸಕರು ಬಹುತೇಕ ರಸ್ತೆ ಕಾಮಗಾರಿಗಳಿಗೇ ಸಮ್ಮತಿ ನೀಡಿದ್ದಾರೆ. ಹೀಗಾಗಿ, ಬೆಂಗಳೂರು ನಗರ ಇನ್ನು ಮೂರು ತಿಂಗಳಲ್ಲಿ ರಸ್ತೆಯ ಗುಂಡಿಗಳಿಂದ ಮುಕ್ತವಾಗಿ, 'ಹೈಟೆಕ್ ರಸ್ತೆಗಳ ನಗರಿ'ಯಾಗಲಿದೆ ಎಂಬ ನಿರೀಕ್ಷೆ ತಜ್ಞರದ್ದಾಗಿದೆ.

ಕೆರೆ ಕಾಮಗಾರಿಗೆ 22 ಪ್ಯಾಕೇಜ್: 'ಕೆರೆಗಳಿಗೆ ಸಂಬಂಧಿಸಿದಂತೆ 67 ಕಾಮಗಾರಿಗಳ 22 ಪ್ಯಾಕೇಜ್ ಮಾಡಲಾಗಿದೆ. ಇದರಲ್ಲಿ 12 ಪ್ಯಾಕೇಜ್‌ಗಳಿಗೆ ಟೆಂಡರ್ ಕರೆಯಲಾಗಿದೆ. ಉಳಿದ 10 ಪ್ಯಾಕೇಜ್‌ಗಳಲ್ಲಿ 11 ಕೆರೆ ವಿಸ್ತೃತ ಯೋಜನಾ ವರದಿಯನ್ನು ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ(ಕೆಎಲ್‌ಸಿಡಿಎ) ಸಲ್ಲಿಸಲಾಗಿದೆ. ಅಲ್ಲಿಂದ ಸಮ್ಮತಿ ದೊರೆತ ಕೂಡಲೇ ಟೆಂಡರ್ ಕರೆಯಲಾಗುತ್ತದೆ' ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಮೋಹನ್‌ಕೃಷ್ಣ ತಿಳಿಸಿದರು.

ಯೋಜನೆ: 'ಜೆ.ಸಿ. ರಸ್ತೆ ಮೇಲ್ಸೇತುವೆ ಸೇರಿದಂತೆ ಗ್ರೇಡ್ ಸೆಪರೇಟರ್, ಟೆಂಡರ್‌ಶ್ಯೂರ್ ಕಾಮಗಾರಿಗಳಿಗೆ ಡಿಪಿಆರ್ ಸಿದ್ಧಪಡಿಸಿ ಟೆಂಡರ್ ಆಹ್ವಾನಿಸಲಾಗಿದೆ. ಕೆಲವು ದಿನಗಳಲ್ಲಿ ಎಲ್ಲವೂ ಅಂತಿಮಗೊಳ್ಳಲಿವೆ' ಎಂದು ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಅವರು ತಿಳಿಸಿದರು.

ಷರತ್ತುಗಳು: ಅಮೃತ ನಗರೋತ್ಥಾನದಲ್ಲಿ ಕಾಮಗಾರಿಗಳಿಗೆ ಅನುಮೋದನೆ ನೀಡಿರುವ ನಗರಾಭಿವೃದ್ಧಿ ಇಲಾಖೆ, 10 ಷರತ್ತುಗಳನ್ನೂ ವಿಧಿಸಿದೆ. ಟೆಂಡರ್‌ಗೆ ಕಾಮಗಾರಿ ಪುನರಾವರ್ತನೆ ಆಗಿಲ್ಲ ಎಂಬುದನ್ನು ಮುಖ್ಯ ಆಯುಕ್ತರು ಖಚಿತ ಪಡಿಸಿಕೊಳ್ಳಬೇಕು. ಕಾಮಗಾರಿಗಳನ್ನು ₹10 ಕೋಟಿಗಳಿಗೆ ಕಡಿಮೆ ಇಲ್ಲದಂತೆ ಪ್ಯಾಕೇಜ್‌ಗಳಾಗಿ ಎಲ್ಲ ಕಾಯ್ದೆಗಳನ್ನು ಅನುಸರಿಸಿ, ತುರ್ತಾಗಿ ಅನುಷ್ಠಾನಗೊಳಿಸಬೇಕು.

₹10 ಕೋಟಿ ಮೀರಿದ ಕಾಮಗಾರಿಗಳನ್ನು ವಿಭಜಿಸಬಾರದು. ಕಾಯ್ದೆ ಪ್ರಕಾರ, ಒಂದು ತಿಂಗಳಲ್ಲಿ ಕ್ರಿಯಾಯೋಜನೆಗಳಿಗೆ ಟೆಂಡರ್ ಕರೆದು, ಮುಖ್ಯ ಆಯುಕ್ತರು ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಕಾಮಗಾರಿಗಳ ಗುಣಮಟ್ಟ ನಿರ್ವಹಣೆ ಪ್ರಧಾನ ಹಾಗೂ ಮುಖ್ಯ ಎಂಜಿನಿಯರ್ ಜವಾಬ್ದಾರಿ. ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ತಪಾಸಣೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಪ್ರತಿ ತಿಂಗಳು ಸಲ್ಲಿಸಬೇಕು. ಎಲ್ಲ ಕಾಯ್ದೆಗಳ ನಿಯಮಾನುಸಾರ ವೆಚ್ಚ ಕೈಪಿಡಿ ತಯಾರಿಸಬೇಕು. ಅನುಮೋದಿತ ಕಾಮಗಾರಿಗಳನ್ನು ಬದಲಾವಣೆ ಮಾಡುವಂತಿಲ್ಲ. ಬೇರೆ ಕಾಮಗಾರಿಗೆ ಉಪಯೋಗಿಸುವಂತಿಲ್ಲ.

ಅಮೃತ ನಗರೋತ್ಥಾನ ಹಣ ಹಂಚಿಕೆ ವಿವರ

- ₹3850.50 ಕೋಟಿ — 28 ವಿಧಾನಸಭೆ ಕ್ಷೇತ್ರಗಳಿಗೆ ಅನುದಾ
- ₹700 ಕೋಟಿ — ರಸ್ತೆ ಮೂಲ ಸೌಕರ್ಯಗಳ ಅಭಿವೃದ್ಧಿ
- ₹635.97 ಕೋಟಿ — ಗ್ರೇಡ್ ಸೆಪರೇಟರ್, ಟೆಂಡರ್‌ಶ್ಯೂರ್ ರಸ್ತೆಗಳು; ಮುಂದುವರಿದ ಕಾಮಗಾರಿಗಳು
- ₹180 ಕೋಟಿ — ಬಿಬಿಎಂಪಿ ಶಾಲಾ–ಕಾಲೇಜುಗಳ ಅಭಿವೃ
- ₹200 ಕೋಟಿ — ಕೆರೆಗಳ ಅಭಿವೃದ್ಧಿ
- ₹275 ಕೋಟಿ — ಘನತ್ಯಾಜ್ಯ ನಿರ್ವಹಣೆ
- ₹123.30 ಕೋಟಿ — ಆಸ್ಪತ್ರೆ ನಿರ್ಮಾಣ, ದುರಸ್ತಿ, ಉಪಕರಣಗಳು
- ₹35 ಕೋಟಿ — ರೈಲ್ವೆ ಕ್ರಾಸಿಂಗ್‌ನಲ್ಲಿ ನೀರುಗಾಲುವೆ ಅಭಿವೃದ್ಧಿ
- ₹0.23 ಕೋಟಿ — ಬಾಕಿ
- ₹6,000 ಕೋಟಿ — ಒಟ್ಟು

15 ದಿನದಲ್ಲಿ ಎಲ್ಲ ಟೆಂಡರ್ ಪ್ರಕ್ರಿಯೆ ಪೂರ್ಣ

'ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ' ಯೋಜನೆಯಡಿ ಅನುಮೋದನೆಯಾಗಿರುವ ಎಲ್ಲ ಕಾಮಗಾರಿಗಳಿಗೆ ಆಗಸ್ಟ್ ಮೊದಲ ವಾರದಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಅಕ್ಟೋಬರ್ ವೇಳೆಗೆ ಬಹುತೇಕ ರಸ್ತೆಗಳ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ಈ ಎಲ್ಲ ಕಾಮಗಾರಿಗಳು ಪೂರ್ಣಗೊಂಡ ಮೇಲೆ ರಸ್ತೆ ಗುಂಡಿ ದುರವಸ್ಥೆ ಬಹುತೇಕ ನಿವಾರಣೆಯಾಗಲಿದೆ. ಏಕೆಂದರೆ, ಪ್ರಮುಖ ರಸ್ತೆಗಳೆಲ್ಲವೂ ಅಭಿವೃದ್ಧಿಯಾಗಲಿವೆ' ಎಂದು ತಿಳಿಸಿದರು.

'ಕೆರೆಗಳು, ಶಾಲೆ, ಆಸ್ಪತ್ರೆಯ ಕೆಲವು ಕಾಮಗಾರಿಗಳಿಗೆ ಡಿಪಿಆರ್ ಸಿದ್ಧವಾಗುತ್ತಿದೆ. ಹೀಗಾಗಿ ಟೆಂಡರ್ ಕರೆಯಲಾಗಿಲ್ಲ. ಶೀಘ್ರವೇ ಎಲ್ಲವೂ ಮುಗಿಯಲಿವೆ' ಎಂದರು.

ಎಂಡೋಸ್ಕೋಪಿಕ್ ಶಸ್ತ್ರಚಿಕಿತ್ಸಕರ ಸಮ್ಮೇಳನ ಆರಂಭ

ಬೆಂಗಳೂರು: 'ದೇಶದಲ್ಲಿ 40 ಸಾವಿರ ಸ್ತ್ರೀರೋಗ ತಜ್ಞರಿದ್ದು, ಅವರಿಗೆ ಎಂಡೋಸ್ಕೋಪಿ ಕುರಿತು ತರಬೇತಿ ನೀಡಲು ಈ ಸಮ್ಮೇಳನ ಆಯೋಜಿಸಲಾಗಿದೆ' ಎಂದು ಭಾರತೀಯ ಸ್ತ್ರೀರೋಗ ಎಂಡೋಸ್ಕೋಪಿಸ್ಟ್‌ಗಳ ಸಂಘದ ಅಧ್ಯಕ್ಷ ಡಾ.ಭಾಸ್ಕರ್ ಪಾಲ್ ಹೇಳಿದರು.

ಮಹಿಳಾ ಎಂಡೋಸ್ಕೋಪಿಕ್ ಶಸ್ತ್ರ ಚಿಕಿತ್ಸಕರ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಈ ಸಮ್ಮೇಳನವು ಎಂಡೋಸ್ಕೋಪಿಕ್ ವಿಧಾನ ಜನಪ್ರಿಯಗೊಳಿಸಲು ಸಹಕಾರಿ ಆಗಲಿದೆ. ಎಂಡೋಸ್ಕೋಪಿ ಬಳಕೆಯ ಕುರಿತು ಕೆಲವರಿಗೆ ಮಾತ್ರ ಅರಿವಿದ್ದು, 3 ದಿನಗಳ ಸಮ್ಮೇಳನದಲ್ಲಿ ಎಂಡೋಸ್ಕೋಪಿಯ ಕಾರ್ಯ ವಿಧಾನದ ಕುರಿತು ತರಬೇತಿ ನೀಡಲಾಗುವುದು' ಎಂದರು.

ಬೆಂಗಳೂರಿನ ಈವ್ ಎಂಡೋಸ್ಕೋಪಿಯ ಸಂಘಟನಾ ಅಧ್ಯಕ್ಷೆ ಡಾ.ವಿದ್ಯಾ ವಿ. ಭಟ್ ಮಾತನಾಡಿ, 'ಸ್ತ್ರೀರೋಗ ತಜ್ಞರ ಅನುಕೂಲಕ್ಕೆ ವಿವಿಧ ರೀತಿಯ ಶಸ್ತ್ರ ಚಿಕಿತ್ಸೆ ನಡೆಸಲಾಗುವುದು. ಇದು ದೀರ್ಘಕಾಲದ ಕಲಿಕೆ. ತಂತ್ರವನ್ನು ಕರಗತ ಮಾಡಿಕೊಳ್ಳಲು ಹೆಚ್ಚಿನ ಸಮಯ ಬೇಕಿದೆ. ಮೂರು ದಿನಗಳ ಕಾಲ ಕೌಶಲವೃದ್ಧಿಯ ತರಬೇತಿ ನೀಡಲಾಗುವುದು. ದೇಶದಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀರೋಗ ತಜ್ಞರಿದ್ದಾರೆ' ಎಂದುರು.

ಎಂಡೋಸ್ಕೋಪಿಯಿಂದ ವೇಗವಾಗಿ ಚೇತರಿಕೆ ಸಾಧ್ಯ. ಗಾಯದ ಗುರುತು ಇರುವುದಿಲ್ಲ. ಆಸ್ಪತ್ರೆಯಲ್ಲಿ ಉಳಿಯುವ ಅವಶ್ಯಕತೆ ಕಡಿಮೆ. ಉದ್ಯೋಗಸ್ಥ ಮಹಿಳೆಯರಿಗೆ ಇದು ವರದಾನ ಎಂದು ಹೇಳಿದರು.

'ಸ್ವಾತಂತ್ರ್ಯ ಸಂಭ್ರಮ' ವಿಶೇಷ ಸ್ಪರ್ಧೆಗಳು

ಬೆಂಗಳೂರು: 'ಕಲಾದರ್ಪಣ ಆರ್ಟ್ ರಿಫ್ಲೆಕ್ಟ್ಸ್' ಸಂಸ್ಥೆ ವತಿಯಿಂದ 'ಸ್ವಾತಂತ್ರ್ಯ ಸಂಭ್ರಮ' ಎಂಬ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಗಸ್ಟ್ 7ರಂದು ಜೆ.ಪಿ. ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಂಗೀತ, ನೃತ್ಯ, ಚಿತ್ರಕಲೆ, ರಂಗೋಲಿ ಹಾಗೂ ವೇಷಭೂಷಣ ಸ್ಪರ್ಧೆಗಳನ್ನು ಹಮ್ಮಿಕೊಂಡಿದ್ದು, ಎಲ್ಲಾ ವಯೋಮಾನದವರು ಭಾಗವಹಿಸಬಹುದು. ಆಸಕ್ತರು ಜುಲೈ 23ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ..

ಹೆಚ್ಚಿನ ಮಾಹಿತಿಗಾಗಿ 8618287326ಗೆ ಸಂಪರ್ಕಿಸಿ

ಸಾರಿಗೆ ನಿವೃತ್ತ ನೌಕರರ ಸಂಘದ ಸಭೆ ನಾಳೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನಿವೃತ್ತ ನೌಕರರ ಸಂಘದ ಮೊದಲನೇ ವಾರ್ಷಿಕ ಸಾಮಾನ್ಯ ಸಭೆ ಜುಲೈ 24ರಂದು ನಡೆಯಲಿದೆ.

ವಿಜಯನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಬೆಳಿಗ್ಗೆ 10ಕ್ಕೆ ಆರಂಭವಾಗಲಿರುವ ಸಭೆಗೆ ಸಂಘದ ಎಲ್ಲಾ ಸದಸ್ಯರು ಸಕಾಲಕ್ಕೆ ಬರಬೇಕೆಂದು ಸಂಘ ಮನವಿ ಮಾಡಿದೆ.

ಸತತ ಮಳೆಗೆ ತರಕಾರಿ ಪೂರೈಕೆಯಲ್ಲಿ ವ್ಯತ್ಯಯ

ಬೀನ್ಸ್, ಕ್ಯಾರೆಟ್, ಬಟಾಣಿ ದುಬಾರಿ

• ಖಲೀಲಅಹ್ಮದ ಶೇಖ

ಪ್ರಜಾವಾಣಿ ವಿಶೇಷ

ಬೆಂಗಳೂರು: ಒಂದು ವಾರದಿಂದ ತರಕಾರಿ ದರಗಳಲ್ಲಿ ಏರಿಳಿತ ಕಂಡುಬಂದಿದ್ದು, ಬೀನ್ಸ್, ಕ್ಯಾರೆಟ್, ಹಸಿರು ಬಟಾಣಿ, ಕ್ಯಾಪ್ಸಿಕಮ್ ಮತ್ತು ಸೋರೆಕಾಯಿ ಸೇರಿದಂತೆ ಕೆಲವು ತರಕಾರಿಗಳ ದರ ಹೆಚ್ಚಾಗಿದೆ.

ಇಪ್ಪತ್ತು ದಿನಗಳಿಂದ ಸುರಿದ ನಿರಂತರ ಮಳೆಗೆ ಈಗ ಕೆಲವು ತರಕಾರಿಗಳು ದುಬಾರಿಯಾಗಿವೆ. ಮಾರುಕಟ್ಟೆಗೆ ಆವಕ ಪ್ರಮಾಣ ಕಡಿಮೆ ಆಗಿರುವುದರಿಂದ ತರಕಾರಿ ದರಗಳು ಹೆಚ್ಚಾಗಿವೆ. ಬೀಟ್‌ರೂಟ್, ಹೂಕೋಸು, ದರ ಹೆಚ್ಚಾಗಿದ್ದು, ಬಟಾಣಿ ಕೆ.ಜಿ.ಗೆ ತಲಾ ₹150ರಂತೆ ಮಾರಾಟ ಆಗುತ್ತಿವೆ.

'ನಿರಂತರ ಮಳೆ, ಮೋಡ ಕವಿದ ವಾತಾವರಣದಿಂದ ಬೆಳೆಗಳಿಗೆ ಹಾನಿಯಾಗಿದೆ. ಹೊಸ ಬೆಳೆಗಳ ಫಸಲು ಮಾರುಕಟ್ಟೆಗೆ ಬರಲು ಸಮಯ ಬೇಕಾಗುತ್ತದೆ. ಹಾಗಾಗಿ, ಬೆಲೆ ಏರಿಕೆ ಬಿಸಿ ತಟ್ಟಿದೆ. ಎರಡು ವಾರಗಳಿಂದ ಹಲವಾರು ತರಕಾರಿಗಳ ದರ ತಗ್ಗಿದೆ. ಇದೇ ವೇಳೆ ಒಂದೆರಡು ಉತ್ಪನ್ನಗಳ ಬೆಲೆಯೂ ಏರಿದೆ' ಎಂದು ಕೆ.ಆರ್.ಮಾರುಕಟ್ಟೆಯ ತರಕಾರಿ ವ್ಯಾಪಾರಿ ತಬ್ರೇಜ್ ಮಾಹಿತಿ ನೀಡಿದರು.

'ಟೊಮೆಟೊ, ಬದನೆ, ಆಲೂಗಡ್ಡೆ, ಈರುಳ್ಳಿ, ಹಾಗಲಕಾಯಿ ದರ ಸ್ಥಿರವಾಗಿ ಬಂದು ನಿಂತಿವೆ. ಟೊಮೆಟೊ ಕೆ.ಜಿ.ಗೆ ₹15ರಿಂದ ₹20ರವರೆಗೆ ಮಾರಾಟವಾಗುತ್ತಿದೆ. ₹58ರಂತೆ ಮಾರಾಟವಾಗುತ್ತಿದ್ದ ಬೀನ್ಸ್ ₹94ರವರೆಗೆ ಏರಿದೆ' ಎಂದು ವಿವರಿಸಿದರು.

'ನಿರಂತರ ಮಳೆ ಮತ್ತು ಮೋಡ ಕವಿದ ವಾತಾವರಣದಿಂದ ಬೆಂಗಳೂರಿನ ಸುತ್ತಮುತ್ತ ಯಾವುದೇ ಕೃಷಿ ಚಟುವಟಿಕೆ ನಡೆಯುತ್ತಿಲ್ಲ. ಆದ್ದರಿಂದ ಮಾರುಕಟ್ಟೆಯಲ್ಲಿ ತರಕಾರಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಮುಂದಿನ ಎರಡು ತಿಂಗಳವರೆಗೆ ತರಕಾರಿ ಮತ್ತು ಸೊಪ್ಪಿನ ಬೆಲೆಗಳು ಗ್ರಾಹಕರ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ' ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ದೇವರಾಜ್ ತಿಳಿಸಿದರು.

ತರಕಾರಿ ಧಾರಣೆ

ತರಕಾರಿ	ಕಳೆದ	ಈ
	ವಾರದ ದರ	
(ಚಿಲ್ಲರೆ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ)		
ಬೀನ್ಸ್	52	94
ಕ್ಯಾಪ್ಸಿಕಮ್	48	58
ಕ್ಯಾರೆಟ್	58	69
ದಪ್ಪ ಮೆಣಸಿಕಾಯಿ	75	78
ಸ್ಥಳೀಯ ಆಲೂಗಡ್ಡೆ	35	45
ಹೀರೆಕಾಯಿ	40	65
ಬೆಂಡೇಕಾಯಿ	30	45
ಚವಳಿಕಾಯಿ	40	50
ಮೆಣಸಿನಕಾಯಿ(ಬಜ್ಜಿ)	60	80
ಬಟಾಣಿ	120	150
ಆಲೂಗಡ್ಡೆ	30	45
ಟೊಮೆಟೊ	15	17
ಈರುಳ್ಳಿ (ಮಧ್ಯಮ ಗಾತ್ರದ್ದು)	25	33

ನ್ಯಾ.ಕೆ. ಭಕ್ತವತ್ಸಲ ಆಯೋಗದ ವರದಿ

ಒಬಿಸಿ ಮೀಸಲು: 156 ಜಾತಿಗಷ್ಟೇ ಪ್ರಾತಿನಿಧ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ 802 ಜಾತಿ ಮತ್ತು ಉಪ ಜಾತಿಗಳಲ್ಲಿ ಈವರೆಗೆ 156 ಸಮುದಾಯಗಳಿಗೆ ಮಾತ್ರ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ದೊರಕಿದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ನೇತೃತ್ವದ ಆಯೋಗ ಗುರುತಿಸಿದೆ.

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಖಾತರಿಪಡಿಸಲು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಮೂರು ಹಂತದ ಪರಿಶೀಲನೆ ನಡೆಸುವುದಕ್ಕಾಗಿ ಈ ಆಯೋಗವನ್ನು ರಚಿಸಲಾಗಿತ್ತು. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ 646 ಸಮುದಾಯಗಳಿಗೆ ಈವರೆಗೂ ರಾಜಕೀಯ ಪ್ರಾತಿನಿಧ್ಯ ದೊರಕಿಲ್ಲ ಎಂದು ಆಯೋಗವು ರಾಜ್ಯ ಸರ್ಕಾರಕ್ಕೆ ಗುರುವಾರ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದೆ.

ರಾಜ್ಯದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳಿಗೆ 1996, 2001, 2010 ಮತ್ತು 2015ರಲ್ಲಿ ನಡೆದಿರುವ ಚುನಾವಣೆಗಳ ಮಾಹಿತಿಯ ಆಧಾರದಲ್ಲಿ ಆಯೋಗವು ಈ ವರದಿ ಸಿದ್ಧಪಡಿಸಿದೆ. ಈವರೆಗೆ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ಪಡೆದಿರುವ ಮತ್ತು ಪಡೆಯದೇ ಇರುವ ಸಮುದಾಯಗಳನ್ನು ಗುರುತಿಸಿ, ಪಟ್ಟಿಯನ್ನೂ ವರದಿಯಲ್ಲಿ ನೀಡಲಾಗಿದೆ.

'ಸಿಗದ ಅವಕಾಶ': 'ಹಿಂದುಳಿದ ವರ್ಗಗಳ ಬಹುತೇಕ ಜನರು ಮೀಸಲಾತಿ ಸೌಲಭ್ಯವನ್ನು ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಬಳಸಲು ಬಯಸುತ್ತಾರೆ. ಮೀಸಲಾತಿಯನ್ನು ಬಳಸಿಕೊಂಡು ರಾಜಕೀಯ ಪ್ರವೇಶಿಸಲು ಇಚ್ಛಿಸುವವರು ಕಡಿಮೆ. ಬಯಸಿದರೂ ಅದು ಅತ್ಯಂತ ಸವಾಲಿನ ಹಾದಿಯಾಗಿರುತ್ತದೆ' ಎಂದು ಆಯೋಗ ಹೇಳಿದೆ.

'ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳು ಈವರೆಗೂ ರಾಜಕೀಯವಾಗಿ ಸರಿಯಾದ ಪ್ರಾತಿನಿಧ್ಯ ಪಡೆಯಲು ಸಾಧ್ಯವಾಗಿಲ್ಲ. ಹಿಂದುಳಿದ ವರ್ಗಗಳ ಜನರು ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶ ಒದಗಿಸಲು ಮೀಸಲಾತಿ ಸೌಲಭ್ಯ ಇರಲೇಬೇಕು. ಮೀಸಲಾತಿ ಸೌಲಭ್ಯ ರದ್ದುಗೊಂಡಲ್ಲಿ ಈ ಸಮುದಾಯದ ಜನರು ರಾಜಕೀಯ ಪ್ರಾತಿನಿಧ್ಯವನ್ನು ಕಳೆದುಕೊಳ್ಳುತ್ತಾರೆ' ಎಂದು ಆಯೋಗ ವರದಿಯಲ್ಲಿ ತಿಳಿಸಿದೆ.

'ಮೀಸಲಾತಿಯನ್ನು ನಿರಾಕರಿಸುವುದು ಒಂದು ವರ್ಗದ ಜನರು ಸ್ಥಳೀಯ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಅವಕಾಶ ನಿರಾಕರಿಸಿದಂತೆ. ಮೀಸಲಾತಿಯ ಮೂಲಕ ಹಿಂದುಳಿದ ವರ್ಗಗಳಿಗೆ ರಾಜಕೀಯ ಶಕ್ತಿ ತುಂಬಲು ಸ್ಪಷ್ಟವಾದ ನೀತಿಯೊಂದನ್ನು ರೂಪಿಸಬೇಕು' ಎಂದು ಆಯೋಗ ಶಿಫಾರಸು ಮಾಡಿದೆ.

ಸರ್ಕಾರದ ಬಳಿ ವರದಿ: 'ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಹಿಂದುಳಿದಿರುವಿಕೆ ಕುರಿತು ಎಚ್. ಕಾಂತರಾಜ ನೇತೃತ್ವದ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ವಿಸ್ತೃತವಾದ ಗಣತಿ ನಡೆಸಿತ್ತು ಎಂದು ವರದಿ ಹೇಳಿದೆ.

₹ 147 ಕೋಟಿ ವೆಚ್ಚ ಮಾಡಿ ಸಿದ್ಧಪಡಿಸಿರುವ ಗಣತಿಯ ವರದಿಯು ರಾಜ್ಯ ಸರ್ಕಾರದ ಬಳಿ ಇದೆ ಎಂಬ ಮಾಹಿತಿ ಲಭಿಸಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಯಾವ ವರ್ಗಕ್ಕೆ ಎಷ್ಟು ಪ್ರಾತಿನಿಧ್ಯ?

ಪ್ರವರ್ಗ	ಪಟ್ಟಿಯಲ್ಲಿರುವ ಜಾತಿ, ಉಪ ಜಾತಿಗಳ ಸಂಖ್ಯೆ	ಪ್ರಾತಿನಿಧ್ಯ ಪಡೆದ ಜಾತಿ, ಉಪ ಜಾತಿಗಳ ಸಂಖ್ಯೆ
ಪ್ರವರ್ಗ–1	381	54
ಪ್ರವರ್ಗ–2ಎ	367	74
ಪ್ರವರ್ಗ–2ಬಿ	1(ಮುಸ್ಲಿಂ)	1
ಪ್ರವರ್ಗ–3ಎ	34	20
ಪ್ರವರ್ಗ–3ಬಿ	19	07

ಚಿತ್ರಾವಳಿ

ಸಂದೇಶ ಪ್ರತಿಷ್ಠಾನದ ವತಿಯಿಂದ 'ಸಂದೇಶ ಕಲಾರತ್ನ' ಪ್ರಶಸ್ತಿಯನ್ನು ಎಂ.ಸಿ. ಲೋಕೇಶ್, ಕಿಕ್ಕೇರಿ ಕೃಷ್ಣಮೂರ್ತಿ, ಶಿವಮಲ್ಲು, ವರದರಾಜ್, ಶ್ರೀನಿವಾಸಮೂರ್ತಿ, ಪ್ರಕಾಶ್ ಗುರೂಜಿ ಅವರಿಗೆ ಪ್ರದಾನ ಮಾಡಲಾಯಿತು. ಹೆಜ್ಜಾಜಿ ಮಹದೇವ್, ಸಿದ್ಧಾರೂಢ ಆಶ್ರಮದ ಆರೂಢ ಭಾರತೀ ಸ್ವಾಮೀಜಿ, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಸಂದೇಶ ಪ್ರತಿಷ್ಠಾನದ ಅಧ್ಯಕ್ಷ ಸೋಮಶೇಖರ್, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಆದಿಚುಂಚನಗಿರಿ ಮಠದ ಸೌಮ್ಯನಾಥ ಸ್ವಾಮೀಜಿ, ಬೇಲಿಮಠದ ಶಿವರುದ್ರ ಸ್ವಾಮೀಜಿ, ಸಪ್ತಗಿರಿ ಗೌಡ ಇದ್ದರು

ಉದ್ಯಮಿ ಆಗಲು ಬಯಸುವವರಿಗೆ ನೆರವಾಗುವ ಉದ್ದೇಶದ 'ಫ್ರೀಡಂ ನೆಸ್ಟ್' ಯೋಜನೆಗೆ ನಟಿ ಪದ್ಮಜಾ ರಾವ್ ನಗರದಲ್ಲಿ ಶುಕ್ರವಾರ ಚಾಲನೆ ನೀಡಿದರು. ಫ್ರೀಡಂ ಆ್ಯಪ್ ಸಿಇಒ ಸಿ.ಎಸ್. ಸುಧೀರ್ ಮತ್ತು ಇತರರು ಚಿತ್ರದಲ್ಲಿದ್ದಾರೆ.

'ನಬಿರೋಷನ್' ಪ್ರಕಾಶನದ ದಶಮಾನೋತ್ಸವ ಅಂಗವಾಗಿ ಕೋರಮಂಗಲದ ಮಂಗಳ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಆಯೋಜಿಸಿದ್ದ 'ಪೊಲೀಸ್ ಕಲಾ ಸಂಗಮ' ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಪೊಲೀಸ್ ಸಾಧಕರಾದ ಸುಬ್ರಮಣಿ, ಜ್ಯೋತಿರ್ಲಿಂಗ ಹೊನ್ನಕಟ್ಟಿ, ರಮೇಶ್, ಸುಹೇಲ್ ಅಹ್ಮದ್, ಶಾಂತಪ್ಪ ಜಡೆಮ್ಮನವರ, ಲೋಕೇಶ್ ಎಂ. ಕಲ್ಲುಣಿ ಮತ್ತು ಅಶೋಕ ರಾಥೋಡ ಅವರಿಗೆ 'ಆರಕ್ಷಕ ಕಲಾ ಸೇವಾರತ್ನ' ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. (ಎಡದಿಂದ ನಿಂತವರು) ಹೆಡ್ ಕಾನ್‌ಸ್ಟೆಬಲ್ ಮೌಲಾಲಿ ಕೆ. ಆಲಗೂರ, ಡಿಸಿಪಿ ಚನ್ನಬಸಪ್ಪ ಹೊಸಮನಿ, ಐಪಿಎಸ್ ಅಧಿಕಾರಿಗಳಾದ ಡಿ. ರೂಪಾ, ಭೀಮಾಶಂಕರ್ ಗುಳೇದ, ಚಿತ್ರ ಸಾಹಿತಿ ಡಾ. ವಿ.ನಾಗೇಂದ್ರ ಪ್ರಸಾದ್, ಅತ್ತಿಬೆಲೆ ಸರ್ಕಲ್ ಇನ್‌ಸ್ಪೆಕ್ಟರ್ ಕೆ. ವಿಶ್ವನಾಥ್ ಮತ್ತು ಇತರರು ಇದ್ದರು –ಪ್ರಜಾವಾಣಿ ಚಿತ್ರ

'ನ್ಯಾಯಾಲಯ, ತನಿಖಾ ಸಂಸ್ಥೆ ಮುಚ್ಚುವುದಾಗಿ ಹೇಳಲಿ'

ಬೆಂಗಳೂರು: 'ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ದೇಶದಲ್ಲಿ ಸುಪ್ರೀಂ ಕೋರ್ಟ್, ಸಿಬಿಐ, ಜಾರಿ ನಿರ್ದೇಶನಾಲಯಗಳನ್ನು ಮುಚ್ಚುವುದಾಗಿ ಆ ಪಕ್ಷದ ಪ್ರಣಾಳಿಕೆಯಲ್ಲಿ ಘೋಷಿಸಲಿ' ಎಂದು ವಿಧಾನ ಪರಿಷತ್ ಸದಸ್ಯರೂ ಆಗಿರುವ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಸವಾಲು ಹಾಕಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂವಿಧಾನ, ನ್ಯಾಯಾಲಯ, ಸಂಸತ್ತು, ತನಿಖಾ ಸಂಸ್ಥೆಗಳಿಂದ ಕಾಂಗ್ರೆಸ್ ಮುಖಂಡರು ದೊಡ್ಡವರೆ? ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತಿತರರು ಎಲ್ಲವನ್ನೂ ಮೀರಿದ ನಾಯಕರೆ' ಎಂದು ಪ್ರಶ್ನಿಸಿದರು.

'ಸೋನಿಯಾ ಮತ್ತು ರಾಹುಲ್ ಅವರನ್ನು ವಿಚಾರಣೆಗೆ ಕರೆದಿರುವುದನ್ನೇ ವಿರೋಧಿಸಿ ಸಂಸತ್ ಅಧಿವೇಶನಕ್ಕೆ ಅಡ್ಡಿಪಡಿಸಲಾಗುತ್ತಿದೆ. ಪ್ರತಿಭಟನೆಗಳನ್ನೂ ನಡೆಸುತ್ತಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಈಗಿನ ಪ್ರಧಾನಿ ನರೇಂದ್ರ ಮೋದಿ ಅವರನ್ನು ಜಾರಿ ನಿರ್ದೇಶನಾಲಯ ವಿಚಾರಣೆ ನಡೆಸಿರಲಿಲ್ಲವೆ? ಅಮಿತ್ ಶಾ ಅವರನ್ನು ಸಿಬಿಐ ವಿಚಾರಣೆ ನಡೆಸಿ, ಬಂಧಿಸಿ ಜೈಲಿಗೂ ಕಳುಹಿಸಿರಲಿಲ್ಲವೆ? ಈ ಪ್ರಶ್ನೆಗಳಿಗೆ ಕಾಂಗ್ರೆಸ್ ಉತ್ತರಿಸಲಿ' ಎಂದು ಆಗ್ರಹಿಸಿದರು.

ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ಆ ಪಕ್ಷದ ನಾಯಕರು ಮೂರು– ನಾಲ್ಕು ತಲೆಮಾರುಗಳಿಗೆ ಸಾಕಾಗುವಷ್ಟು ಆಸ್ತಿ ಮಾಡಿರುವುದನ್ನು ಶಾಸಕ ಕೆ.ಆರ್. ರಮೇಶ್ ಕುಮಾರ್ ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಮಾತನಾಡಿ, 'ರಮೇಶ್ ಕುಮಾರ್ ಅವರು ಆತ್ಮಸಾಕ್ಷಿಯ ಮಾತುಗಳನ್ನು ಆಡಿದ್ದಾರೆ. ಕಾಂಗ್ರೆಸ್ ಪಕ್ಷದ ಸೋಲಿನಿಂದ ಕಂಗೆಟ್ಟು ಅವರು ಸತ್ಯ ಹೇಳಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಪರಿಶಿಷ್ಟರಲ್ಲಿ ಸಾಮರಸ್ಯ ಮೂಡಿಸಿದ ಧರಣಿ

175 ದಿನಗಳ ಬಳಿಕ ಹೋರಾಟ ತೀವ್ರ: ವಾಲ್ಮೀಕಿ ಶ್ರೀ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಒಬ್ಬಂಟಿಯಾಗಿ ಹೋರಾಟ ನಡೆಸುತ್ತಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಎಲ್ಲ ಸಮುದಾಯಗಳು ಒಗ್ಗಟ್ಟಾಗಿಯೇ ಹೋರಾಟ ನಡೆಸುತ್ತಿವೆ. ಶೋಷಿತ ವರ್ಗಗಳಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವ ಹೋರಾಟವೂ ಇದಾಗಿದೆ' ಎಂದು ಹರಿಹರದ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಪ್ರತಿಪಾದಿಸಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗ ನೀಡಿರುವ ವರದಿ ಜಾರಿಗೆ ಆಗ್ರಹಿಸಿ ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ಕಳೆದ 163 ದಿನಗಳಿಂದ ಧರಣಿ ನಡೆಸುತ್ತಿರುವ ಅವರು, ಮುಂದಿನ ಹೋರಾಟದ ರೂಪರೇಷೆಯನ್ನು ಬಿಚ್ಚಿಟ್ಟರು.

'ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವುದು ಮುಖ್ಯಮಂತ್ರಿ ಅವರ ಕರ್ತವ್ಯ. ನಮ್ಮ ಬೇಡಿಕೆಗಳ ಬಗ್ಗೆ ಸರ್ಕಾರ ಯಾವ ರೀತಿ ಸ್ಪಂದಿಸುತ್ತದೆ ಎನ್ನುವ ಬಗ್ಗೆ 175 ದಿನಗಳವರೆಗೆ ಕಾದು ನೋಡುತ್ತೇವೆ. ನಂತರ, ಹೋರಾಟದ ತೀವ್ರತೆಯನ್ನು ಹೆಚ್ಚಿಸುವುದು ಮತ್ತು ಸ್ವರೂಪದ ಬಗ್ಗೆ ಎಲ್ಲ ಮಠಾಧೀಶರು ಮತ್ತು ಮುಖಂಡರ ಜತೆ ಸಮಾಲೋಚನೆ ನಡೆಸಿ ಕ್ರಿಯಾ ಸಮಿತಿ ನಿರ್ಧಾರ ಕೈಗೊಳ್ಳಲಿದೆ. ಒಟ್ಟಿನಲ್ಲಿ ನಮ್ಮ ಹೋರಾಟ ನಿಲ್ಲುವುದಿಲ್ಲ' ಎಂದರು.

'ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಆಡಳಿತ ಮತ್ತು ವಿರೋಧ ಪಕ್ಷಗಳ ಶಾಸಕರು ಸಮುದಾಯದ ಹಿತಾಸಕ್ತಿಗಾಗಿ ಸರ್ಕಾರದ ಮೇಲೆ ಪರಿಣಾಮಕಾರಿಯಾಗಿ ಒತ್ತಡ ಹಾಕಬೇಕು. ಅವರು ರಾಜೀನಾಮೆ ನೀಡುವುದು ಪರಿಹಾರವಲ್ಲ. ಇಚ್ಛಾಶಕ್ತಿ ಪ್ರದರ್ಶಿಸುವುದು ಮುಖ್ಯ' ಎಂದು ಹೇಳಿದರು.

'ಧರಣಿಯಿಂದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಎಲ್ಲ ಒಳಪಂಗಡಗಳ ನಡುವೆ ಸಹಬಾಳ್ವೆ ಮತ್ತು ಸಾಮಾಜಿಕ ಸಾಮರಸ್ಯ ಮೂಡಿಸಿದೆ. ಈ ಹೋರಾಟದಿಂದ ಭಿನ್ನಾಭಿಪ್ರಾಯದ ಕಂದಕಗಳು ದೂರವಾಗಿ ಎಲ್ಲ ಪರಿಶಿಷ್ಟರ ಬೆಸುಗೆಯಾಗಿದೆ. ಇದೇ ದೊಡ್ಡ ಯಶಸ್ಸು' ಎಂದು ತಿಳಿಸಿದರು.

'ಕಳೆದ ಐದೂವರೆ ತಿಂಗಳಿಂದಲೂ ಧರಣಿ ನಡೆಯುತ್ತಿದೆ. ಶ್ರೇಣೀಕೃತ ವ್ಯವಸ್ಥೆಯಲ್ಲಿ ಪರಿಶಿಷ್ಟರಿಗೂ ಪಾಲುದಾರಿಕೆಯ ಹಕ್ಕು ಪಡೆದುಕೊಳ್ಳುವ ಬಗ್ಗೆ ಜಾಗೃತಿ ಮೂಡಿದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಿಸುವಂತೆ ನಡೆಯುತ್ತಿರುವ ಹೋರಾಟಕ್ಕೆ ಎಸ್ಸಿ ಮತ್ತು ಎಸ್ಟಿ ಸಮುದಾಯದ ಎಲ್ಲ ಮಠಾಧೀಶರು ಮತ್ತು ಮುಖಂಡರು ಬೆಂಬಲ ಸೂಚಿಸಿದ್ದಾರೆ' ಎಂದು ವಿವರಿಸಿದರು.

'ಪರಿಶಿಷ್ಟರು ನಿರ್ಣಾಯಕ ಮತದಾರರು'

'ನಕಲಿ ಜಾತಿ ಪ್ರಮಾಣ ಪತ್ರದ ಬಗ್ಗೆ ಕ್ರಮಕೈಗೊಳ್ಳುವುದು ಸೇರಿದಂತೆ 25 ಬೇಡಿಕೆಗಳನ್ನು ಸರ್ಕಾರ ಮುಂದಿಟ್ಟಿದ್ದೇವೆ. ಸರ್ಕಾರದ ನಡೆಯನ್ನು ಪರಿಶಿಷ್ಟ ಸಮುದಾಯಗಳು ಎಚ್ಚರದಿಂದ ಗಮನಿಸುತ್ತಿವೆ' ಎಂದು ಪ್ರಸನ್ನಾನಂದಪುರಿ ಸ್ವಾಮೀಜಿ ತಿಳಿಸಿದರು.

'ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಸಮುದಾಯಗಳಿಗೆ ಸೇರಿದ 1.25 ಲಕ್ಷಕ್ಕೂ ಹೆಚ್ಚು ನಿರ್ಣಾಯಕ ಮತದಾರರಿದ್ದಾರೆ. ರಾಜಕೀಯ ಬದಲಾವಣೆಯಲ್ಲಿ ಇವರು ಮಹತ್ತರ ಪಾತ್ರ ವಹಿಸಲಿದ್ದಾರೆ ಎನ್ನುವುದನ್ನು ಎಲ್ಲ ಪಕ್ಷಗಳು ಅರಿತುಕೊಳ್ಳಲಿ' ಎನ್ನುವ ಸಂದೇಶ ನೀಡಿದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಎಸ್.ಎಲ್. ಭೈರಪ್ಪ ಹೇಳಿಕೆ

'ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಕಳುಹಿಸಲು ಹೇಳಿದ್ದ ಅಂಬೇಡ್ಕರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಗಲಭೆ, ಘರ್ಷಣೆಗಳು ನಡೆಯಬಾರದು ಎಂಬ ಕಾರಣಕ್ಕೆ ದೇಶ ವಿಭಜನೆಯ ವೇಳೆ ಭಾರತದಲ್ಲಿದ್ದ ಮುಸ್ಲಿಮರನ್ನು ಪಾಕಿಸ್ತಾನಕ್ಕೆ, ಅಲ್ಲಿದ್ದ ಹಿಂದೂಗಳನ್ನು ಭಾರತಕ್ಕೆ ಸ್ಥಳಾಂತರಿಸುವಂತೆ ಅಂಬೇಡ್ಕರ್ ಹೇಳಿದ್ದರು. ಆದರೆ, ಆಗ ಯಾರೂ ಅದಕ್ಕೆ ಒಪ್ಪಲಿಲ್ಲ. ಅವರು ಏಕೆ ಹಾಗೆ ಹೇಳಿದ್ದರು ಎನ್ನುವುದನ್ನು ಈಗ ಯಾರೂ ಚರ್ಚಿಸುತ್ತಿಲ್ಲ' ಎಂದು ಸಾಹಿತಿ ಎಸ್.ಎಲ್. ಭೈರಪ್ಪ ಬೇಸರ ವ್ಯಕ್ತಪಡಿಸಿದರು.

ವಿಕಿ ಬುಕ್ಸ್–ಸ್ಮಾರ್ಟ್‌ಕೀ ಹಾಗೂ ವಿಶ್ವವಾಣಿ ಪುಸ್ತಕ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಿರಣ್ ಉಪಾಧ್ಯಾಯ ಅವರ 'ವಿಶ್ವತೋಮುಖ' ಹಾಗೂ 'ವಿಶ್ವವಾಣಿ' ಸಂಪಾದಕ ವಿಶ್ವೇಶ್ವರ ಭಟ್ ಅವರ 'ಸುದ್ದಿಮನೆ', 'ಇದೇ ಅಂತರಂಗ ಸುದ್ದಿ' ಹಾಗೂ 'ನೂರೆಂಟು ವಿಶ್ವ' ಪುಸ್ತಕಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ಮುಸ್ಲಿಮರ ದೇಶವಾದ ಟರ್ಕಿಯಲ್ಲಿ ಅರೇಬಿಕ್ ಮತ್ತು ಪರ್ಷಿಯನ್ ಲಿಪಿಗಳಿಲ್ಲ. ಎಲ್ಲವೂ ಇಂಗ್ಲಿಷ್‌ನಲ್ಲಿದೆ. ಇದಕ್ಕೆ ಆ ದೇಶವನ್ನು ಆಳಿದ ಕಮಲ್ ಪಾಷಾ ಕಾರಣ. ಮಹಾತ್ಮ ಗಾಂಧೀಜಿ ಕಾಲದಲ್ಲಿಯೇ ಅವರು ಆಳ್ವಿಕೆ ನಡೆಸಿದ್ದರು. ಅವರಷ್ಟು ಹೊಸ ರೀತಿಯ ಆಲೋಚನೆಗಳನ್ನು ಬೇರೆ ಯಾರೂ ಮಾಡಲಿಲ್ಲ. ಗಲಭೆ ತಡೆಯಲು ಹಾಗೂ ಪರಸ್ಪರ ಸೌಹಾರ್ದದ ವಾತಾವರಣ ನಿರ್ಮಿಸಲು ಟರ್ಕಿಯಲ್ಲಿನ ಗ್ರೀಕರನ್ನು ಗ್ರೀಸ್ ದೇಶಕ್ಕೆ, ಅಲ್ಲಿದ್ದ ಟರ್ಕಿಯ ಜನರನ್ನು ತಮ್ಮ ದೇಶಕ್ಕೆ ಸ್ಥಳಾಂತರ ಮಾಡಿಸಿದರು. ಜನರಿಗೆ ಆಸ್ತಿಯ ಮಾರುಕಟ್ಟೆ ದರವನ್ನೂ ನೀಡಲಾಯಿತು. ನಮ್ಮಲ್ಲಿಯೂ ಈ ರೀತಿ ಹಿಂದೂ–ಮುಸ್ಲಿಮರ ಸ್ಥಳಾಂತರದ ಬಗ್ಗೆ ಅಂಬೇಡ್ಕರ್ ಒಂದು ಹಂತದವರೆಗೆ ಪ್ರತಿಪಾದಿಸಿದ್ದರು' ಎಂದರು.

ವಿಜ್ಞಾನ ಬರಹಗಾರ ನಾಗೇಶ ಹೆಗಡೆ, 'ದೇಶದಲ್ಲಿ ಮಾಧ್ಯಮ ಕ್ಷೇತ್ರವು ಸತ್ಯ ಹೇಳುವ ಪರಿಸ್ಥಿತಿಯಲ್ಲಿ ಇಲ್ಲ. ಆದರೆ, ಬ್ರಿಟನ್‌ನಲ್ಲಿ ಇದಕ್ಕೆ ವಿರುದ್ಧವಾದ ಪರಿಸ್ಥಿತಿಯಿದ್ದು, ಭ್ರಷ್ಟಾಚಾರ ಆರೋಪ ಹೊತ್ತಿದ್ದ ಬೋರಿಸ್ ಜಾನ್ಸನ್ ಅವರನ್ನು ಪ್ರಧಾನಿ ಹುದ್ದೆಯಿಂದ ಕೆಳಗಿಳಿಸುವಷ್ಟು ಶಕ್ತಿ ಅಲ್ಲಿ ಇದೆ' ಎಂದರು.

ಸುತ್ತೂರು ಮಠದ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪುಸ್ತಕಗಳ ಲೇಖಕರಾದ ವಿಶ್ವೇಶ್ವರ ಭಟ್, ಕಿರಣ್ ಉಪಾಧ್ಯಾಯ, ಸಂಸದ ಪ್ರತಾಪ್ ಸಿಂಹ ಇದ್ದರು.

ವಿಕಿ ಬುಕ್ಸ್‌ಸ್ಮಾರ್ಟ್ ಕೀ ಮತ್ತು ವಿಶ್ವವಾಣಿ ಪುಸ್ತಕ ಆಯೋಜಿಸಿದ್ದ ಸಮಾರಂಭದಲ್ಲಿ ವಿಶ್ವೇಶ್ವರ ಭಟ್ ಹಾಗೂ ಕಿರಣ್ ಉಪಾಧ್ಯಾಯ (ಎಡದಿಂದ ಕೊನೆಯವರು) ಅವರ ಪುಸ್ತಕಗಳನ್ನು ಎಸ್.ಎಲ್. ಭೈರಪ್ಪ ಬಿಡುಗಡೆ ಮಾಡಿದರು. ಸುತ್ತೂರು ಮಠದ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರತಾಪ್ ಸಿಂಹ ಹಾಗೂ ನಾಗೇಶ್ ಹೆಗಡೆ ಇದ್ದಾರೆ

–ಪ್ರಜಾವಾಣಿ ಚಿತ್ರ

'ರಮೇಶ್‌ಕುಮಾರ್ ಹೇಳಿಕೆ ಆಧರಿಸಿ ತನಿಖೆ ಆಗಲಿ'

ಬೆಂಗಳೂರು: 'ರಮೇಶ್‌ಕುಮಾರ್ ಅವರ ಹೇಳಿಕೆ ಆಧರಿಸಿ ತನಿಖೆ ನಡೆಸಬೇಕು' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಆಗ್ರಹಿಸಿದರು.

'ಕಾಂಗ್ರೆಸ್ ನಾಯಕರು ಮೂರು ತಲೆಮಾರಿಗೆ ಆಗುವಷ್ಟು ಆಸ್ತಿ ಸಂಪಾದಿಸಿದ್ದಾರೆ ಎಂದಿದ್ದಾರೆ. ಅವರ ಹೇಳಿಕೆಯಿಂದ ಕಾಂಗ್ರೆಸ್ ಮುಖಂಡರ ವ್ಯರ್ಥ ಹೋರಾಟಕ್ಕೆ ತಿಲಾಂಜಲಿ ನೀಡಿದಂತಾಗಿದೆ ಎಂದರು

ಬೆಂಗಳೂರು ರೇಸ್

ಪ್ರಾಮಿಸ್ ಕೆಪ್ಟ್ ಗೆಲ್ಲುವ ನಿರೀಕ್ಷೆ

ಕರ್ನಾಟಕ ಪೊಲೀಸ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರಾಮಿಸ್ ಕೆಪ್ಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪೋರ್ಟ್ ಆಫ್ ಬ್ಯೂಟಿ 1, ಪರ್ಫೆಕ್ಟ್ ಹೆಲೋ 11, ರೆಡ್ ಲೂಸಿಫರ್ 3
2ನೇ ರೇಸ್: ಅಗ್ವಿಲಾ 4, ಆರ್ಮರಿ 2, ಪೆರಿಡಾಟ್ 5
3ನೇ ರೇಸ್: ಕ್ವೀನ್ಸ್ ಟೌನ್ 9, ಸ್ಟಾರ್ಸ್ ಎಬವ್ 10, ಅಂಡೊರ 5
4ನೇ ರೇಸ್: ಟ್ರಿಪಿಟಾಕ 10, ಫಾರ್ಟಿ ನೈನರ್ 1, ರಾನ್ಡಾಲ್ಫ್ 3
5ನೇ ರೇಸ್: ಪ್ರಾಮಿಸ್ ಕೆಪ್ಟ್ 3, ಫೋರ್ ವ್ಹೀಲ್ ಡ್ರೈವ್ 7, ಕೆಪಬಲ್ 4
6ನೇ ರೇಸ್: ಇಂಪೀರಿಯಲ್ ಪವರ್ 7, ಮಿಚಿಗನ್ ಮೆಲೋಡಿ 2, ಅಜ್‌ಟೆಕ್ ಕ್ವೀನ್ 1
7ನೇ ರೇಸ್: ಎಂಬೋಸಮ್ 4, ಸ್ಪೆಕ್ಟಾಕ್ಯುಲರ್ 2, ಸದರ್ನ್ ಪವರ್ 1
8ನೇ ರೇಸ್: ಸ್ಪೀಡ್ ಸೆವೆನ್ 3, ದಿ ಒಮೆಗಾ ಮ್ಯಾನ್ 10, ಹ್ಯಾಂಡ್ಸಮ್ ರಾಕಿ 5

ಉತ್ತಮ ಬೆಟ್: ಇಂಪೀರಿಯಲ್ ಪವರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಎಂಜಿನಿಯರ್‌ಗಳಿಗೆ ನೇಮಕಾತಿ ಆದೇಶ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಜಲ ಸಂಪನ್ಮೂಲ ಇಲಾಖೆ ನಡೆಸಿದ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿರುವ ಕಿರಿಯ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್‌ಗಳು ಸೇರಿ 160 ಮಂದಿಗೆ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಶುಕ್ರವಾರ ನೇಮಕಾತಿ ಆದೇಶ ವಿತರಿಸಿದರು.

2020ರಲ್ಲಿ ಈ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿತ್ತು. 2021ರಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಿ ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು. ಆದರೆ, ಮೂಲ ದಾಖಲೆಗಳ ಪರಿಶೀಲನೆ ಮತ್ತು ಸಿಂಧುತ್ವ ಪ್ರಮಾಣಪತ್ರ ಸಲ್ಲಿಕೆ ವಿಳಂಬದ ಕಾರಣದಿಂದ ನೇಮಕಾತಿ ಆದೇಶ ನೀಡುವುದು ತಡವಾಗಿತ್ತು.

ಆಯ್ಕೆಯಾದವರಿಗೆ ನೇಮಕಾತಿ ಆದೇಶ ವಿತರಿಸಿ ಮಾತನಾಡಿದ ಕಾರಜೋಳ, 'ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 371–ಜೆ ತಿದ್ದುಪಡಿ ಜಾರಿಯಾದ ಬಳಿಕ ಆ ಭಾಗದ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಹೆಚ್ಚಿನ ಮೀಸಲಾತಿ ದೊರಕುತ್ತಿದೆ. ಆರಂಭದ ವರ್ಷಗಳಲ್ಲಿ ಇತರ ಭಾಗದ ಸರ್ಕಾರಿ ನೌಕರರೇ ಆ ಸೌಲಭ್ಯ ದುರ್ಬಳಕೆ ಮಾಡಿಕೊಂಡಿದ್ದರು. ಈಗ ಅದಕ್ಕೆ ಕಡಿವಾಣ ಹಾಕಿದ್ದೇವೆ. ಕಲ್ಯಾಣ ಕರ್ನಾಟಕದ ಹುದ್ದೆಗಳಿಗೆ ನೇಮಕಗೊಂಡವರು ಇತರೆಡೆ ಹುದ್ದೆ ಬಯಸಬೇಡಿ' ಎಂದರು.

ಬಿಬಿಎಂಪಿ ವಿಶೇಷ ಆಯುಕ್ತ (ಘನತ್ಯಾಜ್ಯ) ಎಚ್ಚರಿಕೆ

ಪ್ಲಾಸ್ಟಿಕ್ ನಿಷೇಧ: ಬೆದರಿಸಿದರೆ ಕ್ರಿಮಿನಲ್ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ದಾಸರಹಳ್ಳಿ ವಲಯದಲ್ಲಿ ವಶಪಡಿಸಿಕೊಂಡ ನಿಷೇಧಿತ ಪ್ಲಾಸ್ಟಿಕ್ ಅನ್ನು ಬಿಬಿಎಂಪಿ ಮುಖ್ಯ ಆಯುಕ್ತರು ದಾಸರಹಳ್ಳಿ ಪರಿಶೀಲಿಸಿದರು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸುವ ಸಮಯದಲ್ಲಿ ಅಧಿಕಾರಿಗಳು, ಸಿಬ್ಬಂದಿಗೆ ಬೆದರಿಸಿದರೆ, ಗಾಸಿಗೊಳಿಸಿದರೆ ಅಂತಹವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ ಎಂದು ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತರು ತಿಳಿಸಿದ್ದಾರೆ.

ಜುಲೈ 1ರಿಂದ ಏಕ ಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗಿದೆ. ಇದನ್ನು ಜಾರಿಗೆ ತರಲು ಅಧಿಕಾರಿಗಳು, ಸಿಬ್ಬಂದಿ ಅನಿರೀಕ್ಷಿತ ತಪಾಸಣೆ ಮಾಡುವ ಸಂದರ್ಭದಲ್ಲಿ ಕೆಲವು ಕಡೆ ಸಾರ್ವಜನಿಕರು ಬೆದರಿಸಿದ್ದಾರೆ ಹಾಗೂ ಭೌತಿಕವಾಗಿ ಗಾಸಿಗೊಳಿಸಿದ್ದಾರೆ. ಇದು ಕ್ರಿಮಿನಲ್ ಅಪರಾಧವಾಗಿದ್ದು, ಅಂತಹವರ ಮೇಲೆ ಕಾನೂನು ಕ್ರಮಕೈಗೊಳ್ಳಲಾಗುತ್ತದೆ ಎಂದಿದ್ದಾರೆ.

ಕಾರ್ಖಾನೆಗಳ ಮೇಲೆ ದಾಳಿ: ದಾಸರಹಳ್ಳಿ ವಲಯ ವ್ಯಾಪ್ತಿಯ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಪ್ಲಾಸ್ಟಿಕ್ ತಯಾರಿಸುವ ಎರಡು ಕಾರ್ಖಾನೆಗಳಿಂದ ಸುಮಾರು 810 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳನ್ನು ವಶಪಡಿಸಿಕೊಂಡು ₹5 ಸಾವಿರ ದಂಡ ವಿಧಿಸಲಾಗಿದೆ ಎಂದು ಘನತ್ಯಾಜ್ಯ ವಿಭಾಗ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶ್ವೇತಾ ತಿಳಿಸಿದ್ದಾರೆ.

ಮುಖ್ಯ ಆಯುಕ್ತರು ದಾಸರಹಳ್ಳಿ ವಲಯ ಕಚೇರಿಗೆ ಭೇಟಿ ನೀಡಿದಾಗ ವಶಪಡಿಸಿಕೊಂಡ ನಿಷೇಧಿತ ಪ್ಲಾಸ್ಟಿಕ್ ಅನ್ನು ಪರಿಶೀಲಿಸಿದರು. ಅದನ್ನು ಪ್ಲಾಸ್ಟಿಕ್ ಅನ್ನು ಚೂರು ಚೂರು ಮಾಡಿ ಹರಾಜು ಮುಖಾಂತರ ವಿಲೇವಾರಿ ಮಾಡಲು ಸೂಚಿಸಿದರು ಎಂದರು.

ಮಂಕಿಪಾಕ್ಸ್: ತೀವ್ರ ನಿಗಾ– ಸಚಿವೆ ಜಾರ್ಜ್ ಹೇಳಿಕೆ

ಕೇರಳದಲ್ಲಿ 3ನೇ ಪ್ರಕರಣ

ತಿರುವನಂತಪುರ (ಪಿಟಿಐ): ಮಲಪ್ಪುರಂನ ವ್ಯಕ್ತಿಯೊಬ್ಬರಲ್ಲಿ ಮಂಕಿಪಾಕ್ಸ್ ವೈರಾಣು ಸೋಂಕು ದೃಢಪಟ್ಟಿದ್ದು, ಕೇರಳದಲ್ಲಿ ಈಗ ಪ್ರಕರಣಗಳ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ಸಂಯುಕ್ತ ಅರಬ್ ಸಂಸ್ಥಾನದಿಂದ (ಯುಎಇ) ಜುಲೈ 6ರಂದು ರಾಜ್ಯಕ್ಕೆ ಬಂದಿಳಿದಿದ್ದ ಮಲಪ್ಪುರಂ ನಿವಾಸಿಗೆ ಜುಲೈ 13ರಂದು ಜ್ವರ ಕಾಣಿಸಿಕೊಂಡಿತ್ತು. ಮಂಜೇರಿ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಶುಕ್ರವಾರ ತಿಳಿಸಿದರು.

ಇವರೊಂದಿಗೆ ನಿಕಟ ಸಂಪರ್ಕದಲ್ಲಿದ್ದವರ ಮೇಲೆ ನಿಗಾ ಇರಿಸಲಾಗಿದ್ದು, ಅವರೆಲ್ಲರ ಆರೋಗ್ಯವೂ ಸ್ಥಿರವಾಗಿದೆ. ಆದಾಗ್ಯೂ, ಈ ರೋಗದಿಂದ ಆತಂಕ ಪಡುವ ಅಗತ್ಯವಿಲ್ಲ. ರಾಜ್ಯದಾದ್ಯಂತ ರೋಗ ಪರೀಕ್ಷೆ ಮತ್ತು ಕಣ್ಗಾವಲು ತೀವ್ರಗೊಳಿಸಲಾಗಿದೆ ಎಂದು ಅವರು ಹೇಳಿದರು.

ಜುಲೈ 13ರಂದು ದುಬೈನಿಂದ ಕಣ್ಣೂರಿಗೆ ಬಂದಿರುವ ವ್ಯಕ್ತಿಯೊಬ್ಬರಲ್ಲೂ ಮಂಕಿಪಾಕ್ಸ್ ವೈರಾಣು ದೃಢಪಟ್ಟಿದ್ದು, ಇದು ಎರಡನೇ ಪ್ರಕರಣ. ಈ ವ್ಯಕ್ತಿ ದುಬೈನಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದರು.

'ಮಂಕಿಪಾಕ್ಸ್‌ಗೆ ಸಿಡುಬು ಲಸಿಕೆ'

ದಿ ಹೇಗ್ (ಎಎಫ್‌ಪಿ): ವಿಶ್ವ ಆರೋಗ್ಯ ಸಂಸ್ಥೆಯು ಜಾಗತಿಕ ಆರೋಗ್ಯ ತುರ್ತುಸ್ಥಿತಿ ಎಂದು ವರ್ಗೀಕರಿಸಬಹುದಾದ ಮಂಕಿಪಾಕ್ಸ್ ಸೋಂಕಿಗೆ ಸ್ಮಾಲ್‌ಪಾಕ್ಸ್ (ಸಿಡುಬು) ಲಸಿಕೆ ಬಳಸಲು ಅನುಮೋದನೆ ನೀಡುವಂತೆ ಐರೋಪ್ಯ ಒಕ್ಕೂಟದ ಔಷಧ ಉತ್ಪನ್ನಗಳ ನಿಗಾ ಸಂಸ್ಥೆಯು ಶುಕ್ರವಾರ ಶಿಫಾರಸು ಮಾಡಿದೆ.

ಮಂಕಿಪಾಕ್ಸ್ ಮತ್ತು ಸಿಡುಬು ವೈರಸ್‌ಗಳ ನಡುವೆ ಸಾಮ್ಯತೆ ಇದೆ. ಸಿಡುಬು ಲಸಿಕೆ ಇಮ್ವಾನೆಕ್ಸ್, ಮಂಕಿಪಾಕ್ಸ್‌ಗೂ ಸಂಭಾವ್ಯ ಲಸಿಕೆ ಎಂದೇ ಪರಿಗಣಿಸಲಾಗಿದೆ.

ಯುರೋಪಿನಲ್ಲಿ ಸಿಡುಬು ತಡೆಗೆ 2013ರಿಂದ ಈ ಲಸಿಕೆ ಬಳಸಲಾಗುತ್ತಿದೆ. ಮಂಕಿಪಾಕ್ಸ್‌ನಿಂದ ವಯಸ್ಕರನ್ನು ರಕ್ಷಿಸಲು ಇಮ್ವಾನೆಕ್ಸ್ ನೀಡಲು ಯುರೋಪಿಯನ್ ಮೆಡಿಸಿನ್ ಏಜೆನ್ಸಿಯ (ಯುಎಂಎ) ಹ್ಯೂಮನ್ ಮೆಡಿಸಿನ್ಸ್ ಕಮಿಟಿ (ಸಿಎಚ್‌ಎಂಪಿ) ಶಿಫಾರಸು ಮಾಡಿದೆ.

ಸಂಕ್ಷಿಪ್ತ ಸುದ್ದಿ

ಕೋವಿಡ್: ಎಲ್ಲ ಜಿಲ್ಲೆಗಳಲ್ಲಿ ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಶುಕ್ರವಾರ ಹೊಸದಾಗಿ ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, 24 ಗಂಟೆಗಳ ಅವಧಿಯಲ್ಲಿ 1,562 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 33,391 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 4.67ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ 1,244 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಬೆಂಗಳೂರು ಗ್ರಾಮಾಂತರದಲ್ಲಿ 45, ಧಾರವಾಡದಲ್ಲಿ 38, ಮೈಸೂರಿನಲ್ಲಿ 34, ದಕ್ಷಿಣ ಕನ್ನಡದಲ್ಲಿ 28 ಹಾಗೂ ಬೆಳಗಾವಿಯಲ್ಲಿ 27 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ 20ಕ್ಕಿಂತ ಕಡಿಮೆ ಇದೆ. ಕೋವಿಡ್ ಪೀಡಿತರಲ್ಲಿ 1,107 ಮಂದಿ ಹೊಸದಾಗಿ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 8,488ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿಯೇ 7,355 ಸೋಂಕಿತರಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕುರುಹಿನಶೆಟ್ಟಿ ಕೇಂದ್ರ ಸಂಘದ ವತಿಯಿಂದ 2021–22ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇಕಡಾ 85 ಹಾಗೂ ಪಿಯುಸಿಯಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಕುರಹಿನಶೆಟ್ಟಿ ಜನಾಂಗದ ವಿದ್ಯಾರ್ಥಿಗಳು ಅಗಸ್ಟ್ 31ರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ www.kuruhinasettysanga.orgಗೆ ಭೇಟಿ ನೀಡಿ ಅಥವಾ 9380707501ಗೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಎಸ್.ಆರ್.ಎನ್.ಜಿ. ಸಂಪನ್ನಪ್ಪ ಧರ್ಮ ಸಂಸ್ಥೆ ವತಿಯಿಂದ 2022–23ನೇ ಸಾಲಿನ ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಡಿಪ್ಲೊಮಾ ಹಾಗೂ ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಆಗಸ್ಟ್ 15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 08042151190 ಅಥವಾ 7204020874ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

(ಹಿಂದೂಧಾರ್ಮಿಕ ಸಂಸ್ಥೆ ಮತ್ತುಧಾರ್ಮಾದಾಯ ದತ್ತಿಗಳ ಇಲಾಖೆ)

ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ

ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

ಈ ಮೂಲಕ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ 2022–23ನೇ ಸಾಲಿನ ಒಂದು ವರ್ಷದ ಅವಧಿಗೆ ಅಂದರೆ ದಿನಾಂಕ: ರಿಂದ ರವರೆಗೆ ಭಕ್ತಾದಿಗಳ ಅನುಕೂಲಕ್ಕಾಗಿ ಅನ್ನದಾಸೋಹ ಭವನಕ್ಕೆ ದಿನಸಿ ಸಾಮಗ್ರಿಗಳ ಸರಬರಾಜು ಹರಾಜನ್ನು ಒಂದು ವರ್ಷದ ಅವಧಿಗೆ ಟೆಂಡರ್ ಕಂ ಹರಾಜು ಪ್ರಕ್ರಿಯೆಯನ್ನು ಇ–ಟೆಂಡರ್ ಮೂಲಕ ನಡೆಸಲಾಗುತ್ತದೆ. ಸವಾಲುದಾರರು ಟೆಂಡರ್ ಹಾಕಲು ಕೊನೆಯ ದಿನಾಂಕ: ರಿಂದ ರ ಸಂಜೆ ಘಂಟೆಯವರೆಗೆ ಇರುತ್ತದೆ ಅನ್ನದಾಸೋಹ ಭವನಕ್ಕೆ ದಿನಸಿ ಸಾಮಗ್ರಿಗಳ ಸರಬರಾಜು ಲೈವ್ ಆಕ್ಷನ್ ದಿನಾಂಕ: ರಂದು ಬೆಳಗ್ಗೆ ಘಂಟೆಗೆ ಇರುತ್ತದೆ. ಹೆಚ್ಚಿನ ವಿವರಗಳನ್ನು ದೇವಾಲಯದ ಕಛೇರಿಯಿಂದ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ದೇವಾಲಯ ಕಚೇರಿಗೆ ಸಂಪರ್ಕಿಸುವುದು.

ವೆಬ್ ಸೈಟ್ ನಲ್ಲಿ ನೊಂದಾಯಿಸತಕ್ಕ ಇ.ಎಂ.ಡಿ ಮೊಬಲಗು ಅನ್ನದಾಸೋಹ ಭವನಕ್ಕೆ ದಿನಸಿ ಸಾಮಗ್ರಿಗಳ ಸರಬರಾಜು ಪ್ರಕ್ರಿಯೆಗೆ ರೂ. 100000/– ರೂಪಾಯಿಗಳು.

ಸಹಿ/– ಕಾರ್ಯನಿರ್ವಹಣಾಧಿಕಾರಿ, ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ
ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

(ಹಿಂದೂಧಾರ್ಮಿಕ ಸಂಸ್ಥೆ ಮತ್ತುಧಾರ್ಮಾದಾಯ ದತ್ತಿಗಳ ಇಲಾಖೆ)

ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ

ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಅಧಿನಿಯಮ, 1999 ಮತ್ತು ನಿಯಮಗಳು 2000ರ 2(ಸಿ) ಅನ್ವಯ, ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಕೋಲಾರಜಿಲ್ಲೆ, ಮಾಲೂರುತಾಲ್ಲೂಕು, ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿದೇವಾಲಯದ2022–23ನೇ ಸಾಲಿನ ಭಕ್ತಾದಿಗಳ ಅನುಕೂಲಕ್ಕಾಗಿ ಅನ್ನದಾಸೋಹ ಭವನಕ್ಕೆ ಸಿಬ್ಬಂದಿಯವರನ್ನು ಹೊರಗುತ್ತಿಗೆಆಧಾರದ ಮೇಲೆ ಪಡೆಯಲುಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: ಡಿಎಎಸ್ (1) ಸಿಆರ್: 52/2018–19 ಇ–ಟೆಂಡರ್ ಮೂಲಕ ಹರಾಜು ಪ್ರಕ್ರಿಯೆ ನಡೆಸಲು ಸೂಚಿಸಿರುತ್ತಾರೆ. ಸವಾಲುದಾರರು ಈ ಕೆಳಕಂಡ ಷರತ್ತುಗಳಿಗೆ ಬದ್ದರಾಗಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳಿಗೆ ದೇವಾಲಯ ಕಚೇರಿಗೆ ಸಂಪರ್ಕಿಸುವುದು.

Tender Schedule:	
Tender Reference No:	SPVT-17/2022-23
Tender published date	19-07-2022
Last Date & Time for receipt of tenders	28-07-2022
Date & Time for Technical bid opening	30-07-2022
Date & Time for Financial bid opening	Intimated Later

ಸಹಿ/– ಕಾರ್ಯನಿರ್ವಹಣಾಧಿಕಾರಿ, ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ
ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

(ಹಿಂದೂಧಾರ್ಮಿಕ ಸಂಸ್ಥೆ ಮತ್ತುಧಾರ್ಮಾದಾಯ ದತ್ತಿಗಳ ಇಲಾಖೆ)

ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ

ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ರ 2(ಸಿ) ಅನ್ವಯ, ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ 2022–23ನೇ ಸಾಲಿನ ಶ್ರಾವಣ ಮಾಸದ ಪ್ರಯುಕ್ತ ದೇವರ ದರ್ಶನಕ್ಕೆ 5 ಶನಿವಾರಗಳಂದು ವಿಶೇಷ ದರ್ಶನಕ್ಕೆ ವಿಶೇಷ ಕ್ಯೂಲೇನ್‌ಗೆ ಬ್ಯಾರಿಕೇಟ್ ಬಿಸಿಲು ತಾಪಕ್ಕೆ ಮತ್ತು ಮಳೆ ಗಾಳಿಗೆ ಶಾಮಿಯಾನ ಮತ್ತು ಸ್ಟೇಜ್ ಹಾಕಲಾಗುವುದು ದಿನಾಂಕ: ರಿಂದ ರವರೆಗೆ ಒಂದು ತಿಂಗಳ ಅವಧಿಗೆ ಟೆಂಡರ್ ಕಮ್ ಇ–ಹರಾಜು ಮೂಲಕ ವಿಲೆ ಮಾಡಲು ದಿನಾಂಕ: ರಂದು ಇ–ಪ್ರೊಕ್ಯೂರ್ ಮೆಂಟ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್/ ಇ–ಹರಾಜು ಭಾಗವಹಿಸುವವರು ಇ–ಆಡಳಿತ ಸಚಿವಾಲಯದ ವೆಬ್‌ಸೈಟ್ http://www.eproc.karnataka.gov.in ನ ಮೂಲಕ ಮಾತ್ರ ವಿವರಗಳ ವೀಕ್ಷಣೆ ಮತ್ತು ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ದೇವಾಲಯ ಕಚೇರಿಗೆ ಸಂಪರ್ಕಿಸುವುದು.

Tender Schedule:	
Tender Reference No:	SPVT/22/2022-23
Last Date & Time for receipt of tenders	28/07/2022 17.00 Hours
Date & Time for opening of Bids	30/07/2022 11.00 Hours

ಸಹಿ/– ಕಾರ್ಯನಿರ್ವಹಣಾಧಿಕಾರಿ, ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ
ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

ನೈರುತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. PSS-SBC-01
ದಿನಾಂಕ: 20.07.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮುಖ್ಯ ಪ್ರಾಜೆಕ್ಟ್ ವ್ಯವಸ್ಥಾಪಕರು, ಗತಿ ಶಕ್ತಿ ಘಟಕ, ಬೆಂಗಳೂರು ಅವರ ಕಾರ್ಯವ್ಯಾಪ್ತಿಯಲ್ಲಿರುವ ವಿವಿಧ ಸೈಟ್‌ಗಳು / ವಿಭಾಗಗಳಿಗೆ ಯೋಜನಾ ಮೇಲ್ವಿಚಾರಣಾ ಸೇವೆಗಳನ್ನು ಒದಗಿಸಲು ಯೋಜನಾ ಮೇಲ್ವಿಚಾರಣಾ ಸೇವಾ ಏಜೆನ್ಸಿಯನ್ನು (ಪಿಎಸ್‌ಎಸ್‌ಎ) ನೇಮಿಸುವ ಪ್ರಸ್ತಾವನೆ.	ರೂ. 10,08,08,722/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **18–08–2022, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನೀಯರ್ / ಕೋ–ಆರ್ಡ್
ಬೆಂಗಳೂರು

PUB/253/AAV/PRB/SWR/2022-23

S.W.Railways SWRRLY SWRRLY

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಷನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ : ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು – 560022
ದೂ: +91 80 68951000 ಫ್ಯಾಕ್ಸ್: +91 80 68951001 ಇ–ಮೇಲ್: gokex@gokaldasexports.com ವೆಬ್‌ಸೈಟ್: www.gokaldasexports.com

ಜೂನ್ 30, 2022ಕ್ಕೆ ಅಂತ್ಯಗೊಂಡ ತ್ರೈಮಾಸಿಕದ ಪ್ರತ್ಯೇಕ ಹಾಗೂ ಕ್ರೋಢೀಕೃತ ಐಎನ್‌ಡಿ ಎಎಸ್ ಅಪರಿಶೋಧಿತ ಆರ್ಥಿಕ ಫಲಿತಾಂಶಗಳು

(ಸೆಬಿ (ಎಲ್‌ಒಡಿಆರ್) ನಿಯಮಾವಳಿಗಳು, 2015ರ ನಿಯಮ 47(1) (ಬಿ))

(ರೂ. ಲಕ್ಷಗಳಲ್ಲಿ, ಪ್ರತಿ ಷೇರಿನ ಗಳಿಕೆ ಹೊರತುಪಡಿಸಿ)

ಕ್ರ. ಸಂ.	ವಿವರಗಳು	ಪ್ರತ್ಯೇಕ				ಕ್ರೋಢೀಕೃತ			
		ಅಂತ್ಯಗೊಂಡ ತ್ರೈಮಾಸಿಕ			ವರ್ಷಾಂತ್ಯ	ಅಂತ್ಯಗೊಂಡ ತ್ರೈಮಾಸಿಕ			ವರ್ಷಾಂತ್ಯ
		ಜೂನ್ 30, 2022	ಮಾರ್ಚ್ 31, 2022	ಜೂನ್ 30, 2021	ಮಾರ್ಚ್ 31, 2022	ಜೂನ್ 30, 2022	ಮಾರ್ಚ್ 31, 2022	ಜೂನ್ 30, 2021	ಮಾರ್ಚ್ 31, 2022
		ಅಪರಿಶೋಧಿತ	(ಟಿಪ್ಪಣಿ 1ನ್ನು ನೋಡಿ)	ಅಪರಿಶೋಧಿತ	ಪರಿಶೋಧಿತ	ಅಪರಿಶೋಧಿತ	(ಟಿಪ್ಪಣಿ 1ನ್ನು ನೋಡಿ)	ಅಪರಿಶೋಧಿತ	ಪರಿಶೋಧಿತ
1	ಒಟ್ಟು ಆದಾಯ	61,314.69	58,781.28	24,284.32	1,80,003.49	61,269.27	58,795.47	24,298.73	1,80,100.34
2	ತೆರಿಗೆ ಮತ್ತು ಅಸಾಮಾನ್ಯ ಐಟಂಗಳ ಮುನ್ನ ನಿವ್ವಳ ಲಾಭ/(ನಷ್ಟ)	5,150.56	5,227.87	(250.10)	11,672.97	5,081.37	5,237.71	(255.22)	11,703.13
3	ತೆರಿಗೆ ಮುನ್ನ ಮತ್ತು ಅಸಾಮಾನ್ಯ ಐಟಂಗಳ ನಂತರ ನಿವ್ವಳ ಲಾಭ/(ನಷ್ಟ)	5,150.56	5,227.87	(250.10)	11,672.97	5,081.37	5,237.71	(255.22)	11,703.13
4	ತೆರಿಗೆ ಮತ್ತು ಅಸಾಮಾನ್ಯ ಐಟಂಗಳ ನಂತರ ನಿವ್ವಳ ಲಾಭ/(ನಷ್ಟ)	4,008.45	6,076.15	(250.10)	11,672.97	3,939.26	6,090.99	(255.22)	11,708.13
5	ಅವಧಿ / ವಾರ್ಷಿಕ ಒಟ್ಟು ಸಮಗ್ರ ಆದಾಯ	830.65	5,301.01	(825.28)	12,381.87	762.21	5,313.18	(829.65)	12,416.61
6	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ. 5 ಪ್ರತಿಯೊಂದಕ್ಕೆ, ಪೂರ್ಣ ಪಾವತಿಸಲಾಗಿದೆ)	-	-	-	2,948.85	-	-	-	2,948.85
7	ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್‌ಶೀಟ್‌ನಲ್ಲಿ ತೋರಿಸಿದಂತೆ ಇತರೆ ಈಕ್ವಿಟಿ	-	-	-	68,014.11	-	-	-	67,868.70
8	ಪ್ರತಿ ಈಕ್ವಿಟಿ ಷೇರಿನ ಗಳಿಕೆ (ಇಪಿಎಸ್)								
	ಮೂಲ	6.66	10.30	(0.58)	23.01	6.54	10.33	(0.59)	23.08
	ವಿಭಜಿತ	6.60	10.00	(0.58)	22.07	6.49	10.02	(0.59)	22.14

ಟಿಪ್ಪಣಿಗಳು:

1. ಮಾರ್ಚ್ 31, 2022ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಂಕಿಅಂಶಗಳು ಮಾರ್ಚ್ 31, 2022ಕ್ಕೆ ಕೊನೆಗೊಂಡ ವಾರ್ಷಿಕದ ಪ್ರತ್ಯೇಕ ಮತ್ತು ಕ್ರೋಢೀಕೃತ ಐಎನ್‌ಡಿ ಎಎಸ್ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯ ಅಂಕಿಅಂಶಗಳ ನಡುವಿನ ಸಮತೋಲನ ಅಂಕಿಅಂಶಗಳು ಮತ್ತು ಡಿಸೆಂಬರ್ 31, 2021ಕ್ಕೆ ಕೊನೆಗೊಂಡ ಒಂಬತ್ತು ತಿಂಗಳುಗಳವರೆಗೆ ಅಪರಿಶೋಧಿತ ವರ್ಷದಿಂದ ದಿನಾಂಕದವರೆಗಿನ ಪ್ರಕಟಿಸಲಾದ ಅಂಕಿಅಂಶಗಳು.
2. ಮೇಲಿನ ಸಾರಸತ್ವವು 2015ರ ಸೆಬಿಯ ನಿಯಂತ್ರಣಗಳ (ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ/ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ (www.bseindia.com and www.nseindia.com) ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ (www.gokaldasexports.com) ಲಭ್ಯವಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿ. ಪರವಾಗಿ
ಸಹಿ/–
ಶಿವರಾಮಕೃಷ್ಣನ್ ಗಣಪತಿ
ವ್ಯವಸ್ಥಾಪಕ ನಿರ್ದೇಶಕರು
DIN: 07954560

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 22, 2022

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ತಿಪಟೂರು

ಸಂಖ್ಯೆ:ಸಾಆತಿ/ಪ್ರ.ಶಾ/04/2022–23 ದಿನಾಂಕ : 20.07.2022

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

1. ಸಾರ್ವಜನಿಕ ಆಸ್ಪತ್ರೆ ತಿಪಟೂರು ಇಲ್ಲಿಗೆ 2022–23 ನೇ ಸಾಲಿಗೆ ಪ್ರಯೋಗಶಾಲಾ ಯಂತ್ರೋಪಕರಣ ಸರಬರಾಜಿಗಾಗಿ ಇ–ಪ್ರಕ್ಯೂರ್ ಮೆಂಟ್ ಮೂಲಕ ದ್ವಿಲಕೋಟೆಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. 2. ಟೆಂಡರ್ ಫಾರಂನ್ನು ವಿತರಿಸುವ ದಿನಾಂಕ: **21.07.2022** ರಿಂದ **04.08.2022** ರವರೆಗೆ. 3. ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **04.08.2022** ರಂದು ಸಂಜೆ 4 ಘಂಟೆಗೆ. 4. ದಿನಾಂಕ: **06.08.2022** ರಂದು ಬೆಳಿಗ್ಗೆ 11 ಘಂಟೆಗೆ ದಾಖಲಾತಿ ಲಕೋಟೆಯನ್ನು ತೆರೆಯಲಾಗುವುದು. 5. ಹೆಚ್ಚಿನ ಮಾಹಿತಿಯುನ್ನು ಕಚೇರಿ ವೇಳೆಯಲ್ಲಿ ಪಡೆಯುಬಹುದು. ಮೊ.ನಂ.9901757285, 9900734986. ವೆಬ್‌ಸೈಟ್ ಸಂಖ್ಯೆ :https://www.eproc.karnataka.gov.in

ಸಹಿ/– ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ತಿಪಟೂರು

DIPR/TUM/347/MCA/2022-23

(ಹಿಂದೂಧಾರ್ಮಿಕ ಸಂಸ್ಥೆ ಮತ್ತುಧಾರ್ಮಾದಾಯ ದತ್ತಿಗಳ ಇಲಾಖೆ)

ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ

ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಅಧಿನಿಯಮ, 1999 ಮತ್ತು ನಿಯಮಗಳು 2000ರ 2(ಸಿ) ಅನ್ವಯ, ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಕೋಲಾರಜಿಲ್ಲೆ, ಮಾಲೂರು ತಾಲ್ಲೂಕು ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಟಕರಮಣಸಾಮಿ ದೇವಸ್ಥಾನಕ್ಕೆ 2022–23ನೇ ಸಾಲಿಗೆ ಅನ್ನದಾಸೋಹದಲ್ಲಿ ಪ್ರಸಾದ ತಯಾರಿಸಲು ಅಗತ್ಯತೆಗೆ ತಕ್ಕಂತೆ ಅವಶ್ಯವಿರುವ **ತರಕಾರಿ ಒಂದು ವರ್ಷದ ಅವಧಿಗೆ ಸರಬರಾಜು** ಮಾಡಬೇಕಾಗಿರುವುದರಿಂದ ಸೂಚಿಸಿರುವ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ವಿವಿಧ ತರಕಾರಿ ಸರಬರಾಜುದಾರರಿಂದ ದರಸೂಚಿಗಳನ್ನು ಕರೆಯಲಾಗಿದೆ. ಆಸಕ್ತಿಯುಳ್ಳ ತರಕಾರಿ ಸರಬರಾಜುದಾರರು ಮೊಹರಾದ ತಮ್ಮ ಕನಿಷ್ಠ ದರಪಟ್ಟಿಯನ್ನು ಈ ಕೆಳಕಂಡ ನಿಬಂಧನೆಗಳನ್ವಯ ಸಲ್ಲಿಸಲು ಕೋರಿದೆ. ಸವಾಲುದಾರರು ಈ ಕೆಳಕಂಡ ಷರತ್ತುಗಳಿಗೆ ಬದ್ದರಾಗಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳಿಗೆ ದೇವಾಲಯ ಕಚೇರಿಗೆ ಸಂಪರ್ಕಿಸುವುದು.

ಸಹಿ/– ಕಾರ್ಯನಿರ್ವಹಣಾಧಿಕಾರಿ, ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ
ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

(ಹಿಂದೂಧಾರ್ಮಿಕ ಸಂಸ್ಥೆ ಮತ್ತುಧಾರ್ಮಾದಾಯ ದತ್ತಿಗಳ ಇಲಾಖೆ)

ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ

ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತುಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ರ 2(ಸಿ) ಅನ್ವಯ, ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ 2022–23ನೇ ಸಾಲಿನ ಶ್ರಾವಣ ಮಾಸದ ಜಾತ್ರಾ ಕಾಲದಲ್ಲಿ ಅಂದರೆ ದಿನಾಂಕ: ರಿಂದ ನಡೆಯುವ ಶ್ರಾವಣ ಮಾಸ ಜಾತ್ರಾ ಸಮಯದಲ್ಲಿ ಭಕ್ತಾದಿಗಳು ದೇವರಿಗೆ ಅರ್ಪಿಸುವ ಕುರುಳು ರೂಢಿಸಿಕೊಳ್ಳುವ ಹಕ್ಕಿನ ಸುಂಕ ಹಾಗೂ ತೆಂಗಿನ ಕಾಯಿ ಮತ್ತು ಮಂಗಳಾರತಿ ಹಕ್ಕಿನ ಸುಂಕ ವಸೂಲಾತಿ 2022 ಶ್ರಾವಣ ಮಾಸ 1 ತಿಂಗಳ ಅವಧಿಗೆ ಹರಾಜು ಪ್ರಕ್ರಿಯೆ ನಡೆಸುವ ಬಗ್ಗೆ ಮಾನ್ಯ ಆಯುಕ್ತರ ಆದೇಶ ಸಂಖ್ಯೆ ಸಿಎನ್‌ಆರ್/ಸಿಎನ್‌ಆರ್/ಸಿಆರ್01/2014–15. ಹರಾಜು ಕಮ್ ಟೆಂಡರ್‌ನಲ್ಲಿ ಪ್ರಕ್ರಿಯೆಯನ್ನು ಇ–ಟೆಂಡರ್ ಮೂಲಕ ಮಾಡಲು ಸೂಚಿಸಿರುತ್ತಾರೆ. ಸವಾಲುದಾರರು ಈ ಕೆಳಕಂಡ ಷರತ್ತುಗಳಿಗೆ ಬದ್ದರಾಗಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳಿಗೆ ದೇವಾಲಯ ಕಚೇರಿಗೆ ಸಂಪರ್ಕಿಸುವುದು.

Tender Schedule:	
Tender Reference No:	SPVT/19/2022-23
Last Date & Time for receipt of tenders	26/07/2022 17.00 Hours
Date & Time for opening of Bids	29/07/2022 17.00 Hours
Auction Schedule:	
Auction Reference No.	
Auction Document can be downloaded upto	26/07/2022 17.00 Hours
Date and Time to Confirm Particiption Interest in Auction	26/07/2022 17.00 Hours
Start Date and Time of Evaluation	
Live Auction Start & End Date	As per eprocurement portal

ಸಹಿ/– ಕಾರ್ಯನಿರ್ವಹಣಾಧಿಕಾರಿ, ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ
ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

(ಹಿಂದೂಧಾರ್ಮಿಕ ಸಂಸ್ಥೆ ಮತ್ತುಧಾರ್ಮಾದಾಯ ದತ್ತಿಗಳ ಇಲಾಖೆ)

ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ

ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ರ 2(ಸಿ) ಅನ್ವಯ, ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಕೋಲಾರಜಿಲ್ಲೆ, ಮಾಲೂರು ತಾಲ್ಲೂಕು, ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ 2022–23ನೇ ಸಾಲಿಗೆ ದಿನಾಂಕ: ರಿಂದ ರವರೆಗೆ ಒಂದು ವರ್ಷದ ಅವಧಿಗೆ ಉತ್ತಮಗುಣಮಟ್ಟದ ಲಾಡು ಪ್ರಸಾದ ತಯಾರಿಸಿ ಮಾರಾಟ ಮಾಡಲು ಮಾರಾಟದ ಹಕ್ಕನ್ನು ಟೆಂಡರ್ ಕಮ್ ಇ–ಹರಾಜು ಮೂಲಕ ವಿಲೆ ಮಾಡಲು ದಿನಾಂಕ: ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್/ಇ–ಹರಾಜು ಭಾಗವಹಿಸುವವರು ಇ–ಆಡಳಿತ ಸಚಿವಾಲಯದ ವೆಬ್‌ಸೈಟ್ http://www.eproc.karnataka.gov.in ನ ಮೂಲಕ ಮಾತ್ರ ವಿವರಗಳ ವೀಕ್ಷಣೆ ಮತ್ತು ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ದೇವಾಲಯ ಕಚೇರಿಗೆ ಸಂಪರ್ಕಿಸುವುದು.

Tender Schedule:	
Tender Reference No:	SPVT/18/2022-23
Last Date & Time for receipt of tenders	28/07/2022 17.00 Hours
Date & Time for opening of Bids	30/07/2022 16.00 Hours
Auction Schedule:	
Auction Reference No.	
Auction Document can be downloaded upto	As per Eprocurement Portal
Date and Time to Confirm Particiption Interest in Auction	28-07-2022 17 .00 Hours
Live Auction Start & End Date	30/07/2022 10:30 to 16: 00 Hours

ಸಹಿ/– ಕಾರ್ಯನಿರ್ವಹಣಾಧಿಕಾರಿ, ಶ್ರೀ ಪ್ರಸನ್ನ ವೆಂಕರಮಣಸ್ವಾಮಿ ದೇವಸ್ಥಾನ
ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

ಪಯೋನೀರ್ ಡಿಸ್ಟಿಲರೀಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', ಲೆವೆಲ್ 10, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001,
ಭಾರತ. ಫೋನ್: 080 - 4544 8000, ಫ್ಯಾಕ್ಸ್: 080 - 3985 6862
ಇಮೇಲ್: pdlinvestor.india@diageo.com, ವೆಬ್‌ಸೈಟ್: www.pioneerdistilleries.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L24116KA1992PLC125992

ಜೂನ್ 30, 2022ಕ್ಕೆ ಅಂತ್ಯವಾದ ತ್ರೈಮಾಸಿಕ ಪ್ರತ್ಯೇಕಿತ ಪರಿಶೋಧಿತವಲ್ಲದ ಆರ್ಥಿಕ ಪಲಿತಾಂಶಗಳ ವಿವರಣೆ

ರೂ. ಲಕ್ಷಗಳಲ್ಲಿ

ಕ್ರ. ಸಂಖ್ಯೆ	ವಿವರಗಳು	30ನೇ ಜೂನ್ 2022 ಕೊನೆಗೊಂಡ ತ್ರೈಮಾಸಿಕಕ್ಕೆ	31ನೇ ಮಾರ್ಚ್ 2022 ಕೊನೆಗೊಂಡ ತ್ರೈಮಾಸಿಕಕ್ಕೆ	30ನೇ ಜೂನ್ 2021 ಕೊನೆಗೊಂಡ ತ್ರೈಮಾಸಿಕಕ್ಕೆ	31ನೇ ಮಾರ್ಚ್ 2022 ಕೊನೆಗೊಂಡ ವರ್ಷಕ್ಕೆ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	5,987.00	5,701.00	3,770.00	21,471.00
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ #) ನಿವ್ವಳ ಲಾಭ/(ನಷ್ಟ)	(2,051.00)	(1,253.00)	(2,064.00)	(7,196.00)
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ #) ನಿವ್ವಳ ಲಾಭ/(ನಷ್ಟ)	(2,051.00)	(1,253.00)	(2,064.00)	(7,196.00)
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ #) ನಿವ್ವಳ ಲಾಭ/(ನಷ್ಟ)	(2,051.00)	(1,253.00)	(2,064.00)	(7,196.00)
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ [ಅವಧಿಯ ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	(2,051.00)	(1,247.00)	(2,064.00)	(7,190.00)
6.	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ ಪ್ರತಿ ಈಕ್ವಿಟಿ ಷೇರಿಗೆ ರೂ.10/–	1,339.00	1,339.00	1,339.00	1,339.00
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ				
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ.2/-) (ಕಾರ್ಯಾಚರಣೆಗಳನ್ನು ಮುಂದಿವರಿಸಲು ಮತ್ತು ನಿಲ್ಲಿಸಲು)				
	1. ಮೂಲ :	(15.32)	(9.36)	(15.42)	(53.75)
	2. ದುರ್ಬಲೀಕೃತ :	(15.32)	(9.36)	(15.42)	(53.75)

ಸೂಚನೆಗಳು:

ಎ) ಮೇಲಿನವು 2015 ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) 33ನೇ ನಿಯಂತ್ರಣದಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ವಾರ್ಷಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪವು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.pioneerdistilleries.com ನಲ್ಲಿ ಲಭ್ಯವಿರುತ್ತದೆ.

ಬಿ) # – ಐಎನ್‌ಡಿ–ಎಎಸ್ ನಿಯಮಗಳು / ಎಎಸ್ ನಿಯಮಗಳಿಗೆ ಅನುಗುಣವಾಗಿ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಅಸಾಧಾರಣ ಮತ್ತು ಅಥವಾ ಅಸಾಧಾರಣ ವಸ್ತುಗಳು ಯಾವುದು ಅನ್ವಯವಾಗುತ್ತದೆಯೋ ಅದಕ್ಕೆ ಸರಿಹೊಂದಿಸಲಾಗಿದೆ.

ನಿರ್ದೇಶಕರ ಮಂಡಳಿಯ ನಿಮಿತ್ಯ ಮತ್ತು ಅವರ ಪರವಾಗಿ
ಸಹಿ/–
ಅಲೋಕೇಶ್ ಬಿಸ್ವಾಸ್
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 21, 2022

ನೈರುತ್ಯ ರೈಲ್ವೆ

Azadi Ka Amrit Mahotsav

ಟೆಂಡರ್ ಸೂಚನೆ ಸಂ. 19 UBL 2022-23 ದಿನಾಂಕ: 19.07.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು/ಬಳ್ಳಾರಿ ವಿಭಾಗ: ಹೊಸಪೇಟೆ (ಸೇರಿದಂತೆ) ದಿಂದ ಹದ್ದಿನಗೂಡು (ಹೊರತುಪಡಿಸಿ), ತೋರಣಗಲ್ಲು (ಸೇರಿದಂತೆ) ದಿಂದ ರಂಜಿತ್‌ಪುರ (ಸೇರಿದಂತೆ), ಬಳ್ಳಾರಿ (ಸೇರಿದಂತೆ) ದಿಂದ ರಾಯದುರ್ಗ (ಸೇರಿದಂತೆ) ದಿಂದ ಕದರಿದೇವರಪಲ್ಲಿ (ಸೇರಿದಂತೆ) (ವಲಯ–1).	ರೂ. 30,02,419/-
2	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು / ಗದಗ ವಿಭಾಗ: ಗದಗ (ಸೇರಿದಂತೆ) ದಿಂದ ಹೊಸಪೇಟೆ (ಹೊರತುಪಡಿಸಿ), ಹೊಸಪೇಟೆ (ಹೊರತುಪಡಿಸಿ) ದಿಂದ ಕೊಟ್ಟೂರು (ಸೇರಿದಂತೆ), ವ್ಯಾಸ ಕಾಲೋನಿ (ಸೇರಿದಂತೆ) ದಿಂದ ಸ್ವಾಮಿಹಳ್ಳಿ (ಸೇರಿದಂತೆ), ಗಿಣಿಗೇರಾ (ಸೇರಿದಂತೆ) ದಿಂದ ಕಾರಟಗಿ (ಸೇರಿದಂತೆ) (ವಲಯ–2).	ರೂ. 29,81,680/-
3	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು / ವಿಜಯಪುರ ಕಾರ್ಯವ್ಯಾಪ್ತಿ – ಹೊಟಗಿ (ಹೊರತುಪಡಿಸಿ) ದಿಂದ ಬಸವನಬಾಗೇವಾಡಿ ರೋಡ್ (ಹೊರತುಪಡಿಸಿ) (ವಲಯ–3).	ರೂ. 27,79,371/-
4	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು / ವಿಜಯಪುರ ಕಾರ್ಯವ್ಯಾಪ್ತಿ – ಬಾಗಲಕೋಟ (ಸೇರಿದಂತೆ) ದಿಂದ ಕಜ್ಜಿಡೋಣಿ (ಒಳಗೊಂಡಂತೆ) ಬಸವನಬಾಗೇವಾಡಿ ರೋಡ್ (ಒಳಗೊಂಡಂತೆ) ದಿಂದ ಬಾದಾಮಿ (ಹೊರತುಪಡಿಸಿ) (ವಲಯ–3/1).	ರೂ. 27,79,371/-
5	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು / ಕೇಂದ್ರ / ಕಾರ್ಯವ್ಯಾಪ್ತಿ – ಅಣ್ಣಿಗೇರಿ (ಸೇರಿದಂತೆ) ದಿಂದ ಗದಗ (ಹೊರತುಪಡಿಸಿ) – ಬಾದಾಮಿ (ಸೇರಿದಂತೆ) (ವಲಯ–4).	ರೂ. 24,52,521/-
6	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು / ಕೇಂದ್ರ / ಕಾರ್ಯವ್ಯಾಪ್ತಿ – ಅಣ್ಣಿಗೇರಿ (ಸೇರಿದಂತೆ) ದಿಂದ ಹುಬ್ಬಳ್ಳಿ (ಹೊರತುಪಡಿಸಿ) – ಕರಜಗಿ (ವಲಯ–4/1).	ರೂ. 24,95,708/-
7	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು / ಬೆಳಗಾವಿ ವಿಭಾಗ: ಅಳ್ನಾವರ (ಹೊರತುಪಡಿಸಿ) ದಿಂದ ಮಿರಜ್ (ಹೊರತುಪಡಿಸಿ) (ವಲಯ–5).	ರೂ. 41,59,485/-
8	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು / ಕ್ಯಾಸಲ್‌ರಾಕ್ ವಿಭಾಗ: ಲೋಂಡಾ (ಹೊರತುಪಡಿಸಿ) ದಿಂದ ವಾಸ್ಕೋ–ಡ–ಗಾಮಾ (ಸೇರಿದಂತೆ) (ವಲಯ–6).	ರೂ. 58,70,574/-
9	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಅಭಿಯಂತರರು / ಎಚ್‌ಕ್ಯೂ / ಹುಬ್ಬಳ್ಳಿ ಕಾರ್ಯವ್ಯಾಪ್ತಿ – ಇಎಮ್‌ಡಿ ಶೆಡ್ (ವಲಯ–7).	ರೂ. 12,81,448/-
10	**ಹುಬ್ಬಳ್ಳಿ ವಿಭಾಗ:** ಗಾಲ್ಫ್ ಲಿಂಕ್ ಕಾಲೋನಿ, ಬ್ರೂಕ್ ರೋಡ್ ಆಫೀಸರ್ ಕಾಲೋನಿ, ಆಸ್ಪತ್ರೆಯ ಕಾಲೋನಿ ಹಿಂಭಾಗ, ರೈಲ್ವೇ ಆಫೀಸರ್ ಕ್ಲಬ್ ಮತ್ತು ಸುತ್ತಮುತ್ತಲಿನ ಕಾಲೋನಿ, ಆಫೀಸರ್ ರೆಸ್ಟ್ ಹೌಸ್ ಮತ್ತು ಹಿರಿಯ ಸೆಕ್ಷನ್ ಇಂಜಿನೀಯರ್ /ವರ್ಕ್/ಎಸ್‌ಡಬ್ಲ್ಯೂ/ಹುಬ್ಬಳ್ಳಿ ಕಾರ್ಯವ್ಯಾಪ್ತಿಯಲ್ಲಿನ ಎಲ್ಲಾ ಇತರ ಸೇವಾ ಕಟ್ಟಡಗಳು. (ವಲಯ 8).	ರೂ. 48,76,333/-
11	**ಹುಬ್ಬಳ್ಳಿ ವಿಭಾಗ:** ಹಿರಿಯ ಸೆಕ್ಷನ್ ಅಭಿಯಂತರರು/ವರ್ಕ್/ಎಸ್‌ಡಬ್ಲ್ಯೂ/ಹುಬ್ಬಳ್ಳಿ ಕಾರ್ಯವ್ಯಾಪ್ತಿಯಲ್ಲಿರುವ ಎಲ್ಲಾ ಸಿಬ್ಬಂದಿ ಕ್ವಾರ್ಟರ್‌ಗಳನ್ನು ಒಳಗೊಂಡಿರುವ ಪ್ರದೇಶ (ಅಧಿಕಾರಿಗಳ ಕಾಲೋನಿ ಹೊರತುಪಡಿಸಿ) (ವಲಯ–8/1).	ರೂ. 28,52,565/-
12	**ಹುಬ್ಬಳ್ಳಿ ವಿಭಾಗ:** ಗದಗ ರಸ್ತೆಯ ದಕ್ಷಿಣಕ್ಕೆ ಎಲ್ಲಾ ಕಾಲೋನಿಗಳು, ಸೆಂಟ್ರಲ್ ಆಸ್ಪತ್ರೆ, ಡೌನ್ ಚಾಲ್, ಸಿಮೆಂಟ್ ಚಾಲ್, ವಿದ್ಯಾರಣ್ಯ ನಗರ, ಸ್ಲೀಪರ್ ಡಿಪೋ ಮತ್ತು ಆರ್‌ಜಿಎಸ್ ಟೈಪ್–1 ಕ್ವಾರ್ಟರ್ಸ್ ಮತ್ತು ಸೆಕ್ಷನ್ ಇಂಜಿನೀಯರ್/ವರ್ಕ್/ಕ್ಯೂಟಿಎಸ್/ಹುಬ್ಬಳ್ಳಿ ಮತ್ತು ಜಿಎಂ ಕಚೇರಿ (ರೈಲ್ ಸೌಧ) ಜನರಲ್ ಸ್ಟೋರ್ಸ್ ಡಿಪೋ. (ವಲಯ–9).	ರೂ. 40,61,631/-
13	**ಹುಬ್ಬಳ್ಳಿ ವಿಭಾಗ:** ಎಂಟಿಎಸ್ ಕಾಲೋನಿ, ದೇವರಗುಡಿಹಾಳ್, ಓಬಳಾಪುರ, ದೇಶಪಾಂಡೆ ನಗರ, ರೈಲ್ ನಗರ ಕಾಲೋನಿ, ನ್ಯೂ ವಿದ್ಯಾರಣ್ಯ ಕಾಲೋನಿ, ಹುಬ್ಬಳ್ಳಿ ರೈಲು ನಿಲ್ದಾಣ ಸೇರಿದಂತೆ ಎಲ್ಲಾ ಕಾಲೋನಿಗಳ ಪೈಪ್ ಲೈನ್ ಕಾಮಗಾರಿ. (ವಲಯ–10).	ರೂ. 45,16,965/-
14	**ಹುಬ್ಬಳ್ಳಿ ವಿಭಾಗ:** ಹುಬ್ಬಳ್ಳಿ ನಿಲ್ದಾಣದ ಕಟ್ಟಡ ಮತ್ತು ಅದರ ಸೇವಾ ಪರಿಚಲನೆ ಪ್ರದೇಶ ಸೇರಿದಂತೆ ಎಲ್ಲಾ ಸೇವಾ ಕಟ್ಟಡಗಳು, ಮೇಲ್ವಿಚಾರಕರ ವಿಶ್ರಾಂತಿ ಗೃಹ, ದಕ್ಷಿಣ ಭಾಗದ ಕಾಲೋನಿ, ಶೆಡ್‌ಗಳು, ರನ್ನಿಂಗ್ ರೂಮ್, ಮೆಕ್ಯಾನಿಕಲ್ ಲಾಂಡ್ರಿ, ಎಲ್ಲಾ ಶೆಡ್‌ಗಳು, ಇನ್ ಯಾರ್ಡ್, ಪಿಟ್‌ಲೈನ್ ಮತ್ತು ಮೊದಲು ಹಿರಿಯ ವಿಭಾಗ ಇಂಜಿನೀಯರ್ / ವರ್ಕ್ / ಎಂ / ಹುಬ್ಬಳ್ಳಿ ಅವರ ನಿಯಂತ್ರಣದಲ್ಲಿದ್ದ ಇತರ ಪ್ರದೇಶಗಳು (ವಲಯ–11).	ರೂ. 30,77,020/-
15	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಇಂಜಿನೀಯರ್ / ಪಶ್ಚಿಮ / ಹುಬ್ಬಳ್ಳಿ ವಿಭಾಗ: (ಹೊರತುಪಡಿಸಿ) ಅಳ್ನಾವರದಿಂದ ಅಂಬೇವಾಡಿ (ಸೇರಿದಂತೆ) (ವಲಯ–12).	ರೂ. 11,68,682/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **18–08–2022, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/251/AAV/PRB/SWR/2022-23 ಹಿರಿಯ ವಿಭಾಗೀಯ ಇಂಜಿನೀಯರ್/ಕೋ–ಆರ್ಡ್/ಹುಬ್ಬಳ್ಳಿ

S.W.Railways sw_rly SWRRLY southwesternrailway SWRRLY

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ

ನಾಗೇಶ ಬಿಲ್ಡಿಂಗ್, ಕೃಷ್ಣಸ್ವಾಮಿ ದೇವಸ್ಥಾನದ ಎದುರುಗಡೆ ರಸ್ತೆ, ಕೋಟೆ,
ಹಾರೋಹಳ್ಳಿ - 562112. ದೂ: 080-29561068, ಇಮೇಲ್: cdpoharohalli@gmail.com

ಸಂಖ್ಯೆ : ಶಿಅಯೋ/ಹಾ/ಕೋಮೊ/ಟೆಂಡರ್/2022–23/112 ದಿನಾಂಕ : 20–07–2022

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ – 2000 ರ ಅನ್ವರ 2022–23 ನೇ ಆರ್ಥಿಕ ವರ್ಷದ ಸಾಲಿಗೆ ಶಿಶು ಅಭಿವೃದ್ಧಿ ಯೋಜನೆ, ಹಾರೋಹಳ್ಳಿ ಅಂಗನವಾಡಿ ಕೇಂದ್ರಗಳಿಗೆ ಈ ಕೆಳಗೆ ನಮೂದಿಸಿರುವ ಸರಬರಾಜು / ಸೇವೆ ಒದಗಿಸಲು ಅಂಗೀಕೃತ ಹಾಗೂ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1) ವಿವರ : 2022–23 ನೇ ಸಾಲಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಹಾರೋಹಳ್ಳಿ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆಗಳನ್ನು ಸರಬರಾಜು ಮಾಡುವುದು.

2) ಅರ್ಜಿಗಳನ್ನು https://eproc.karnataka.gov.in ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಎಲ್ಲಾ ಟೆಂಡರ್ ನಮೂನೆಗಳನ್ನು ದಿನಾಂಕ : 20–08–2022 ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಸ್ವೀಕೃತವಾದ ಅರ್ಜಿಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 22–08–2022 ರ ಪೂರ್ವಾಹ್ನ 12.00 ಗಂಟೆಗೆ, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಮನಗರ ಕಛೇರಿಯಲ್ಲಿ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲು ನಿಗದಿಗೊಳಿಸಲಾಗಿದೆ.

ದೂರವಾಣಿ ಸಂಖ್ಯೆ : 080–2956 1068 / 96115 34596.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ,
ಹಾರೋಹಳ್ಳಿ.

ಡಿಐಪಿಆರ್/ರಾಮನಗರ/143/ಮಣಿಪಾಲ್/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ರಾಮನಗರ ವಿಭಾಗ, ಸಂಚಾರ ಶಾಖೆ, ರಾಮನಗರ

ಸಂ: ಕ.ರಾ.ಸಾ.ರಾನವಿ.ಸಂ.ವಾ/1009/1010/22–23 ದಿನಾಂಕ: 15.07.2022

ಸಂಧಾನ ಪ್ರಕಟಣೆ ಸಂಖ್ಯೆ: 05 & 06/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಆನೇಕಲ್, ಕೋಡಿಹಳ್ಳಿ, ದೊಡ್ಡಮರಳವಾಡಿ, ಕನಕಪುರ ಹಾಗೂ ಮಾಗಡಿ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಹೋರ್ಡಿಂಗ್ಸ್ / ಗ್ಲೋಸೈನ್ / ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿ: 04.08.2022ರಂದು 15:00 ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು / ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು ದಿನಾಂಕ: 15.07.2022 ರಿಂದ ದಿನಾಂಕ: 03.08.2022ರ 15:00 ಗಂಟೆಗಳವರೆಗೆ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 7760880861 ಹಾಗೂ 7760990852.

ಸಹಿ/–,
ವಿಭಾಗೀಯ ನಿಯಂತ್ರಣಾಧಿಕಾರಿ

ವಾಸಾಸಂಇ/ವಾಪ್ರ/ಎಲ್‌ಸಿ/1472/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹೆರಿಗೆ ಸೌಲಭ್ಯ ₹50 ಸಾವಿರಕ್ಕೆ ಏರಿಕೆ • ಮೃತ ಕಾರ್ಮಿಕರ ಅವಲಂಬಿತರಿಗೆ ₹5 ಲಕ್ಷ ಪರಿಹಾರ

ಕಟ್ಟಡ ಕಾರ್ಮಿಕರಿಗೆ ಭರಪೂರ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮಗಳಿಗೆ ತಿದ್ದುಪಡಿ ಮಾಡಲು ಸಚಿವ ಸಂಪುಟ ಸಭೆ ನೀಡಿದೆ.

ಇದರಿಂದಾಗಿ ಕಾರ್ಮಿಕರ ಧನ ಸಹಾಯ, ಸಾಮಾಜಿಕ ಭದ್ರತೆ ಯೋಜನೆಗಳ ಮೊತ್ತ ಹೆಚ್ಚಳ ವಾಗಲಿದೆ. ಅಲ್ಲದೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಎಲ್ಲ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬಹುದು ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ತಿದ್ದುಪಡಿಯಲ್ಲಿ ಅಂಶಗಳು:

- ಪಿಂಚಣಿ ಸೌಲಭ್ಯವನ್ನು ₹2,000 ದಿಂದ ₹3,000 ಕ್ಕೆ ಹೆಚ್ಚಳ
- ಗೃಹ ಭಾಗ್ಯ ಸೌಲಭ್ಯದಡಿ 21 ರಿಂದ 50 ವರ್ಷದ ನೋಂದಾಯಿತ ಫಲಾನುಭವಿಗಳಿಗೆ 10 ಕಂತುಗಳಲ್ಲಿ ಮನೆ ಕಟ್ಟಲು ಸಾಲ ನೀಡಲು ನಿಯಮಗಳ ಸರಳೀಕರಣ
- ಹೆರಿಗೆ ಸೌಲಭ್ಯದಡಿ ಸಹಾಯಧನ ₹50 ಸಾವಿರಕ್ಕೆ ಹೆಚ್ಚಳ
- ಅಂತಿಮ ಸಂಸ್ಕಾರ ವೆಚ್ಚ ಸೌಲಭ್ಯದ ಅಡಿ ಸಹಾಯ ಧನ ₹50,000 ದಿಂದ ₹71,000 ಕ್ಕೆ ಹೆಚ್ಚಳ. ಕೋವಿಡ್‌ನಿಂದ ಫಲಾನುಭವಿ ಮೃತಪಟ್ಟರೆ ಅವಲಂಬಿತರಿಗೆ ₹2 ಲಕ್ಷ ಸಹಾಯಧನ
- ಫಲಾನುಭವಿಗಳ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ತರಬೇತಿ, ಕಲಿಕಾ ಕಿಟ್, ಕಂಪ್ಯೂಟರ್, ಲ್ಯಾಪ್‌ಟಾಪ್ ಮತ್ತು ಟ್ಯಾಬ್ ವಿತರಣೆ
- ವೈದ್ಯಕೀಯ ಸೌಲಭ್ಯದಡಿ ಸಹಾಯಧನ ₹10,000 ದಿಂದ ₹20,000 ಕ್ಕೆ ಹೆಚ್ಚಳ, ಕಾರ್ಮಿಕರು ಕೆಲಸ ನಿರ್ವಹಿಸುವ ಸ್ಥಳದಲ್ಲಿ ಸಂಚಾರಿ ವೈದ್ಯಕೀಯ ಘಟಕಗಳ ಸ್ಥಾಪನೆ, ಅವಶ್ಯಕತೆ ಇದ್ದಾಗ ಪೌಷ್ಟಿಕ ಆಹಾರ ಕಿಟ್‌ಗಳ ವಿತರಣೆ.
- ಫಲಾನುಭವಿ ಕೆಲಸ ಮಾಡುವ ಸ್ಥಳದಲ್ಲಿ ಅಪಘಾತದಿಂದ ಮೃತಪಟ್ಟರೆ ಅವಲಂಬಿತರಿಗೆ ಪರಿಹಾರ ₹2 ಲಕ್ಷದಿಂದ ₹5 ಲಕ್ಷಕ್ಕೆ ಏರಿಕೆ
- ಮದುವೆ ಸಹಾಯಧನದ ಮೊತ್ತ ₹50,000 ದಿಂದ ₹60,000 ಕ್ಕೆ ಏರಿಕೆ
- ಅನಿಲ ಭಾಗ್ಯ ಸೌಲಭ್ಯವನ್ನು ಕೈಬಿಡಲಾಗುವುದು. ಕೆಎಸ್‌ಆರ್‌ಟಿಸಿ ಸೌಲಭ್ಯದಡಿ ಫಲಾನುಭವಿಗಳಿಗೆ ರಾಜ್ಯದಾದ್ಯಂತ ಕೆಎಸ್‌ಆರ್‌ಟಿಸಿ ಬಸ್‌ಪಾಸ್ ಸೌಲಭ್ಯ ಒದಗಿಸುವುದು
- ಯೋಜನೆಗಳ ಫಲಾನುಭವಿಗಳು ನೋಂದಣಿ ಸಮಯದಲ್ಲಿ ಮತ್ತು ಮಂಡಳಿಗೆ ಪಾವತಿಸ ಬೇಕಾದ ವಂತಿಗೆಯನ್ನು ಕೈಬಿಡುವುದು, ಅನರ್ಹ ಕಾರ್ಮಿಕರು ನೋಂದಣಿ ಮಾಡುವುದನ್ನು ತಡೆಗಟ್ಟುವುದು
- ಮಂಡಳಿಯ ಕಾರ್ಯದರ್ಶಿಗಳಿಗೆ ಆರ್ಥಿಕ ಇಲಾಖೆ ನಿಗದಿ ಮಾಡಿರುವ ವಿತ್ತಾಧಿಕಾರ ₹2 ಕೋಟಿಯಿಂದ ₹2.5 ಕೋಟಿಗೆ ಹೆಚ್ಚಿಸುವುದು

ವಿದ್ಯಾ ವಿಕಾಸ ಯೋಜನೆಗೆ ₹132 ಕೋಟಿ

2022–23 ನೇ ಶೈಕ್ಷಣಿಕ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ಸರ್ಕಾರಿ ಶಾಲೆಗಳ 1 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಶೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್ಸ್‌ಗಳನ್ನು ವಿತರಿಸಲು ₹132 ಕೋಟಿ ಅನುದಾನಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

- ಸರ್ಕಾರಿ ಪದವಿ ಕಾಲೇಜುಗಳಿಗೆ 1,152 ಡಿ ದರ್ಜೆ ನೌಕರರನ್ನು ಹೊರ ಗುತ್ತಿಗೆಯಡಿ ನೇಮಕಕ್ಕೆ ಒಪ್ಪಿಗೆ
- ಚಿಕ್ಕಮಗಳೂರು ಜಿಲ್ಲೆ ಕತ್ರಿಗೆರೆ ಗ್ರಾಮದ 41 ಎಕರೆ ಗೋಮಾಳ ಜಮೀನು ಪ್ರಬೋಧಿನಿ ಗುರುಕುಲ ಟ್ರಸ್ಟ್‌ಗೆ 30 ವರ್ಷಗಳಿಗೆ ಗುತ್ತಿಗೆ ನೀಡಲು ಅನುಮೋದನೆ. ಶಿಕ್ಷಣ, ಕೃಷಿ ಮುಂತಾದ ಚಟುವಟಿಕೆಗಳಿಗಾಗಿ ಟ್ರಸ್ಟ್‌ಗೆ ಜಮೀನು ಗುತ್ತಿಗೆ ನೀಡಲಾಗಿದೆ.

ಲಾಗ್‌ಆಫ್ ಮಾಡಿ ಚಳವಳಿ ನಡೆಸಿದ ಡೆಲಿವರಿ ಪಾರ್ಟನರ್‌ಗಳು

ಡೆಲಿವರಿ ಪಾರ್ಟ್‌ನರ್ಸ್‌ಗಳಿಂದ ಲಾಗ್‌ಆಫ್ ಚಳವಳಿ

ಬೆಂಗಳೂರು: ಕಾರ್ಮಿಕ ಸ್ಥಾನಮಾನಕ್ಕೆ ಒತ್ತಾಯಿಸಿ ಆ್ಯಪ್ ಆಧಾರಿತ ಆಹಾರ ಪೂರೈಕೆ ಕಂಪನಿಗಳಲ್ಲಿ(ಸ್ವಿಗ್ಗಿ, ಜೊಮ್ಯಾಟೊ) ಕೆಲಸ ಮಾಡುವ ಡೆಲಿವರಿ ಪಾರ್ಟ್‌ನರ್‌ಗಳು ಲಾಗ್‌ಆಫ್ ಚಳವಳಿ ಆರಂಭಿಸಿದ್ದಾರೆ.

ಕೆಲಸದ ಸಮಯ, ಕೆಲಸದ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಯಾಗಿದ್ದು, ಪೇಔಟ್ ಕಡಿತ, ಔಟ್ ಆಫ್ ಝೋನ್ ಡೆಲಿವರಿ, ಸರ್ಜ್ ಪೇ ಕಡಿತ ಸೇರಿ ಹಲವು ಸಮಸ್ಯೆಗಳನ್ನು ಡೆಲಿವರಿ ಪಾರ್ಟ್‌ನರ್‌ಗಳು ಎದುರಿಸುತ್ತಿದ್ದಾರೆ.

‘80ರಿಂದ 100 ಕಿಲೋ ಮೀಟರ್ ಕ್ರಮಿಸುವುದರೊಳಗೆ ತಮ್ಮ ದೈನಂದಿನ ಗುರಿ ತಲುಪುತ್ತಿದ್ದ ಇವರು, ಈಗ ದಿನಕ್ಕೆ 220 ಕಿಲೋ ಮೀಟರ್ ಕ್ರಮಿಸಿದರೂ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ. ಕಿಲೋ ಮೀಟರ್‌ಗೆ ₹5 ನೀಡಲಾಗುತ್ತಿದ್ದು, ಬೆಲೆ ಏರಿಕೆ ನಡುವೆ ಜೀವನ ಸಾಗಿಸಲು ಕಷ್ಟ ಪಡುತ್ತಿದ್ದಾರೆ’ ಎಂದು ಡೆಲಿವರಿ ಪಾರ್ಟ್‌ನರ್‌ಗಳ ಪರ ಹೋರಾಟ ನಡೆಸುತ್ತಿರುವ ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್‌ನರ್ ಯೂನಿಯನ್(ಯುಎಫ್‌ಡಿಪಿಯು) ತಿಳಿಸಿದೆ.

‘ಕಾರ್ಮಿಕ ಸ್ಥಾನಮಾನಕ್ಕೆ ಒತ್ತಾಯಿಸಿ 2019ರಿಂದ ಹೋರಾಟ ನಡೆಸುತ್ತಿದ್ದಾರೆ. ಶಾಸನ ರೂಪಿಸಬೇಕೆಂಬ ಬೇಡಿಕೆಗೆ ಸರ್ಕಾರ ಇನ್ನೂ ಕಿವಿಗೊಟ್ಟಿಲ್ಲ. ಈ ಸಂದರ್ಭದಲ್ಲಿ ಬೇಡಿಕೆ ಈಡೇರುವ ತನಕ ಲಾಗ್‌ಆಫ್ ಚಳವಳಿ ನಡೆಸಲು ಯೂನಿಯನ್ ಕರೆ ನೀಡಿದೆ’ ಎಂದು ಯುಎಫ್‌ಡಿಪಿಯು ಅಧ್ಯಕ್ಷ ವಿನಯ ಸಾರಥಿ ತಿಳಿಸಿದ್ದಾರೆ.

ದೇಗುಲಗಳ ಜೀರ್ಣೋದ್ಧಾರಕ್ಕೆ ಅನುದಾನ ಬಿಡುಗಡೆ

ಬೆಂಗಳೂರು: ರಾಜ್ಯದ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ರಾಜ್ಯ ಸರ್ಕಾರವು ₹ 106.85 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ವಿವಿಧ ವಿಧಾನಸಭಾ ಕ್ಷೇತ್ರಗಳ 105 ದೇವಸ್ಥಾನಗಳ ಕಾಮಗಾರಿಗೆ ನಿಗದಿತ ಮೊತ್ತದಲ್ಲಿ ಶೇ 50ರಷ್ಟು ಅನುದಾನವನ್ನು ಈ ಹಿಂದೆ ಬಿಡುಗಡೆ ಮಾಡಲಾಗಿತ್ತು. 2ನೇ ಕಂತಿನ ಅನುದಾನವನ್ನು ಶುಕ್ರವಾರ ಧಾರ್ಮಿಕ ದತ್ತಿ ಇಲಾಖೆಗೆ ಬಿಡುಗಡೆಗೊಳಿಸಿದೆ. ಈ ಹಿಂದೆ ₹ 116 ಕೋಟಿ ಅನುದಾನವನ್ನು ಜೀರ್ಣೋದ್ಧಾರಕ್ಕೆ ಬಿಡುಗಡೆ ಮಾಡಿತ್ತು.

ರಾಜ್ಯದ ಬಹುತೇಕ ದೇಗುಲಗಳ ಅಭಿವೃದ್ಧಿಗೆ ₹ 2 ಕೋಟಿ ನಿಗದಿಯಾಗಿದೆ. ನೆಹರು ಓಲೇಕಾರ್ ಅವರ ಹಾವೇರಿಯ ಕ್ಷೇತ್ರಕ್ಕೆ ₹ 10 ಕೋಟಿ, ಗೋವಿಂದ ಕಾರಜೋಳ ಅವರ ಮುಧೋಳ ಕ್ಷೇತ್ರಕ್ಕೆ ₹ 8 ಕೋಟಿ, ಕೌಜಲಗಿ ಮಹಾಂತೇಶ ಶಿವಾನಂದ ಅವರ ಬೈಲಹೊಂಗಲ ಕ್ಷೇತ್ರಕ್ಕೆ ₹ 75 ಲಕ್ಷ ನಿಗದಿಯಾಗಿತ್ತು. ರೂಪಾಲಿ ನಾಯ್ಕ್ ಅವರ ಕಾರವಾರ ಕ್ಷೇತ್ರಕ್ಕೆ ₹ 4 ಕೋಟಿ ಅನುದಾನ ನಿಗದಿಯಾಗಿದೆ. ಬೆಳಗಾವಿ ಗ್ರಾಮೀಣ ಭಾಗದ ಲಕ್ಷ್ಮಿ ಹೆಬ್ಬಾಳ್ಕರ್ ಕ್ಷೇತ್ರಕ್ಕೆ ₹ 2 ಕೋಟಿ ನಿಗದಿಯಾಗಿತ್ತು.

‘ಅವಧಿಪೂರ್ವ ಚುನಾವಣೆಗೆ ಸಿದ್ಧತೆ’

ಬೆಂಗಳೂರು: ಬಿಜೆಪಿಯು ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆಗೆ ಸಿದ್ಧತೆ ಮಾಡುತ್ತಿದೆ. ಅದಕ್ಕಾಗಿಯೇ ತರಾತುರಿಯಲ್ಲಿ ಸಂಪುಟ ಸಭೆ ನಡೆಸಿ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಶುಕ್ರವಾರದ ಸಂಪುಟ ಸಭೆಯನ್ನು ಗಮನಿಸಿದರೆ ಬಿಜೆಪಿಯು ಈ ವರ್ಷದ ಡಿಸೆಂಬರ್ ವೇಳೆಗೆ ಚುನಾವಣೆ ಎದುರಿಸಲು ಸಜ್ಜಾಗುತ್ತಿರುವಂತೆ ಕಾಣುತ್ತಿದೆ. ಯಾವುದೇ ಸಂದರ್ಭದಲ್ಲಿ ಚುನಾವಣೆ ಬಂದರೂ ನಾವು ಸಿದ್ಧ’ ಎಂದರು.

‘ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ವಿಚಾರಣೆ ನಡೆಸುವುದನ್ನು ವಿರೋಧಿಸಿ ಕಾಂಗ್ರೆಸ್‌ನವರು ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನೆಗಳಿಂದ ಅನುಕಂಪ ಗಿಟ್ಟಿಸಲು ಸಾಧ್ಯವಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಲ್ಲ ಪಕ್ಷಗಳೂ ಚುನಾವಣೆ ಬಂದಾಗ ಜಾತಿಯ ಅಸ್ತ್ರ ಬಳಸುತ್ತವೆ. ಆದರೆ, ಒಕ್ಕಲಿಗರು ಸರಿಯಾಗಿ ಯೋಚಿಸಿ ನಿರ್ಧಾರ ಮಾಡುತ್ತಾರೆ. ಯಾವತ್ತೂ ಪ್ರಾಮಾಣಿಕರನ್ನೇ ಬೆಂಬಲಿಸುತ್ತಾರೆ ಎಂದರು.

ಉದಯಭಾನು ಕಲಾ ಸಂಘದ ಸುವರ್ಣ ಮಹೋತ್ಸವ

‘ಸಂಕೀರ್ಣ ಸವಾಲುಗಳ ಮಧ್ಯೆ ಮಾತೃಭಾಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ, ತಂತ್ರಜ್ಞಾನದ ಫಲವಾಗಿ ಕಿರಿದಾಗುತ್ತಿರುವ ವಿಶ್ವ, ಬದಲಾದ ಕಾಲಘಟ್ಟದಲ್ಲಿ ಮಾತೃಭಾಷೆಯೂ ಸಂಕೀರ್ಣ ಸವಾಲುಗಳನ್ನು ಎದುರಿಸುತ್ತಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮಾಜಿ ಅಧ್ಯಕ್ಷ ಡಾ.ಎ.ಎಸ್. ಕಿರಣ್ ಕುಮಾರ್ ಹೇಳಿದರು.

ರಾಮಕೃಷ್ಣ ಮಠ ಬಡಾವಣೆಯ ಉದಯಭಾನು ಕಲಾ ಸಂಘ ಹಮ್ಮಿಕೊಂಡಿದ್ದ ಸುವರ್ಣ ಮಹೋತ್ಸವ ಸ್ಮಾರಕ ಭವನ ಉದ್ಘಾಟನೆ, ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ’ದ ಎರಡು ಸಂಪುಟಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷಾ ಕಲಿಕೆಗೆ ಆದ್ಯತೆ ನೀಡಲಾಗುತ್ತಿದೆ. ಇಂತಹ ನಿರ್ಧಾರ ಮಕ್ಕಳ ಸುಲಲಿತ ಕಲಿಕೆಗೆ ಸಮಂಜಸವಾದರೂ, ಪ್ರಸ್ತುತ ಸನ್ನಿವೇಶದಲ್ಲಿ ದೇಶ, ಭಾಷೆಯ ಗಡಿಗಳನ್ನು ಮೀರಿ ಇಂದು ವೈವಾಹಿಕ ಜೀವನದ ಆಯ್ಕೆ ನಡೆಯುತ್ತಿದೆ. ತಂದೆಯದೇ ಬೇರೆ, ತಾಯಿಯದೆ ಬೇರೆ, ಬಂಧು ಬಳಗಗಳದೇ ಬೇರೆ ಮಾತೃಭಾಷೆಗಳಾಗಿವೆ. ಇಂತಹ ಸಮಯದಲ್ಲಿ ಬಹುಭಾಷೆಗಳ ಆಯ್ಕೆ ಅನಿವಾರ್ಯವಾಗಿದೆ. ಇಂಗ್ಲಿಷ್ ಶಿಕ್ಷಣದ ಮಹತ್ವದಿಂದಾಗಿ ನಮ್ಮಲ್ಲಿನ ದೃಷ್ಟಿಕೋನಗಳು ವಸಾಹತೀಕರಣಗೊಳ್ಳುತ್ತಿವೆ. ತಕ್ಷಣಕ್ಕೆ ಕೈಗೆಟಕುವ ಅನುವಾದದ ಅವಕಾಶಗಳು ಒಂದು ಭಾಷೆಯ ಅವಲಂಬನೆಯನ್ನು ಕಡಿಮೆ ಮಾಡಿವೆ ಎಂದು ವಿಶ್ಲೇಷಿಸಿದರು.

ಜೀವನದಲ್ಲಿ ಕೈಗೊಳ್ಳುವ ಎಲ್ಲ ಕೆಲಸಗಳಿಗೂ ಸೂಕ್ತ ಮಾಹಿತಿ ಅಗತ್ಯವಾಗಿರುತ್ತದೆ. ಅಂತಹ ಮಾಹಿತಿ ಒದಗಿಸುವುದು ವಿಜ್ಞಾನ. ಉದಯಭಾನು ಕಲಾ ಸಂಘ ಪುಸ್ತಕ ರೂಪದಲ್ಲಿ ಅವಕಾಶಗಳನ್ನು ಒದಗಿಸುವ ಪ್ರಯತ್ನ ಮಾಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಕನ್ನಡ ಭಾಷೆಯ ಪದಗಳನ್ನೇ ಕೃತಿಗಳಲ್ಲಿ ಬಳಸಬೇಕು ಎಂಬ ಧೋರಣೆ ಭಾಷೆಗೆ ಹಿಂಸೆ ಮಾಡುತ್ತದೆ. ಹೊರಗಿನಿಂದ ಬರುವ ಹೊಸ ಪದಗಳನ್ನು ಸ್ವೀಕರಿಸಿ, ಅವುಗಳನ್ನೇ ಕನ್ನಡಕ್ಕೆ ಒಗ್ಗಿಸಿಕೊಂಡರೆ ಭಾಷೆಯೂ ಸಮೃದ್ಧವಾಗುತ್ತದೆ. ಕಲಿಕೆಯೂ ಸರಳವಾಗುತ್ತದೆ ಎಂದು ಕಿವಿಮಾತು ಹೇಳಿದರು.

50 ವರ್ಷಗಳ ಅವಧಿಯಲ್ಲಿ ಸಂಘ ನಡೆದು ಬಂದ ದಾರಿ, ಕೈಗೊಂಡ ಸೇವಾ ಕಾರ್ಯಗಳ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.

ಕೃತಿ ಪ್ರಧಾನ ಸಂಪಾದಕರಾದ ಡಾ.ಎಂ.ಎಸ್. ಸುರೇಶ್, ಸಂಘದ ಅಧ್ಯಕ್ಷ ಶ್ರೀರಾಮೇಗೌಡ, ಸಂಸ್ಥಾಪಕ ಗೌರವ ಕಾರ್ಯದರ್ಶಿ ಎಂ.ನರಸಿಂಹ, ನಿವೃತ್ತ ನ್ಯಾಯಮೂರ್ತಿ ಎ.ಜೆ.ಸದಾಶಿವ ಮಾತನಾಡಿದರು. ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್, ಶಾಸಕ ಎಲ್.ಎ. ರವಿಸುಬ್ರಹ್ಮಣ್ಯ, ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಜನ್ಮಭೂಮಿ ಟ್ರಸ್ಟ್‌ನ ಮಾಜಿ ಅಧ್ಯಕ್ಷ ಬಿ.ಕೃಷ್ಣ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

ಉದಯಭಾನು ಕಲಾಸಂಘದ ಸುವರ್ಣ ಮಹೋತ್ಸವ ಸ್ಮಾರಕ ಭವನವನ್ನು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಹಾಗೂ ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್, ಇಸ್ರೋ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಶುಕ್ರವಾರ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಶ್ರೀರಾಮೇಗೌಡ, ಶಾಸಕ ಉದಯ ಗರುಡಾಚಾರ್, ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ, ಲೇಖಕ ಎಂ.ಎಸ್.ಸುರೇಶ್, ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಉದಯಭಾನು ಕಲಾಸಂಘದ ಕಾರ್ಯಾಧ್ಯಕ್ಷ ಬಿ.ಎಸ್.ಸತ್ಯನಾರಾಯಣ ಇದ್ದರು —ಪ್ರಜಾವಾಣಿ ಚಿತ್ರ

ನೀರವ್ ಮೋದಿಗೆ ಸೇರಿದ ಆಭರಣ, ಠೇವಣಿಗಳ ಜಪ್ತಿ ಮಾಡಿದ ಇ.ಡಿ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ದೇಶಭ್ರಷ್ಟ ವಜ್ರವ್ಯಾಪಾರಿ ನೀರವ್ ಮೋದಿ ಅವರಿಗೆ ಸೇರಿದ ₹ 253.62 ಕೋಟಿ ಮೌಲ್ಯದ ವಜ್ರ– ರತ್ನಗಳು, ಆಭರಣಗಳು ಹಾಗೂ ಬ್ಯಾಂಕ್ ಠೇವಣಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಜಪ್ತಿ ಮಾಡಿದೆ.

ನೀರವ್ ಮೋದಿ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣ ಕುರಿತು ನಡೆಯುತ್ತಿರುವ ತನಿಖೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಜಪ್ತಿ ಮಾಡಿರುವ ಈ ಆಭರಣಗಳು, ವಜ್ರಗಳು ಹಾಗೂ ಠೇವಣಿಗಳು ಹಾಂಗ್‌ಕಾಂಗ್‌ನಲ್ಲಿವೆ ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪ ಎದುರಿಸುತ್ತಿರುವ ನೀರವ್ ಮೋದಿ, ದೇಶ ತೊರೆದ ನಂತರ ಬ್ರಿಟನ್‌ನಲ್ಲಿ ತಲೆಮರೆಸಿಕೊಂಡಿದ್ದರು. ಅವರನ್ನು ಸದ್ಯ ಬ್ರಿಟನ್‌ನ ಜೈಲಿನಲ್ಲಿರಿಸಲಾಗಿದೆ. ಈ ವಂಚನೆ ಪ್ರಕರಣ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ.

ಎಫ್‌ಟಿಎಗೆ ಸಹಿ: ಬ್ರಿಟನ್ ಸಂಸದೀಯ ಸಮಿತಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಲಂಡನ್ (ಪಿಟಿಐ): ಭಾರತದೊಂದಿಗಿನ ‘ಮುಕ್ತ ವ್ಯಾಪಾರ ಒಪ್ಪಂದ’ಕ್ಕೆ (ಎಫ್‌ಟಿಎ) ತರಾತುರಿಯಲ್ಲಿ ಸಹಿ ಹಾಕುವುದಕ್ಕೆ ಸಂಬಂಧಿಸಿ ಬ್ರಿಟನ್‌ನ ಸಂಸದೀಯ ಸಮಿತಿ ಎಚ್ಚರಿಕೆ ನೀಡಿದೆ.

ಈ ಸಂಬಂಧ ಸಂಸದೀಯ ಸಮಿತಿ ವರದಿಯೊಂದನ್ನು ಸಲ್ಲಿಸಿದೆ. ನಿರ್ಗಮಿಸುವ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಏಪ್ರಿಲ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಭಾರತದೊಂದಿಗೆ ಮುಕ್ತ ವ್ಯಾಪಾರಕ್ಕೆ ಸಂಬಂಧಿಸಿ ಒಪ್ಪಂದಕ್ಕೆ ಸಹಿ ಹಾಕಲು ಆಗ ದೀಪಾವಳಿಯ ಗಡುವು ವಿಧಿಸಿದ್ದ ಜಾನ್ಸನ್ ಅವರ ಕ್ರಮವನ್ನು ಸಮಿತಿ ಪ್ರಶ್ನಿಸಿದೆ.

‘ಭಾರತ ತೀವ್ರವಾಗಿ ಬೆಳೆಯುವ ಆರ್ಥಿಕಶಕ್ತಿಯಾಗಿದ್ದು, ಬೃಹತ್ ಮಾರುಕಟ್ಟೆಯೂ ಆಗಿದೆ. ಆದರೆ, ತರಾತುರಿಯಲ್ಲಿ ಎಫ್‌ಟಿಎಗೆ ಸಹಿ ಹಾಕುವುದು ಅಪಾಯಕ್ಕೆ ಆಹ್ವಾನ ನೀಡಿದಂತೆ. ಗಡುವಿನೊಳಗೆ ಸಹಿ ಹಾಕಬೇಕು ಎಂಬ ಕಾರಣಕ್ಕೆ ಅಸಮರ್ಪಕ ಒಪ್ಪಂದವನ್ನು ಸ್ವೀಕರಿಸುವುದು ಸರಿಯಲ್ಲ’ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಬಂಡೀಪುರ ಅತಿಥಿಗೃಹ ನವೀಕರಣ: ತನಿಖೆಗೆ ಸಚಿವ ಕತ್ತಿ ಸೂಚನೆ

ಬೆಂಗಳೂರು: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಂಡೀಪುರ ಕ್ಯಾಂಪಸ್‌ನಲ್ಲಿರುವ ಗಜೇಂದ್ರ ಅತಿಥಿಗೃಹದ ನವೀಕರಣವನ್ನು ಅದ್ದೂರಿಯಾಗಿ ಕೈಗೊಂಡಿರುವ ಬಗ್ಗೆ ತನಿಖೆ ನಡೆಸಿ ಇದೇ 28ರ ಒಳಗೆ ವರದಿ ಸಲ್ಲಿಸುವಂತೆ ಅರಣ್ಯ ಸಚಿವ ಉಮೇಶ ಕತ್ತಿ ಸೂಚಿಸಿದ್ದಾರೆ.

‘ಅತಿಥಿಗೃಹ ನವೀಕರಣಕ್ಕೆ ಆಕ್ಷೇಪ’ ಶೀರ್ಷಿಕೆಯಡಿ ಜುಲೈ 15ರಂದು ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವಿಶೇಷ ವರದಿಯನ್ನು ಉಲ್ಲೇಖಿಸಿರುವ ಕತ್ತಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ಈ ಸೂಚನೆ ನೀಡಿದ್ದಾರೆ.

‘ಶುದ್ಧಕ್ರಯಕ್ಕೆ ಜಮೀನು ಖರೀದಿ’

ಚಾಮರಾಜನಗರ: ‘ಜಿಲ್ಲೆಯ ಬಿಳಿಗಿರಿರಂಗನಬೆಟ್ಟದ ಸರ್ವೆ ನಂಬರ್ 4ರಲ್ಲಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿಲ್ಲ. 1991ರಲ್ಲಿ ಉಪವಿಭಾಗಾಧಿಕಾರಿಯ ಅಧಿಕೃತ ಅನುಮತಿಯೊಂದಿಗೆ ಹಿಂದಿನ ವಾರಸುದಾರರಿಂದ ಶುದ್ಧ ಕ್ರಯಕ್ಕೆ ಜಮೀನು ಖರೀದಿಸಿದ್ದೇನೆ’ ಎಂದು ದೀನಬಂಧು ಸಂಸ್ಥೆಯ ಕಾರ್ಯದರ್ಶಿ ಜಿ.ಎಸ್.ಜಯದೇವ ಸ್ಪಷ್ಟನೆ ನೀಡಿದ್ದಾರೆ.

‘ಪ್ರಜಾವಾಣಿ’ಯ ಗುರುವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ‘ಅರಣ್ಯ ಒತ್ತುವರಿ: ಬಗೆಹರಿಯದ ಪ್ರಕರಣ’ ಎಂಬ ವಿಶೇಷ ವರದಿಯಲ್ಲಿ ತಮ್ಮ ಹೆಸರು ಪ್ರಸ್ತಾಪವಾಗಿರುವುದಕ್ಕೆ ಅವರು ಪ್ರತಿಕ್ರಿಯಿಸಿದ್ದಾರೆ. ‘ಯಾವುದೇ ಭೂಮಿಯನ್ನು ವಂಚಿಸಿ ವಶಪಡಿಸಿಕೊಳ್ಳುವ ಉದ್ದೇಶ ನನಗಿಲ್ಲ. ಜಮೀನು ಖರೀದಿ ಸಂಬಂಧದ ಎಲ್ಲ ಮಾಹಿತಿಗಳು ಹಾಗೂ ದಾಖಲೆಗಳನ್ನು ಅರಣ್ಯ ಹಾಗೂ ಕಂದಾಯ ಇಲಾಖೆಗಳಿಗೆ ಹಲವಾರು ಬಾರಿ ಒದಗಿಸಿದ್ದೇನೆ. ಸಮಸ್ಯೆ ಮರುಕಳಿಸುತ್ತಿದೆ’ ಎಂದು ತಿಳಿಸಿದ್ದಾರೆ.

ನಿಧನ ವಾರ್ತೆ

ರಂಗನಾಥ್ ರಾವ್



ಬೆಂಗಳೂರು: ಗೊಂಬೆಯಾಟ ಕಲಾವಿದರೂ ಆಗಿದ್ದ ನಿವೃತ್ತ ಶಿಕ್ಷಕ ಎಂ.ಆರ್. ರಂಗನಾಥ್ ರಾವ್ (90) ಅವರು ಶುಕ್ರವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಮಾಗಡಿ ತಾಲ್ಲೂಕಿನ ರಂಗನಾಥ್ ರಾವ್ 1981ರಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತಿ ಪಡೆದು, ಅಜ್ಜನ ಗೊಂಬೆಯಾಟ ಕಲೆಯನ್ನು ಮುಂದುವರಿಸಿದ್ದರು. ‘ರಂಗ ಪುತ್ಥಳಿ’ ತಂಡ ಸ್ಥಾಪಿಸಿ, ದೇಶ–ವಿದೇಶಗಳಲ್ಲಿ ಗೊಂಬೆಯಾಟ ಪ್ರದರ್ಶಿಸಿದ್ದರು.

ರಂಗನಾಥ್ ರಾವ್ ಸಾಧನೆಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ರಾಷ್ಟ್ರ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಯಕ್ಷಗಾನ ಅಕಾಡೆಮಿಯ ಪಾರ್ತಿಸುಬ್ಬ ಪ್ರಶಸ್ತಿ ಲಭಿಸಿದ್ದವು.

ಹೇಮಾವತಿ– ನೇತ್ರಾವತಿ: ಯೋಜನೆಯ ಅಧ್ಯಯನ ಬೇಡ ಎಂದಿದ್ದ ಕರ್ನಾಟಕ ಸರ್ಕಾರ

ನದಿಗಳ ಜೋಡಣೆಗೆ ಮರುಜೀವ

• ಮಂಜುನಾಥ ಹೆಬ್ಬಾರ್

ಮುಖ್ಯಾಂಶಗಳು
- ದೇಶದ 30 ನದಿಗಳ ಜೋಡಣೆಗೆ ಯೋಜನೆ
- ಸಾಧಕ ಬಾಧಕಗಳನ್ನು ಪರಿಶೀಲಿಸಿ ಯೋಜನೆ ಅನುಷ್ಠಾನ– ಭರವಸೆ
- ಬೇಡ್ತಿ– ವರದಾ ನದಿ ಜೋಡಣೆ ವಿರೋಧಿಸಿ ಹೋರಾಟ

ನವದೆಹಲಿ: ಕರ್ನಾಟಕ ಸರ್ಕಾರದ ಆಕ್ಷೇಪದ ನಡುವೆಯೂ ನೇತ್ರಾವತಿ–ಹೇಮಾವತಿ ನದಿಗಳ ಜೋಡಣೆಗೆ ಪೂರ್ವ ಕಾರ್ಯಸಾಧ್ಯತಾ ವರದಿಯನ್ನು ಕೇಂದ್ರ ಜಲ ಶಕ್ತಿ ಸಚಿವಾಲಯ ಸಿದ್ಧಪಡಿಸಿದ್ದು, ಯೋಜನೆ ಮತ್ತೆ ಮುನ್ನೆಲೆಗೆ ಬಂದಿದೆ.

ಈ ಎರಡು ನದಿಗಳು, ಬೇಡ್ತಿ–ವರದಾ, ಕಾವೇರಿ– ಪೆನ್ನಾರ್ ನದಿಗಳು ಸೇರಿದಂತೆ ದೇಶದ 30 ನದಿಗಳ ಜೋಡಣೆ ಮಾಡಲು ಉದ್ದೇಶಿಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ನಿರ್ದಿಷ್ಟ ಋತುವಿನಲ್ಲಿ ಉಕ್ಕಿ ಹರಿಯುವ 16 ನದಿಗಳನ್ನು ಹಾಗೂ ಹಿಮಾಲಯ ಕಣಿವೆಯ 14 ನದಿಗಳ ಜೋಡಣೆ ಮಾಡಲಾಗುತ್ತಿದೆ. ಈ ನದಿಗಳ ಜೋಡಣೆಗಾಗಿ ಕಾರ್ಯಸಾಧ್ಯತಾ ವರದಿ ಹಾಗೂ ಸಮಗ್ರ ಯೋಜನಾ ವರದಿಗಳನ್ನು ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ಜಲ ಶಕ್ತಿ ಖಾತೆಯ ರಾಜ್ಯ ಸಚಿವ ಬಿಶ್ವೇಶ್ವರ ಟುಡು ಅವರು ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದಾರೆ.

ನೇತ್ರಾವತಿ – ಹೇಮಾವತಿ ನದಿಗಳ ಜೋಡಣೆಗೆ ಪೂರ್ವ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗಿದೆ. ನೇತ್ರಾವತಿ–ಹೇಮಾವತಿ ಜೋಡಣೆಯಿಂದ 6.64 ಟಿಎಂಸಿ ಅಡಿ ನೀರನ್ನು ತಿರುವುಗೊಳಿಸಲು ಪ್ರಸ್ತಾಪಿಸಲಾಗಿದೆ. ಈ ಪ್ರದೇಶವು ಎತ್ತಿನಹೊಳೆ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕಾರಣ ನೇತ್ರಾವತಿ–ಹೇಮಾವತಿ ಜೋಡಣೆ ಯೋಜನೆ ಅನುಷ್ಠಾನದ ಬಗ್ಗೆ ಅಧ್ಯಯನ ಮುಂದುವರಿಸಬಾರದು ಎಂದು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಗೆ ಕರ್ನಾಟಕ ಸರ್ಕಾರ ಪತ್ರ ಬರೆದಿದೆ. ಫೆಬ್ರುವರಿಯಲ್ಲಿ ನಡೆದಿದ್ದ ಕರ್ನಾಟಕ ವಿಧಾನಸಭಾ ಅಧಿವೇಶನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ‘ಈ ಯೋಜನೆಯ ಅಗತ್ಯ ಇಲ್ಲ ಎಂಬುದಾಗಿ ಕೇಂದ್ರದ ಸಂಸ್ಥೆಗೆ ತಿಳಿಸಲಾಗಿದೆ’ ಎಂದು ಹೇಳಿದ್ದರು. ಆದರೆ, ಕೇಂದ್ರ ಸರ್ಕಾರ ಇಲ್ಲಿಯವರೆಗೆ ನಿಲುವು ಬದಲಿಸಿಲ್ಲ.

ಬೇಡ್ತಿ– ವರದಾ ನದಿ ತಿರುವು ಯೋಜನೆಗಳ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ರಾಷ್ಟ್ರೀಯ ಜಲ ಅಭಿವೃದ್ಧಿಗೆ ಸಂಸ್ಥೆಗೆ ಕರ್ನಾಟಕ ಸರ್ಕಾರ ಈಗಾಗಲೇ ಒಪ್ಪಿಗೆ ನೀಡಿದೆ. ಬೇಡ್ತಿ ನದಿಯಿಂದ 8.55 ಟಿಎಂಸಿ ಅಡಿ ನೀರನ್ನು ವರದಾ ನದಿಗೆ ತಿರುವುಗೊಳಿಸಲು ಪ್ರಾಥಮಿಕ ವರದಿಯನ್ನು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ತಯಾರಿಸಿದೆ. ಹೀರೇವಡ್ಡಟ್ಟಿ ಬಳಿ ನೀರನ್ನು ಶೇಖರಣೆ ಮಾಡಲು ಪೂರಕವಾಗಿ ಡಿಪಿಆರ್ ಸಿದ್ಧಪಡಿಸುವಂತೆ ಕರ್ನಾಟಕ ಸರ್ಕಾರ ಪತ್ರ ಬರೆದಿದೆ. ಈ ಯೋಜನೆಯ ಸಮಗ್ರ ಯೋಜನಾ ವರದಿಯ ಕರಡು ಸಿದ್ಧವಾಗಿದೆ. ಈ ಯೋಜನೆಯನ್ನು ವಿರೋಧಿಸಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಹೋರಾಟಗಳು ಆರಂಭವಾಗಿವೆ.

‘ತುಂಗಭದ್ರಾ ಎಡದಂಡೆ ಯೋಜನಾ ಪ್ರದೇಶವಾದ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗೆ ನೀರನ್ನು ಒಯ್ಯುವುದು ಯೋಜನೆಯ ಉದ್ದೇಶ. ಆ ಪ್ರದೇಶದಲ್ಲಿ ಅತಿ ನೀರಾವರಿಯಿಂದಾಗಿ ಹೊಲಗಳು ಜವುಳಾಗಿದೆ. ಮತ್ತೆ ಅಲ್ಲಿಗೆ ನೀರು ಹರಿಸುವ ಅಗತ್ಯ ಇಲ್ಲ. ಅಲ್ಲಿಗೆ ಹರಿಸುವಷ್ಟು ನೀರು ಬೇಡ್ತಿ ನದಿಯಲ್ಲಿ ಸಿಗುವುದಿಲ್ಲ’ ಎಂಬುದು ಪರಿಸರ ಹೋರಾಟಗಾರರ ವಾದ.

ಗೋದಾವರಿ–ಕೃಷ್ಣಾ, ಕೃಷ್ಣಾ–ಪೆನ್ನಾರ್, ಪೆನ್ನಾರ್– ಕಾವೇರಿ ನದಿಗಳ ಜೋಡಣೆ ಮಾಡಲು ಕಾರ್ಯಸಾಧ್ಯತಾ ವರದಿ ಹಾಗೂ ಡಿಪಿಆರ್ ಸಿದ್ಧಪಡಿಸಲಾಗಿದೆ. ಈ ನದಿಗಳ ಜೋಡಣೆಯಿಂದ 350 ಟಿಎಂಸಿ ಅಡಿಯಷ್ಟು ನೀರು ಸಿಗಲಿದೆ ಎಂದು ಕೇಂದ್ರ ಸರ್ಕಾರ ಅಂದಾಜಿಸಿದೆ.

‘ನದಿ ತಿರುಗಿಸಿ ಕೈಸುಟ್ಟುಕೊಂಡ ಬಹಳಷ್ಟು ನಿದರ್ಶನಗಳು ಜಗತ್ತಿನಲ್ಲಿ ಸಿಗುತ್ತವೆ. ರಷ್ಯಾದ ಅರಾಲ್ ಸಮುದ್ರ ಸೇರುವ ನದಿಗಳನ್ನು ತಿರುಗಿಸಿದ್ದರಿಂದ ಅದರ ಪರಿಸರ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಸಮುದ್ರದಲ್ಲಿ ಮೀನಿನ ಪ್ರಮಾಣ ಗಣನೀಯವಾಗಿ ಕಡಿಮೆ ಆಗಿದೆ. ಎತ್ತಿನಹೊಳೆ ಯೋಜನೆಯ ಸ್ಥಿತಿ ಏನಾಗಿದೆ ಎಂಬುದು ನಮ್ಮ ಕಣ್ಣ ಮುಂದೆಯೇ ಇದೆ’ ಎಂಬುದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಅವರ ಅಭಿಮತ.

‘ಈ ಯೋಜನೆಗಳನ್ನು ಏಕಾಏಕಿ ಜಾರಿಗೊಳಿಸುವುದಿಲ್ಲ. ಸಲಹೆಗಳನ್ನು ಸ್ವೀಕರಿಸಿ ಸಾಧಕ ಬಾಧಕಗಳನ್ನು ಪರಿಶೀಲಿಸಿ ಯೋಜನೆ ಅನುಷ್ಠಾನಗೊಳಿಸಲಾಗುತ್ತದೆ. ಆಯಾ ರಾಜ್ಯದ ಜತೆಗೆ ಒಪ್ಪಿಗೆ ಪಡೆದು ಒಪ್ಪಂದ ಮಾಡಿಕೊಂಡು ನದಿಗಳ ಜೋಡಣೆ ಮಾಡಲಾಗುತ್ತದೆ’ ಎಂದು ಸಚಿವ ಬಿಶ್ವೇಶ್ವರ ಟುಡು ಸ್ಪಷ್ಟಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಮುಸ್ಲಿಮರ ಕಟಿಂಗ್ ಶಾಪ್ ಬಂದ್ ಮಾಡಿಸಲು ಆಗ್ರಹ

ಬಾಗಲಕೋಟೆ: ‘ಬಾಂಗ್ಲಾ ದೇಶದಿಂದ ಬಂದ ಮುಸ್ಲಿಮರು ಸವಿತಾ ಸಮಾಜದವರ ಹೊಟ್ಟೆಯ ಮೇಲೆ ಹೊಡೆಯುತ್ತಿದ್ದಾರೆ. ಮುಸ್ಲಿಮರು ಕಟಿಂಗ್ ಶಾಪ್‌ಗಳನ್ನು ವಾರದಲ್ಲಿ ಬಂದ್ ಮಾಡದಿದ್ದರೆ, ನಾವೇ ಕಿತ್ತು ಹಾಕುತ್ತೇವೆ’ ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಎಚ್ಚರಿಕೆ ನೀಡಿದರು.

ಕೆರೂರು



ಗಲಭೆಯಲ್ಲಿ ಗಾಯಗೊಂಡು ಬಾಗಲಕೋಟೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅರುಣ ಕಟ್ಟಿಮನಿ ಹಾಗೂ ಇನ್ನಿತರ ಗಾಯಾಳುಗಳನ್ನು ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದೇಶದೆಲ್ಲೆಡೆ ಕ್ಷೌರಿಕ ಸಮಾಜ ಇದೆ. ಅವರಿಗೆ ಕ್ಷೌರ ಬಿಟ್ರೆ ಬೇರೆ ಏನೂ ಗೊತ್ತಿಲ್ಲ. ಆದ್ದರಿಂದ ಮುಸ್ಲಿಮರ ಅಂಗಡಿಗಳನ್ನು ಬಂದ್ ಮಾಡಿಸುವಂತೆ ಜಿಲ್ಲಾಧಿಕಾರಿಗೆ ಮನವಿ ನೀಡಿದ್ದೇವೆ’ ಎಂದರು.

‘ಎಲ್ಲಿಂದಲೋ ಬಂದು ದಾಖಲೆ ಇಲ್ಲದೆ ಅಂಗಡಿ ಹೇಗೆ ತೆರೆಯುತ್ತಾರೆ. ಅವರಿಗೆ ಬಂಡವಾಳ ಎಲ್ಲಿಂದ ಬರುತ್ತದೆ? ಹೀಗಾದರೆ ಸವಿತಾ ಸಮಾಜದವರು ಎಲ್ಲಿ ಹೋಗಬೇಕು? ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು’ ಎಂದು ಆಗ್ರಹಿಸಿದರು.

ಭೂ ಕುಸಿತ: ಲಘು ವಾಹನ ಸಂಚಾರಕ್ಕೆ ಅನುಮತಿ

ಕಾರವಾರ: ಹೊನ್ನಾವರ–ಮುಳಬಾಗಿಲು ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಘು ವಾಹನಗಳ ಸಂಚಾರಕ್ಕೆ ಅನುಮತಿ ನೀಡಿ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಅವರು ಶುಕ್ರವಾರ ಆದೇಶಿಸಿದ್ದಾರೆ.

ಇದರಿಂದ ಹೊನ್ನಾವರ– ಶಿವಮೊಗ್ಗ– ಬೆಂಗಳೂರು ನಡುವಿನ ಪ್ರಯಾಣಿಕರಿಗೆ ತುಸು ಅನುಕೂಲವಾಗಿದೆ.

ಗೇರುಸೊಪ್ಪ ಸೂಳೆಮುರ್ಕಿ ತಿರುವಿನ ಸಮೀಪ ಜುಲೈ 16ರಂದು ಭೂ ಕುಸಿತವಾಗಿತ್ತು. ಬಳಿಕ ಇಲ್ಲಿ ಎಲ್ಲ ರೀತಿಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿತ್ತು. ಇಲ್ಲಿ ತಾತ್ಕಾಲಿಕ ದುರಸ್ತಿ ಕಾರ್ಯ ಪೂರ್ಣಗೊಂಡಿದೆ. ಹೆದ್ದಾರಿಯಲ್ಲಿ ಲಘು ವಾಹನಗಳ ಸಂಚಾರಕ್ಕೆ ಅವಕಾಶ ನೀಡಬಹುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವರದಿ ನೀಡಿತ್ತು.

ಈ ಮಾರ್ಗದಲ್ಲಿ ಸಂಚರಿಸುವ ಭಾರಿ ವಾಹನಗಳು ಹಿಂದಿನ ಆದೇಶದಂತೆ ಕುಮಟಾ– ಶಿರಸಿ ಮಾರ್ಗದ ಮೂಲಕವೇ ಸಾಗಬೇಕು. ಕುಮಟಾ–ಬಡಾಳ ಘಟ್ಟ– ದೊಡ್ಮನೆ–ಸಿದ್ದಾಪುರ ಮಾರ್ಗವಾಗಿ ಚಲಿಸುವ ಬಸ್‌ಗಳು ಎಂದಿನಂತೆ ಇದೇ ಮಾರ್ಗದಲ್ಲಿ ಸಾಗಲು ಅವಕಾಶ ನೀಡಲಾಗಿದೆ.

ಕೈದಿಗಳ ಅವಧಿಪೂರ್ವ ಬಿಡುಗಡೆ ನಿಯಮಕ್ಕೆ ತಿದ್ದುಪಡಿ– ಸಚಿವ ಸಂಪುಟ ಸಭೆ ತೀರ್ಮಾನ

ಪೋಕ್ಸೊ ಅಪರಾಧಿ, ಕೊಲೆಗಡುಕರಿಗೆ ಬಿಡುಗಡೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ, ಸ್ತ್ರೀ ಶೋಷಣೆ, ಅತ್ಯಾಚಾರ ಹಾಗೂ ಒಂದಕ್ಕಿಂತ ಹೆಚ್ಚು ಕೊಲೆ ಅಪರಾಧದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುವ ಕೈದಿಗಳಿಗೆ ಇನ್ನು ಮುಂದೆ ಸನ್ನಡತೆ ಆಧಾರದಲ್ಲಿ ಅವಧಿಪೂರ್ವ ಬಿಡುಗಡೆ ಭಾಗ್ಯ ಇಲ್ಲ. ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ವಿವಿಧ ಕೇಂದ್ರ ಕಾರಾಗೃಹಗಳಲ್ಲಿ ಜೀವಾವಧಿ ಕೈದಿಗಳನ್ನು ಸನ್ನಡತೆಯ ಆಧಾರದಲ್ಲಿ ಅವಧಿಪೂರ್ವ ಬಿಡುಗಡೆ ಮಾಡುವ ಮಾರ್ಗಸೂಚಿಗೆ ತಿದ್ದುಪಡಿ ಮಾಡಲು ಒಪ್ಪಿಗೆ ನೀಡಲಾಯಿತು ಎಂದು ಹೇಳಿದರು.

ಇತರ ಪ್ರಮುಖ ತೀರ್ಮಾನಗಳು:
- ಬಳ್ಳಾರಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಕ್ರಿಯಾ ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಕಂಪ್ಲಿ ಪಟ್ಟಣದಲ್ಲಿ ₹20 ಕೋಟಿ ವೆಚ್ಚದಲ್ಲಿ 100 ಹಾಸಿಗೆಗಳ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿ ಮತ್ತು ಇದೇ ಜಿಲ್ಲೆಯ ಕುರುಗೋಡು ಪಟ್ಟಣದಲ್ಲಿ ₹20 ಕೋಟಿ ಅಂದಾಜು ವೆಚ್ಚದ 100 ಹಾಸಿಗೆಗಳ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಗೂ ಆಡಳಿತಾತ್ಮಕ ಅನುಮೋದನೆ.
- ₹15 ಕೋಟಿ ವೆಚ್ಚದಲ್ಲಿ ರೇಷ್ಮೆ ಇಲಾಖೆಯ ಸಮಗ್ರ ಗಣಕೀಕರಣ
- ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಹಿರಣ್ಯಕೇಶಿ ನದಿಯಿಂದ ನೀರನ್ನು ಎತ್ತಿ ಹುಕ್ಕೇರಿ ತಾಲ್ಲೂಕಿನ 19 ಕೆರೆಗಳಿಗೆ ಒದಗಿಸುವ ಕಾಮಗಾರಿಯನ್ನು ₹42.50 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಒಪ್ಪಿಗೆ
- ಬಾಗಲಕೋಟೆ ತಾಲ್ಲೂಕಿನ ಮುಚಖಂಡಿ ಕೆರೆಗೆ ಘಟಪ್ರಭಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುವ ಯೋಜನೆಯ 2 ನೇ ಹಂತದ ಕಾಮಗಾರಿಯನ್ನು ₹49 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆ
- ಕೊಪ್ಪಳ ಜಿಲ್ಲೆ ಕೊಪ್ಪಳ ತಾಲ್ಲೂಕಿನ ಭಾಗ್ಯನಗರ ಹತ್ತಿರ ಹರಿಯುವ ಹಿರೇಹಳ್ಳಕ್ಕೆ ಬ್ಯಾರೇಜ್ ನಿರ್ಮಾಣದ ಕಾಮಗಾರಿಯ ₹12.42 ಕೋಟಿಗಳ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ
- ಬೆಳಗಾವಿ ಜಿಲ್ಲೆ ಹುಕ್ಕೇರಿ ಪಟ್ಟಣಕ್ಕೆ ಒಳ ಚರಂಡಿ ವ್ಯವಸ್ಥೆ ಕಲ್ಪಿಸುವ ₹69.26 ಕೋಟಿ ಯೋಜನೆಗೆ ಒಪ್ಪಿಗೆ.
- ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನಲ್ಲಿ ದೇವತ್ಕಲ್ ಏತ ನೀರಾವರಿ ಯೋಜನೆ, ಕೆ.ತಳ್ಳಹಳ್ಳಿ ಏತ ನೀರಾವರಿ ಯೋಜನೆ, ಏದಲಬಾವಿ ಏತ ನೀರಾವರಿ ಯೋಜನೆ ಮತ್ತು ಬೈರಮಡ್ಡಿ ಫೀಡರ್ ಕಾಲುವೆ ನಿರ್ಮಾಣ ಕಾಮಗಾರಿಗಳ ಮೂಲಕ ಪುನಶ್ಚೇತನ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸುವ ₹119.18 ಕೋಟಿ ಕಾಮಗಾರಿಗೆ ಒಪ್ಪಿಗೆ.

‘ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ’

ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಮತ್ತು ವಿಸ್ತರಣೆಗಾಗಿ ಅಗತ್ಯವಿರುವ 240 ಎಕರೆ ಜಮೀನನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಒಪ್ಪಿಗೆ ನೀಡಿರುವ ಸಚಿವ ಸಂಪುಟ ಸಭೆ, ಮೈಸೂರು ವಿಮಾನ ನಿಲ್ದಾಣಕ್ಕೆ ‘ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ’ ಎಂದು ಮರುನಾಮಕರಣ ಮಾಡಲು ಒಪ್ಪಿಗೆ ನೀಡಿದೆ.

ರಾಷ್ಟ್ರೋತ್ಥಾನ ಪರಿಷತ್‌ಗೆ ರಿಯಾಯಿತಿ ದರದಲ್ಲಿ ನಿವೇಶನ

ಬಳ್ಳಾರಿಯ ಕುವೆಂಪು ನಗರ ಬಡಾವಣೆಯಲ್ಲಿ 24,008 ಚ.ಮೀ ನಾಗರಿಕ ಸೌಲಭ್ಯ ನಿವೇಶನವನ್ನು ರಾಷ್ಟ್ರೋತ್ಥಾನ ಪರಿಷತ್ತಿಗೆ ಮಂಜೂರು ಮಾಡಲಾಗಿದ್ದು, ಅದಕ್ಕೆ ಮಾರ್ಗಸೂಚಿ ಮೌಲ್ಯಕ್ಕಿಂತ ಶೇ 25 ರಷ್ಟು ರಿಯಾಯಿತಿ ನೀಡಲು ಒಪ್ಪಿಗೆ. ಈ ನಿವೇಶನದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಶಾಲೆಯನ್ನು ನಿರ್ಮಿಸಲಿದೆ.

ಜಲಜೀವನ್ ಮಿಷನ್‌ಗೆ ₹1,810 ಕೋಟಿ

- ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಹೇರೂರು ಮತ್ತು ಇತರೆ 14 ಗ್ರಾಮಗಳು, ಹುಲಿಹೈದರ್ ಮತ್ತು ಇತರೆ 12 ಗ್ರಾಮಗಳ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ, ₹43.15 ಕೋಟಿ, ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕು ಸತ್ತಿ ಮತ್ತು ಇತರೆ 8 ಗ್ರಾಮಗಳಿಗೆ ₹71 ಕೋಟಿ ವೆಚ್ಚದ ಯೋಜನೆ, ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕು ಹನೂರು ವಿಧಾನಸಭಾ ಕ್ಷೇತ್ರದ 291 ಜನವಸತಿಗಳಿಗೆ ಹಂತ–2 ರಡಿ ₹268 ಕೋಟಿ ವೆಚ್ಚದ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ ನೀಡಲಾಗಿದೆ.
- ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಹೊಸಹಳ್ಳಿ ಮತ್ತು ಇತರೆ 20 ಜನವಸತಿಗಳು ಮತ್ತು ಚನ್ನಗಿರಿ ತಾಲ್ಲೂಕಿನ ಜಿ.ಬಿ.ಹಳ್ಳಿ ಮತ್ತು ಇತರ ಇತರೆ 6 ಜನವಸತಿಗಳಿಗೆ ₹49 ಕೋಟಿ ವೆಚ್ಚದ ಯೋಜನೆ, ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಹಾರಕನಾಳು ಮತ್ತು ಇತರೆ 29 ಗ್ರಾಮಗಳಿಗೆ ₹34.81 ಕೋಟಿ ವೆಚ್ಚದ ಯೋಜನೆ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಚಿಕ್ಕಬೆಣಕಲ್ ಮತ್ತು 61 ಜನವಸತಿಗಳಿಗೆ ₹110 ಕೋಟಿ ಯೋಜನೆಗೆ ಅನುಮೋದನೆ.
- ಕೊಪ್ಪಳ ಜಿಲ್ಲೆ ಕೆರೆಹಳ್ಳಿ ಮತ್ತು ಇತರೆ 103 ಜನವಸತಿಗಳಿಗೆ ₹260 ಕೋಟಿ ಯೋಜನೆ, ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಯರಝರ್ವಿ ಹಾಗೂ ಇತರೆ 30 ಗ್ರಾಮಗಳಿಗೆ (35 ಜನವಸತಿಗಳು), ಬೈಲಹೊಂಗಲ ತಾಲ್ಲೂಕು 55 ಗ್ರಾಮಗಳಿಗೆ (12 ಜನವಸತಿಗಳು) ಮತ್ತು ಎಂ.ಕೆ.ಹುಬ್ಬಳ್ಳಿ ನಗರ ಪ್ರದೇಶಕ್ಕೆ ₹410 ಕೋಟಿ ವೆಚ್ಚದ ಯೋಜನೆ, ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿನ ದೇಗಾಂವ ಮತ್ತು ಇತರೆ 16 ಗ್ರಾಮಗಳಿಗೆ (29 ಜನವಸತಿ), ಖಾನಾಪೂರ ತಾಲ್ಲೂಕಿನಲ್ಲಿ 104 ಗ್ರಾಮಗಳಿಗೆ(135 ಜನವಸತಿ), ಬೆಳಗಾವಿ ತಾಲ್ಲೂಕಿನ 2 ಗ್ರಾಮಗಳ 2 ಜನ ವಸತಿಗಳಿಗೆ, ಕಿತ್ತೂರು ನಗರ ಪ್ರದೇಶಕ್ಕೆ ₹565 ಕೋಟಿ ವೆಚ್ಚದ ಯೋಜನೆಗೆ ಒಪ್ಪಿಗೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಂ. ನರಸಿಂಹಲು ವಡವಾಟಿ
ಖ್ಯಾತ ಕ್ಲಾರಿಯೋನೆಟ್ ವಾದಕರು, ರಾಯಚೂರು
ಸೆಲೆಬ್ರಿಟಿ LIVE

ಕ್ಲಾರಿಯೋನೆಟ್ ಏಕಲವ್ಯ
ಬೆಳಿಗ್ಗೆ 11 ರಿಂದ 12
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟ

ತಲೆದಂಡ, ಡೊಳ್ಳು, ಜೀಟಿಗೆಗೆ ರಾಷ್ಟ್ರಪ್ರಶಸ್ತಿ

‘ತಲೆದಂಡ’ದ ದೃಶ್ಯ

ನವದೆಹಲಿ (ಪಿಟಿಐ): 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಶುಕ್ರವಾರ ಪ್ರಕಟವಾಗಿದ್ದು, 2020ನೇ ಸಾಲಿನಲ್ಲಿ ಬಿಡುಗಡೆಯಾದ ಚಿತ್ರಗಳ ಪೈಕಿ ತಮಿಳಿನ ‘ಸೂರಾರೈ ಪೋಟ್ರು’ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಕನ್ನಡದ ‘ತಲೆದಂಡ’, ‘ಡೊಳ್ಳು’, ‘ನಾದದ ನವನೀತ’ ಹಾಗೂ ತುಳುವಿನ ‘ಜೀಟಿಗೆ’ ಚಿತ್ರಗಳು ರಜತ ಕಮಲ ಬಾಚಿಕೊಂಡಿವೆ.

ಈವರೆಗೂ ಪ್ರಶಸ್ತಿಗಳ ಪಟ್ಟಿಯಲ್ಲಿ ಸದಾ ಮುಂಚೂಣಿಯಲ್ಲಿರುತ್ತಿದ್ದ ಬಾಲಿವುಡ್ ಚಿತ್ರಗಳನ್ನು ಹಿಂದಿಕ್ಕಿ, ದಕ್ಷಿಣ ಭಾರತದ ಚಿತ್ರಗಳು ಈ ಬಾರಿ ಹೆಚ್ಚಿನ ಪ್ರಶಸ್ತಿಗಳನ್ನು ಬಾಚಿಕೊಂಡಿವೆ.

‘ಸೂರಾರೈ ಪೋಟ್ರು’ ಚಿತ್ರದ ನಟನೆಗಾಗಿ ಸೂರ್ಯ ಅತ್ಯುತ್ತಮ ನಟ ಹಾಗೂ ಅಪರ್ಣಾ ಬಾಲಮುರಳಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದಾರೆ. ಈ ಚಿತ್ರಕ್ಕಾಗಿ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿಯನ್ನು ಶಾಲಿನಿ ಉಷಾ ನಾಯರ್, ನಿರ್ದೇಶಕಿ ಸುಧಾ ಕೊಂಗರ ಹಂಚಿಕೊಂಡಿದ್ದಾರೆ. ಅತ್ಯುತ್ತಮ ಸಂಗೀತ ನಿರ್ದೇಶನ (ಜಿ.ವಿ.ಪ್ರಕಾಶ್ ಕುಮಾರ್) ಪ್ರಶಸ್ತಿಯೂ ಇದೇ ಚಿತ್ರಕ್ಕೆ ಲಭಿಸಿದೆ. ಹಿಂದಿಯ ‘ತಾನಾಜಿ – ದಿ ಅನ್‌ಸಂಗ್ ವಾರಿಯರ್’ ಚಿತ್ರಕ್ಕಾಗಿ ಅಜಯ್ ದೇವಗನ್ ‘ಅತ್ಯುತ್ತಮ ನಟ’ ಪ್ರಶಸ್ತಿಯನ್ನು ನಟ ಸೂರ್ಯ ಅವರ ಜೊತೆ ಹಂಚಿಕೊಂಡಿದ್ದಾರೆ.

ನಟ ದಿವಂಗತ ಸಂಚಾರಿ ವಿಜಯ್ ಅಭಿನಯದ ‘ತಲೆದಂಡ’ (ನಿರ್ದೇಶನ: ಪ್ರವೀಣ್ ಕೃಪಾಕರ್) ಚಿತ್ರವನ್ನು ಪರಿಸರ ಸಂರಕ್ಷಣೆ ಸಂಬಂಧಿತ ಅತ್ಯುತ್ತಮ ಚಲನಚಿತ್ರ ಎಂದು ಪರಿಗಣಿಸಲಾಗಿದೆ. ಪ್ರಶಸ್ತಿಯು ರಜತ ಕಮಲ ಮತ್ತು ₹ 1.50 ಲಕ್ಷ ನಗದು ಒಳಗೊಂಡಿದೆ. ಸಾಗರ್ ಪುರಾಣಿಕ್ ನಿರ್ದೇಶನದ ‘ಡೊಳ್ಳು’ ಚಿತ್ರವೂ ಅತ್ಯುತ್ತಮ ಕನ್ನಡ ಚಲನಚಿತ್ರ ವಿಭಾಗದಡಿ ರಜತ ಕಮಲಕ್ಕೆ ಭಾಜನವಾಗಿದೆ. ಪ್ರಶಸ್ತಿಯು ₹ 1 ಲಕ್ಷ ನಗದು ಒಳಗೊಂಡಿದೆ. ಅತ್ಯುತ್ತಮ ಧ್ವನಿಗ್ರಹಣಕ್ಕಾಗಿ ಇದೇ ಚಿತ್ರಕ್ಕೆ ಪ್ರಶಸ್ತಿ ಲಭಿಸಿದೆ. ಸಂವಿಧಾನದ 8ನೇ ಪರಿಚ್ಛೇದದ ಅಡಿ ಹೊರತಾದ ಭಾಷೆಗಳ ಚಿತ್ರಗಳ ವಿಭಾಗದಲ್ಲಿ ತುಳು ಚಿತ್ರ ‘ಜೀಟಿಗೆ’ಗೆ (ನಿರ್ದೇಶನ: ಸಂತೋಷ್ ಮಾಡ) ರಜತ ಕಮಲ ಒಲಿದಿದೆ. ಅತ್ಯುತ್ತಮ ಕಲೆ, ಸಂಸ್ಕೃತಿ ಆಧಾರಿತ ಚಿತ್ರ ವಿಭಾಗದ ಅಡಿ ಗಿರೀಶ್ ಕಾಸರವಳ್ಳಿ ನಿರ್ದೇಶನದ ‘ನಾದದ ನವನೀತ– ಡಾ.ಪಂಡಿತ್ ವೆಂಕಟೇಶ್ ಕುಮಾರ್’ ರಜತ ಕಮಲ ಪ್ರಶಸ್ತಿ ಪಡೆದಿದೆ.

ಮಲಯಾಳಂನ ‘ಅಯ್ಯಪ್ಪನುಂ ಕೋಷಿಯುಂ’ ಚಿತ್ರಕ್ಕಾಗಿ ದಿವಂಗತ ಕೆ.ಆರ್. ಸಚ್ಚಿದಾನಂದನ್ ಅವರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಬಂದಿದೆ. ಇದೇ ಚಿತ್ರದ ಸಾಹಸ ನಿರ್ದೇಶನಕ್ಕಾಗಿ ರಾಜಶೇಖರ್, ಮಾಫಿಯಾ ಸಸಿ ಹಾಗೂ ಸುಪ್ರೀಂ ಸುಂದರ್ ಅವರಿಗೆ ಉತ್ತಮ ಸಾಹಸ ನಿರ್ದೇಶಕ ಪ್ರಶಸ್ತಿ ಲಭಿಸಿದೆ. ಇದೇ ಚಿತ್ರದ ‘ಅಯ್ಯಪ್ಪನ್’ ಪಾತ್ರಕ್ಕಾಗಿ ಬಿಜು ಮೆನನ್ ಅವರಿಗೆ ಅತ್ಯುತ್ತಮ ಪೋಷಕ ನಟ ಹಾಗೂ ತಮಿಳು ಚಿತ್ರ ‘ಸಿವರಂಜಿನಿಯುಂ ಇನ್ನುಂ ಸಿಲಾ ಪೆಂಗಳುಂ’ನ ಅಭಿನಯಕ್ಕಾಗಿ ಲಕ್ಷ್ಮೀಪ್ರಿಯಾ ಚಂದ್ರಮೌಳಿ ಅವರಿಗೆ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಲಭಿಸಿದೆ.

ಚೊಚ್ಚಲ ನಿರ್ದೇಶನಕ್ಕಾಗಿ ನೀಡುವ ಇಂದಿರಾ ಗಾಂಧಿ ಪ್ರಶಸ್ತಿಯು ಮದೊನ್ನೆ ಅಶ್ವಿನ್ ಅವರಿಗೆ ‘ಮಂಡೇಲ’ (ತಮಿಳು) ಚಿತ್ರಕ್ಕಾಗಿ ಲಭಿಸಿದೆ. ಇದೇ ಚಿತ್ರಕ್ಕೆ ಅಶ್ವಿನ್ ಅವರಿಗೆ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿ ಲಭಿಸಿದೆ.

ಇತರ ವಿಭಾಗಗಳು: ಅತ್ಯುತ್ತಮ ಹಿನ್ನೆಲೆ ಗಾಯಕಿ: ನಂಚಮ್ಮ (ಚಿತ್ರ: ಅಯ್ಯಪ್ಪನುಂ ಕೋಶಿಯುಂ), ಅತ್ಯುತ್ತಮ ಹಿನ್ನೆಲೆ ಗಾಯಕ: ರಾಹುಲ್ ದೇಶಪಾಂಡೆ (ಚಿತ್ರ: ಮಿ ವಸಂತರಾವ್), ಅತ್ಯುತ್ತಮ ಛಾಯಾಗ್ರಹಣ: ಸುಪ್ರತಿಮ್ ಭೋಲ್ (ಚಿತ್ರ: ಅವಿಜಾತ್ರಿಕ್), ಅತ್ಯುತ್ತಮ ಸಂಕಲನಕಾರ: ಶ್ರೀಕರ ಪ್ರಸಾದ್ (ಸಿವರಂಜಿನಿಯುಂ ಇನ್ನುಂ ಸಿಲಾ ಪೆಂಗಳುಂ), ಅತ್ಯುತ್ತಮ ನಿರ್ಮಾಣ ವಿನ್ಯಾಸದ ಚಿತ್ರ: ಕಪ್ಪೆಲ (ಮಲಯಾಳಂ).

ಆಗಸ್ಟ್‌ನಲ್ಲಿ ‘ಡೊಳ್ಳು’ ತೆರೆಗೆ

‘ಕಾಲಕ್ಕೆ ತಕ್ಕ ಹಾಗೆ ಕಲೆ ಬದಲಾಗದೇ ಇದ್ದರೆ ಕಲೆ ನಾಶವಾಗುತ್ತದೆ’ ಎನ್ನುವ ಚಿತ್ರದಲ್ಲಿನ ಒಂದು ಸಂಭಾಷಣೆ ಈ ಚಿತ್ರ ನಿರ್ಮಾಣಕ್ಕೆ ಮತ್ತಷ್ಟು ಪ್ರೇರೇಪಿಸಿತು. ಆಗಸ್ಟ್‌ನಲ್ಲಿ ಸಿನಿಮಾವನ್ನು ದೊಡ್ಡ ಮಟ್ಟದಲ್ಲೇ ಬಿಡುಗಡೆ ಮಾಡುವ ಯೋಚನೆಯಲ್ಲಿದ್ದೇವೆ.

ಪವನ್ ಒಡೆಯರ್, ‘ಡೊಳ್ಳು’ ನಿರ್ಮಾಪಕ

‘ತಂಡಕ್ಕೆ ಸಿಕ್ಕ ಮನ್ನಣೆ’

ಇಂಥ ವಿಷಯ ಹೊಂದಿದ್ದ ಸಿನಿಮಾವನ್ನು ನಿರ್ಮಾಣ ಮಾಡುವುದಕ್ಕೆ ಪವನ್ ಒಡೆಯರ್ ಅವರು ಕಿಂಚಿತ್ತೂ ಹಿಂಜರಿಯಲಿಲ್ಲ. ಜನಪದ ಕಲೆಯೊಂದರ ಮೇಲೆ ಜಾಗತೀಕರಣದ ಪರಿಣಾಮವನ್ನು ಈ ಚಿತ್ರದ ಮುಖಾಂತರ ತೋರಿಸಿದ್ದೇವೆ. ಸ್ವಂತ ಅನುಭವ ಸೇರಿಸಿ ಕಥೆ ಮಾಡಿದ್ದೇನೆ.

ಸಾಗರ್ ಪುರಾಣಿಕ್, ‘ಡೊಳ್ಳು’ ನಿರ್ದೇಶಕ

‘ವಿಜಯ್‌ಗೆ ಅರ್ಪಣೆ’

ನಾನು ವೈಯಕ್ತಿಕವಾಗಿ ಸಂಚಾರಿ ವಿಜಯ್ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿದ್ದೆ. ಏಕೆಂದರೆ, ಚಿತ್ರದಲ್ಲಿ ಸೋಲಿಗ ಬುಡಕಟ್ಟು ಜನಾಂಗಕ್ಕೆ ಸೇರಿದ ಅರೆಬುದ್ಧಿಮಾಂದ್ಯ ‘ಕುನ್ನ’ ಎಂಬ ಪಾತ್ರದಲ್ಲಿ ವಿಜಯ್ ಪರಕಾಯ ಪ್ರವೇಶ ಮಾಡಿದ್ದರು. ಈ ಪ್ರಶಸ್ತಿಯನ್ನು ವಿಜಯ್ ಅವರಿಗೆ ಅರ್ಪಿಸುತ್ತೇನೆ

ಪ್ರವೀಣ್ ಕೃಪಾಕರ್, ‘ತಲೆದಂಡ’ ನಿರ್ದೇಶಕ

ಕನ್ನಡಿಗರಿಗೇ ಹೆಚ್ಚು ಉದ್ಯೋಗ

ಒಂದನೇ ಪುಟದಿಂದ...

‘ಬೃಹತ್ ಉದ್ಯಮ’ಗಳಲ್ಲಿ ಕನಿಷ್ಠ ಉದ್ಯೋಗದ ಮಿತಿಯನ್ನು 50 ರಿಂದ 60 ಕ್ಕೆ ಹೆಚ್ಚಿಸಲಾಗಿದೆ. ಹೆಚ್ಚುವರಿ ಉದ್ಯೋಗದ ಅಗತ್ಯತೆಯನ್ನು ಪ್ರತಿ ₹50 ಕೋಟಿ ಹೂಡಿಕೆಗೆ 35 ರಿಂದ 50 ಕ್ಕೆ ಅಂದರೆ ₹50 ಕೋಟಿಗೆ 50 ಉದ್ಯೋಗಗಳನ್ನು ಸೃಷ್ಟಿಸಬೇಕು ಎಂದು ಅವರು ತಿಳಿಸಿದರು.

ಅದೇ ರೀತಿ ‘ಮೆಗಾ ಉದ್ಯಮ’ಗಳಲ್ಲಿ ಕನಿಷ್ಠ ಉದ್ಯೋಗಗಳ ಮಿತಿಯನ್ನು 200 ರಿಂದ 260 ಕ್ಕೆ ಹೆಚ್ಚಿಸಲಾಗಿದೆ. ಹೆಚ್ಚುವರಿ ಉದ್ಯೋಗದ ಅಗತ್ಯತೆಯನ್ನು ಪ್ರತಿ ₹50 ಕೋಟಿ ಹೂಡಿಕೆಗೆ 35 ರಿಂದ 50 ಕ್ಕೆ ಅಂದರೆ ₹ 50 ಕೋಟಿಗೆ 50 ಉದ್ಯೋಗಗಳನ್ನು ಸೃಜಿಸಬೇಕು.

‘ಅಲ್ಟ್ರಾ ಮೆಗಾ ಉದ್ಯಮ’ಗಳಲ್ಲಿ ಕನಿಷ್ಠ ಉದ್ಯೋಗ ಮಿತಿಯನ್ನು 400 ರಿಂದ 510 ಕ್ಕೆ ಹೆಚ್ಚಿಸಲಾಗಿದೆ. ಇಲ್ಲೂ ಕೂಡ ಪ್ರತಿ ₹50 ಕೋಟಿ ಹೂಡಿಕೆಗೆ 35 ರಿಂದ 50 ಕ್ಕೆ ಅಂದರೆ ₹50 ಕೋಟಿಗೆ 50 ಉದ್ಯೋಗಗಳನ್ನು ಸೃಷ್ಟಿಸಬೇಕು. ‘ಸೂಪರ್ ಮೆಗಾ’ ಉದ್ಯಮಗಳಲ್ಲಿ ಕನಿಷ್ಠ ಉದ್ಯೋಗ ಮಿತಿಯನ್ನು 750 ರಿಂದ 1,000 ಹೆಚ್ಚಿಸಲಾಗಿದೆ. ಪ್ರತಿ ₹50 ಕೋಟಿ ಹೂಡಿಕೆಗೆ 35 ರಿಂದ 50 ಕ್ಕೆ ಅಂದರೆ ₹50 ಕೋಟಿಗೆ 50 ಉದ್ಯೋಗಗಳನ್ನು ಸೃಷ್ಟಿಸಬೇಕು. ಹೆಚ್ಚುವರಿಯಾಗಿ ಸೃಷ್ಟಿಸುವ ಉದ್ಯೋಗಗಳನ್ನು ಕನ್ನಡಿಗರಿಗೆ /ಸ್ಥಳೀಯರಿಗೆ ನೀಡಬೇಕು ಎಂದು ಹೇಳಿದರು.

ಅಲ್ಲದೇ, ಕಂಪನಿಗಳಿಂದ ಕೌಶಲ ತರಬೇತಿ ಸಂಸ್ಥೆ ಸ್ಥಾಪನೆಗೆ ಪ್ರೋತ್ಸಾಹಕಗಳನ್ನು ನೀಡಬೇಕು. ರಾಜ್ಯದಲ್ಲಿ ಉದ್ಯೋಗದ ಡೇಟಾಬೇಸ್ ಅನ್ನು ರಚಿಸಿ, ನಿರ್ವಹಿಸಬೇಕು ಎಂಬ ಅಂಶವನ್ನೂ ನೀತಿಯಲ್ಲಿ ಸೇರಿಸಲಾಗಿದೆ ಎಂದು ಮಾಧುಸ್ವಾಮಿ ಹೇಳಿದರು.

ಪರಿಸರ ಸೂಕ್ಷ್ಮ ವಲಯ: ಸಂಪುಟ ತಿರಸ್ಕಾರ

ಪಶ್ಚಿಮಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿ ಕೇಂದ್ರ ಸರ್ಕಾರ ಹೊರಡಿಸಿರುವ ಕರಡು ಅಧಿಸೂಚನೆಯನ್ನು ತಿರಸ್ಕರಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ.

‘ಈ ಅಧಿಸೂಚನೆ ಜಾರಿಯಾದರೆ ಪಶ್ಚಿಮಘಟ್ಟ ಪ್ರದೇಶದ ಜನತೆ ಸಂಕಷ್ಟಕ್ಕೆ ಸಿಲುಕುತ್ತಾರೆ ಎಂಬುದು ಸರ್ಕಾರದ ಸ್ಪಷ್ಟ ನಿಲುವು. ಹೀಗಾಗಿ, ಅಧಿಸೂಚನೆ ಒಪ್ಪಲು ಸಾಧ್ಯವಿಲ್ಲ ಮತ್ತು ಜನರನ್ನು ಒಕ್ಕಲೆಬ್ಬಿಸಲು ಸಾಧ್ಯವಿಲ್ಲ ಎಂಬ ಚರ್ಚೆಯೂ ನಡೆಯಿತು. ಈ ವಿಷಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು’ ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು.

ಮಳೆ ಬಾರದ್ದಕ್ಕೆ ಪೂರ್ಣಗೊಳ್ಳದ ಬಿತ್ತನೆ ಕಾರ್ಯ; ಅಲ್ಪಾವಧಿ ಬೆಳೆಗಳಿಗೆ ಕುತ್ತು

ಕೈಕೊಟ್ಟ ಮುಂಗಾರು; ಬಿತ್ತನೆಗೆ ಹಿನ್ನಡೆ

• ಮನೋಜಕುಮಾರ್ ಗುದ್ದಿ

ಮಳೆ ಕಥೆ– ವ್ಯಥೆ

ಕಲಬುರಗಿ: ವಾಡಿಕೆಯಂತೆ ಮುಂಗಾರು ಮಳೆ ಬಾರದ ಕಾರಣ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂಗಾರು ಹಂಗಾಮಿನ ಅಲ್ಪಾವಧಿಯ ಬೆಳೆಗಳ ಬಿತ್ತನೆ ವಿಳಂಬವಾಗಿದೆ. ಹೀಗಾಗಿ, ಹೆಸರು, ಉದ್ದು, ಸೋಯಾದಂತಹ ಬೆಳೆಗಳ ನಾಟಿ ಪ್ರಕ್ರಿಯೆ ನಡೆದಿಲ್ಲ.

ಕೆಲ ರೈತರು ಮಳೆ ತಡವಾಗಿದ್ದಕ್ಕೆ ನಾಟಿ ಮಾಡಲು ಹಿಂಜರಿದಿದ್ದಾರೆ. ಹೀಗಾಗಿ, ರೈತರಿಗೆ ಆಸರೆಯಾಗಿದ್ದ ಅಲ್ಪಾವಧಿಯ ಬೆಳೆಗಳೂ ಕೈಗೆ ಬಂದಿಲ್ಲ. ಮತ್ತೊಂದೆಡೆ ಕಲಬುರಗಿ ಜಿಲ್ಲೆಯ ಚಿಂಚೋಳಿ, ಕಾಳಗಿ, ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಬಸವನ ಹುಳುಗಳ ಬಾಧೆ ತೀವ್ರವಾಗಿದೆ. ಕಷ್ಟಪಟ್ಟು ಬೆಳೆಯಲಾಗಿದ್ದ ಉದ್ದು, ಹೆಸರು, ಸೋಯಾ ಕೈಗೆ ಬಾರದಂತಾಗಿದೆ. ಹೀಗಾಗಿ, ಈ ಬಾರಿ ಸಾಕಷ್ಟು ನಷ್ಟ ಉಂಟಾಗಿದೆ.

ಕಲಬುರಗಿ ಜಿಲ್ಲೆಯಲ್ಲಿ 7.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗುತ್ತದೆ. ಅದರಲ್ಲಿ ಉತ್ತಮ ಆದಾಯ ತರುವ ತೊಗರಿಯದ್ದೇ ಸಿಂಹಪಾಲು. ಇಡೀ ವರ್ಷ ಇದೊಂದೇ ಬೆಳೆ ನೆಚ್ಚಿಕೊಂಡ ರೈತರ ಸಂಖ್ಯೆ ಹೆಚ್ಚಿದೆ. ಜೂನ್ ಎರಡನೇ ವಾರದಲ್ಲಿ ಮಳೆಯಾದರೆ, ಅಲ್ಪಾವಧಿ ಬೆಳೆ ಬೆಳೆದು ಒಂದಷ್ಟು ಆದಾಯ ಪಡೆಯಲು ಸಾಧ್ಯವಾಗುತ್ತದೆ. ಆದರೆ, ಜೂನ್‌ನಲ್ಲಿ ಜಿಲ್ಲೆಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿಲ್ಲ. ಹೀಗಾಗಿ, ಸೋಯಾ, ಹೆಸರು, ಉದ್ದು ಬೆಳೆಯಲು ಸಾಧ್ಯವಾಗಲಿಲ್ಲ.

ಮಳೆ ಬಾರದಿದ್ದರೂ ಜಮೀನನ್ನು ಬಿತ್ತನೆಗೆ ಸಜ್ಜುಗೊಳಿಸಿದ್ದರಿಂದ ಅನಿವಾರ್ಯವಾಗಿ ಒಣ ಮಣ್ಣಿನಲ್ಲೇ ಬಿತ್ತನೆ ಮಾಡಿದವರೂ ಇದ್ದಾರೆ. ಜೂನ್ ಕೊನೆಯ ವಾರ ಜಮೀನು ತೇವಗೊಳ್ಳುವಷ್ಟು ಮಳೆಯಾದ ಕಾರಣ ಬೀಜ ಮೊಳಕೆಯೊಡೆದಿವೆ. ಆದರೆ, ಎಷ್ಟು ಇಳುವರಿ ಬರುವುದೋ ಎಂಬ ಆತಂಕ ರೈತರನ್ನು ಕಾಡುತ್ತಿದೆ.

ಬೀದರ್ ಜಿಲ್ಲೆಯ ಔರಾದ್, ಕಮಲನಗರ ಮತ್ತು ಹುಲಸೂರು ತಾಲ್ಲೂಕಿನಲ್ಲಿ ಬಿತ್ತನೆ ಮಾಡಿದ ತೊಗರಿಗೆ, ಮಳೆಯಿಂದ ಕೊಂಚ ಹಾನಿಯಾಗಿದೆ. ಹೊಲದಲ್ಲಿ ನೀರು ನಿಂತಿದ್ದ ಕಾರಣ ತೊಗರಿ ಕಂದು ಬಣ್ಣಕ್ಕೆ ತಿರುಗಿದೆ.

ಕೊಪ್ಪಳ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಜಿಟಿಜಿಟಿಯಾಗಿ ಮಳೆ ಸುರಿದ ಕಾರಣ ಹಲವು ಬೆಳೆಗಳು ಹಾಳಾಗಿವೆ.

ಅತಿಯಾದ ತೇವಾಂಶದಿಂದ ಕುಷ್ಟಗಿ ಮತ್ತು ಹನುಮಸಾಗರ ಭಾಗದಲ್ಲಿ ಟೊಮೊಟೊ, ಮೆಕ್ಕೆಜೋಳ, ಎಳ್ಳು, ಸೂರ್ಯಕಾಂತಿ, ಹೆಸರು, ಹತ್ತಿ ಹಾಳಾಗಿವೆ. ವಾರಗಟ್ಟಲೇ ಮೋಡ ಮುಸುಕಿದ ವಾತಾವರಣದಿಂದ ಬಲಿತ ಹತ್ತಿ ಕಾಯಿಗಳು ಉದುರಿವೆ. ಮೆಕ್ಕೆಜೋಳ ಮತ್ತು ಸೂರ್ಯಕಾಂತಿ ಬೆಳೆಗೆ ತಂಪು ವಾತಾವರಣ ಮಾರಕವಾಗಿದೆ. ಕನಕಗಿರಿ ತಾಲ್ಲೂಕಿನಲ್ಲಿ ಮಳೆ ಕೊರತೆ ತೀವ್ರವಾಗಿದ್ದು, ಸಜ್ಜೆ, ಜೋಳ, ಹೆಸರು, ಅಲಸಂದಿ, ಶೇಂಗಾ ಬಿತ್ತನೆ ವಿಳಂಬವಾಗಿದೆ. ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿದೆ.

ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ರಾಯಕೋಡ ಗ್ರಾಮದಲ್ಲಿ ಸರಿಯಾಗಿ ನಾಟಿಯಾಗದ ಬೆಳೆಯನ್ನು ಹರಗಿ ಮತ್ತೆ ಬಿತ್ತನೆಗೆ ಮುಂದಾಗಿರುವ ನೋಟ

ವಿಜಯಪುರ ಜಿಲ್ಲೆಯಲ್ಲಿ ಮುಂಗಾರು ಮಳೆ ಕೊರತೆಯಿಂದ ಬಿತ್ತನೆಗೆ ಹಿನ್ನಡೆಯಾಗಿದೆ. ಮಳೆ ಕೊರತೆಯಿಂದ ಜಿಲ್ಲೆಯಲ್ಲಿ ಈವರೆಗೆ ಶೇ 20ರಷ್ಟು ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ. ಇದೀಗ ಮುಂಗಾರು ಬಿತ್ತನೆಯ ಅವಧಿಯೂ ಮುಕ್ತಾಯವಾಗಿದೆ.

ಮುಂಗಾರು ಪೂರ್ವ ಅಂದರೆ, ಮೇ ತಿಂಗಳಲ್ಲಿ ಸುರಿದ ಆಲಿಕಲ್ಲು ಮಳೆಯಿಂದ ಜಿಲ್ಲೆಯ ತಿಕೋಟಾ ಭಾಗದಲ್ಲಿ ಚಿಗುರೊಡೆಯೊತ್ತಿದ್ದ ದ್ರಾಕ್ಷಿ ಬಳ್ಳಿಗೆ (ಕಡ್ಡಿ) ತೊಂದರೆಯಾಗಿತ್ತು. ಇದನ್ನು ಹೊರತುಪಡಿಸಿದರೆ ಜಿಲ್ಲೆಯಲ್ಲಿ ಮಳೆಯಿಂದ ಯಾವುದೇ ಹಾನಿಯಾಗಿಲ್ಲ.

ಮೈಸೂರು ಜಿಲ್ಲೆಯಲ್ಲಿ ರೈತರ ಪಾಲಿಗೆ ಮಳೆ ದುಬಾರಿಯಾಗಿದೆ. 1,013 ಎಕರೆಗೂ (410 ಹೆಕ್ಟೇರ್) ಅಧಿಕ ಪ್ರದೇಶದ ಭತ್ತ, ಮೆಕ್ಕೆಜೋಳ, ಹೊಗೆಸೊಪ್ಪಿಗೆ ಹಾನಿಯಾಗಿದೆ.

ಜಿಲ್ಲೆಯಲ್ಲಿ ಭತ್ತ, ರಾಗಿ ಹಾಗೂ ಹೊಗೆಸೊಪ್ಪು ಬೆಳೆಯನ್ನು ಪ್ರಧಾನವಾಗಿ ಬೆಳೆಯಲಾಗುತ್ತದೆ. ಉಳಿದಂತೆ, ಮೆಕ್ಕೆಜೋಳ, ಹೆಸರುಕಾಳು, ಸಾಸಿವೆ, ಗೋವಿನ ಜೋಳವನ್ನು ಬೆಳೆಯಲಾಗುತ್ತದೆ. ಇದರಲ್ಲಿ ಏಕದಳ, ದ್ವಿದಳ ಧಾನ್ಯ, ಆಹಾರ ಧಾನ್ಯ, ಎಣ್ಣೆಕಾಳು ಬಿತ್ತನೆ ಕಾರ್ಯ ಶೇ 90ರಷ್ಟು ಪೂರ್ಣಗೊಂಡಿತ್ತು. ಸತತ ಮಳೆಗೆ ಕೆಲವೆಡೆ ಮೊಳಕೆಗೂ ಮುನ್ನವೇ ಬೆಳೆ ಹಾಳಾಗಿದ್ದು, ರೈತರು ಪಡಿಪಾಟಲು ಪಡುತ್ತಿದ್ದಾರೆ. ಮಳೆ, ತೇವಾಂಶದಿಂದ ಹೊಗೆಸೊಪ್ಪಿನ ಎಲೆಗಳು ಹಳದಿಬಣ್ಣಕ್ಕೆ ತಿರುಗಿದೆ. ಹೀಗಾಗಿ, ಹಾಕಿದ ಬಂಡವಾಳವೂ ಗಿಟ್ಟುತ್ತಿಲ್ಲ.

ಕಪಿಲಾ ನದಿ ನೀರು ಆಶ್ರಿತ ತಲಕಾಡು, ವರುಣಾ ಭಾಗದಲ್ಲಿ ಭತ್ತ ಬೆಳೆದ ರೈತರು ಪ್ರವಾಹದಿಂದ ನಷ್ಟಕ್ಕೆ ಸಿಲುಕಿದ್ದಾರೆ. ತೆನೆ ಬೆಳವಣಿಗೆ ಹಂತದಲ್ಲಿ ಗದ್ದೆಗಳಲ್ಲಿ ನೀರು ನಿಂತು, ಭತ್ತ ಜೊಳ್ಳಾಗುವ ಆತಂಕ ಎದುರಾಗಿದೆ.

ಬೆಳಗಾವಿ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಅಧಿಕ ಮಳೆಯಾಗಿದ್ದು, ಮುಂಗಾರು ಬೆಳೆಗಳಿಗೆ ಹಾನಿಯಾಗಿದೆ. ರಾಜ್ಯದ ಅರ್ಧ ಭಾಗ ಹಾಗೂ ಮಹಾರಾಷ್ಟ್ರ, ಗೋವಾಕ್ಕೆ ತರಕಾರಿ ಪೂರೈಸುವ ಬೆಳಗಾವಿ ಜಿಲ್ಲೆಯಲ್ಲಿ ವಾರಗಟ್ಟಲೇ ನೀರು ನಿಂತಿದ್ದರಿಂದ ತೋಟಗಾರಿಕೆ ಬೆಳೆಗಾರರು ಭಾರಿ ನಷ್ಟ ಅನುಭವಿಸಿದ್ದಾರೆ. ಇದರಿಂದ ಮಾರುಕಟ್ಟೆಗೆ ಸಕಾಲಕ್ಕೆ ತರಕಾರಿ ಪೂರೈಕೆ ಆಗುವಲ್ಲಿ ವಿಳಂಬವಾಗಿದೆ. ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಸೋಯಾ ಬಿತ್ತನೆ ಮಾಡುತ್ತಾರೆ. ಈ ಬಾರಿ ಸತತ ಮಳೆಯಿಂದ ಕೆಲವೆಡೆ ಕೊಳೆತು ಹೋಗಿದೆ.

‘ಮುಂಗಾರು ನಿರೀಕ್ಷೆಯಲ್ಲಿ ಬಿತ್ತನೆ ಮಾಡಿದ್ದ ರೈತರು ಕೆಲ ಜಿಲ್ಲೆಗಳಲ್ಲಿ ಮಳೆಯ ಕೊರತೆಯಿಂದ ಬೀಜ ಭೂಮಿಯಲ್ಲೇ ಮುರುಟಿ ಹೋಗಿದ್ದರಿಂದ ಹೊಲವನ್ನು ಹರಗಿ ಮತ್ತೊಮ್ಮೆ ಬಿತ್ತನೆ ಮಾಡಿದ ಉದಾಹರಣೆಗಳೂ ಇವೆ’ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

ಜೂನ್ ತಿಂಗಳಲ್ಲೇ ಹೆಸರು, ಸೋಯಾ ಬಿತ್ತನೆ ಮಾಡುತ್ತಿದ್ದೆವು. 2 ತಿಂಗಳಲ್ಲಿ ಬೆಳೆ ಕೈಗೆ ಬರುತ್ತಿತ್ತು. ಇದೀಗ ಮಳೆಯಾಗದೇ ಇರುವುದರಿಂದ ನಷ್ಟ ಅನುಭವಿಸುವಂತಾಗಿದೆ

ಚಂದ್ರು ಮೈಲಾಪುರ
ರೈತ, ರಾಯಕೋಡ, ಕಲಬುರಗಿ ಜಿಲ್ಲೆ

ಜೂನ್‌ನಲ್ಲಿ ಮಳೆ ಕಡಿಮೆಯಾಗಿದ್ದರಿಂದ ಅಲ್ಪಾವಧಿ ಬೆಳೆಗಳ ಬಿತ್ತನೆ ಸಾಧ್ಯವಾಗಿಲ್ಲ. ಬಿತ್ತನೆ ತಡವಾದರೆ ನಿರೀಕ್ಷಿತ ಫಸಲು ಬರುವುದಿಲ್ಲ

ರಾಜು ತೆಗ್ಗಳ್ಳಿ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ, ಕಲಬುರಗಿ

ಅವ್ವನಾಗುವುದೆಂದರೆ...

ಪೂಜಾ ರಘುನಂದನ್



ಇದು ಯಾರದ್ದೋ ಕಥೆ ಅಲ್ಲ. ಯಾರ ಉದಾಹರಣೆಯೂ ಅಲ್ಲ. ಇದು ನನ್ನದೇ ಕಥೆ. ಇವತ್ತೇ ಯಾಕೆ ಈ ಕಥೆ ಅಂದರೆ, ಇವತ್ತು ಹೇಳಿದರಷ್ಟೆ ಅದಕ್ಕೆ ಇನ್ನಷ್ಟು ಅರ್ಥ...

ಕುಂದಾನಗರಿ ಬೆಳಗಾವಿಯಲ್ಲಿ ಹುಟ್ಟಿ ಮಾಯಾನಗರಿ ಬೆಂಗಳೂರಿನಲ್ಲಿ ಆಗ ತಾನೆ ನೌಕರಿಗೆ ಸೇರಿದ್ದೆ. ಹಾಸನದ ರಘುನಂದನನೊಟ್ಟಿಗೆ 2012ರಲ್ಲಿ ಮದುವೆಯಾದೆ. ಹೊಸ ಜೀವನ. ತುಂಬು ಕುಟುಂಬ. ಕೆಲಸಕ್ಕೆ ಸೇರುವ ಯೋಚನೆಯೂ ಇರಲಿಲ್ಲ. ಹಾಗಾಗಿ, ಹೊಸ ಸ್ನೇಹಿತರ ಭೇಟಿ, ಕಾರ್ಯಕ್ರಮಗಳ ತಿರುಗಾಟ.. ಹೀಗೆ ದಿನಗಳು ಉರುಳಿತು.

ಆಗ ಹೋದಲೆಲ್ಲ ಅನ್ಯರಿಂದ ಧುತ್ತನೆ ಎದುರಾಗುತ್ತಿದ್ದದ್ದು 'ಗುಡ್ ನ್ಯೂಸ್ ಇಲ್ವಾ' ಅನ್ನೋ ಪ್ರಶ್ನೆ. ಬೇರೆಯವರ ವೈಯಕ್ತಿಕ ಬದುಕಿನ ಬಗ್ಗೆ ಜನರಿಗೆ ಯಾಕಿಷ್ಟು ಆಸಕ್ತಿ ಇರುತ್ತೆ ಅನ್ನೋದು ಈವರೆಗೂ ಬಿಡಿಸಲಾಗದ ಒಗಟು.

ಈ ಮಧ್ಯೆ ಗುಡ್‌ನ್ಯೂಸ್‌ಗೆ ರೆಡಿಯಾದೆವು. ಅದೇ ದಿನ ಸಂಜೆ ನಮ್ಮ ಅಮ್ಮ(ಅತ್ತೆ) ಸಿಹಿ ಹಂಚಿ ಸಂಭ್ರಮಿಸಿದರು. ದೇಹ ತಾಯ್ತನದ ಬದಲಾವಣೆಗೆ ಒಗ್ಗಿತು. ಮೂಡ್ ಸ್ವಿಂಗ್ ನಡುವೆಯೂ ಕಂದನ ಬಗ್ಗೆ ನಿರೀಕ್ಷೆ ಹೆಚ್ಚಿತು. ಆದರೆ, ಗರ್ಭಿಣಿಯಾದ ಸಂಭ್ರಮ ಬಹುಕಾಲ ಉಳಿಯಲಿಲ್ಲ. ಮೂರು ತಿಂಗಳಿಗೆ ನಾನು ನನ್ನ ಕನಸನ್ನು ಕಳೆದು ಕೊಂಡಿದ್ದೆ. ಹೀಗೆ ಸತತವಾಗಿ ಆರು ಬಾರಿ ಹೊಟ್ಟೆಯೊಳಗಿದ್ದ ಭ್ರೂಣಗಳು ತಂತಾನೇ ಜಾರಿ ಹೊರಬಂದಿದ್ದವು. ಈಗಲೂ ಆ ಮಕ್ಕಳೆಲ್ಲ ಹುಟ್ಟಿದ್ದರೆ ನಾನು ಆರು ಮಕ್ಕಳ ತಾಯಿಯಾಗಿರುತ್ತಿದ್ದೆ.

> ತಾಯ್ತನವೆಂಬುದು ಕಲ್ಲುಬಳ್ಳಿಯಾಚೆಗೂ ಹಬ್ಬುವ ಹೂಬಳ್ಳಿ. ತಾಯಿಯಾಗುವ ಹಂಬಲದಲ್ಲಿ ಎದುರಿಸಿದ ಸಂಕಷ್ಟಗಳನ್ನು ರಂಗರೂಪಕ್ಕೆ ತರುತ್ತಿದ್ದಾರೆ ಕಲಾವಿದೆ ಪೂಜಾ. ಅವರ ಕಥನ ಇಲ್ಲಿದೆ..

ಈ ಮಧ್ಯೆ ಎಷ್ಟೋ ಚಿಕಿತ್ಸೆಗಳು ನಡೆದವು. ಜತೆಗೆ ದೈವ ಬಲಕ್ಕಾಗಿ ಹರಕೆಯ ಮೊರೆ ಹೋದೆ. ಪ್ರತಿ ಬಾರಿ 45ನೇ ದಿನಕ್ಕೆ ಸರಿಯಾಗಿ ಮಗುವಿಗೆ ಹೃದಯಬಡಿತ ಗೋಚರಿಸುವಾಗ ಪಡುತ್ತಿದ್ದ ಸಂತಸ ಮೂರು ತಿಂಗಳ ಸ್ಕ್ಯಾನಿಂಗ್‌ನಲ್ಲಿ ಇಲ್ಲವಾಗುತ್ತಿತ್ತು. ಈ ನಡುವೆ ಆತ್ಮೀಯಳೊಬ್ಬಳು 'ಮಗು ಮಾಡಿ ಕೊಡ್ತೀನಿ ಕಣೇ. ನೀನೆ ಅದರ ಅಮ್ಮನಾಗು' ಅಂತ ಹೇಳಿದಳು. ನಮ್ಮವರದೇ ಅನ್ನೋ ಸಮಾಧಾನ ಇತ್ತು. ಆದರೆ, ಆ ಪ್ರಕ್ರಿಯೆ ಮುಂದುವರಿಯಲೇ ಇಲ್ಲ.

ಹೀಗೆ ದೈಹಿಕ ಕಷ್ಟ, ಮಾನಸಿಕ ನೋವು, ಹಿಂಸೆ, ಜನರ ಪ್ರಶ್ನೆ ಎಲ್ಲದರ ಮಧ್ಯೆ ಒಂದು ಹೆಣ್ಣು ಮಗುವನ್ನೇ ದತ್ತು ತೆಗೆದುಕೊಳ್ಳಬೇಕೆಂದು ಗಟ್ಟಿ ನಿರ್ಧಾರ ಮಾಡಿದೆವು. ಈ ನಿರ್ಧಾರ ಮಾಡಿದಾಗ ನನಗೆ 26, ರಘುವಿಗೆ 30 ವರ್ಷ. ಮದುವೆಯಾಗಿ 6 ವರ್ಷ ಸಂದಿತ್ತು. ಸುಮ್ಮನೆ ಕಾಲಹರಣ ಮಾಡಿ ಮುಂದೆಂದೋ ದತ್ತು ಪಡೆಯುವ ಬದಲು ಈಗಲೇ ತೆಗೆದುಕೊಳ್ಳುವುದು ಸೂಕ್ತ ಎಂಬ ನಿರ್ಧಾರಕ್ಕೆ ಬಂದೆವು.

ಮತ್ತದೇ ಜನರ ಪ್ರಶ್ನೆಗಳು. 'ಯಾಕೆ ಇಷ್ಟು ಬೇಗ ಈ ನಿರ್ಧಾರ. ಇನ್ನೂ ಕಾಯಬಹುದಿತ್ತು, ಡಾಕ್ಟರ್ ಬದಲಾಯಿಸಿ, ಈ ದೇವರಿಗೆ ಹರಕೆ ಹೊತ್ಕೊಳ್ಳಿ, ನಾಟಿ ಔಷಧದಿಂದ ಸರಿ ಹೋಗುತ್ತೆ, ಈ ಪಥ್ಯ ಮಾಡಿ, ಹೊಸ ತಂತ್ರಜ್ಞಾನದಿಂದ ಮಗು ಪಡೀಬಹುದು' ಹೀಗೆ ಹೆಜ್ಜೆ ಹೆಜ್ಜೆಗೂ ಸಲಹೆ ಸಿಗುತ್ತಿತ್ತು.

'ಪ್ಲೀಸ್ ಸ್ಟಾಪ್ ಆಲ್ ದೀಸ್..' ಅಂತ ಗಟ್ಟಿಯಾಗಿ ತಿರುಗಿ ಬಿದ್ದೆ. ಅಲ್ಲಿಗೆ ಜನರ ಬಾಯಿ ಮುಚ್ಚಿ ಹೋಯಿತು. ಕುಟುಂಬದ ಪ್ರೋತ್ಸಾಹ ನಮ್ಮನ್ನು ಇನ್ನಷ್ಟು ಗಟ್ಟಿಯಾಗಿಸಿತು.

ದತ್ತು ಪಡೆಯುವ ಪ್ರಕಿಯೆ ನಡೆಯಿತು ಹೀಗೆ....

ಕಾನೂನು ಪ್ರಕಾರ CARA ವೆಬ್‌ಸೈಟ್ ಮೂಲಕ ದತ್ತು ಪ್ರಕ್ರಿಯೆ ನಡೆಸುವುದು ಸರಿಯಾದ ಕ್ರಮ. ನಾವು ಅದರ ಮೂಲಕವೇ ನೋಂದಣಿ ಮಾಡಿ ಮಗಳ ಬರುವಿಕೆಗೆ ಎರಡೂವರೆ ವರ್ಷ ಕಾದೆವು.

'ಲೀಗಲ್ ಅಡಾಪ್ಷನ್' ಎನ್ನುವುದು ಸುಲಭವಾದ ವಿಧಾನ; ಆದರೆ, ಅದು ಗೊತ್ತಿದ್ದವರಿಗೆ ಮಾತ್ರ. ಪಾಪ ನಿರಕ್ಷರರಿಗೆ ಇದು ಕಬ್ಬಿಣದ ಕಡಲೆ.

ನಿಯಮ ಏನು ಹೇಳುತ್ತೆ?

ಎಲ್ಲರೂ ಹೇಳ್ತಾರೆ 'ನೀವು ದತ್ತು ತೊಗಳಬೇಕಾದ್ರೆ ನಿಮ್ಮ ಆಸ್ತಿ ಆ ಮಗುವಿನ ಹೆಸರಿಗೆ ಆಗಬೇಕು' ಅಂತ. ಆದರೆ, ದತ್ತು ಪ್ರಕ್ರಿಯೆಯಲ್ಲಿ ಈ ತರಹದ ನಿಯಮ ಇಲ್ಲ. ಆದರೆ, ತಂದೆಯ ವರಮಾನ ನೋಡುತ್ತಾರೆ. ಕಾರಣ, ಆ ಕುಟುಂಬಕ್ಕೆ, ಮಗುವಿನ ಪೋಷಣೆ ಮಾಡಲು ಶಕ್ತಿ ಇದೆಯಾ ಎಂದು ಖಚಿತಪಡಿಸಿ ಕೊಳ್ಳುವುದಕ್ಕಾಗಿ. ಈ ಮೊದಲೇ ಮಗು ಅನಾಥವಾಗಿ ಆಶ್ರಮ ಸೇರಿರುತ್ತದೆ. ಮತ್ತೊಮ್ಮೆ ಅದಕ್ಕೆ ತೊಂದರೆಯಾಗಬಾರದು ಎಂಬುದು ಈ ನಿಯಮದ ಹಿಂದಿನ ಉದ್ದೇಶ.

ನೋಂದಣಿಯಾಗಿ ಎರಡೂವರೆ ವರ್ಷಗಳ ನಂತರ ಮಗು ಆಗಮನದ ಸಂದೇಶ ಬಂತು. ಮನೆಯವರ ಸಂತಸ ಹೇಳತೀರದು. ಇಂಥ ದಿನಗಣನೆಯ ಸಮಯದಲ್ಲಿಯೂ ಪರಿಚಯಸ್ಥರೊಬ್ಬರು 'ಇನ್ನೂ ಸಮಯವಿದೆ ಯೋಚಿಸಿ. ಈ ದೇವಸ್ಥಾನದಲ್ಲಿ ಹರಕೆ ಮಾಡಿಕೊಂಡರೆ ನಿಮ್ಮದೇ ಮಗು ಪಡೆಯಬಹುದು' ಎಂಬ ಆಲೋಚನೆ ಮುಂದಿಟ್ಟರು. ನನ್ನ ಉತ್ತರ ಸ್ಪಷ್ಟವಾಗಿತ್ತು. 'ಅದೇ ದೇವರ ಅನುಗ್ರಹದಿಂದ ನನ್ನ ಮಗಳು ನಾಲ್ಕಾರು ದಿನಗಳಲ್ಲಿ ಮನೆಗೆ ಬರುತ್ತಿದ್ದಾಳೆ' ಎಂದು ಅವರಿಗೆ ಹೇಳಿದೆ !

ಏಕವ್ಯಕ್ತಿ ಪ್ರದರ್ಶನ

ಹೆಣ್ಣು ಮಗುವನ್ನು ದತ್ತು ಪಡೆದ, ಅದರ ಆರ್ದ್ರ ಅನುಭವವನ್ನು ರಂಗದ ಮೇಲೆ ತರುತ್ತಿದ್ದಾರೆ ಹಾಸನದ ರಂಗ ಹೃದಯ ತಂಡದ ಕಲಾವಿದೆ ಪೂಜಾ ರಘುನಂದನ್.ಏಕವ್ಯಕ್ತಿ ಪ್ರದರ್ಶನವಾಗಿರುವ ಈ ರಂಗಪ್ರಯೋಗದಲ್ಲಿ ಪೂಜಾ ಅವರೇ ಅಭಿನಯಿಸುತ್ತಿದ್ದಾರೆ. ರಂಗ ನಿರ್ದೇಶಕ ಕೃಷ್ಣಮೂರ್ತಿ ಕವತ್ತಾರ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ರಂಗ ಪ್ರಯೋಗ **ಇದೇ 25ರಂದು ಸಂಜೆ. 6.30ಕ್ಕೆ** ಹಾಸನದ 'ಹಾಸನಾಂಬ ಕಲಾಕ್ಷೇತ್ರ'ದಲ್ಲಿ ಪ್ರದರ್ಶನಗೊಳ್ಳುತ್ತಿದೆ.

ಹೀಗೆ ಅಮ್ಮನಾದ ಬಗೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ನನಗೊಂದು ಅಲೌಕಿಕತೆಯೂ ಆಧ್ಯಾತ್ಮಿಕತೆಯೂ ಕಾಣುತ್ತಿದೆ. ನಮ್ಮ ಮಗು ಮೂರು ತಿಂಗಳ ಕಾಲ ಶ್ರೀಗಳೊಬ್ಬರ ಆಶ್ರಯ, ಆರೈಕೆಯಲ್ಲಿ ಬೆಳೆದಿತ್ತು. ನಂತರವೇ ನನ್ನ ಮಡಿಲ ಸೇರಿತು. ಮನೆಗೆ ಬಂದಾಗ ಅವಳನ್ನು ಅವಳ ಚಿಕ್ಕಪ್ಪ -ಚಿಕ್ಕಮ್ಮ, ಅಣ್ಣ ಬಹಳ ಅದ್ದೂರಿಯಾಗಿ ಬರಮಾಡಿಕೊಂಡಿದ್ದರು. ಈಗ ಅವಳಿಗೆ ಒಂದೂವರೆ ವರ್ಷ. ಅವಳು ಬಂದ ಮೇಲೆ ಪ್ರತಿ ದಿನವೂ ಸಡಗರವೇ.

ಮಕ್ಕಳು ಪಡೆಯುವ ವಿಚಾರದಲ್ಲಿ ನನ್ನಂತೆ ಹಲವರಿಗೆ ಗೊಂದಲವಿದ್ದಿರಬಹುದು. ಹಲವು ಚಿಕಿತ್ಸೆಗೆ ಒಳಗಾಗಿ ಅದು ಫಲಪ್ರದವಾಗದೇ ನೋವು ಅನುಭವಿಸಿರಬಹುದು. ಜನರ ಕುಹುಕವನ್ನು ಪಕ್ಕಕ್ಕಿಟ್ಟು ದತ್ತು ಪ್ರಕ್ರಿಯೆಯತ್ತ ಮನಸ್ಸು ಮಾಡುವುದು ಒಳಿತಲ್ಲವೇ?

ಗೇರು ಮೊಳಕೆಯ ಪಾಕ ವೈವಿಧ್ಯ

ಸೌಖ್ಯ ಮೋಹನ್ ತಲಕಾಲುಕೊಪ್ಪ

ಗೋಡಂಬಿ ಬೀಜ ತಿನ್ನುವುದು ಎಲ್ಲರಿಗೂ ಗೊತ್ತು. ಆದರೆ ಗೇರಿನ ಬೀಜದ ಹಸಿರು ಮೊಳಕೆಯ ಸೇವನೆಯ ಪರಿಚಯ ಬಹಳ ಕಡಿಮೆ. ಮರದಿಂದ ಬಿದ್ದ ಗೇರು ಬೀಜ ಮಳೆ ಬಂದಾಗ ಮೊಳಕೆಯೊಡೆಯುತ್ತದೆ. ದಕ್ಷಿಣ ಕನ್ನಡ ಮತ್ತು ಮಲೆನಾಡಿನಲ್ಲಿ ಅಲ್ಲಲ್ಲಿ ಕೆಲವೆಡೆ ಇದನ್ನು ಸಾಂಬಾರ್ ಮಾಡಲು ಬಳಸುತ್ತಾರೆ. ಈ ಗೇರು ಬೀಜ ಹಸಿರು ಮೊಳಕೆ ಬಳಸಿಕೊಂಡು ಹೊಸ ರುಚಿಗಳನ್ನೂ ತಯಾರಿಸಬಹುದು. ಅಂತಹ ಕೆಲವು ಹೊಸ ರುಚಿಯ ರೆಸಿಪಿಗಳು ಇಲ್ಲಿವೆ.

ಸಲಾಡ್

ಬೇಕಾಗುವ ಸಾಮಗ್ರಿ: ಗೇರು ಮೊಳಕೆ ಅರ್ಧ ಕಪ್, ಈರುಳ್ಳಿ 1, ಟೊಮೆಟೊ 1, ಕ್ಯಾರೆಟ್ 1, ಕೊತ್ತಂಬರಿ ಸೊಪ್ಪು, ಹಸಿಮೆಣಸು 1-2, ನಿಂಬೆರಸ, ಉಪ್ಪು, ಪೆಪ್ಪರ್ ಪೌಡರ್ ಕಾಲು ಚಮಚ.

ತಯಾರಿಸುವ ವಿಧಾನ: ಮೊದಲು ಈರುಳ್ಳಿ, ಟೊಮೆಟೊ ಮತ್ತು ಕೊತ್ತಂಬರಿ ಸೊಪ್ಪನ್ನು ಸಣ್ಣಗೆ ಹೆಚ್ಚಿಕೊಳ್ಳಿ. ಅದಕ್ಕೆ ಕ್ಯಾರೆಟ್ ತುರಿದು ಸೇರಿಸಿ. ಹಸಿ ಮೆಣಸನ್ನು ಸಣ್ಣಗೆ ಹೆಚ್ಚಿ ಹಾಕಿ. ಗೇರು ಮೊಳಕೆಯನ್ನು ಎರಡು ಭಾಗ ಮಾಡಿ ಸೇರಿಸಿ. ನಂತರ ರುಚಿಗೆ ತಕ್ಕ ಉಪ್ಪು, ನಿಂಬೆರಸ, ಪೆಪ್ಪರ್ ಪೌಡರ್ ಹಾಕಿ, ಎಲ್ಲವನ್ನು ಚೆನ್ನಾಗಿ ಮಿಶ್ರ ಮಾಡಿ. ಬೇಕೆಂದರೆ ಒಗ್ಗರಣೆಯನ್ನೂ ಕೊಡಬಹುದು. ಈಗ ಗೇರು ಬೀಜದ ಹಸಿರು ಮೊಳಕೆಯ ಸಲಾಡ್ ರೆಡಿ.

ಗ್ರೇವಿ

ಬೇಕಾಗುವ ಸಾಮಗ್ರಿ: ಗೇರು ಮೊಳಕೆ 1 ದೊಡ್ಡ ಕಪ್, ಟೊಮೆಟೊ -4, ಈರುಳ್ಳಿ -1, ಕೊತ್ತಂಬರಿ ಸೊಪ್ಪು, ಅರಿಸಿನ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಸ್ವಲ್ಪ. ಸಾಂಬಾರ್ ಪುಡಿ-ಒಂದು ಚಮಚ, ಮೆಣಸಿನ ಪುಡಿ -ಎರಡು ಚಮಚ, ಗರಂ ಮಸಾಲ ಸ್ವಲ್ಪ, ಗೋಡಂಬಿ 8 ರಿಂದ 10, ಉಪ್ಪು ರುಚಿಗೆ ತಕ್ಕಷ್ಟು, ಹಾಲಿನ ಕ್ರೀಮ್ ಎರಡು ಚಮಚ, ಚಿಟಿಕೆ ಸಕ್ಕರೆ, ಎಣ್ಣೆ 4 ರಿಂದ 5 ಚಮಚ

ತಯಾರಿಸುವ ವಿಧಾನ: ಮೊದಲು ಬಾಣಲೆಯಲ್ಲಿ ಎಣ್ಣೆ ಹಾಕಿ ಹೆಚ್ಚಿದ ಈರುಳ್ಳಿ, ಟೊಮೆಟೊ ಹಾಕಿ. ನಂತರ ಉಪ್ಪು ಹಾಕಿ ಹುರಿಯಿರಿ. ಕೊತ್ತಂಬರಿ ಸೊಪ್ಪು, ಶುಂಠಿ, ಬೆಳ್ಳುಳ್ಳಿ ಪೇಸ್ಟ್ ಸೇರಿಸಿ. ತಣ್ಣಗಾದ ನಂತರ ಗೋಡಂಬಿ ಸೇರಿಸಿ ರುಬ್ಬಿ.

ಇನ್ನೊಂದು ಬಾಣಲೆಗೆ ಎಣ್ಣೆ ಹಾಕಿ ಗೇರು ಮೊಳಕೆಯ ಪೀಸ್ ಹಾಕಿ ಹುರಿಯಿರಿ. ಚೂರು ಉಪ್ಪು ಹಾಕಿ. ಇದು ಬೇಗನೆ ಬೇಯುತ್ತದೆ. ನಂತರ ರುಬ್ಬಿದ ಮಿಶ್ರಣ ಹಾಕಿ. ಚೆನ್ನಾಗಿ ಬಾಡಿಸಿ. ಅರಿಶಿಣ, ಸಾಂಬಾರ ಪುಡಿ, ಮೆಣಸಿನ ಪುಡಿ ಹಾಗೂ ಚೂರು ಗರಂ ಮಸಾಲ ಸೇರಿಸಿ. ನೀರು ಹಾಕಿ ಚೆನ್ನಾಗಿ ಕುದಿಸಿ. ಚಿಟಿಕೆ ಸಕ್ಕರೆ ಹಾಕಿ. ಹಾಲಿನ ಕ್ರೀಮ್ ಹಾಕಿ ಒಂದು ಬಾರಿ ಕುದಿಸಿ ಇಳಿಸಿ. ಇಳಿಸಿದ ನಂತರ ಮೇಲೆನಿಂಬೆ ರಸ, ಕೊತ್ತಂಬರಿ ಸೊಪ್ಪು ಹಾಕಿ. ಈ ಗ್ರೇವಿ ಚಪಾತಿಯ ಜೊತೆ ಅದ್ಭುತ ಕಾಂಬಿನೇಷನ್.

ಫ್ರೈಡ್ ರೈಸ್

ಬೇಕಾಗುವ ಸಾಮಗ್ರಿ: ಗೇರು ಮೊಳಕೆ 1 ಕಪ್, ಉದುರಾದ ಅನ್ನ 4 ಕಪ್, ಈರುಳ್ಳಿ 2, ಶುಂಠಿ- ಬೆಳ್ಳುಳ್ಳಿ ಪೇಸ್ಟ್ ಸ್ವಲ್ಪ, ಪೆಪ್ಪರ್ ಪೌಡರ್ 1/4 ಚಮಚ, ಹಸಿ ಮೆಣಸು 2, ಸೋಯಾ ಸಾಸ್ 2 ಚಮಚ, ಉಪ್ಪು, ನಿಂಬೆ ರಸ, ಎಣ್ಣೆ 4 ರಿಂದ 5 ಚಮಚ, ಜೀರಿಗೆ

ತಯಾರಿಸುವ ವಿಧಾನ: ಬಾಣಲೆಯಲ್ಲಿ ಎಣ್ಣೆ ಹಾಕಿ, ಜೀರಿಗೆಯನ್ನು ಸೇರಿಸಿ. ಈರುಳ್ಳಿ ಮತ್ತು ಹಸಿ ಮೆಣಸನ್ನು ಹೆಚ್ಚಿ ಅದಕ್ಕೆ ಹಾಕಿ ಹುರಿಯಿರಿ, ಚಿಟಿಕೆ ಉಪ್ಪು ಸಹ ಸೇರಿಸಿ. ಶುಂಠಿ- ಬೆಳ್ಳುಳ್ಳಿ ಪೇಸ್ಟ್ ಹಾಕಿ. ಗೇರು ಮೊಳಕೆಯನ್ನು ಎರಡು ಭಾಗ ಮಾಡಿ. ಅದಕ್ಕೆ ಸೇರಿಸಿ, ಉಪ್ಪು ಮತ್ತು ಪೆಪ್ಪರ್ ಪೌಡರ್ ಹಾಕಿ ಬಾಡಿಸಿ, ಉಪ್ಪು ಗೇರಿನ ಮೊಳಕೆಗೆ ಹೀರಿಕೊಳ್ಳಬೇಕು. ನಂತರ ಸೋಯ ಸಾಸ್ ಹಾಕಿ, ಅನ್ನವನ್ನು ಹಾಕಿ, ಚೆನ್ನಾಗಿ ಮಿಶ್ರ ಮಾಡಿ, ಸ್ವಲ್ಪ ಹುರಿಯಿರಿ. ಕೊನೆಯಲ್ಲಿ ನಿಂಬೆರಸ ಸೇರಿಸಿ. ಈಗ ಗೇರು ಮೊಳಕೆಯ ಫ್ರೈಡ್‌ರೈಸ್ ಸಿದ್ಧವಾಯಿತು.

ಗೇರು ಮೊಳಕೆ ಫ್ರೈ

ಬೇಕಾಗುವ ಸಾಮಗ್ರಿ: ಗೇರು ಮೊಳಕೆ 1 ಕಪ್, ಎಣ್ಣೆ 2 ರಿಂದ 3 ಚಮಚ, ಉಪ್ಪು, ಜೀರಿಗೆ ಪುಡಿ, ಆಮ್ ಚೂರು ಪೌಡರ್/ವಾಟೆ ಪುಡಿ, ಕೆಂಪು ಮೆಣಸಿನ ಪುಡಿ, ಅರಿಶಿಣ ಪುಡಿ, ಚಾಟ್ ಮಸಾಲ ಪುಡಿ ಎಲ್ಲವೂ ಸ್ವಲ್ಪ

ತಯಾರಿಸುವ ವಿಧಾನ: ಬಾಣಲೆಗೆ ಎಣ್ಣೆ ಹಾಕಿ, ಅದಕ್ಕೆ ಗೇರು ಮೊಳಕೆಯನ್ನು ಹಾಕಿ ಹುರಿಯಿರಿ. ಅದಕ್ಕೆ ಉಪ್ಪು ಸೇರಿಸಿ. ಆಮೇಲೆ ಉಳಿದ ಎಲ್ಲಾ ಮಸಾಲೆಗಳನ್ನು ಹಾಕಿ. ಚೆನ್ನಾಗಿ ಹುರಿಯಿರಿ. ಹೀಗೆ ಹುರಿಯುವಾಗ ಗೇರು ಮೊಳಕೆಗೆ ಎಲ್ಲಾ ಮಸಾಲೆಗಳು ಹಿಡಿದುಕೊಳ್ಳಬೇಕು. ಗೇರು ಮೊಳಕೆಯ ಫ್ರೈ ಸಿದ್ಧ. ಮಳೆಗಾಲಕ್ಕೆ ರುಚಿಕಟ್ಟಾದ ತಿನಿಸು ಇದು.

ಚಿತ್ರಗಳು: ಲೇಖಕರವು

ನ್ಯೂಸ್ ಪೇಪರ್ ಪ್ರಿಂಟ್ ಉಡುಪು

ಮನಸ್ವಿ

ಫ್ಯಾಷನ್ ಅನ್ನೋದು ಯಾವಾಗಲೂ ಉಡುಪಿನ ಬಗ್ಗೆ ಪ್ಯಾಷನ್ ಇರುವವರ ಸ್ವತ್ತು. ಅಲ್ಲಿ ಟ್ರೆಂಡ್ ಸೃಷ್ಟಿ ಆಗ್ತಾನೇ ಇರುತ್ತದೆ. ಹೊಸ ಹೊಸ ಟ್ರೆಂಡ್ ಮಾರುಕಟ್ಟೆಗೆ ಬಂದಷ್ಟೇ ವೇಗವಾಗಿ ಜನ ಮೆಚ್ಚಿ ಧರಿಸುತ್ತಾರೆ.

ಈಗ ನಾವು ಮಾಹಿತಿ ಯುಗದಲ್ಲಿದ್ದೇವೆ. ತುದಿ ಬೆರಳಲ್ಲಿ ನಾನಾ ದೇಶದ ನ್ಯೂಸ್‌ಗಳು ಸಿಗುವಂತಾಗಿದ್ದರೂ ನ್ಯೂಸ್ ಪೇಪರ್ ಮಾತ್ರ ತನ್ನ ಸ್ಥಾನ ಉಳಿಸಿಕೊಂಡಿದೆ. ಈಗ ಆ ನ್ಯೂಸ್ ಪೇಪರ್ ಅನ್ನೇ ಹೋಲುವ ಬಗೆಬಗೆಯ ಉಡುಪುಗಳು ಮಾರುಕಟ್ಟೆ ಪ್ರವೇಶಿಸಿವೆ . ಟ್ರೆಂಡ್ ಸೃಷ್ಟಿಸುತ್ತಿವೆ.

1800ನೇ ಇಸವಿಯಲ್ಲಿ ನ್ಯೂಸ್ ಪೇಪರ್ ಪ್ರಿಂಟ್‌ನ ದಿರಿಸು ಚಾಲ್ತಿಯಲ್ಲಿತ್ತು. ಅಂದಿನ ರಾಣಿಯರು ಗೌನ್ ರೂಪದ ನ್ಯೂಸ್ ಪೇಪರ್ ಪ್ರಿಂಟ್ ಬಟ್ಟೆ ತೊಡುತ್ತಿದ್ದರು. ಈಗ ಈ ಟ್ರೆಂಡ್ ಫ್ಯಾಷನ್ ಮಾರುಕಟ್ಟೆಗೆ ಮತ್ತೆ ಬಂದಿದೆ. ಸೀರೆ, ಟಾಪ್, ಟಿ ಶರ್ಟ್ ಹೀಗೆ ಪ್ರತಿಯೊಂದರಲ್ಲೂ ನ್ಯೂಸ್ ಪೇಪರ್ ಪ್ರಿಂಟ್ ನ ಲಾಲಿತ್ಯ ಎದ್ದು ಕಾಣುತ್ತಿದೆ.

- ಸೀರೆ: ನ್ಯೂಸ್ ಪೇಪರ್ ಪ್ರಿಂಟ್ ಇರುವ ಸೀರೆ ಹೆಚ್ಚು ಸದ್ದು ಮಾಡುತ್ತಿದೆ. ಬ್ಲ್ಯಾಕ್ ಅಂಡ್ ವೈಟ್ ಪ್ರಿಂಟ್ ಇರುವ ಸೀರೆ ಫ್ಯಾಷನ್ ಪ್ರಿಯರನ್ನು ಹೆಚ್ಚು ಸೆಳೆಯುತ್ತಿದೆ. ಇದರ ಜತೆಗೆ ಚಿತ್ತಾರವಿಲ್ಲದ ಪ್ಲೇನ್ ಬ್ಲೌಸ್ ಧರಿಸುವುದರಿಂದ ಇನ್ನಷ್ಟು ಅಂದವಾಗಿ ಕಾಣಬಹುದು. ಇದರ ಜತೆ ಹಾಫ್ ಸ್ಲೀವ್, ಫುಲ್ ಸ್ಲೀವ್, ಸ್ಲೀವ್ ಲೆಸ್ ಬ್ಲೌಸ್ ಕೂಡ ಧರಿಸಬಹುದು. ಭಿನ್ನ ಬ್ಲೌಸ್ ವಿನ್ಯಾಸದೊಂದಿಗೆ ಈ ಸೀರೆಯ ಅಂದವನ್ನು ಇನ್ನಷ್ಟು ಹೆಚ್ಚಿಸಬಹುದು.
- ಕ್ರಾಪ್ ಟಾಪ್: ನ್ಯೂಸ್ ಪ್ರಿಂಟ್ ಚಿತ್ತಾರದ ಕ್ರಾಪ್ ಟಾಪ್ ಅನ್ನು ಮಿಲೇನಿಯಲ್ ಯುಗದ ಹುಡುಗಿಯರು ಇಷ್ಟಪಟ್ಟು ಧರಿಸುತ್ತಿದ್ದಾರೆ. ವಿವಿಧ ಬಣ್ಣದ ಕ್ರಾಪ್ ಗಳು ಹೆಣ್ಣುಮಕ್ಕಳ ಅಂದ ಹೆಚ್ಚಿಸುವುದರಲ್ಲಿ ಎರಡು ಮಾತಿಲ್ಲ. ಇದನ್ನು ಜೀನ್ಸ್ ಜತೆ, ಮಿಡ್ಡಿ ಜೊತೆ, ಸ್ಕರ್ಟ್ ಜತೆ, ಜಗ್ಗಿಂಗ್ಸ್ ಜೊತೆ ಧರಿಸಲು ಸೂಕ್ತ ಎನ್ನಿಸುತ್ತದೆ. ಜೀನ್ಸ್ ಶಾರ್ಟ್ಸ್ ಜೊತೆ ಕೂಡ ಇದು ಸುಂದರವಾಗಿ ಕಾಣುತ್ತದೆ.
- ಶರ್ಟ್: ನ್ಯೂಸ್ ಪ್ರಿಂಟ್ ಚಿತ್ತಾರವಿರುವ ಶರ್ಟ್ ಗಳು ಪುರುಷ ಹಾಗೂ ಮಹಿಳೆ ಇಬ್ಬರಿಗೂ ಹೊಂದಿಕೆಯಾಗುತ್ತದೆ. ಈ ಶರ್ಟ್ ಜೀನ್ಸ್ ಪ್ಯಾಂಟ್ ಜೊತೆ ಹೆಚ್ಚು ಹೊಂದುತ್ತದೆ. ಹೆಣ್ಣುಮಕ್ಕಳಿಗೆ ಉದ್ದನೆಯ ಶರ್ಟ್ ಟಾಪ್ ಧರಿಸುವುದರಿಂದ ಸುಂದರವಾಗಿ ಕಾಣಬಹುದು. ಇದರಲ್ಲೂ ಬ್ಲ್ಯಾಕ್ ಅಂಡ್ ವೈಟ್ ಹಾಗೂ ಭಿನ್ನ ಕಲರ್ ನ ಶರ್ಟ್ ಗಳು ಅಂದ ಹೆಚ್ಚಿಸುವುದರಲ್ಲಿ ಮಾತಿಲ್ಲ.
- ಕುರ್ತಾ: ಕುರ್ತಾ ಭಾರತೀಯ ಹೆಣ್ಣುಮಕ್ಕಳ ನೆಚ್ಚಿನ ಉಡುಪು. ನ್ಯೂಸ್ ಪೇಪರ್ ಪ್ರಿಂಟ್ ಇರುವ ಕುರ್ತಾ ಗಳನ್ನು ಹೆಂಗಳೆಯರು ಮೆಚ್ಚಿ ಧರಿಸುತ್ತಿದ್ದಾರೆ. ಕಪ್ಪು. ಬಿಳಿ ಬಣ್ಣದ ನ್ಯೂಸ್ ಪೇಪರ್ ಪ್ರಿಂಟ್ ಇರುವ ಕುರ್ತಾ ಹೆಣ್ಣುಮಕ್ಕಳಿಗೆ ಹೆಚ್ಚು ಇಷ್ಟವಾಗುತ್ತಿದೆ. ಇದರೊಂದಿಗೆ ಟಾಪ್ ಬಣ್ಣದ್ದೇ ಪ್ಯಾಂಟ್ ಧರಿಸುವುದು ಸೂಕ್ತ.
- ಛತ್ರಿ: ಬರೀ ಉಡುಪಿನಲ್ಲಿ ಮಾತ್ರವಲ್ಲ ಛತ್ರಿಯಲ್ಲೂ ನ್ಯೂಸ್ ಪೇಪರ್ ಪ್ರಿಂಟ್ ನ ಚಿತ್ತಾರ ಎದ್ದು ಕಾಣುತ್ತಿದೆ. ಬಣ್ಣ ಬಣ್ಣ ನ್ಯೂಸ್ ಪ್ರಿಂಟ್ ಇರುವ ಛತ್ರಿಗಳನ್ನು ಜನ ಮೆಚ್ಚಿ ಖರೀದಿಸುತ್ತಿದ್ದಾರೆ. ನ್ಯೂಸ್ ಪ್ರಿಂಟ್ ಚಿತ್ತಾರದ ಛತ್ರಿಯನ್ನು ಅದೇ ರೀತಿಯ ವಿನ್ಯಾಸದ ಉಡುಪಿನೊಂದಿಗೆ ಮ್ಯಾಚಿಂಗ್ ಮಾಡಿ ಧರಿಸುವುದರಿಂದ ಸ್ಟೈಲಿಶ್ ಆಗಿ ಕಾಣಬಹುದು.
- ಜಾಕೆಟ್: ಮಳೆಗಾಲ ಚಳಿಗಾಲಕ್ಕೆ ಧರಿಸಲು ಸೂಕ್ತ ಎನ್ನಿಸುವ ಜಾಕೆಟ್ ನಲ್ಲಿ ನ್ಯೂಸ್ ಪ್ರಿಂಟ್ ಚಿತ್ತಾರ ಮೂಡಿರುವುದು ಫ್ಯಾಷನ್ ಪ್ರಿಯರಿಗೆ ಇನ್ನಷ್ಟು ಖುಷಿ ಹೆಚ್ಚುವಂತಾಗಿದೆ. ಪ್ಲೇನ್ ಶರ್ಟ್, ಟಿ ಶರ್ಟ್ ಜೊತೆ ಇದನ್ನು ಧರಿಸುವುದು ಸೂಕ್ತ. ಇದು ಚಳಿ. ಮಳೆಯಿಂದ ರಕ್ಷಣೆ ನೀಡುವ ಜೊತೆಗೆ ಸ್ಟೈಲಿಶ್ ಲುಕ್ ಸಿಗುವಂತೆ ಮಾಡುವುದಲ್ಲೂ ಅನುಮಾನವಿಲ್ಲ. v

ರೂಪದರ್ಶಿ: ಅಕ್ಷತಾ ಪಾಂಡವಪುರ

ಚಿತ್ರಗಳು: ಜನಮನ ಅಂಗಡಿ

ಎಲ್ಲರಿಗೂ ಹೊಂದುವ ಸಾಮಾನ್ಯ ಪರಿಹಾರಗಳಿಲ್ಲ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **26ರ ಯುವಕ. ನನಗೆ ನಿಮಿರುವಿಕೆಯ ಸಮಸ್ಯೆಯಿದೆ. ಒಂದೇ ನಿಮಿಷದಲ್ಲಿ ಸ್ಖಲನವಾಗುತ್ತದೆ. ಉದ್ರೇಕವಾದಾಗ ಶಿಶ್ನದಲ್ಲಿ ಉರಿಯಾಗುತ್ತದೆ. ಪರಿಹಾರ ತಿಳಿಸಿ.**

ಹೆಸರು ಊರು ತಿಳಿಸಿಲ್ಲ.

ನಿಮಗೆ ವಿವಾಹವಾಗಿದೆಯೇ ಎಂಬುದನ್ನು ತಿಳಿಸಿಲ್ಲ. ಶೀಘ್ರಸ್ಖಲನಕ್ಕೆ ಪ್ರಮುಖ ಕಾರಣ ಆತಂಕ, ಹಿಂಜರಿಕೆ ಮತ್ತು ಲೈಂಗಿಕತೆಯ ಬಗೆಗಿನ ತಪ್ಪು ತಿಳಿವಳಿಕೆಗಳು. ಮದುವೆಯಂತಹ ಒಂದು ಸುರಕ್ಷಿತ ಸಂಬಂಧದಲ್ಲಿ ಇವುಗಳನ್ನು ಪರಿಹರಿಸುವುದು ಸುಲಭ. ಮದುವೆಗೆ ಮೊದಲಿನ ತಾತ್ಕಾಲಿಕ ಸಂಬಂಧಗಳಲ್ಲಿ ಅಥವಾ ವಿವಾಹಬಾಹಿರ ಸಂಬಂಧಗಳಲ್ಲಿ ಅಂತಹ ಸುರಕ್ಷತೆ ಇರುವುದಿಲ್ಲ. ಹಾಗಾಗಿ ಆತಂಕ ಹಿಂಜರಿಕೆಗಳು ಸಹಜ. ಹಸ್ತಮೈಥುನದಲ್ಲಿ ನೀವೊಬ್ಬರೇ ಸುಖಿಸುವಾಗಲೂ ಲೈಂಗಿಕತೆಯ ತಪ್ಪುಕಲ್ಪನೆಗಳು ಶೀಘ್ರಸ್ಖಲನಕ್ಕೆ ಕಾರಣವಾಗುತ್ತದೆ. ಹಾಗಾಗಿ ಇದಕ್ಕೆ ಸರಳವಾಗಿ ಎಲ್ಲರಿಗೂ ಹೊಂದುವಂತಹ ಪರಿಹಾರಗಳನ್ನು ಹೇಳುವುದು ಸಾಧ್ಯವಿಲ್ಲ. ನಿಮಗೀಗಾಗಲೇ ವಿವಾಹವಾಗಿದ್ದು ಪತ್ನಿಯ ಜೊತೆ ಇರುವಾಗ ತೊಂದರೆಯಾಗುತ್ತಿದ್ದರೆ ತಜ್ಞ ಲೈಂಗಿಕ ಮನೋಚಿಕಿತ್ಸಕರನ್ನು ಭೇಟಿಯಾಗಿ. ಮಾರುಕಟ್ಟೆಯಲ್ಲಿ ಸಿಗುವ ಯಾವುದೇ ಔಷಧದ ಹೆಸರಿನ ವಸ್ತುಗಳನ್ನು ಸೇವಿಸಿ ಅಪಾಯ ಆಹ್ವಾನಿಸಿಕೊಳ್ಳಬೇಡಿ. ನಿಮಗೆ ಬೇಕಾಗಿ ರುವುದು ಯಾವುದೇ ಔಷಧಿಯಲ್ಲ, ಸರಿಯಾದ ಮಾರ್ಗದರ್ಶನ ಮಾತ್ರ. ಶಿಶ್ನದಲ್ಲಿ ಉರಿಯಾಗುತ್ತಿರುವುದು ಘರ್ಷಣೆಯ ಕಾರಣಕ್ಕಾಗಿರಬಹುದು. ವೈದ್ಯರಲ್ಲಿ ಒಮ್ಮೆ ಪರೀಕ್ಷಿಸಿಕೊಳ್ಳಿ.

- **24ರ ಯುವಕ. ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿದ್ದೇನೆ. ಯಾವಾಗಲೂ ಲೈಂಗಿಕತೆಯ ಯೋಚನೆಗಳು ಬರುತ್ತಿದ್ದು ಸರಿಯಾಗಿ ಓದಲು ಸಾಧ್ಯವಾಗುತ್ತಿಲ್ಲ. ಪರಿಹಾರವೇನು?**

ಹೆಸರು ಊರು ತಿಳಿಸಿಲ್ಲ.

ಈ ರೀತಿಯ ಪ್ರಶ್ನೆಗಳಿಗೆ ಹಲವಾರು ಬಾರಿ ಉತ್ತರಿಸಲಾಗಿದೆ. ಲೈಂಗಿಕತೆ ಎನ್ನುವುದು ನಮ್ಮೊಳಗೆ ಅಡಕವಾಗಿರುವ ಪ್ರಕೃತಿ ಸಹಜ. ಅವಿಭಾಜ್ಯ ಅಂಗ. ಆದ್ದರಿಂದ ಲೈಂಗಿಕತೆಯ ಕುರಿತಾದ ಯೋಚನೆಗಳನ್ನು ತಪ್ಪಿಸುವುದು ಸಾಧ್ಯವಿಲ್ಲ. ಇಂತಹ ಯೋಚನೆ ಕನಸುಗಳೂ ಕೂಡ ಆನಂದವನ್ನು ನೀಡುತ್ತದೆ. ನಿಮ್ಮೊಳಗೆ ಇರುವ ಬೇರಾವುದೋ ಹಿಂಜರಿಕೆ, ಬೇಸರ, ಕೀಳರಿಮೆಗಳನ್ನು ಮರೆಯಲು ಲೈಂಗಿಕತೆಯ ಕನಸುಗಳು ನೀಡುವ ಆನಂದವನ್ನು ಬಳಸಿದಾಗ ಅದು ನಶೆಯಾಗಿ ಅಂಟಿಕೊಂಡು ಪದೇಪದೇ ಕಾಡುತ್ತದೆ. ಮೊದಲನೆಯದಾಗಿ ಯೋಚನೆಗಳು ಬಂದ ಕೂಡಲೇ ಅವುಗಳನ್ನು ತಿರಸ್ಕರಿಸದೆ ಸಹಜವೆಂದು ಒಪ್ಪಿಕೊಂಡು ದೀರ್ಘವಾಗಿ ಉಸಿರಾಡುತ್ತಾ ದೇಹವನ್ನು ಸಡಿಲಬಿಡಿ. ಎರಡನೆಯದು ಓದುತ್ತಿರುವ ವಿಷಯಗಳನ್ನು ಹೆಚ್ಚು ಆಸಕ್ತಿದಾಯ ಕವಾಗಿ ಬದಲಾಯಿಸಿಕೊಳ್ಳಬೇಕು. ಕೇವಲ ಪರೀಕ್ಷೆಯೊಂದೇ ಗುರಿಯಾದಾಗ ವಿಷಯಗಳಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದು ಕಷ್ಟ. ಆಗ ಲೈಂಗಿಕ ಯೋಚನೆಗಳು ಮತ್ತೆಮತ್ತೆ ಕಾಡುತ್ತವೆ. ಮೂರನೆಯದಾಗಿ ನನ್ನ ಬಗೆಗೆ ನನ್ನೊಳಗಿರುವ ಬೇಸರ, ಹಿಂಜರಿಕೆಗಳೇನಿರಬಹುದು ಎಂದು ಯೋಚಿಸಿ. ಅವುಗಳಿಗೆ ಸಮಾಧಾನ ಹುಡುಕಿಕೊಂಡಾಗ ಲೈಂಗಿಕತೆಯ ಯೋಚನೆಗಳನ್ನು ಆನಂದಿಸಬಹುದೇ ಹೊರತು ಅವು ಪದೇಪದೇ ಕಾಡಲಾರವು.

- **ಟಿಂಟಿನಾಸ್ ಕಾಯಿಲೆಗೆ ಮದ್ದು ಇದೆಯೇ?**

ಹೆಸರು ಊರು ತಿಳಿಸಿಲ್ಲ.

ಈ ಅಂಕಣ ಮಾನಸಿಕ ಸಮಸ್ಯೆಗಳ ಕುರಿತಾದದ್ದು. ದೈಹಿಕ ಕಾಯಿಲೆಗಳಿಗೆ ವೈದ್ಯರನ್ನು ಸಂಪರ್ಕಿಸಿ.

ಏನಾದ್ರೂ ಕೇಳ್ಬೋದು... ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ
bhoomika@prajavani.co.in



ಸುಭಾಷಿತ

ಇತರರಿಗಾಗಿ ನಿಮ್ಮ ಸ್ವಂತಿಕೆಯನ್ನು ಎಂದಿಗೂ ಬಿಟ್ಟುಕೊಡಬೇಡಿ. ಏಕೆಂದರೆ ಈ ಪ್ರಪಂಚದಲ್ಲಿ ನಿಮ್ಮ ಪಾತ್ರವನ್ನು ನಿಮಗಿಂತ ಚೆನ್ನಾಗಿ ಯಾರೂ ನಿಭಾಯಿಸಲು ಸಾಧ್ಯವಿಲ್ಲ.

-ಎ.ಪಿ.ಜೆ. ಅಬ್ದುಲ್ ಕಲಾಂ

ರಾಷ್ಟ್ರಪತಿ ಭವನದಲ್ಲಿ ಮುರ್ಮು ಸಾಂಕೇತಿಕ ಮಹತ್ವ ಹೆಚ್ಚು

ರಾಷ್ಟ್ರಪತಿ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಗೆಲ್ಲುವುದು ಮೊದಲೇ ಗೊತ್ತಿದ್ದ ವಿಚಾರ. ಆದರೆ, ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾದಾಗ ನಿರೀಕ್ಷೆಗಿಂತಲೂ ಹೆಚ್ಚು ಮತಗಳನ್ನು ಪಡೆದು ಅವರು ಗೆದ್ದಿದ್ದಾರೆ. ಎನ್‌ಡಿಎಯಲ್ಲಿರುವ ಪಕ್ಷಗಳು, ಬಿಜೆಪಿಯ ಮಿತ್ರ ಪಕ್ಷಗಳು, ಸಂಸತ್ತಿನಲ್ಲಿ ಬಿಜೆಪಿಯನ್ನು ಬೆಂಬಲಿಸುತ್ತಿರುವ ಪಕ್ಷಗಳು ಮಾತ್ರವಲ್ಲದೆ, ಬಿಜೆಪಿಯ ಜತೆ ಸ್ನೇಹ ಇಲ್ಲದ ಮತ್ತು ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ಪ್ರತಿನಿಧಿಗಳು ಕೂಡ ಮುರ್ಮು ಅವರಿಗೆ ಮತ ಹಾಕಿದ್ದು ಫಲಿತಾಂಶದಿಂದ ವ್ಯಕ್ತವಾಗಿದೆ. ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಹಾಕುವ ಹಕ್ಕು ಹೊಂದಿರುವ ವಿಧಾನಸಭೆಗಳು ಮತ್ತು ಸಂಸತ್ತಿನ ಕೆಲವು ಸದಸ್ಯರು ತಮ್ಮ ಪಕ್ಷಗಳ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇದರಿಂದಾಗಿ, ನೂತನ ರಾಷ್ಟ್ರಪತಿಗೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ವ್ಯಾಪಕ ಬೆಂಬಲ ಸಿಕ್ಕಂತಾಗಿದೆ. ಇದು ಹೀಗೆ ಇರುವುದೇ ಸೊಗಸು. ಏಕೆಂದರೆ, ದೇಶದ ಅತ್ಯುನ್ನತ ಹುದ್ದೆಯು ರಾಜಕೀಯಮುಕ್ತವಾಗಿ ಇರುವುದೇ ಉತ್ತಮ. ಆದಿವಾಸಿ ಸಮುದಾಯದಿಂದ ದೇಶದ ಮೊದಲ ಪ್ರಜೆ ಹುದ್ದೆಗೆ ಏರಿದ ಮೊದಲ ವ್ಯಕ್ತಿ ಮುರ್ಮು. ದೇಶದ ಮಹಿಳೆಯರು ಮತ್ತು ಆದಿವಾಸಿ ಸಮುದಾಯದ ಸ್ಥಿತಿಯು ಇನ್ನೂ ಬಹಳ ಉತ್ತಮಗೊಳ್ಳಬೇಕಿರುವುದರಿಂದ ಈಗಿನ ಆಯ್ಕೆಗೆ ಬಹುದೊಡ್ಡ ಸಾಂಕೇತಿಕ ಮಹತ್ವ ಇದೆ. ರಾಷ್ಟ್ರಪತಿ ಸ್ಥಾನವು ಬಹುವಾಗಿ ನಾಮಮಾತ್ರದ ಹಾಗೂ ಶಿಷ್ಟಾಚಾರದ ಹುದ್ದೆ.

ದೇಶದ ಮಹಿಳೆಯರು ಮತ್ತು ಆದಿವಾಸಿ ಸಮುದಾಯದ ಸ್ಥಿತಿಯು ಇನ್ನೂ ಬಹಳ ಉತ್ತಮಗೊಳ್ಳಬೇಕಿರುವುದರಿಂದ ಈಗಿನ ಆಯ್ಕೆಗೆ ಬಹುದೊಡ್ಡ ಸಾಂಕೇತಿಕ ಮಹತ್ವ ಇದೆ

ಎನ್‌ಡಿಎ ಅಭ್ಯರ್ಥಿಗೆ ತೀವ್ರ ಸವಾಲು ಒಡ್ಡುವಂತಹ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲು ಇದ್ದ ಅವಕಾಶವನ್ನು ವಿರೋಧ ಪಕ್ಷಗಳು ಕಳೆದುಕೊಂಡವು. ವಿರೋಧ ಪಕ್ಷಗಳು ಕಣಕ್ಕೆ ಇಳಿಸಿದ್ದ ಯಶವಂತ ಸಿನ್ಹಾ ಅವರು ಈ ಹಿಂದೆ ಉನ್ನತ ಹುದ್ದೆಗಳು, ಸಚಿವ ಸ್ಥಾನವನ್ನು ನಿಭಾಯಿಸಿದ್ದಾರೆ. ಆದರೆ ಮುರ್ಮು ಅವರಿಗೆ ಯಾವ ರೀತಿಯಲ್ಲಿಯೂ ಕಠಿಣ ಸ್ಪರ್ಧೆ ಒಡ್ಡಲು ಅವರಿಗೆ ಆಗಲಿಲ್ಲ. ಬಿಜೆಪಿಯ ಜತೆಗೆ ಸುದೀರ್ಘ ಕಾಲ ಇದ್ದ ಸಿನ್ಹಾ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಟೀಕಾಕಾರರಾಗಿ ಬದಲಾಗಿದ್ದು ಇತ್ತೀಚೆಗೆ. ಹಾಗಾಗಿಯೇ ಬಿಜೆಪಿ ತನ್ನ ಅಭ್ಯರ್ಥಿ ಮೂಲಕ ಮುಂದಿಟ್ಟ ರಾಜಕೀಯ ತಂತ್ರಗಾರಿಕೆಗೆ ಎದುರೇಟು ನೀಡುವುದು ಸಿನ್ಹಾ ಅವರಿಗೆ ಸಾಧ್ಯವಾಗಲಿಲ್ಲ. ವಿರೋಧ ಪಕ್ಷಗಳ ಜತೆಗೆ ಗುರುತಿಸಿಕೊಂಡಿದ್ದ ಕೆಲವು ಪಕ್ಷಗಳು ಮುರ್ಮು ಅವರಿಗೆ ಬಹಿರಂಗವಾಗಿಯೇ ಬೆಂಬಲ ಘೋಷಿಸಿದ್ದು ಸಿನ್ಹಾ ಅವರಿಗೆ ಮುಜುಗರ ಉಂಟು ಮಾಡಿರಬಹುದು. ಸಿನ್ಹಾ ಅವರ ಹೆಸರನ್ನು ಸೂಚಿಸಿದ್ದ ತೃಣಮೂಲ ಕಾಂಗ್ರೆಸ್ ಪಕ್ಷವೇ ಅವರಿಂದ ಅಂತರ ಕಾಯ್ದುಕೊಳ್ಳುವ ಯತ್ನ ಮಾಡಿತು. ಸಿನ್ಹಾ ಅವರು ಪಶ್ಚಿಮ ಬಂಗಾಳಕ್ಕೆ ಪ್ರಚಾರಕ್ಕೆ ಹೋಗುವುದನ್ನೂ ಆ ಪಕ್ಷ ಬಯಸಲಿಲ್ಲ. ವಿರೋಧ ಪಕ್ಷಗಳ ಸಹಮತದ ಅಭ್ಯರ್ಥಿ ಯಾರೇ ಆಗಿದ್ದರೂ ಅವರು ಸೋಲುವುದು ಖಚಿತವೇ ಇತ್ತು. ಆದರೆ ಸೋಲಿನಲ್ಲಿಯೂ ರಾಜಕೀಯ ಸಂದೇಶವೊಂದನ್ನು ರವಾನಿಸುವ ಅವಕಾಶ ದೊರೆಯುತ್ತಿತ್ತು. ರಾಷ್ಟ್ರಪತಿ ಚುನಾವಣೆಯೊಂದಿಗೆ 2024ರ ಸಾರ್ವತ್ರಿಕ ಚುನಾವಣೆಯ ಪ್ರಚಾರವೂ ಆರಂಭಗೊಂಡಿದೆ ಎಂದು ಕೆಲವು ಮುಖಂಡರು ಹೇಳಿದ್ದರು. ರಾಷ್ಟ್ರಪತಿ ಚುನಾವಣೆಯು ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣಾ ಪ್ರಚಾರದ ಮುನ್ನುಡಿಯೇ ಆಗಿದ್ದರೆ, ವಿರೋಧ ಪಕ್ಷಗಳದ್ದು ಅತಿ ಕಳಪೆ ಪ್ರದರ್ಶನ ಎನ್ನದೆ ವಿಧಿಯಿಲ್ಲ.

ಸುದೀರ್ಘ ಕಾಲದಿಂದ ಬಿಜೆಪಿ ನಿಷ್ಠರಾಗಿಯೇ ಇರುವ ಜಗದೀಪ್ ಧನಕರ್ ಅವರನ್ನು ಉಪ ರಾಷ್ಟ್ರಪತಿ ಹುದ್ದೆಯ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದು ಕೂಡ ಯೋಚಿಸಿ ಕೈಗೊಂಡ ತೀರ್ಮಾನ. ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿರುವ ಅವರು ಜಾಟ್ ಸಮುದಾಯವನ್ನು ಪ್ರತಿನಿಧಿಸುವವರು. ಈ ಸಮುದಾಯವು ಉತ್ತರಪ್ರದೇಶ, ಹರಿಯಾಣ ಮತ್ತು ರಾಜಸ್ಥಾನದ ಕೆಲವು ಭಾಗಗಳಲ್ಲಿ ಪ್ರಭಾವಿಯಾಗಿದೆ. ಈ ಸಮುದಾಯದಲ್ಲಿ ಬಿಜೆಪಿಗೆ ಗಣನೀಯವಾದ ಬೆಂಬಲ ಇದೆ. ಧನಕರ್ ಆಯ್ಕೆಯು ಈ ಬೆಂಬಲವನ್ನು ಇನ್ನಷ್ಟು ಗಟ್ಟಿಗೊಳಿಸಬಹುದು. ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದು ರಾಜಸ್ಥಾನ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ನೆರವಾಗಬಹುದು. ಕಾಂಗ್ರೆಸ್ ನಾಯಕಿ ಮಾರ್ಗರೇಟ್ ಆಳ್ವ ಅವರು ವಿರೋಧ ಪಕ್ಷಗಳ ಅಭ್ಯರ್ಥಿ. ಉಪರಾಷ್ಟ್ರಪತಿ ಚುನಾವಣೆಯೂ ಕಠಿಣ ಸ್ಪರ್ಧೆಯೇ ಇಲ್ಲದೆ ಮುಗಿದು ಹೋಗಲಿದೆ.

ದಿನದ ಟ್ವೀಟ್

ಪ್ರತಿಭಟನೆ ಏಕೆ?

ಸೋನಿಯಾ ಗಾಂಧಿ ಕಾನೂನಿಗಿಂತ ದೊಡ್ಡವರೇ? ಇವರನ್ನು ವಿಚಾರಣೆಗೆ ಒಳಪಡಿಸಿದರೆ ಪ್ರತಿಭಟನೆ ಏಕೆ? ಈ ನೆಲದ ಕಾನೂನಿನ ಬಗ್ಗೆ ನಂಬಿಕೆ, ಗೌರವ ಇದ್ದರೆ ಪ್ರತಿಭಟನೆ ಕೈಬಿಟ್ಟು ವಿಚಾರಣೆ ಎದುರಿಸಿ ಎಂದು ಹುರಿದುಂಬಿಸಿ. ತಪ್ಪು ಮಾಡಿಲ್ಲ ಎಂದರೆ ಭಯವೇಕೆ...?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣ ದರದಲ್ಲಿ ರಿಯಾಯಿತಿ ಹಿಂಪಡೆದು ₹ 1,500 ಕೋಟಿ ಉಳಿಸಲು ಈ ಸರ್ಕಾರ ಬಯಸಿದೆ. ಇದೇ ವೇಳೆ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಕ್ರೋನಿ ಬಂಡವಾಳಶಾಹಿಗಳ ಲಕ್ಷಾಂತರ ಕೋಟಿ ರೂಪಾಯಿ ಸಾಲ ವಸೂಲಿಯನ್ನು ಕೈಬಿಡುತ್ತವೆ. ಬಿಜೆಪಿ ಆಡಳಿತ ಅಂದರೆ ಹೀಗೆ...

ಅಜಯ್ ಕಾಮತ್, ನೇತ್ರತಜ್ಞ

25 ವರ್ಷಗಳ ಹಿಂದೆ

ಬುಧವಾರ, 23-7-1997

• ಸಮುದ್ರಯಾನ: ದೇವಾಲಯದ ಪೂಜಾರಿ ಹೊರಕ್ಕೆ

ತಿರುವನಂತರಪುರ, ಜುಲೈ 22 (ಯುಎನ್‌ಐ)– ತಿರುವಳ್ಳದ ವಲ್ಲಭ ದೇವಾಲಯದ ಪೂಜಾರಿಗೆ ಸಮುದ್ರಯಾನ ನಿಷಿದ್ಧ. ಆದರೆ, ಅದರ ಪೂಜಾರಿ ಹಾಗೂ ಪ್ರಸಿದ್ಧ ಕವಿ ವಿಷ್ಣು ನಾರಾಯಣ ನಂಬೂದಿರಿ ಇತ್ತೀಚೆಗೆ ಇಂಗ್ಲೆಂಡಿಗೆ ಹೋಗಿ ಬಂದರು.

ಶುದ್ಧಿಕಾರ್ಯ ನಿಮಿತ್ತ 1008 ಸಲ ಗಾಯತ್ರಿ ಮಂತ್ರ ಹೇಳಲು ನಿರಾಕರಿಸಿದ ಅವರನ್ನು ದೇವಸ್ಥಾನದಿಂದ ಹೊರ ಹಾಕಿರುವುದು ವಿವಾದಕ್ಕೆ ಕಾರಣವಾಗಿದೆ.

• ಲಾಲೂ ಸರ್ಕಾರ ವಜಾಕ್ಕೆ ವಿರೋಧಿ ಆಗ್ರಹ ಸಂಭವ

ನವದೆಹಲಿ, ಜುಲೈ 22– ನಾಳೆಯಿಂದ ಮೂರು ವಾರ ನಡೆಯಲಿರುವ ಸಂಸತ್‌ನ ಮುಂಗಾರು ಅಧಿವೇಶನವು ತೀವ್ರ ಗದ್ದಲ ಮತ್ತು ಕೋಲಾಹಲ ಎಬ್ಬಿಸುವ ಸಾಧ್ಯತೆಗಳೇ ಹೆಚ್ಚಿವೆ. ಬಿಹಾರ ಮತ್ತು ಮಹಾರಾಷ್ಟ್ರ ಸರ್ಕಾರಗಳ ವಜಾಕ್ಕೆ ವಿರೋಧ ಪಕ್ಷಗಳು ಪಟ್ಟು ಹಿಡಿಯಲು ನಿರ್ಧರಿಸಿವೆ.

950 ಕೋಟಿ ರೂಪಾಯಿಗಳ ಮೇವು ಹಗರಣದಲ್ಲಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರು ಆಪಾದಿತರಾಗಿರುವುದರಿಂದ ಬಿಹಾರ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಬೇಕೆಂದು ಒತ್ತಾಯಿಸಲು ಬಿಜೆಪಿಯ ನಾಯಕರು ಸಭಾಧ್ಯಕ್ಷ ಪಿ.ಎ. ಸಂಗ್ಮಾ ಅವರನ್ನು ಭೇಟಿಯಾಗಿ ನಿಲುವಳಿ ಸೂಚನೆಯನ್ನು ನೀಡಿದ್ದಾರೆ.

• ವೀರಪ್ಪನ್: ಸಂದೇಶ ಇಲ್ಲ– ಕರುಣಾನಿಧಿ

ಚೆನ್ನೈ, ಜುಲೈ 22 (ಪಿಟಿಐ, ಯುಎನ್‌ಐ)– ವೀರಪ್ಪನ್ ಭೇಟಿಗಾಗಿ ಅರಣ್ಯಕ್ಕೆ ತೆರಳಿರುವ 'ನಕ್ಕೀರನ್' ಪತ್ರಿಕೆಯ ಸಂಪಾದಕ ಆರ್.ಆರ್. ಗೋಪಾಲ್ ಅವರಿಂದ ಯಾವುದೇ ಸಂದೇಶ ಬಂದಿಲ್ಲ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 23-7-1972

• ಬ್ರಿಟನ್ನಿಗೆ ಎಚ್.ಎಂ.ಟಿ ತಾಂತ್ರಿಕ ಜ್ಞಾನ ರಫ್ತು

ನವದೆಹಲಿ, ಜುಲೈ 22– ವಿದೇಶಿ ವಿನಿಮಯ ಗಳಿಕೆಯಲ್ಲಿ ಭಾರತ ಹೊಸ ಮುನ್ನಡೆಯನ್ನು ಸಾಧಿಸಿದೆ. ಕೈಗಾರಿಕೆಗಳಲ್ಲಿ ಮುಂದುವರಿದ ಬ್ರಿಟನ್ನಿಗೆ ಯಂತ್ರೋಪಕರಣವೊಂದರ ತಾಂತ್ರಿಕ ಜ್ಞಾನವನ್ನು ಭಾರತ ಮೊತ್ತ ಮೊದಲ ಬಾರಿಗೆ ರಫ್ತು ಮಾಡುತ್ತಿದೆ.

ಪ್ರಪಂಚದಲ್ಲಿ ಖ್ಯಾತ ಯಂತ್ರೋಪಕರಣ ತಯಾರಿಕಾ ಸಂಸ್ಥೆಯಾದ ಮೆಸರ್ಸ್ ಎಕ್‌ಮನ್ ಸಂಸ್ಥೆಗೆ ಹಿಂದೂಸ್ತಾನ್ ಮಷಿನ್ ಟೂಲ್ಸ್ ಸಂಸ್ಥೆಯು 'ಮಿನಿಚಕರ್' ಉತ್ಪಾದನೆಯ ತಾಂತ್ರಿಕ ಪರಿಜ್ಞಾನವನ್ನು ಹತ್ತು ವರ್ಷಗಳ ಒಪ್ಪಂದದಂತೆ ನೀಡುತ್ತದೆ.

ಎಚ್.ಎಂ.ಟಿ.ಯು ಮಿನಿಚಕರ್ ಯಂತ್ರೋಪಕರಣದ ಸ್ವರೂಪ ಹಾಗೂ ಬ್ಲೂಪ್ರಿಂಟ್ ಅನ್ನು ಒದಗಿಸುವುದು. ಬ್ರಿಟಿಷ್ ಸಂಸ್ಥೆಯು ಇದಕ್ಕೆ ಸಾಕಷ್ಟು ಪ್ರಮಾಣದ ಗೌರವ ಧನವನ್ನು ನೀಡುವುದು. ಭಾರತದಲ್ಲಿ ರೂಪಿಸಲಾಗಿರುವ ಮಿನಿಚಕರ್ ಇತರ ಐರೋಪ್ಯ ಮಾರುಕಟ್ಟೆಗಳ ಗಮನವನ್ನೂ ಸೆಳೆದಿದೆ.

• ಕಾವೇರಿ ಜಲವಿವಾದ: ಸುಪ್ರೀಂ ಕೋರ್ಟಿನಿಂದ ಹಿಂತೆಗೆದುಕೊಳ್ಳಲು ತಮಿಳುನಾಡು ಅರ್ಜಿ

ನವದೆಹಲಿ, ಜುಲೈ 22– ಕಾವೇರಿ ಜಲವಿವಾದ ಪ್ರಕರಣವನ್ನು ಹಿಂದಕ್ಕೆ ತೆಗೆದುಕೊಳ್ಳಲು ಅನುಮತಿಯನ್ನು ಕೇಳಿ ತಮಿಳುನಾಡು ಸರ್ಕಾರ ಇಂದು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿತು.

ಸಂಬಂಧಿಸಿದ ರಾಜ್ಯಗಳ ನಡುವೆ ಆದಷ್ಟು ಶೀಘ್ರವಾಗಿ ಪರಿಹಾರ ಮೂಡಲು ಅನುಕೂಲವಾಗುವಂತೆ ಈ ಕ್ರಮವನ್ನು ಕೈಗೊಳ್ಳಲಾಗಿದೆ.

ಕೆವಿಪಿವೈ ರದ್ದತಿಯಿಂದ ಮೂಲ ವಿಜ್ಞಾನದತ್ತ ಎಳೆಯರನ್ನು ಸೆಳೆಯುವ ಪ್ರಯತ್ನಕ್ಕೆ ಹಿನ್ನಡೆ

ಕಳಚಿದ ಸಂಶೋಧನಾ ಕೊಂಡಿ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಪದವಿ ಪೂರ್ವ ಶಿಕ್ಷಣದ ಹಂತದ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಸಂಶೋಧನೆಯ ಪ್ರವೃತ್ತಿ ಬೆಳೆಸುವ ಉದ್ದೇಶದಿಂದ ರೂಪಿಸಿದ್ದ 'ಕಿಶೋರ ವೈಜ್ಞಾನಿಕ ಪ್ರೋತ್ಸಾಹನ್ ಯೋಜನ' (ಕೆವಿಪಿವೈ) ಎಂಬ ಮಹತ್ವಾಕಾಂಕ್ಷೆಯ ಪರೀಕ್ಷೆಯನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಇದೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ರದ್ದುಗೊಳಿಸಿದೆ. ಮೂಲ ವಿಜ್ಞಾನ ವಿಷಯಗಳ ಕುರಿತು ಎಳೆಯ ಮನಸ್ಸುಗಳಲ್ಲಿ ವಿಶೇಷ ಆಸಕ್ತಿ ಹುಟ್ಟಿಸುವ ಮತ್ತು ಸಂಶೋಧನಾ ಪ್ರವೃತ್ತಿ ಬೆಳೆಸುವ ಕೆಲಸಗಳಿಗೆ ಇದರಿಂದ ಭಾರಿ ಹಿನ್ನಡೆಯಾಗಿದೆ.

ಪರೀಕ್ಷೆ ರದ್ದಾಗಿರುವ ಕಾರಣ, ಯುವ ಮನಸ್ಸುಗಳಿಗೆ ವಿಜ್ಞಾನದ ಕುರಿತು ಹಸಿವು ಹೆಚ್ಚಿಸಲು ಇದ್ದ ಒಂದು ದೊಡ್ಡ ವೇದಿಕೆಯು ಕಣ್ಮರೆಯಾದಂತಾಗುತ್ತದೆ. ಇದು ದೇಶದ ಸಂಶೋಧನಾ ರಂಗಕ್ಕೆ ಆಗಿರುವ ದೊಡ್ಡ ನಷ್ಟ ಎಂದು ಕೆವಿಪಿವೈ ಪರೀಕ್ಷೆಯ ಆಧಾರದ ಮೇಲೆ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಆ್ಯಂಡ್ ರಿಸರ್ಚ್ (ಐಐಎಸ್‌ಇಆರ್) ಸಂಸ್ಥೆಗಳಲ್ಲಿ ಓದು ಮುಗಿಸಿರುವ ಅನೇಕರು ವಿಷಾದಿಸಿದ್ದಾರೆ. ವಿಜ್ಞಾನ-ತಂತ್ರಜ್ಞಾನದ ನೆರವಿನಿಂದ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿ ಉಣ್ಣುತ್ತಿರುವ ವರ್ಷದಲ್ಲಿ ಸಂಶೋಧನಾ ರಂಗದ ಮಹತ್ವದ ಕೊಂಡಿಯೊಂದು ಕಳಚಿಬಿದ್ದಿರುವುದು ವಿಪರ್ಯಾಸವೇ ಸರಿ.

ಕಿಶೋರ ವೈಜ್ಞಾನಿಕ ಪ್ರೋತ್ಸಾಹನ್ ಯೋಜನ ಎಂಬುದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ನಡೆಸುವ ಪರೀಕ್ಷೆಯ ಹೆಸರು. ಪ್ರಥಮ, ದ್ವಿತೀಯ ಪಿಯುಸಿ ವಿಜ್ಞಾನ ಮತ್ತು ಪ್ರಥಮ ವರ್ಷದ ಪದವಿ ಕಲಿಯುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ಬರೆಯಲು ಅವಕಾಶ ಇತ್ತು. ಉತ್ತಮ ಅಂಕ ಗಳಿಸಿದವರನ್ನು ಬೆಂಗಳೂರಿನ ಐಐಎಸ್‌ಸಿ ಮತ್ತು ದೇಶದಾದ್ಯಂತ ಇರುವ ಐಐಎಸ್‌ಇಆರ್ ಸಂಸ್ಥೆಗಳಲ್ಲಿ ಮೂರು ವರ್ಷದ ಬಿಎಸ್ಸಿ ಮತ್ತು ಐದು ವರ್ಷದ ಇಂಟಿಗ್ರೇಟೆಡ್ ಎಂಎಸ್ಸಿ ಕೋರ್ಸ್‌ಗೆ ಸೇರಿಸಿಕೊಂಡು ದೇಶಕ್ಕೆ ಅಗತ್ಯವಿರುವ ಮೂಲ ವಿಜ್ಞಾನದ ವಿಷಯ- ಕ್ಷೇತ್ರಗಳಲ್ಲಿ ಸಂಶೋಧನೆ ಮುಂದುವರಿಸಲು ಶಿಕ್ಷಣ ಹಾಗೂ ಧನಸಹಾಯ ನೀಡಲಾಗುತ್ತಿತ್ತು.

ಪದವಿ ವಿದ್ಯಾರ್ಥಿಗಳಿಗೆ ಮೂರು ವರ್ಷಗಳ ಕಾಲ ತಿಂಗಳಿಗೆ ₹ 5,000 ಶಿಷ್ಯವೇತನ ಮತ್ತು ₹ 20,000 ವಾರ್ಷಿಕ ಅನುದಾನ ನೀಡಲಾಗುತ್ತಿತ್ತು. ಸ್ನಾತಕೋತ್ತರ ಪದವಿ ಓದುವವರಿಗೆ ಎರಡು ವರ್ಷಗಳ ಕಾಲ ತಿಂಗಳಿಗೆ ₹ 7,000 ಶಿಷ್ಯವೇತನ ಮತ್ತು ವಾರ್ಷಿಕ ಅನುದಾನ ₹ 28,000 ನೀಡಲಾಗುತ್ತಿತ್ತು. ಸ್ನಾತಕೋತ್ತರ ಪದವಿ ನಂತರ ಪಿಎಚ್.ಡಿ ಪದವಿಗಾಗಿ ಅಧ್ಯಯನ ನಡೆಸುವ ಅವಕಾಶವೂ ವಿದ್ಯಾರ್ಥಿಗಳಿಗೆ ಇರುತ್ತಿತ್ತು. ಐಐಎಸ್‌ಸಿ ಮತ್ತು ಐಐಎಸ್‌ಇಆರ್‌ಗಳಲ್ಲದೆ ಬೇರೆ ಪದವಿ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೂ ಈ ಸೌಲಭ್ಯ ಸಿಗುತ್ತಿತ್ತು. ದೇಶದ ಅತ್ಯುನ್ನತ ವಿಜ್ಞಾನ ಸಂಶೋಧನಾ ಸಂಸ್ಥೆಗಳ ಪ್ರಯೋಗಾಲಯ ಮತ್ತು ಗ್ರಂಥಾಲಯಗಳಿಗೆ ಮುಕ್ತ ಪ್ರವೇಶ ಇರುತ್ತಿತ್ತು.

ಪರೀಕ್ಷೆಯನ್ನಷ್ಟೇ ರದ್ದು ಮಾಡಿದ್ದೇವೆ, 'ಇನ್‌ಸ್ಪೈರ್' (INSPIRE- Innovation in Science Pursuit for Inspired Research) ಕಾರ್ಯಕ್ರಮದ ಅಡಿ ಕೆವಿಪಿವೈ ಮುಂದುವರಿಯುತ್ತದೆ, ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಫೆಲೊಶಿಪ್ ಮುಂದುವರಿಸುತ್ತೇವೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹೇಳಿದೆ. ಕೆವಿಪಿವೈ ಅಡಿ ಪ್ರತಿವರ್ಷ 250ರಿಂದ 300 ಮಂದಿಗೆ ಶಿಷ್ಯವೇತನ ನೀಡಲಾಗುತ್ತಿತ್ತು. ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳು ಆ್ಯಪ್ಟಿಟ್ಯೂಡ್ ಟೆಸ್ಟ್ ಬರೆಯುತ್ತಿದ್ದರು. ಈ ಯೋಜನೆಯು 1999ರಲ್ಲಿ ಶುರುವಾಯಿತು. ಪರೀಕ್ಷೆಯನ್ನು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ನಡೆಸಲಾಗುತ್ತಿತ್ತು. ಪರೀಕ್ಷೆಯ ರದ್ದತಿಗೆ, ಪರೀಕ್ಷೆ ನಡೆಸಲು ಭಾರಿ ಪ್ರಮಾಣದ ವೆಚ್ಚ ತಗಲುತ್ತಿತ್ತು ಮತ್ತು ನೀಡುವ ಫೆಲೊಶಿಪ್‌ಗಿಂತ ಪರೀಕ್ಷೆಯ ಖರ್ಚೇ ಹೆಚ್ಚಾಗುತ್ತಿತ್ತು ಎಂಬ ಕಾರಣ ನೀಡಿರುವ ಇಲಾಖೆಯು ಪರೀಕ್ಷೆಗಾಗಿ ವಿನಿಯೋಗಿಸುತ್ತಿದ್ದ ಹಣವನ್ನು ಉಳಿಸಿ ಅದನ್ನೇ ಹೆಚ್ಚಿನ ವಿದ್ಯಾರ್ಥಿಗಳಿಗೆ ಶಿಷ್ಯವೇತನವಾಗಿ ನೀಡಲಾಗುವುದು ಎಂದಿದೆ.

2007ರಲ್ಲಿ ಪ್ರಾರಂಭವಾದ 'ಇನ್‌ಸ್ಪೈರ್' ಸೇರಲು ಕೆವಿಪಿವೈನಂತೆ ಯಾವುದೇ ಪರೀಕ್ಷೆ ಇರುವುದಿಲ್ಲ. ವಿದ್ಯಾರ್ಥಿಗಳು 12ನೇ ತರಗತಿ, ಜೆಇಇ ಮುಖ್ಯ ಪರೀಕ್ಷೆ, ನೀಟ್ ಹಾಗೂ ನ್ಯಾಷನಲ್ ಟ್ಯಾಲೆಂಟ್ ಸರ್ಚ್ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನು ಆಧರಿಸಿ 'ಇನ್‌ಸ್ಪೈರ್'ಗೆ ಪ್ರವೇಶ ನೀಡಲಾಗುತ್ತದೆ. ಜೆಇಇ ಮತ್ತು ನೀಟ್ ಪರೀಕ್ಷೆಗಳಲ್ಲಿ ಮೊದಲ 10,000 ರ‍್ಯಾಂಕ್ ಗಳಿಸಿದ ವಿದ್ಯಾರ್ಥಿಗಳು ಮತ್ತು ವಿವಿಧ ಪರೀಕ್ಷಾ ಮಂಡಳಿಗಳ ವಾರ್ಷಿಕ ಫಲಿತಾಂಶದಲ್ಲಿ ಗರಿಷ್ಠ ಅಂಕ ಪಡೆದ ಶೇಕಡ 1ರಷ್ಟು ವಿದ್ಯಾರ್ಥಿಗಳು ಇನ್‌ಸ್ಪೈರ್ ಶಿಷ್ಯವೇತನಕ್ಕೆ ಅರ್ಹರಾಗುತ್ತಾರೆ.

ಪರೀಕ್ಷೆ ರದ್ದಾಗಲು ಇನ್ನೊಂದು ಮುಖ್ಯ ಕಾರಣ ಇದೆ. ಪರೀಕ್ಷೆಯನ್ನು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ನಡೆಸಲಾಗುತ್ತಿದೆ, ತಮಿಳು ಭಾಷೆಯಲ್ಲೂ ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿ ಕೆವಿಪಿವೈ ಆಕಾಂಕ್ಷಿಯೊಬ್ಬರು ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠದಲ್ಲಿ ಕಳೆದ ವರ್ಷ ಪ್ರಕರಣ ದಾಖಲಿಸಿದ್ದರು. ಅಭ್ಯರ್ಥಿಯ ಮನವಿಯನ್ನು ಎತ್ತಿಹಿಡಿದಿದ್ದ ಮದುರೈ ಪೀಠವು, ತಮಿಳು ಅಷ್ಟೇ ಅಲ್ಲ, ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಇರುವ ಎಲ್ಲ 22 ಭಾಷೆಗಳಲ್ಲೂ ಪರೀಕ್ಷೆ ನಡೆಸಬೇಕು ಎಂದು ಸಂಬಂಧಿಸಿದ ಇಲಾಖೆಗೆ ಆದೇಶ ನೀಡಿತ್ತು. ಎರಡು ಭಾಷೆಗಳಲ್ಲಿ ಪರೀಕ್ಷೆ ನಡೆಸುವುದಕ್ಕೇ ಭಾರಿ ಮೊತ್ತ ಬೇಕಾಗಿದೆ. ಅದರೊಂದಿಗೆ ಮತ್ತಷ್ಟು ಭಾಷೆಗಳಲ್ಲಿ ಪರೀಕ್ಷೆ ನಡೆಸಬೇಕಾದರೆ ಖರ್ಚು ವಿಪರೀತ ಏರುತ್ತದೆ ಎಂದು ಭಾವಿಸಿದ ಇಲಾಖೆಯು ಕಳೆದ ಸಲ ಪರೀಕ್ಷೆಯನ್ನು ಎರಡು ಬಾರಿ ಮುಂದೂಡಿತ್ತು.

ಹನ್ನೆರಡನೇ ತರಗತಿಯ ಪರೀಕ್ಷೆಗಳು ದೇಶದಾದ್ಯಂತ ಒಂದೇ ತೆರನಾಗಿರುವುದಿಲ್ಲ. ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ, ಸಿಬಿಎಸ್‌ಇ ನಡೆಸುವ ಪರೀಕ್ಷಾ ವಿಧಾನಗಳಲ್ಲಿ ಭಾರಿ ವ್ಯತ್ಯಾಸ ಇರುವುದರಿಂದ ಅಲ್ಲಿನ ಅಂಕಗಳನ್ನು ಆಧರಿಸಿ ಇನ್‌ಸ್ಪೈರ್ ಫೆಲೊಶಿಪ್‌ಗೆ ಪ್ರವೇಶ ತೆಗೆದುಕೊಳ್ಳಲು, ನೀಟ್, ಜೆಇಇ ಮತ್ತು ಎನ್‌ಟಿಎಸ್‌ಇ ಪರೀಕ್ಷೆಗೆ ಬೇಕಾದ ತರಬೇತಿ ಪಡೆದುಕೊಳ್ಳಲು ಗ್ರಾಮೀಣ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಕಷ್ಟಸಾಧ್ಯ. ಶೇಕಡ 75ರಷ್ಟು ಅಂಕ ಪಡೆದವರು ಕೆವಿಪಿವೈ ಪರೀಕ್ಷೆ ಬರೆಯಬಹುದಿತ್ತು. ಇಂತಹದೊಂದು ಮಹತ್ವದ ಅವಕಾಶವನ್ನು ಏಕಾಏಕಿ ತೆಗೆದುಹಾಕಿರುವುದು ವಿವೇಕಯುತ ನಡೆ ಅಲ್ಲ.

ವಿಜ್ಞಾನ ಮತ್ತು ತಂತ್ರಜ್ಞಾನ ರಂಗದ ಸಂಶೋಧನೆಗಳಲ್ಲಿ ಹೆಚ್ಚಿನ ಸಾಧನೆ ಮಾಡುವ ದೇಶವು ವಿಶ್ವದ ಅತ್ಯಂತ ಶಕ್ತಿಶಾಲಿ ರಾಷ್ಟ್ರವೆನಿಸುತ್ತದೆ ಎಂಬುದನ್ನು ಇತಿಹಾಸ ಹಾಗೂ ವರ್ತಮಾನವು ನಮ್ಮ ಮುಂದೆ ತೆರೆದಿಟ್ಟಿದೆ. ಮಾಹಿತಿ ತಂತ್ರಜ್ಞಾನ ಕ್ರಾಂತಿ ಮತ್ತು ಮೂಲ ವಿಜ್ಞಾನದ ಸಂಶೋಧನೆ ಒಂದಾಗಬೇಕಿದ್ದ ಅಮೃತಗಳಿಗೆ ಬಂದೇಬಿಟ್ಟಿತು ಎನ್ನುವಷ್ಟರಲ್ಲಿ ಇಂಥ ಹೊಣೆಗೇಡಿ ಕೆಲಸ ನಡೆದಿದೆ. ಮೂಲ ವಿಜ್ಞಾನದ ಕಡೆ ವಿದ್ಯಾರ್ಥಿಗಳ ಒಲವು ಕಡಿಮೆಯಾಗಿದೆ, ಎಲ್ಲರೂ ಅನ್ವಯಿಕ ಮತ್ತು ಕಂಪ್ಯೂಟರ್ ವಿಜ್ಞಾನದ ಕಡೆ ಮುಖ ಮಾಡುತ್ತಿದ್ದಾರೆ ಎಂಬ ದೂರು ಶೈಕ್ಷಣಿಕ ವಲಯದಲ್ಲಿದೆ. ಈಗ ಅದು ಅನಿವಾರ್ಯ ಎಂದು ಹೇಳುವ ಸಂದರ್ಭವನ್ನು ಸರ್ಕಾರವೇ ಸೃಷ್ಟಿ ಮಾಡಿದೆ.

ಲೇಖಕ: ಪ್ರಾಂಶುಪಾಲ, ವಿದಿಯಾ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು



ಚುರುಮುರಿ

ಪಿ.ಜಿ. ಗಂಡ!

• ತುರುವೇಕೆರೆ ಪ್ರಸಾದ್

'ಅಬ್ಬಬ್ಬಾ! ಎಂಥ ಪುಣ್ಯವಂತ?' ಎಂದು ಪೇಪರ್ ಹಿಡಿದು ಲೊಚಗುಟ್ಟಿದ ಪರ್ಮೇಶಿ.

'ಯಾರ್ರೀ ಅದು ಅಂತಹ ಮಹಾನ್ ಪುಣ್ಯವಂತ' ಕಾಫಿ ಹಿಡಿದು ಬಂದರು ಪದ್ದಮ್ಮ.

'ಪಿ.ಜಿ. ಗಂಡ ಕಣೆ... ಏನ್ ಅದೃಷ್ಟನೇ ಇವನದ್ದು?'

'ಏನು? ಪೋಸ್ಟ್ ಗ್ರಾಜುಯೇಷನ್ ಮಾಡ್ಬಿಟ್ರೆ ಅದೊಂದು ಅದೃಷ್ಟದ ವಿಷಯನಾ? ಇವತ್ತು ಕಾಲಿಗೊಂದು ಕೊಸರಿಗೊಂದು ಡಿಜಿಟಲ್ ಯೂನಿವರ್ಸಿಟಿಗಳಿವೆ. ಯಾರ್ ಬೇಕಾದ್ರೂ ಪಿ.ಜಿ. ತಗೊಂಡು ಮದ್ವೆ ಆಗಿ ಪಿ.ಜಿ. ಗಂಡ ಆಗ್ಬಹುದು...'

'ಅಯ್ಯೋ ಪಿ.ಜಿ. ಗಂಡ ಅಂದ್ರೆ ಅದಲ್ವೇ? ಅಹಮದಾಬಾದಲ್ಲಿ ಒಬ್ಬ ಗಂಡ ಮನೆ ಬಿಟ್ ಹೋಗಿ ಪಿ.ಜಿ. ಸೇರ್ಕೊಂಡಿದಾನಂತೆ'.

'ಎಲ್ಲಾ ನಿಮ್ ತರ ಮನೇಲೇ ಕೂತಿರ್ತಾರಾ? ದೂರದೂರಲ್ಲಿ ಕೆಲಸ ಅಂದ್ಮೇಲೆ ಹೆಂಡ್ತಿ, ಮನೆ ಬಿಟ್ಟು ಪಿ.ಜಿಗೆ ಸೇರ್ಕೊಳ್ಳೇಬೇಕು'.

'ಅಯ್ಯೋ! ಕೆಲಸಕ್ಕೆ ಅಂತ ಅಲ್ಲ ಕಣೆ, ಅತ್ತೆ- ಸೊಸೆ ಜಗಳ ನೋಡಿ ರೋಸಿ ಮನೆ ಬಿಟ್ಟು ಹೋಗಿ ಪಿ.ಜಿ. ಸೇರ್ಕೊಂಡಿದಾನಂತೆ'.

'ಅಯ್ಯೋ ದೇವರೇ.. ಅವನ್ಯೇನ್ರೀ ಬಂತು ? ಹೆಂಡ್ತಿ, ಅಮ್ಮನ್ ಬಿಟ್ ಹೋಗಿದಾನಲ್ಲ'.

'ಅವನನ್ಯಾಕೆ ಬೈತೀಯ? ಅತ್ತೆ- ಸೊಸೆ ಜಗಳ ಎಷ್ಟೂ ಅಂತ ಕೇಳ್ತಾನೆ?'

'ಹೋದ್ರೆ ಹೋಗ್ತಾನೆ ಬಿಡ್ರೀ. ಅವನನ್ನ ನೆಚ್ಕೊಂಡೇ ಬದುಕ್ಬೇಕಾ? ಹೆಂಡ್ತಿನೂ ಆರಾಮಾಗಿ ಇರ್ತಾಳೆ'.

'ಅಲ್ಲೇ ಇರೋದು ಸಮಸ್ಯೆ? ಗಂಡನೇ ಇಲ್ಲ ಅಂದ್ಮೇಲೆ ನಿಂಗೇನ್ ಕೆಲಸ ಇಲ್ಲಿ, ನೀನೂ ಮನೆ ಖಾಲಿ ಮಾಡು ಅಂತ ಅತ್ತೆ, ನಾನ್ ಮಾಡಲ್ಲ ಅಂತ ಸೊಸೆ, ಇಬ್ರೂ ಕೋರ್ಟ್ ಮೆಟ್ಲು ಹತ್ತಿದಾರಂತೆ'.

'ಸರಿ ಮತ್ತೆ, ಅವಳು ಕೋರ್ಟಲ್ಲಿ ಕೇಳ್ತಾಳೆ: ನನ್ನ ಗಂಡನು ತಾಟಕಿ ಅಂತ ಅವರಮ್ಮನ ಕೈಗೆ ನನ್ನನ್ನ ಕೊಟ್ಟು ತಾನು ಸುಖವಾಗಿದಾನೆ. ಇದು ಡೊಮೆಸ್ಟಿಕ್ ವಯಲೆನ್ಸು, ನನ್ ಗಂಡನ್ ವಾಪಸ್ ಮನೆಗೆ ಬರೋ ಹಾಗ್ ಆದೇಶ ಮಾಡಿ ಅಂತ'.

'ಇವರು ಕೇಳುದ್ರು ಅಂತ ನ್ಯಾಯಾಧೀಶರು ಆದೇಶ ಮಾಡಿಬಿಡ್ತಾರಾ?'

'ಮಾಡ್ಲೇ ಬೇಕು. ಇಲ್ಲ ಅಂದ್ರ ನ್ಯಾಯಾಧೀಶರ ಶ್ರೀಮತಿ ಚೀಫ್ ಜಸ್ಟಿಸ್ ಸುಮ್ನೆ ಬಿಟ್‌ಬಿಡ್ತಾರಾ?' ನಕ್ಕರು ಪದ್ದಮ್ಮ.

ಸಂಗತ

ಪಠ್ಯಗಳಲ್ಲಿ ದೇಶಪ್ರೇಮ ಮತ್ತು ನಾಡಪ್ರೇಮ

ವೃಥಾ ಅಪಪ್ರಚಾರ ಮತ್ತು ವೈಯಕ್ತಿಕ ತೇಜೋವಧೆ ಮಾಡುವುದು ಅಪ್ರಬುದ್ಧತೆಯ ಲಕ್ಷಣ

• ಬರಗೂರು ರಾಮಚಂದ್ರಪ್ಪ

ನನ್ನ ನೇತೃತ್ವದ ಸಮಿತಿಗಳು ನಡೆಸಿದ ಪಠ್ಯ ಪರಿಷ್ಕರಣೆಯಲ್ಲಿ ದೇಶಪ್ರೇಮ ಮತ್ತು ನಾಡಪ್ರೇಮದ ಪಾಠಗಳಿಗೆ ಆದ್ಯತೆ ನೀಡಿಲ್ಲವೆಂದು ಮರುಪರಿಷ್ಕರಣೆ ರೂವಾರಿಗಳು ಆರೋಪಿಸಿದ್ದಾರೆ. ಇತ್ತೀಚೆಗೆ ಬರಹಗಾರರಿಗೆ ಬರುತ್ತಿರುವ ಬಹುಪಾಲು ಬೆದರಿಕೆ ಪತ್ರಗಳಲ್ಲಿ ಕೂಡ ಈ ಪ್ರಸ್ತಾಪವಿದ್ದು ನನ್ನ ಹೆಸರು ಹೇಳಿ ಬೆದರಿಕೆ ಹಾಕಲಾಗುತ್ತಿದೆ. ಆದರೆ ವಾಸ್ತವ ಬೇರೆಯೇ ಇದೆ. ನಾವು ಪರಿಷ್ಕರಣೆ ಮಾಡಿದಾಗ ದೇಶಪ್ರೇಮ ಮತ್ತು ನಾಡಪ್ರೇಮದ ಪಾಠಗಳಿಗೆ ಸಾಕಷ್ಟು ಆದ್ಯತೆ ನೀಡಿದ್ದೇವೆ.

3 ರಿಂದ 10ನೇ ತರಗತಿಯವರೆಗಿನ ಕನ್ನಡ ಪ್ರಥಮ ಭಾಷೆ ಪಠ್ಯಪುಸ್ತಕಗಳಲ್ಲಿ ಒಟ್ಟು 28 ಪಾಠಗಳು ದೇಶಪ್ರೇಮ ಮತ್ತು ನಾಡಪ್ರೇಮಕ್ಕೆ ಸಂಬಂಧಿಸಿವೆ. 3ನೇ ತರಗತಿಯಲ್ಲಿ ಮೂರು (ಸ್ವಾತಂತ್ರ್ಯ ದಿನಾಚರಣೆ, ಈಸೂರು ಸ್ವಗತ, ಪ್ರಾಮಾಣಿಕ ಬಾಲಕ), 4ನೇ ತರಗತಿಯಲ್ಲಿ ನಾಲ್ಕು (ಕನ್ನಡಮ್ಮನ ಹರಕೆ, ವೀರ ಮಾತೆ ಜೀಜಾಬಾಯಿ, ಹುಬ್ಬಳ್ಳಿಯ ಹುತಾತ್ಮ ಬಾಲಕ, ಕನಸುಗಾರ ಕಲಾಂ), 5ನೇ ತರಗತಿಯಲ್ಲಿ ಐದು (ಧೀರ ಸೇನಾನಿ, ಸಂಗೊಳ್ಳಿ ರಾಯಣ್ಣ, ಹುತ್ತರಿ ಹಾಡು, ಸ್ವಾತಂತ್ರ್ಯದ ಹಣತೆ, ಭುವನೇಶ್ವರಿ), 6ನೇ ತರಗತಿಯಲ್ಲಿ ಎರಡು (ಕರ್ನಾಟಕ ಏಕೀಕರಣ, ಕಿತ್ತೂರ ಕೇಸರಿ), 7ನೇ ತರಗತಿಯಲ್ಲಿ ನಾಲ್ಕು (ಮೈಲಾರ ಮಹಾದೇವ, ಸ್ವಾತಂತ್ರ್ಯ ಸ್ವರ್ಗ, ಹಚ್ಚೇವು ಕನ್ನಡದ ದೀಪ, ಬಿಡುಗಡೆಯ ಹಾಡು), 8ನೇ ತರಗತಿಯಲ್ಲಿ ಎರಡು (ಕನ್ನಡಿಗರ ತಾಯಿ, ಕಟ್ಟುವೆವು ನಾವು) 9ನೇ ತರಗತಿಯಲ್ಲಿ ಮೂರು (ಆದರ್ಶ ಶಿಕ್ಷಕ ಸರ್ವಪಲ್ಲಿ ರಾಧಾಕೃಷ್ಣನ್, ಹೊಸಹಾಡು, ಕನ್ನಡ ನಾಡು-ನುಡಿ), 10ನೇ ತರಗತಿಯಲ್ಲಿ ಐದು (ಭಾಗ್ಯಶಿಲ್ಪಿಗಳು, ಸಂಕಲ್ಪಗೀತೆ, ಹಲಗಲಿಯ ಬೇಡರು, ಸ್ವಾಮಿ ವಿವೇಕಾನಂದರ ಚಿಂತನೆಗಳು, ಭಗತ್ ಸಿಂಗ್) ಹೀಗೆ ಒಟ್ಟು 28 ಗದ್ಯ ಪಾಠಗಳು ಕನ್ನಡ ಪ್ರಥಮ ಭಾಷೆ ಪಠ್ಯಗಳಲ್ಲಿವೆ.

ಕನ್ನಡ ದ್ವಿತೀಯ ಮತ್ತು ತೃತೀಯ ಭಾಷೆ ಪಠ್ಯಗಳಲ್ಲಿ ದೇಶ ಮತ್ತು ನಾಡಪ್ರೇಮದ ಪಾಠಗಳಿವೆ. ಭರತ ಭೂಮಿ ನಮ್ಮ ತಾಯಿ, ಐಕ್ಯಗಾನ, ದೇಶಪ್ರೇಮಿ ಇಕ್ಬಾಲ್, ನನ್ನ ದೇಶ ನನ್ನ ಜನ, ನಿತ್ಯೋತ್ಸವ, ಧ್ವಜರಕ್ಷಣೆ, ದೊಡ್ಡವರ ದಾರಿ, ನಮ್ಮ ರಾಷ್ಟ್ರಧ್ವಜ, ಧೀರಬಾಲಕ ನರೇಂದ್ರ, ಕಟ್ಟುತೇವ ನಾವು, ಗಾಂಧೀಜಿ ಜೀವನ, ಬಂಡೆದ್ದ ಮುಂಡರಗಿ ಭೀಮರಾಯ, ಕರ್ನಾಟಕದ ವೀರ ವನಿತೆಯರು ಮುಂತಾದ ಪಾಠಗಳಲ್ಲದೆ ಕನ್ನಡ ನುಡಿಗೆ ಸಂಬಂಧಿಸಿದ ಆರಕ್ಕೂ ಹೆಚ್ಚು ಪಾಠಗಳಿವೆ. ಒಟ್ಟು ಇಪ್ಪತ್ತಕ್ಕೂ ಹೆಚ್ಚು ದೇಶಪ್ರೇಮ ಮತ್ತು ನಾಡಪ್ರೇಮದ ಪಾಠಗಳಿವೆ.

ನಮ್ಮ ಪರಿಷ್ಕರಣೆಯ ಒಂದು ಮುಖ್ಯ ವಿಶೇಷವೆಂದರೆ, ಬೇರೆ ಭಾಷೆ ಪಠ್ಯಗಳಲ್ಲೂ ದೇಶ ಮತ್ತು ನಾಡು-ನುಡಿ ಪ್ರೇಮದ ಪಾಠಗಳನ್ನು ಅಳವಡಿಸಿದ್ದೇವೆ. ಉರ್ದು ಪಠ್ಯದಲ್ಲಿ ರಾಷ್ಟ್ರೀಯ ಭಾವೈಕ್ಯತೆ, ಮರಾಠಿ ಪಠ್ಯದಲ್ಲಿ ಭಾಷಾ ಬಾಂಧವ್ಯ ಕುರಿತ ಪಾಠಗಳನ್ನು ಸೇರಿಸಿದ್ದೇವೆ. ಸಂಸ್ಕೃತದಲ್ಲಿ ಅಕ್ಕಮಹಾದೇವಿ, ಬಸವಣ್ಣ, ತಮಿಳಿನಲ್ಲಿ ಆದಿಕವಿ ಪಂಪ, ಹಿಂದಿಯಲ್ಲಿ ಕರ್ನಾಟಕ ಸಂಸ್ಕೃತಿ ಕುರಿತ ಪಾಠಗಳನ್ನು ಸೇರ್ಪಡೆ ಮಾಡಿದ್ದು ಬೇರೆ ಭಾಷಿಕರು ಕನ್ನಡ ಕುರಿತು ಕಾಳಜಿ ವಹಿಸುವುದಕ್ಕೆ ಪ್ರೇರಣೆ ನೀಡಲಾಗಿದೆ.

ಸಮಾಜ ವಿಜ್ಞಾನ ಪಠ್ಯಗಳಲ್ಲಿ, ದೇಶಕ್ಕಾಗಿ ದುಡಿದ ಅನೇಕರನ್ನು ಕುರಿತ ಪಾಠಗಳಿವೆ. ಮಹಿಳಾ ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತ ಹೊಸ ಪಾಠವನ್ನು ನಾವು ಸೇರಿಸಿದ್ದೆವು. ಈ ಪಾಠದಲ್ಲಿ ರಾಣಿ ಅಬ್ಬಕ್ಕ, ಯಶೋಧರಮ್ಮ ದಾಸಪ್ಪ, ಬಳ್ಳಾರಿ ಸಿದ್ದಮ್ಮ ಮುಂತಾದವರ ವಿವರಗಳಿದ್ದವು. ಮರುಪರಿಷ್ಕರಣೆಯಲ್ಲಿ ಈ ಅಧ್ಯಾಯವನ್ನು ಪೂರ್ಣ ಬಿಡಲಾಗಿದೆ. ನಾವು ಸೇರಿಸಿದ್ದ ಸಾವಿತ್ರಿಬಾಯಿ ಫುಲೆ ಮುಂತಾದ ಸಮಾಜ ಸುಧಾರಕಿಯರ ಪಾಠಗಳನ್ನು ಕೈಬಿಡಲಾಗಿದೆ. ಇಂಥವರಿಂದ ನಾವು ದೇಶ ಮತ್ತು ನಾಡಪ್ರೇಮದ ಪ್ರಮಾಣ ಪತ್ರ ಪಡೆಯಬೇಕಿಲ್ಲ. ದೇಶಪ್ರೇಮ ಮತ್ತು ನಾಡಪ್ರೇಮಗಳು ನನ್ನಂಥವರ ಭಾವಕೋಶದ ಅವಿಭಾಜ್ಯ ಭಾಗವಾಗಿವೆ. ಒಂದು ವೇಳೆ ನಾವು ಸೇರಿಸದ ಯಾವುದಾದರೂ ವಿಷಯಗಳಿದ್ದರೆ ಮರುಪರಿಷ್ಕರಣೆಯಲ್ಲಿ ಸಕಾರಾತ್ಮಕವಾಗಿ ಸೇರ್ಪಡೆ ಮಾಡಬೇಕೇ ವಿನಾ ವೃಥಾ ಅಪಪ್ರಚಾರ ಮತ್ತು ವೈಯಕ್ತಿಕ ತೇಜೋವಧೆ ಮಾಡುವುದು ಅಪ್ರಬುದ್ಧತೆಯ ಲಕ್ಷಣ. ನಾನಾಗಲೀ, ನನ್ನ ನೇತೃತ್ವದ ಸಮಿತಿಗಳವರಾಗಲೀ ನಮಗಿಂತ ಹಿಂದಿನ ಪಠ್ಯ ರಚನೆ ಸಮಿತಿಯವರ ಬಗ್ಗೆ ಯಾವತ್ತೂ ಟೀಕೆ ಮಾಡಿಲ್ಲ. ಬದಲಾಗಿ ನಮಗೆ ಕೊಟ್ಟ ಕೆಲಸವನ್ನು ಮಾಡಿದ್ದೇವೆ.

ಪಠ್ಯಕ್ರಮ, ಪಠ್ಯವಸ್ತು, ಪಠ್ಯಪುಸ್ತಕ ರಚನೆ ಮತ್ತು ಪರಿಷ್ಕರಣೆಗಳಿಗೆ ಕೆಲವು ನಿರ್ದಿಷ್ಟ ಮಾರ್ಗಸೂಚಿಗಳಿರುತ್ತವೆ. ಈ ಮಾರ್ಗಸೂಚಿಗಳನ್ನು ರಾಷ್ಟ್ರೀಯ ಹಾಗೂ ರಾಜ್ಯ ಪಠ್ಯಕ್ರಮ ಚೌಕಟ್ಟುಗಳು ನೀಡಿವೆ. ಸಂವಿಧಾನಾತ್ಮಕ ಆಶಯಗಳನ್ನು ಪರಿಪಾಲಿಸಬೇಕೆಂದು ಹೇಳಿವೆ. ಭಾಷಾ ಪಠ್ಯಗಳಲ್ಲಿ ವಸ್ತು ವೈವಿಧ್ಯವನ್ನೂ ಮತ್ತು ಎಲ್ಲ ಪಠ್ಯಗಳಲ್ಲಿ ನಿಖರತೆಯನ್ನೂ ಈ ಚೌಕಟ್ಟುಗಳು ಪ್ರತಿಪಾದಿಸುತ್ತವೆ. ಸುರಳಿ ವಿಧಾನವನ್ನು ಅನುಸರಿಸಿ ಪ್ರಾಥಮಿಕ ಹಂತದ ಕೆಲವು ಮುಖ್ಯ ವಿಷಯಗಳನ್ನು ಮತ್ತೆ ಪ್ರೌಢಶಾಲಾ ಹಂತದಲ್ಲೂ ಅಳವಡಿಸಬೇಕೆಂದು ಹೇಳಲಾಗಿದೆ. ಈ ಎಲ್ಲಾ ಮಾರ್ಗಸೂಚಿಗಳ ಹಿನ್ನೆಲೆಯಲ್ಲಿ ಪಠ್ಯ ರಚನೆ, ಪರಿಷ್ಕರಣೆಗಳು ನಡೆಯುತ್ತವೆ. ನಮ್ಮ ಪರಿಷ್ಕರಣೆ ಕಾರ್ಯವೂ ಈ ಆಧಾರದಲ್ಲೇ ನಡೆದಿದೆ. ಯಾವುದಾದರೂ ಪಾಠ ಬಿಟ್ಟಿದ್ದರೆ ಅಥವಾ ಸೇರಿಸಿದ್ದರೆ ಅದಕ್ಕೆ ಸೂಕ್ತ ಕಾರಣಗಳನ್ನು ಲಿಖಿತವಾಗಿ ನೀಡಲಾಗಿದೆ. ಸಾಮಾಜಿಕ ನ್ಯಾಯ, ಲಿಂಗಸಮಾನತೆ, ರಾಷ್ಟ್ರೀಯತೆ-ಪ್ರಾದೇಶಿಕತೆಗಳ ಸಕಾರಾತ್ಮಕ ಸಮತೋಲನವನ್ನು ಕಾಯ್ದುಕೊಳ್ಳಲಾಗಿದೆ.

ವಾಚಕರ ವಾಣಿ

ಸಂಭ್ರಮಕ್ಕೆ ಹುಳಿ ಹಿಂಡುವುದು ಬೇಡ

ನಾಸಿರುದ್ದೀನ್ ಶಾ ಅವರು ರಂಗಕರ್ಮಿಯಾಗಿ ಕೆಲಸ ಪ್ರಾರಂಭಿಸಿ ಐವತ್ತು ವರ್ಷ ಸಂದಿದ್ದಕ್ಕೆ ಗೌರವಾರ್ಥವಾಗಿ ಅವರ ಗೆಳೆಯರು, ನಾಟಕ ತಂಡಗಳು ಸೇರಿ ಒಂದು ತಿಂಗಳ ಕಾಲ ದಿನಕ್ಕೊಂದು ನಾಟಕ ಆಡುವ ಯೋಜನೆ ಮಾಡಿಕೊಂಡು ಮುಂಬೈನಲ್ಲಿ ಜೊತೆಗೆ ರಂಗ ಚಟುವಟಿಕೆಗೆ ಕೇಂದ್ರಸ್ಥಾನವೆಂದು ಹೆಸರಾಗಿರುವ ಬೆಂಗಳೂರಿನಲ್ಲಿಯೂ ಪ್ರಸ್ತುತಪಡಿಸಲು ನಿರ್ಧರಿಸಿದ್ದಾರೆ. ಎಲ್ಲಾ ನಾಟಕಗಳಲ್ಲೂ ನಾಸಿರುದ್ದೀನ್ ಅಭಿನಯಿಸುತ್ತಿಲ್ಲ. ದೇಶದ ಹಲವಾರು ವಿಖ್ಯಾತ ಕಲಾವಿದರು ಅಭಿನಯಿಸುತ್ತಿದ್ದಾರೆ.

ಬೆಂಗಳೂರಿನ 'ರಂಗಶಂಕರ'ವನ್ನು ಒಂದು ತಿಂಗಳ ಕಾಲ ಇದಕ್ಕಾಗಿ ಬಿಟ್ಟುಕೊಟ್ಟಿರುವುದಕ್ಕೆ ರಂಗಕರ್ಮಿ ಪ್ರಸನ್ನ ಅವರು ತಕರಾರು ಎತ್ತಿದ್ದಾರೆ. ಅವರ ತಕರಾರಿನಲ್ಲಿ ಯಾವುದೇ ಹುರುಳಿಲ್ಲ. ಯಾವುದೇ ನಾಟಕೋತ್ಸವವನ್ನು ಮಾಡಲು ಯಾರ ಅಪ್ಪಣೆಯನ್ನು ಯಾರೂ ಪಡೆಯಬೇಕಾಗಿಲ್ಲ. ಮುಂದಿನ ತಿಂಗಳು ಪ್ರಸನ್ನ ಅವರ ನಾಟಕೋತ್ಸವ ಮಾಡಿದರೆ ಯಾರೂ ಬೇಡ ಅನ್ನುವುದಿಲ್ಲ. ಒಬ್ಬ ಒಳ್ಳೆಯ ನಟ, ಗಂಭೀರ ರಂಗಕರ್ಮಿ ಐವತ್ತು ವರ್ಷ ಸತತವಾಗಿ ಅಭಿನಯದಲ್ಲಿ ತೊಡಗಿಸಿಕೊಂಡ ಸಂಭ್ರಮಕ್ಕೆ ಕಲ್ಲು ಹಾಕುವ ಧೋರಣೆ ಯಾರಿಗೂ ಶೋಭೆ ತರುವುದಿಲ್ಲ.

ಪ್ರತಿಭಾ ನಂದಕುಮಾರ್, ಬೆಂಗಳೂರು

ಅಕಟಕಟಾ ಶಬ್ದಗಳ ಲಜ್ಜೆಯ ನೋಡಾ...

ಕೆಲವು ಪದಗಳನ್ನು, ನುಡಿಗಟ್ಟುಗಳನ್ನು 'ಅಸಾಂವಿಧಾನಿಕ ಅಭಿವ್ಯಕ್ತಿ'ಗಳ ಪಟ್ಟಿಗೆ ಲೋಕಸಭಾ ಸಚಿವಾಲಯವು ಸೇರಿಸಿರುವುದರ ಬಗ್ಗೆ ಹಲವು ಬಗೆಯ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಈ ನಡೆಯನ್ನು ವಿರೋಧ ಪಕ್ಷಗಳು ಯಥಾಪ್ರಕಾರ ವಿರೋಧಿಸಿವೆ. ಇದ್ದಕ್ಕಿದ್ದಂತೆ ಇಂತಹ ಶಬ್ದಗಳ ಬಳಕೆಯನ್ನು ಪ್ರತಿಬಂಧಿಸಿದರೆ ನಮ್ಮ ಜನಪ್ರತಿನಿಧಿಗಳು ಏನು ಮಾಡಬೇಕು, ಹೊಸ ಪದಗಳನ್ನು ಎಲ್ಲಿಂದ ತರಬೇಕು!? ಹಲವಾರು ವರ್ಷಗಳ ರಾಜಕೀಯ ಜೀವನದ ಅನುಭವ, ಸಂಸದೀಯ ನಡವಳಿಕೆಗಳ ಹಿನ್ನೆಲೆಯಲ್ಲಿ ಬಳಕೆಗೆ ಬಂದಿರುವ ಶಬ್ದಗಳು ಅವು. ಯಾವ ಪಕ್ಷದ ನೇತೃತ್ವದ ಸರ್ಕಾರ ಇದ್ದರೂ ಯಥೋಚಿತವಾಗಿ ಬಳಕೆ ಮಾಡಲಾಗುವ ಶಬ್ದಗಳು. ಆ ಶಬ್ದಗಳು ಬಳಸಿ ಬಳಸಿ ಸವಕಲು ಆಗಿವೆ, ಈಗ ಏಕಾಏಕಿ ಅಸಾಂವಿಧಾನಿಕ ಎಂದರೆ ಹೇಗೆ?

ಪಟ್ಟಿಗೆ ಹೊಸದಾಗಿ ಸೇರಿರುವ ಪದಗಳು ಈಗಾಗಲೇ ರಾಜಕೀಯ ಶಬ್ದಕೋಶ ಸೇರಿವೆ. ಸದನದಲ್ಲಿ ಅಲ್ಲದೆ ಜನಸಾಮಾನ್ಯರು ಆ ಪದಗಳನ್ನು ಬಳಸಲು ಸಾಧ್ಯವೇ? ಕಾಲಮಾನಕ್ಕೆ ಅನುಗುಣವಾಗಿ ಇದಕ್ಕಿಂತ ಹರಿತವಾದ ಶಬ್ದಗಳನ್ನು ಠಂಕಿಸುವವರೆಗೆ ಇವೇ ಶಬ್ದಗಳು ಬಳಕೆಯಲ್ಲಿ ಇರಲಿ. ಜನರೂ ಅವುಗಳಿಗೆ ಒಗ್ಗಿದ್ದಾರೆ. ಭ್ರಷ್ಟಾಚಾರ ರಹಿತ ಆಡಳಿತ, ತತ್ವ- ಸಿದ್ಧಾಂತ ಆಧಾರಿತ ಅರ್ಥಪೂರ್ಣ ಚರ್ಚೆಗಳೇ ಸದನಗಳಿಂದ ಮಾಯವಾಗಿರುವಾಗ, ಜನಪ್ರತಿನಿಧಿಗಳ ಸದನದ ಒಳಹೊರಗಿನ ನಡೆನುಡಿಗಳಿಗೆ ಶಬ್ದಗಳೇ ನಾಚುತ್ತಾ ಇರುವಾಗ, ಅಲ್ಲಮ ಅಂದಂತೆ ಅಕಟಕಟಾ ಶಬ್ದಗಳ ಲಜ್ಜೆಯ ನೋಡಾ ಎಂದು ಅನ್ನಬಹುದು ಅಷ್ಟೆ.

ವೆಂಕಟೇಶ ಮಾಚಕನೂರ, ಧಾರವಾಡ

ಶಿಕ್ಷಕರದು ಅಸಹಾಯಕ ಸ್ಥಿತಿ...

'ಮಕ್ಕಳಲ್ಲಿ ಮೂಡಲಿ ತನ್ಮಯ ಭಾವ' ಎಂಬ ನರೇಂದ್ರ ರೈ ದೇರ್ಲ ಅವರ ಲೇಖನ (ಸಂಗತ, ಜುಲೈ 22) ಸಕಾಲಿಕವಾಗಿದೆ. ವಿದ್ಯಾರ್ಥಿಗಳಲ್ಲಿ ಆಗಿರುವ ಬದಲಾವಣೆ ಬಗೆಗಿನ ಲೇಖಕರ ಗ್ರಹಿಕೆಯು ಸರಿಯಾಗಿದೆ. ಅದು, ಲೇಖಕರ ಪಾಡು ಮಾತ್ರವಲ್ಲ, ನನ್ನಂತಹ ಎಲ್ಲಾ ಶಿಕ್ಷಕರ ಪಾಡು ಕೂಡ ಆಗಿದೆ. ವರ್ಗಕೋಣೆಯಲ್ಲಿ ವಿದ್ಯಾರ್ಥಿಗಳು ಈಗ ಶಾಂತಚಿತ್ತರಾಗಿ ಪಾಠ ಆಲಿಸುತ್ತಿಲ್ಲ. ಕೊರೊನಾ ತೀವ್ರವಾಗಿ ಬಾಧಿಸಿದ ಸಂದರ್ಭದಲ್ಲಿ ಆನ್‌ಲೈನ್ ತರಗತಿಗಳು ನಡೆಯುತ್ತಿದ್ದಾಗ ಅಂಟಿದ ಮೊಬೈಲ್ ಗೀಳು ಅವರನ್ನು ಇನ್ನೂ ಬಿಟ್ಟಿಲ್ಲ. ಅವರನ್ನು ಬೈದು-ಬಡಿದು ದಾರಿಗೆ ತರಲು ಈಗ ಸಾಧ್ಯವಿಲ್ಲ. ಅಸಹಾಯಕ ಸ್ಥಿತಿಯಲ್ಲಿ ಶಿಕ್ಷಕರಿದ್ದಾರೆ.

ಬುದ್ಧಿವಾದ ಹೇಳಿದರೂ ಕೇಳುವ ವ್ಯವಧಾನ ಅವರಿಗಿಲ್ಲ. ಪಾಲಕರಿಗೆ ತಿಳಿಸಿದರೆ ಅವರು ಶಿಕ್ಷಕರ ಮೇಲೆ ಹೊಣೆ ಹಾಕಿ ಜಾರಿಕೊಳ್ಳುತ್ತಾರೆ. ಇತ್ತ ಶಿಕ್ಷಕರ ಮೇಲೆ ಸರ್ಕಾರವು ನೂರೆಂಟು ಕಾರ್ಯ ಹೇರಿದೆ. ಖಾಲಿಯಾದ ಶಿಕ್ಷಕ ಸ್ಥಾನಗಳಿಗೆ ಹೊಸಬರು ನೇಮಕವಾಗುತ್ತಿಲ್ಲ. ಹೀಗಾದರೆ ಗುಣಾತ್ಮಕ ಶಿಕ್ಷಣ ಹೇಗೆ ಸಾಧ್ಯ?

ಜೆ.ಪಿ. ಅಗಸಿಮನಿ, ಗೌಂಡವಾಡ, ಬೆಳಗಾವಿ

ಜನತಂತ್ರದ ಗಮ್ಮತ್ತು

ಭಾರತದ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಅವರು ಆಯ್ಕೆಯಾಗುವ ಮೂಲಕ ಮೊದಲ ಬಾರಿ ಒಬ್ಬ ಆದಿವಾಸಿ ಮಹಿಳೆಯು ದೇಶದ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇರುವ ಎಲ್ಲರೂ ಈ ಆಯ್ಕೆಯನ್ನು ಸ್ವಾಗತಿಸಲೇಬೇಕು. ಪ್ರಜಾಪ್ರಭುತ್ವದ ನಿಜವಾದ ಗಮ್ಮತ್ತು ಇದು.

ಆದಿವಾಸಿ ಸಮುದಾಯದ ಮತಗಳ ಮೇಲೆ ಕಣ್ಣಿಟ್ಟು ಬಿಜೆಪಿಯವರು ಮುರ್ಮು ಅವರನ್ನು ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದಾರೆ ಎಂಬ ಆರೋಪಗಳು ಕೇಳಿಬಂದಿದ್ದವು. ನೂತನ ರಾಷ್ಟ್ರಪತಿಯವರು ತಮ್ಮ ನಿಷ್ಠೆ- ಬದ್ಧತೆಯು ಸಂವಿಧಾನಕ್ಕೆ ಮಾತ್ರ, ಆಳುವ ಪಕ್ಷಕ್ಕೆ ಅಲ್ಲ ಎಂಬುದನ್ನು ತೋರಿಸಿಕೊಟ್ಟು ತಮ್ಮ ಬಗೆಗಿನ ಆರೋಪಗಳನ್ನು ಸುಳ್ಳಾಗಿಸಬೇಕು.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ರಿಯಾಯಿತಿಗೆ ಕತ್ತರಿ ಸರಿಯಲ್ಲ

ರೈಲ್ವೆ ಪ್ರಯಾಣ ದರದಲ್ಲಿ ಹಿರಿಯ ನಾಗರಿಕರಿಗೆ ನೀಡುತ್ತಿದ್ದ ರಿಯಾಯಿತಿ ಸವಲತ್ತನ್ನು ಪುನಃ ಜಾರಿಗೆ ತರಲು ಆಗದು ಎಂದು ರೈಲ್ವೆ ಸಚಿವರು ಹೇಳಿರುವುದು ದುರದೃಷ್ಟಕರ. ವೃದ್ಧಾಪ್ಯದಲ್ಲಿ ತೀರಾ ಅಗತ್ಯ ಇದ್ದಾಗ ಮಾತ್ರ ಪ್ರಯಾಣ ಮಾಡುವವರೇ ಹೆಚ್ಚು. ಅವರಿಗೆ ರಿಯಾಯಿತಿ ಕೊಡುವುದು ರೈಲ್ವೆಗೆ ಹೊರೆಯಾಗಲಾರದು.

ಇಲಾಖೆಯ ಆರ್ಥಿಕ ಮುಗ್ಗಟ್ಟಿಗೆ ಬೇರೆ ಕಾರಣಗಳಿವೆ. ಅವುಗಳನ್ನು ಸರಿಪಡಿಸಲು ಕ್ರಮ ಜರುಗಿಸಲಿ. ಅದರ ಹೆಸರಿನಲ್ಲಿ ಹಿರಿಯರ ರಿಯಾಯಿತಿಗೆ ಕತ್ತರಿ ಹಾಕಿರುವುದು ಒಪ್ಪತಕ್ಕ ನಡೆಯಲ್ಲ.

ಬಾ.ಹ. ರಮಾಕುಮಾರಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹೇರಿಕೆ ಜನವಿರೋಧಿ ಕ್ರಮ ಅಲ್ಲವೇ?

ಶ್ರೀಮಂತರ ಕೊಬ್ಬಿಸುವ, ಬಡವರ ಬಡಿಯುವ ನೀತಿ

ಪೆಟ್ರೋಲ್, ಡೀಸೆಲ್ ಮೇಲೆ ಹೇರಿರುವ ಅಮಾನವೀಯ ಎಕ್ಸೈಸ್ ಸುಂಕದ ಜೊತೆಗೆ ಸದಾ ಏರುತ್ತಿರುವ ಎಲ್.ಪಿ.ಜಿ ದರವೂ, ಕ್ರೂರವಾಗಿ ವಿಧಿಸಿರುವ ಜಿಎಸ್‌ಟಿಯಲ್ಲಿನ ಹೆಚ್ಚಳದೊಂದಿಗೆ ಮಿಳಿತಗೊಂಡು ದೇಶದ ಜನರನ್ನು ಹೈರಾಣಾಗಿಸುತ್ತಿದೆ. ಪೆಟ್ರೋಲ್, ಡೀಸೆಲ್‌ನಂತಹ ಇಂಧನಗಳ ಮೇಲಿನ ಎಕ್ಸೈಸ್ ಸುಂಕ ಮತ್ತು ಜಿಎಸ್‌ಟಿ ಎಂಬ ಈ ಎರಡು ಪರೋಕ್ಷ ತೆರಿಗೆಗಳ ಮೂಲಕ ಜನಸಾಮಾನ್ಯರನ್ನು ಹಿಂಡಿ-ಹಿಪ್ಪೆ ಮಾಡಿ ಕೇಂದ್ರ ಸರ್ಕಾರವು ತನ್ನ ಬೊಕ್ಕಸವನ್ನು ತುಂಬಿಸಿಕೊಳ್ಳುವತ್ತ ಗಮನ ನೀಡಿದೆ ಎಂಬುದು ಸ್ಪಷ್ಟವಾಗಿದೆ

ಪ್ರಜಾವಾಣಿ ಚರ್ಚೆ

● ಸತ್ಯಾನಂದ

ಪ್ರಜೆಗಳ ಮೇಲೆ ಹೊಸ ಹೊಸ ತೆರಿಗೆಗಳ ಹೇರಿಕೆಯನ್ನು ಸಂಭ್ರಮಿಸಲು ಆಗದು ಎಂದು ಸಾಮಾನ್ಯ ತಿಳಿವಳಿಕೆ ಇರುವವರು ಹೇಳಬಲ್ಲರು. ಆದರೆ, 2017ರ ಜುಲೈ 1ರಂದು ಮಧ್ಯರಾತ್ರಿ ನಡೆಸಿದ ಸಂಸತ್ತಿನ ವಿಶೇಷ ಜಂಟಿ ಅಧಿವೇಶನದಲ್ಲಿ, ಜಿಎಸ್‌ಟಿ ಹೇರುವಿಕೆಯನ್ನು ಬಹಳ ಠೇಂಕಾರದಿಂದಲೇ, ಬಹಳ ಸಂಭ್ರಮದಿಂದಲೇ ತರಲಾಯಿತು. ಜಿಎಸ್‌ಟಿ ಚಾಲ್ತಿಗೆ ಬಂದು ಈಗ 5 ವರ್ಷಗಳು ಕಳೆದಿವೆ. ಜಿಎಸ್‌ಟಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳು ಎದುರಾಗಿದ್ದರೂ ಎನ್‌ಡಿಎ ಸರ್ಕಾರದ ದರ್ಪ, ಠೇಂಕಾರಗಳು ಒಂದಿನಿತೂ ಕಮ್ಮಿಯಾಗಿಲ್ಲ. ಜನ ಸಾಮಾನ್ಯರ ಸಮಸ್ಯೆಗಳಿಗೆ, ಭಾವನೆಗಳಿಗೆ ಸರ್ಕಾರವು ಕಿಂಚಿತ್ತೂ ಗಮನ ಕೊಡುತ್ತಿಲ್ಲ ಮಾತ್ರವಲ್ಲ, ಇಂದು ಸರ್ಕಾರವು ಬಡಜನರ ಕಿಸೆಯಿಂದ ನೇರವಾಗಿ ಶ್ರೀಮಂತರ ತಿಜೋರಿಗೆ ಸಂಪತ್ತನ್ನು ವರ್ಗಾವಣೆ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡಿದೆ.

ಎಲ್ಲರಿಗೂ ಅತ್ಯಗತ್ಯವಾದ ಪ್ಯಾಕ್ ಆಗಿರುವ ಬೇಳೆ ಕಾಳುಗಳು, ಧಾನ್ಯಗಳು, ಮೊಸರಿನ ಮೇಲೆ ಶೇ 5ರಷ್ಟು ಜಿಎಸ್‌ಟಿ ವಿಧಿಸಿರುವುದು ಕೇಂದ್ರ ಸರ್ಕಾರದ ಕ್ರೂರ ಹಾಗೂ ಅಮಾನವೀಯ ಕ್ರಮವಾಗಿದೆ. ಕೃಷಿಗೆ ಅಗತ್ಯವಾದ ಉಪಕರಣಗಳಾದ ಪಂಪುಗಳು, ಅಕ್ಕಿಗಿರಣಿಗಳು ಮತ್ತು ಹೈನುಗಾರಿಕೆಗೆ ಅಗತ್ಯವಾದ ಉಪಕರಣಗಳ ಮೇಲಿನ ಜಿಎಸ್‌ಟಿಯನ್ನು ಶೇ 18ರಷ್ಟಕ್ಕೆ ಹೆಚ್ಚಿಸಲಾಗಿದೆ ಎಂಬುದನ್ನು ಸಹ ನಾವು ಗಮನಿಸಬೇಕಾಗಿದೆ. ಇದರ ನೇರ ಪರಿಣಾಮವಾಗಿ ಆಹಾರ ಪದಾರ್ಥಗಳ ಬೆಲೆ ಶೇ 5ಕ್ಕಿಂತಲೂ ಅಧಿಕವಾಗಿ ಹೆಚ್ಚಾಗಲಿದೆ. ದೇಶದಲ್ಲಿ ಹಣದುಬ್ಬರದ ಪ್ರಮಾಣವು ಕಳೆದ 3 ತಿಂಗಳಿಂದ ಶೇ 7ಕ್ಕಿಂತ ಮೇಲೆಯೇ ಇದೆ. ನಿರುದ್ಯೋಗದ ಪ್ರಮಾಣವು ಇಂದಿಗೆ ಶೇ 7.8ರಷ್ಟು ಇದ್ದು, ಆತಂತಕಾರಿ ಪರಿಸ್ಥಿತಿಯನ್ನು ಉಂಟುಮಾಡಿದೆ. ಕೋವಿಡ್-19 ಸಾಂಕ್ರಾಮಿಕದ ಪರಿಣಾಮವಾಗಿ 2021-22ರಲ್ಲಿ ಸುಮಾರು ಒಂದು ಕೋಟಿಗೂ ಹೆಚ್ಚು ಮಂದಿ ಕೆಲಸಗಳನ್ನು ಕಳೆದುಕೊಂಡಿದ್ದಾರೆ ಮತ್ತು ಶೇ 97ರಷ್ಟು ಕುಟುಂಬಗಳ ಆದಾಯದಲ್ಲಿ ನಷ್ಟ ಉಂಟಾಗಿ, ಅವರು ವಿಪರೀತ ಕಷ್ಟವನ್ನು ಅನುಭವಿಸುತ್ತಿದ್ದಾರೆ. ನಾವೆಲ್ಲರೂ ನೆನಪಿಟ್ಟುಕೊಳ್ಳಬೇಕಾದ ಅಂಶವೆಂದರೆ, ಪೆಟ್ರೋಲ್, ಡೀಸೆಲ್ ಮೇಲೆ ಹೇರಿರುವ ಅಮಾನವೀಯ ಎಕ್ಸೈಸ್ ಸುಂಕದ ಜೊತೆಗೆ ಸದಾ ಏರುತ್ತಿರುವ ಎಲ್.ಪಿ.ಜಿ ದರವೂ, ಕ್ರೂರವಾಗಿ ವಿಧಿಸಿರುವ ಜಿಎಸ್‌ಟಿಯಲ್ಲಿನ ಹೆಚ್ಚಳದೊಂದಿಗೆ ಮಿಳಿತಗೊಂಡು ದೇಶದ ಜನರನ್ನು ಹೈರಾಣಾಗಿಸುತ್ತಿದೆ. ಪೆಟ್ರೋಲ್, ಡೀಸೆಲ್‌ನಂತಹ ಇಂಧನಗಳ ಮೇಲಿನ ಎಕ್ಸೈಸ್ ಸುಂಕ ಮತ್ತು ಜಿಎಸ್‌ಟಿ ಎಂಬ ಈ ಎರಡು ಪರೋಕ್ಷ ತೆರಿಗೆಗಳ ಮೂಲಕ ಜನಸಾಮಾನ್ಯರನ್ನು ಹಿಂಡಿ-ಹಿಪ್ಪೆ ಮಾಡಿ ಕೇಂದ್ರ ಸರ್ಕಾರವು ತನ್ನ ಬೊಕ್ಕಸವನ್ನು ತುಂಬಿಸಿಕೊಳ್ಳುವತ್ತ ಗಮನ ನೀಡಿದೆ ಎಂಬುದು ಸ್ಪಷ್ಟವಾಗಿದೆ.

ಒಂದೆಡೆ, ಬ್ಯಾಂಕಿನ ಠೇವಣಿ ಬಡ್ಡಿ ದರಕ್ಕಿಂತಲೂ ಬೆಲೆ ಏರಿಕೆಯ (ಹಣದುಬ್ಬರದ) ದರವು ಶೇ 2ರಷ್ಟು ಹೆಚ್ಚಿಗೆ ಇರುವ ವರ್ತಮಾನದಲ್ಲಿ ನಾವಿದ್ದೇವೆ. ಯುವಜನರು ಉದ್ಯೋಗಗಳಿಗಾಗಿ ಹೆಣಗಾಡುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೊಸ ನೇಮಕಾತಿಯನ್ನು ನಿಲ್ಲಿಸಿವೆ. ಕೆಲಸದಲ್ಲಿರುವ ಕಾರ್ಮಿಕರು ತಮ್ಮ ಕೆಲಸ ಹಾಗೂ ಆದಾಯವನ್ನು ರಕ್ಷಿಸಿಕೊಳ್ಳಲು ಹೆಣಗಾಡುತ್ತಿರುವ ಪರಿಸ್ಥಿತಿಯನ್ನು ಸರ್ಕಾರ ಸೃಷ್ಟಿಸಿದೆ. ಗಗನಕ್ಕೇರುತ್ತಿರುವ ಹಣದುಬ್ಬರದ ದರಗಳ ಒತ್ತಡವು ನೈಜ ವೇತನ ಹಾಗೂ ನೈಜ ಆದಾಯದಲ್ಲಿ ಕುಸಿತಕ್ಕೆ ಕಾರಣವಾಗಿದೆ. ಉದಾಹರಣೆಗೆ, ಮೂರು ಜನ ಸದಸ್ಯರಿರುವ ಕುಟುಂಬವೊಂದಕ್ಕೆ ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಕನಿಷ್ಠ ವೇತನ ತಿಂಗಳಿಗೆ ₹14,000. ಆದರೆ, ನಮ್ಮ ಅಧ್ಯಯನದ ಪ್ರಕಾರ ಈಗಿನ ಬೆಲೆ ಏರಿಕೆಯ ಸಂದರ್ಭದಲ್ಲಿ, ಕುಟುಂಬ ನಿರ್ವಹಣೆಗೆ ಕನಿಷ್ಠ ₹31,500 ಬೇಕಾಗುತ್ತದೆ. 2016ರಿಂದ ಆಹಾರ ಪದಾರ್ಥಗಳ ದರಗಳು ಶೇ 170ರಷ್ಟು ಹೆಚ್ಚಾಗಿದೆ ಎಂದು ನಮ್ಮ ಅಧ್ಯಯನದಿಂದ ತಿಳಿಯುತ್ತದೆ.

ಮತ್ತೊಂದೆಡೆ, ಕಾರ್ಪೊರೇಟ್ ವಲಯವು ಕೇಂದ್ರ ಸರ್ಕಾರದ ಅಪರಿಮಿತ ಬೆಂಬಲವನ್ನು ಅನುಭವಿಸುತ್ತಲೇ ಇದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. 2019ರ ಸೆಪ್ಟೆಂಬರ್‌ನಲ್ಲಿ ಕೇಂದ್ರ ಸರ್ಕಾರವು ಕಾರ್ಪೊರೇಟ್ ತೆರಿಗೆಯನ್ನು ಶೇ 8ರಿಂದ ಶೇ 12ರಷ್ಟು ಕಡಿತಗೊಳಿಸಿತು. ಇದರ ಪರಿಣಾಮ ಸುಮಾರು 4,900 ಕಂಪನಿಗಳ ಲಾಭವು ಒಮ್ಮಿಂದೊಮ್ಮೆಗೆ ಶೇ 10ರಷ್ಟು ಏರಿಕೆಯಾಯಿತು. ಕಾರ್ಪೊರೇಟ್ ತೆರಿಗೆ ದರದ ಕಡಿತದ ಕ್ರಮವು ಸರ್ಕಾರಕ್ಕೆ ಪ್ರತಿ ವರ್ಷ ₹1.45 ಲಕ್ಷ ಕೋಟಿಗಳಷ್ಟು ನಷ್ಟವನ್ನು ಉಂಟುಮಾಡುತ್ತಿದೆ.

ಬ್ಯಾಂಕ್ ಆಫ್ ಬರೋಡದ ಒಂದು ವರದಿಯ ಪ್ರಕಾರ, 2018 ಕಂಪನಿಗಳು 2022ರಲ್ಲಿ ಆದಾಯದಲ್ಲಿ ₹18 ಲಕ್ಷ ಕೋಟಿ ಹಾಗೂ ಲಾಭದಲ್ಲಿ ₹3 ಲಕ್ಷ ಕೋಟಿ ಹೆಚ್ಚಳ ಕಂಡಿವೆ. ಹೆಚ್ಚಿನ ಲಾಭ ಮಾಡುತ್ತಿರುವ ಉದ್ಯಮ ವಲಯದ ಮೇಲೆ ಹೆಚ್ಚಿನ ದರದ ತೆರಿಗೆಯನ್ನು ಸರ್ಕಾರ ವಿಧಿಸಬೇಕು. ಆದರೆ, ಕೇಂದ್ರ ಸರ್ಕಾರವು ಕಂಪನಿಗಳ ಮೇಲಿನ ತೆರಿಗೆಯಲ್ಲಿ ಕಡಿತ, ತೆರಿಗೆ ರಜೆ, ಕಮ್ಮಿ ದರದಲ್ಲಿ ಬ್ಯಾಂಕ್ ಸಾಲ ನೀಡಿಕೆ ಹಾಗೂ ಸಾಲ ಮನ್ನಾಗಳನ್ನು ಮಾಡಿ ಕಾರ್ಪೊರೇಟ್ ಉದ್ಯಮ ವಲಯವನ್ನು ಕೊಬ್ಬಿಸುತ್ತಿದೆ. ಉದಾಹರಣೆಗೆ, ಕಳೆದ 8 ವರ್ಷಗಳಲ್ಲಿ ₹10 ಲಕ್ಷ ಕೋಟಿಗೂ ಹೆಚ್ಚು ಬ್ಯಾಂಕ್ ಸಾಲ ಮನ್ನಾ ಮಾಡಲಾಗಿದೆ. ಇದನ್ನು ಸಾಮಾನ್ಯ ಜನರ ಮೇಲೆ ಪರಿಣಾಮ ಬೀರುವ ಸರ್ಕಾರದ ನೀತಿಗಳೊಂದಿಗೆ ಹೋಲಿಸಿ ನೋಡಬಹುದು.

ಬ್ಯಾಂಕ್ ಠೇವಣಿ ಮೇಲಿನ ಬಡ್ಡಿ ದರವು 2014ರಲ್ಲಿ ಶೇ 8.5 ರಷ್ಟಿತ್ತು. 2022ರಲ್ಲಿ ಶೇ 5ರಷ್ಟಕ್ಕೆ ಇಳಿದಿದೆ. ಭವಿಷ್ಯ ನಿಧಿ ಠೇವಣಿ ಮೇಲಿನ ಬಡ್ಡಿ ಈಗ ಶೇ 8.1ರಷ್ಟಿದೆ. ಇದು ಕಳೆದ 40 ವರ್ಷಗಳಲ್ಲಿ ಅತ್ಯಂತ ಕಡಿಮೆ ದರವಾಗಿದೆ. ಸರ್ಕಾರದ ಜನ-ವಿರೋಧಿ ನೀತಿಗಳಿಂದಾಗಿ, ಜನರು ತಮ್ಮ ಅಲ್ಪ ಉಳಿತಾಯವನ್ನು ಷೇರು ಮಾರುಕಟ್ಟೆಗಳಲ್ಲಿ ಹೂಡಿಕೆ (ಮ್ಯೂಚುವಲ್ ಫಂಡ್ ಮುಖಾಂತರ) ಮಾಡುವುದನ್ನು ಬಿಟ್ಟು ಬೇರೆ ದಾರಿ ಇಲ್ಲದಂತಾಗಿದೆ. ದೊಡ್ಡ ಕಾರ್ಪೊರೇಟ್ ಸಂಸ್ಥೆಗಳ ಸೇವೆ ಮಾಡುವ ಉದ್ದೇಶದಿಂದ, ಜನರ ಉಳಿತಾಯದೊಂದಿಗೆ ಜೂಜಾಡುವುದು ಸರ್ಕಾರದ ಅಘೋಷಿತ ನೀತಿಯಾಗಿದೆ; ಹಣದುಬ್ಬರವು ಗಗನಕ್ಕೇರಿರುವ ಈ ಸಂದರ್ಭದಲ್ಲಿ ಜನರನ್ನು ಅಧಿಕ ತೆರಿಗೆ ಮೂಲಕ ದಂಡಿಸುತ್ತಾ, ಕಾರ್ಪೊರೇಟ್ ವಲಯವನ್ನು ಕೊಬ್ಬಿಸುವ ಸರ್ಕಾರದ ಈ ನೀತಿಯು, ಅದರ ವರ್ಗ ಪಕ್ಷಪಾತವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಬಡಜನರು ಅಕ್ಕಿ ಹಾಗೂ ಹಾಲಿನ ಮೇಲೆ ಶೇ 5ರಷ್ಟು ಜಿಎಸ್‌ಟಿ ನೀಡಬೇಕಾಗಿದ್ದರೆ, ಶ್ರೀಮಂತರು ತಮ್ಮ ವೈಭವ ತೋರಿಸಲು ಖರೀದಿಸುವ ವಜ್ರದ ಮೇಲೆ ಕೇವಲ ಶೇ 1.5ರಷ್ಟು ಜಿಎಸ್‌ಟಿ ವಿಧಿಸಲಾಗಿದೆ. ಬಡವರ ಭಾರತ ಮತ್ತು ಶ್ರೀಮಂತರ ಇಂಡಿಯಾದ ಮಧ್ಯೆ ಇರುವ ತೆರಿಗೆಯ ಹೇರಿಕೆಯ ತಾರತಮ್ಯದ ಸುಡು ವಾಸ್ತವವನ್ನು ಏರುಧ್ವನಿಯಲ್ಲಿ ಖಂಡಿಸದೇ ಇರಲು ಸಾಧ್ಯವೇ?

ಲೇಖಕ: ರಾಜ್ಯ ಕಾರ್ಯದರ್ಶಿ, ಎಐಟಿಯುಸಿ ಕರ್ನಾಟಕ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 180

ವೀರಭದ್ರನ ತಡೆಯದಾದ ವಿಷ್ಣು

‘ಹರಿಯೇ, ನೀನು ದೀನವತ್ಸಲ. ನನ್ನನ್ನೂ ಈ ಯಜ್ಞವನ್ನೂ ರಕ್ಷಿಸಬೇಕು’ ಎಂದು ವಿಷ್ಣುವಿನ ಪಾದಗಳಿಗೆ ಬಿದ್ದು ದಕ್ಷಬ್ರಹ್ಮ ಗೋಳಾಡಿದ.

‘ಎಲೈ ದಕ್ಷನೆ, ತಿಳಿವಳಿಕೆಯಿಲ್ಲದೆ ನೀನು ಶಿವನನ್ನು ಅನಾದರಿಸಿರುವೆ. ಇದರಿಂದ ನೀನು ಮಾಡಿದ ಕಾರ್ಯವೆಲ್ಲವೂ ವ್ಯರ್ಥವಾಗುವುದು. ಪದೇ ಪದೇ ವಿಪತ್ತು ಬರುವುದು. ಪೂಜಿಸಲು ಯೋಗ್ಯರಾದವರನ್ನು ಪೂಜಿಸದಿರುವುದು, ಅಯೋಗ್ಯರನ್ನು ಪೂಜಿಸುವುದು ಎಲ್ಲಿ ನಡೆಯುವುದೋ, ಅಲ್ಲಿ ದಾರಿದ್ರ್ಯ, ಮರಣ ಮತ್ತು ಭಯ ಕಾಡುವುದು. ಆದುದರಿಂದ ನೀನು ಸರ್ವಪ್ರಯತ್ನದಿಂದ ಶಿವನನ್ನು ಪೂಜಿಸಬೇಕು’ ಎಂದು ಮಾರ್ಗದರ್ಶನ ನೀಡಿದ ವಿಷ್ಣು.

ವಿಷ್ಣುವಿನ ಮಾತನ್ನು ಕೇಳಿ ದಕ್ಷಬ್ರಹ್ಮ ತುಂಬಾ ಚಿಂತೆಗೊಳಗಾದ. ಹೀಗಿರುವಾಗ, ವೀರಭದ್ರ ಕೋಟ್ಯಂತರ ಗಣಸೈನ್ಯದೊಂದಿಗೆ ದಕ್ಷನ ಯಜ್ಞಶಾಲೆ ಮೇಲೆ ಆಕ್ರಮಣ ಮಾಡಿದ. ರುದ್ರನಂತೆ ಪರಾಕ್ರಮಿಗಳಾದ ಗಣಗಳು ಸಿಂಹನಾದ ಮಾಡಿದಾಗ, ಅದು ಜಗತ್ತಿನೆಲ್ಲೆಡೆ ಪ್ರತಿಧ್ವನಿಸಿತು. ಗಣಗಳ ಕಾಲ್ಧೂಳು ಆಕಾಶವನ್ನೆಲ್ಲಾ ವ್ಯಾಪಿಸಿ, ಕತ್ತಲಾವರಿಸಿತು. ಭೂಮಿಯು ಅದುರಿ, ಸಮುದ್ರಗಳಲ್ಲಿ ಕ್ಷೋಭೆಯಾಯಿತು. ಇದನ್ನು ನೋಡಿ ದೇವತೆಗಳು ಭಯಗೊಂಡರೆ, ದಕ್ಷ ರಕ್ತಕಾರುತ್ತಾ ವಿಷ್ಣುವಿನ ಕಾಲಿಗೆ ಬಿದ್ದು, ‘ಓ ವಿಷ್ಣುವೆ, ನಿನ್ನ ಬಲದಿಂದ ನಾನು ಈ ಮಹಾಯಜ್ಞವನ್ನು ಪ್ರಾರಂಭಿಸಿರುವೆ. ಈ ಯಜ್ಞ ಸಿದ್ಧಿಸುವಂತೆ ನೀನೇ ರಕ್ಷಿಸಬೇಕು’ ಎಂದು ಪರಿಪರಿಯಾಗಿ ಬೇಡಿದ.

ಆಗ ಹರಿಯು ‘ಎಲೈ ದಕ್ಷನೆ, ನಿನ್ನ ಯಜ್ಞವನ್ನು ನಾನು ರಕ್ಷಿಸಬೇಕಾದುದು ನ್ಯಾಯವೇ ಆದರೂ, ಆ ಕಾಲವು ಮೀರಿಹೋಗಿದೆ. ಶಿವದ್ವೇಷದ ನಿನ್ನ ಕುಕೃತ್ಯ ಅಕ್ಷಮ್ಯವಾದುದು. ಈಗ ನಿನ್ನ ದುಷ್ಟಬುದ್ಧಿಯನ್ನು ಬಿಟ್ಟು, ದೇವಕ್ಷೇತ್ರವಾದ ನೈಮಿಷಾರಣ್ಯದಲ್ಲಿ ನಡೆದ ವೃತ್ತಾಂತವನ್ನು ಸ್ಮರಿಸು. ದುರ್ಬುದ್ಧಿಯಿಂದ ಆ ವೃತ್ತಾಂತವನ್ನು ಮರೆತುಬಿಟ್ಟಿರುವೆ. ಈಗ ರುದ್ರನ ಕೋಪದಿಂದ ನಿನ್ನನ್ನು ರಕ್ಷಿಸುವವರು ಯಾರೂ ಇಲ್ಲ. ಯಾವ ಕರ್ಮವು ಸಮರ್ಥವಾಗಿ ಮಂಗಳವನ್ನು ಉಂಟುಮಾಡುವುದೋ ಅದು ಸುಕರ್ಮ. ಶಂಕರನೊಬ್ಬನೇ ಕರ್ಮಕ್ಕೆ ಫಲವನ್ನು ಕೊಡುವವನು. ಅವನನ್ನು ನಿರ್ಲಕ್ಷಿಸಿದರೆ ಮಂಗಳವೆಂದಿಗೂ ಆಗಲಾರದು. ಶಿವನನ್ನು ಒಲಿಸಿಕೊಳ್ಳದೆ ಅಪಾಯ ತಂದುಕೊಂಡಿರುವೆ. ಶಿವನ ಕೋಪಕ್ಕೆ ತುತ್ತಾಗಿದ್ದಲ್ಲದೆ, ನಮ್ಮನ್ನೂ ಶಿವನ ಕೋಪಕ್ಕೆ ಸಿಲುಕಿಸಿರುವೆ. ಈಗ ವೀರಭದ್ರನು ನಮ್ಮ ನಾಶಕ್ಕಾಗಿಯೇ ಬಂದಿರುವನು. ವೀರಭದ್ರನನ್ನು ತಡೆಯುವ ಶಕ್ತಿ ನನಗಿಲ್ಲ. ನಿನ್ನೊಡನೆ ನನಗೂ ಮಹಾದುಃಖ ಬಂದಿರುವುದು. ನನ್ನ ಸುದರ್ಶನಚಕ್ರ ಶಿವಗಣಗಳ ಮುಂದೆ ನಡೆಯಲಾರದು. ಇಲ್ಲಿಗೆ ಶೈವಚಕ್ರವು ಬಂದಿದೆ. ವೀರಭದ್ರ ಬಿಟ್ಟರೂ, ಈ ಶೈವಚಕ್ರವು ನಮ್ಮನ್ನೆಲ್ಲಾ ಸಂಹರಿಸದೆ ಬಿಡದು. ಕ್ರೋಧದಿಂದ ಕುದಿಯುತ್ತಿರುವ ವೀರಭದ್ರನನ್ನು ಶಾಂತಗೊಳಿಸುವುದು ಸುಲಭವಲ್ಲ. ಈಶ್ವರನ ಶಪಥವನ್ನು ಕೇಳಿದೊಡನೆ ನಾನು ಇಲ್ಲಿಂದ ಹೊರಡಲುದ್ಯುಕ್ತನಾಗಿದ್ದೆ. ನಿನ್ನಂಥ ದುಷ್ಟರ ಸಹವಾಸದೋಷದಿಂದ ಇಲ್ಲಿಯೇ ಇರುವ ಮನಸ್ಸಾಯಿತು. ಮಹದೇವನ ಪ್ರತಿಜ್ಞೆ ಮೀರಿ ಯಜ್ಞಕಾರ್ಯದಲ್ಲಿ ಉಳಿದಿದ್ದರಿಂದ ಈಗ ನಾವು ಇಲ್ಲಿಂದ ಓಡಿದರೂ ಪಾರಾಗುವುದಿಲ್ಲ. ಸ್ವರ್ಗದಲ್ಲಿಯಾಗಲೀ ಭೂಪಾತಾಳಗಳಲ್ಲಾಗಲೀ, ಎಲ್ಲಿಯೂ ವೀರಭದ್ರನ ಶಸ್ತ್ರಗಳಿಗೆ ತಡೆಯಿಲ್ಲವೇ ಇಲ್ಲ. ಹಾಗೆಯೇ, ರುದ್ರನ ಎಲ್ಲಾ ಗಣಗಳಿಗೂ ವೀರಭದ್ರನಿಗಿರುವಷ್ಟೇ ಶಕ್ತಿ ಇರುತ್ತದೆ. ಹಿಂದೆ ಕಾಶಿಯಲ್ಲಿ ಮಹಾಲಿಂಗ ಉದ್ಭವಿಸಿದಾಗ ಸುಳ್ಳಾಡಿದ ಬ್ರಹ್ಮನ ಐದನೇ ತಲೆಯನ್ನು ಶ್ರೀಕಾಲಭೈರವನು ಉಗುರಿನ ತುದಿಯಿಂದ ಅನಾಯಾಸವಾಗಿ ಕತ್ತರಿಸಿದ್ದ’ ಎಂದು ಹೇಳಿದ ವಿಷ್ಣು ಸುಮ್ಮನೆ ನಿಂತ.

ಅಷ್ಟರಲ್ಲಿ ವೀರಭದ್ರನೂ ಯಜ್ಞಶಾಲೆಯನ್ನು ಪ್ರವೇಶಿಸಿದ. ವೀರಭದ್ರನೊಡನೆ ಶಿವಗಣಗಳ ಸೈನ್ಯಸಾಗರವೇ ಹಿಂಬಾಲಿಸಿ ಬಂದಿತು. ಅದನ್ನು ನೋಡಿ ದೇವತೆಗಳು ಭಯದಿಂದ ತತ್ತರಿಸಿದರು ಎಂಬಲ್ಲಿಗೆ ಶ್ರೀಶಿವಮಹಾಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಮೂವತ್ತೈದನೆ ಅಧ್ಯಾಯ ಮುಗಿಯುತ್ತದೆ.

ಹಣಕಾಸಿನ ಆರೋಗ್ಯ, ಜನಹಿತ ಎರಡೂ ಮುಖ್ಯ

● ಡಿ.ಎಸ್. ಅರುಣ್

ಜಿಎಸ್‌ಟಿ ಹೇರಿಕೆ ವಿಚಾರದಲ್ಲಿ ವಿರೋಧ ಪಕ್ಷಗಳು ಆತ್ಮದ್ರೋಹ ಮಾಡಿಕೊಳ್ಳುತ್ತಿರುವುದು ಏಕೆ ಎಂಬುದೇ ಅರ್ಥವಾಗುತ್ತಿಲ್ಲ. ಧಾನ್ಯಗಳು, ಮೊಸರಿಗೆ ಜಿಎಸ್‌ಟಿ ವಿಧಿಸಲು ನಿರ್ಧರಿಸಿದ ಸಭೆಯಲ್ಲಿ ತೆಲಂಗಾಣದ ಟಿಆರ್‌ಎಸ್, ಕೇರಳದ ಎಡರಂಗ, ಪಶ್ಚಿಮ ಬಂಗಾಳದ ಟಿಎಂಸಿ, ರಾಜಸ್ಥಾನದ ಕಾಂಗ್ರೆಸ್ ಸರ್ಕಾರದ ಪ್ರತಿನಿಧಿಗಳು ಭಾಗಿಯಾಗಿದ್ದರು. ಅಲ್ಲಿ ಅವರೇಕೆ ವಿರೋಧ ಮಾಡಲಿಲ್ಲ

ಅಕ್ಕಿ, ಮೊಸರು, ಧಾನ್ಯಕ್ಕೆ ಜಿಎಸ್‌ಟಿ ವಿಧಿಸಿದ್ದನ್ನು ವಿರೋಧಿಸುವವರು ಅಕ್ಕಪಕ್ಕದ ಶ್ರೀಲಂಕಾ, ಪಾಕಿಸ್ತಾನ, ಮಾಲ್ದೀವ್ಸ್‌ನಂತಹ ದೇಶಗಳ ಆರ್ಥಿಕ ಸ್ಥಿತಿಗತಿ ಗಮನಿಸಲಿ. ಆಗ ಸರ್ಕಾರದ ನಿಲುವು ಅರ್ಥವಾಗುತ್ತದೆ. ಬರೀ ರಾಜಕೀಯದ ಉದ್ದೇಶಕ್ಕಾಗಿ ಟೀಕಿಸುವುದು ಸರಿಯಲ್ಲ. ಜಿಎಸ್‌ಟಿ ಸಂಗ್ರಹಗೊಂಡರೆ ಮಾತ್ರ ಸರ್ಕಾರಕ್ಕೆ ಆದಾಯ. ದೇಶ ಆರ್ಥಿಕವಾಗಿ ಸುಭದ್ರವಾಗಿದ್ದರೆ ಅದೇ ಹಣ ಮತ್ತೆ ಜನರ ಅವಶ್ಯಕತೆಗಳಿಗೆ ಬಳಕೆಯಾಗುತ್ತದೆ ಎಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಜಿಎಸ್‌ಟಿಯಿಂದ ಮೊಸರು, ಧಾನ್ಯದ ದರ ಹೆಚ್ಚಾದರೆ ಅದರಿಂದ ಬರುವ ಆದಾಯ ಉತ್ಪಾದಕರಿಗೆ (ರೈತರಿಗೆ) ಸಹಾಯಧನದ ರೂಪದಲ್ಲಿ ಕೊಡಲು ಬಳಕೆಯಾಗುತ್ತದೆ. ಇದರಿಂದ ಅವರಿಗೂ ಅನುಕೂಲವಾಗುತ್ತದೆ. ಇವೆಲ್ಲಾ ಕೆರೆಯ ನೀರನ್ನು ಕೆರೆಗೆ ಚೆಲ್ಲುವ ಪ್ರಕ್ರಿಯೆ. ಆದರೆ ಟೀಕೆ ಮಾಡುವವರು ಇಂತಹದ್ದನ್ನೆಲ್ಲ ಗಮನಿಸುವುದಿಲ್ಲ.

ಸತತ ಮೂರು ವರ್ಷ ಕೋವಿಡ್ ಸಾಂಕ್ರಾಮಿಕ ಜಗತ್ತನ್ನು ಕಾಡಿದೆ. ಇದರಿಂದ ವಿಶ್ವದಲ್ಲಿಯೇ ಬಲಿಷ್ಠ ಆರ್ಥಿಕತೆ ಹೊಂದಿದ್ದ ದೇಶಗಳು ತತ್ತರಿಸಿ ಹೋಗಿವೆ. ಏಷ್ಯಾ, ಆಫ್ರಿಕಾ, ಯೂರೋಪ್‌ನ ಹಲವು ರಾಷ್ಟ್ರಗಳ ಆರ್ಥಿಕತೆಯನ್ನು ಕೋವಿಡ್ ಸಾಂಕ್ರಾಮಿಕವು ಈಗ ದಿವಾಳಿ ಅಂಚಿಗೆ ನೂಕಿದೆ. ಅಲ್ಲಲ್ಲಿ ರಾಜಕೀಯ ಕ್ಷೋಭೆಯನ್ನೂ ಸೃಷ್ಟಿಸಿದೆ. ಈ ಹೊತ್ತಿನಲ್ಲಿ ದೇಶದ ಆರ್ಥಿಕತೆಗೆ ಜಿಎಸ್‌ಟಿ ಆದಾಯವೇ ಬಲ ತುಂಬಿದೆ. ದೇಶದ ಆರ್ಥಿಕ ಸ್ಥಿತಿ ಚೇತರಿಸಿಕೊಂಡು ಸದೃಢವಾಗಲು ನೆರವಾಗಿದೆ.

ಈಗ ಜಿಎಸ್‌ಟಿ ಜಾರಿ ವಿಚಾರದಲ್ಲಿ ವಿರೋಧ ಪಕ್ಷಗಳು ಆತ್ಮದ್ರೋಹ ಮಾಡಿಕೊಳ್ಳುತ್ತಿರುವುದು ಏಕೆ ಎಂಬುದೇ ಅರ್ಥವಾಗುತ್ತಿಲ್ಲ. ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಬರೀ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಹಣಕಾಸು ಮಂತ್ರಿಗಳು ಮಾತ್ರ ಭಾಗಿಯಾಗಿರುವುದಿಲ್ಲ. ದೇಶದ ಅಷ್ಟೂ ರಾಜ್ಯದವರು ಇರುತ್ತಾರೆ. ಅಕ್ಕಿ, ಮೊಸರಿಗೆ ಜಿಎಸ್‌ಟಿ ವಿಧಿಸಲು ನಿರ್ಧರಿಸಿದ ಸಭೆಯಲ್ಲಿ ತೆಲಂಗಾಣದ ಟಿಆರ್‌ಎಸ್, ಕೇರಳದ ಎಡರಂಗ, ಪಶ್ಚಿಮ ಬಂಗಾಳದ ಟಿಎಂಸಿ, ರಾಜಸ್ಥಾನದ ಕಾಂಗ್ರೆಸ್ ಸರ್ಕಾರದ ಪ್ರತಿನಿಧಿಗಳು ಭಾಗಿಯಾಗಿದ್ದರು. ಅಲ್ಲಿ ಅವರೇಕೆ ವಿರೋಧ ಮಾಡಲಿಲ್ಲ. ಜಿಎಸ್‌ಟಿ ಮಂಡಳಿಯ ನಿರ್ಧಾರಕ್ಕೆ ಒಮ್ಮತವಿರದಿದ್ದರೆ ಅವರು ಸಭೆಯಿಂದ ಎದ್ದು ಹೊರಬರಬೇಕಿತ್ತು. ತಮ್ಮ ವಿರೋಧ ದಾಖಲಿಸಬೇಕಿತ್ತು. ಆದರೆ ಅಲ್ಲಿ ಸುಮ್ಮನಿದ್ದರು. ಒಪ್ಪಿಗೆ ಕೂಡ ಸೂಚಿಸಿದ್ದಾರೆ. ಈಗ ಮಾಧ್ಯಮಗಳ ಮುಂದೆ ವಿರೋಧಿಸುತ್ತಿದ್ದಾರೆ. ಇದು ಆಗಬಾರದು. ಹೀಗೆ ಸಂಗ್ರಹಿಸಲಾದ ಆದಾಯದಲ್ಲಿ ಶೇ 80ರಷ್ಟು ವಾಪಸ್ ಆ ರಾಜ್ಯಕ್ಕೆ ಬರುತ್ತದೆ ಎಂಬುದು ಗಮನಾರ್ಹ. ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಕುಳಿತಾಗ ತಮಗೆ ಬರುವ ಆದಾಯ ಮಾತ್ರ ನೋಡುತ್ತಾರೆ. ಇದು ಇಬ್ಬಂದಿತನವಲ್ಲವೇ?

ದೇಶದಲ್ಲಿ ಈ ಮೊದಲು ಪರ್ಯಾಯ ಆರ್ಥಿಕತೆ ಜಾರಿಯಲ್ಲಿತ್ತು. ತೆರಿಗೆ ವಂಚನೆಯೇ ಇದರ ಮೂಲವಾಗಿತ್ತು. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದನ್ನೆಲ್ಲ ತೆಗೆದು ಅರ್ಥಿಕತೆಯನ್ನು ಒಂದೇ ಹಾದಿಗೆ ತರಲಾಗಿದೆ. ಅರ್ಹರು ನ್ಯಾಯಯುತವಾಗಿ ತೆರಿಗೆ ಪಾವತಿಸುವ ವ್ಯವಸ್ಥೆ ಜಾರಿಯಾಗಿದೆ. ಅದರ ಫಲವಾಗಿಯೇ ಜಿಎಸ್‌ಟಿ ಸಂಗ್ರಹ ಪ್ರಮಾಣ ಈ ಮೊದಲು ಮಾಸಿಕ ₹80 ಸಾವಿರ ಕೋಟಿಯಿಂದ ₹90 ಸಾವಿರ ಕೋಟಿ ಇದ್ದದ್ದು ಈಗ ₹1.42 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ತೆರಿಗೆ ಸಂಗ್ರಹಣೆಯಲ್ಲಿ ಸೋರಿಕೆ ತಡೆಗಟ್ಟಿದ ಪರಿಣಾಮ ₹60 ಸಾವಿರ ಕೋಟಿಯಷ್ಟು ಆದಾಯ ಏರಿಕೆಯಾಗಿದೆ. ಯುಪಿಎ ಸರ್ಕಾರದ ಆಳ್ವಿಕೆಯ ಅವಧಿಯಲ್ಲಿ ದೇಶದಲ್ಲಿ 2.80 ಕೋಟಿ ಆದಾಯ ತೆರಿಗೆ ಪಾವತಿದಾರರು ಇದ್ದರು. ಈಗ ಅವರ ಸಂಖ್ಯೆ 5.78 ಕೋಟಿಗೆ ಏರಿಕೆಯಾಗಿದೆ. ಹೀಗಾಗಿ ಸರ್ಕಾರಕ್ಕೆ ನೇರ ಮತ್ತು ಪರೋಕ್ಷ ಆದಾಯದಲ್ಲಿನ ಇಲ್ಲಿಯವರೆಗಿನ ವ್ಯತ್ಯಾಸ ಒಂದು ಹಂತದಲ್ಲಿ ಸರಿಯಾಗಿದೆ. ಮುಂದಿನ ದಿನಗಳಲ್ಲಿ ಆದಾಯ, ಜಿಎಸ್‌ಟಿ ಸಂಗ್ರಹ ಕ್ರಮಬದ್ಧಗೊಂಡು ಸರಿಯಾದ ವ್ಯಾಪಾರ ಮುನ್ನೆಲೆಗೆ ಬರಲಿದೆ. ಹೆಚ್ಚಳಗೊಂಡಿರುವ ಅಗತ್ಯವಸ್ತುಗಳ ದರ ಕಡಿಮೆ ಆಗಿ ಈಗ ಜನರಿಗೆ ಆಗುತ್ತಿರುವ ಆರ್ಥಿಕ ಹೊರೆಯೂ ನಿವಾರಣೆಯಾಗಲಿದೆ.

ಈಗಿನ ಆದಾಯ ತೆರಿಗೆ ಪಾವತಿ ವ್ಯವಸ್ಥೆಯನ್ನು ಸರ್ಕಾರವು ಮಧ್ಯಮ ವರ್ಗದ ಸ್ನೇಹಿಯಾಗಿಸಿದೆ. ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ₹3 ಲಕ್ಷದಿಂದ ₹5 ಲಕ್ಷಕ್ಕೆ ಏರಿಕೆ ಮಾಡಿದೆ. ಇದರಿಂದ ಇಲ್ಲಿಯವರೆಗೂ ಮಧ್ಯಮ ವರ್ಗದವರಿಗೆ ಆಗುತ್ತಿದ್ದ ಆರ್ಥಿಕ ಹೊರೆ ಕಡಿಮೆ ಆಗಿದೆ. ಈ ಹಿಂದೆ ಆದಾಯ ತೆರಿಗೆ ಪಾವತಿಸುವುದು ನಷ್ಟದ ಬಾಬ್ತು ಎಂದೇ ಹಲವರು ಭಾವಿಸಿದ್ದರು. ಹೀಗಾಗಿ ತೆರಿಗೆ ತಪ್ಪಿಸುವುದು ಸಾಮಾನ್ಯವಾಗಿತ್ತು. ಆದಾಯ ತೆರಿಗೆ ಇಲಾಖೆ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತೇವೆ ಎಂಬ ಭಯವೂ ಸದಾ ಅವರನ್ನು ಕಾಡುತ್ತಿತ್ತು. ಇದು ಆದಾಯ ತೆರಿಗೆ ಇಲಾಖೆ ಹಾಗೂ ಜನರ ನಡುವೆ ಬಹಳ ಅಂತರ ಸೃಷ್ಟಿಸಿತ್ತು. ಆ ಹೆದರಿಕೆ ಈಗ ತಪ್ಪಿದೆ. ಆದಾಯ ತೆರಿಗೆ ಸರಿಯಾಗಿ ಪಾವತಿಸಿದರೆ ಬ್ಯಾಂಕ್‌ನಿಂದ ಕಡಿಮೆ ಬಡ್ಡಿಯಲ್ಲಿ ಸಾಲ ಸೌಲಭ್ಯ, ಪ್ರೋತ್ಸಾಹಧನ ಸೇರಿದಂತೆ ಬೇರೆ ಬೇರೆ ಸವಲತ್ತು, ವಹಿವಾಟು ವಿಸ್ತರಣೆಗೆ ನೆರವು ಸೇರಿದಂತೆ ವಿವಿಧ ಉತ್ತೇಜನಕಾರಿ ಕ್ರಮಗಳನ್ನು ಸರ್ಕಾರ ಜಾರಿಗೊಳಿಸಿದೆ. ಈ ರೀತಿ ತೆರಿಗೆ ಪ್ರಕ್ರಿಯೆಯನ್ನು ಮತ್ತಷ್ಟು ಜನಸ್ನೇಹಿಯಾಗಿಸಲಾಗಿದೆ.

ಇಲ್ಲಿಯವರೆಗೂ ಉಚಿತ ಕೊಡುಗೆಗಳು ದೇಶದ ಆರ್ಥಿಕತೆಗೆ ಹೊರೆಯಾಗಿದ್ದವು. ಇಂತಹ ಕೊಡುಗೆಗಳು ನಿಜವಾದ ಫಲಾನುಭವಿಗಳಿಗೆ ಸಿಗದೆ ಸಿರಿವಂತರು ಹಾಗೂ ಉಳ್ಳವರ ಪಾಲಾಗುತ್ತಿದ್ದವು. ಅದನ್ನು ತಪ್ಪಿಸಿ ಅರ್ಹರು ಮಾತ್ರ ಇವುಗಳ ಪ್ರಯೋಜನ ಪಡೆಯುವಂತೆ ಮಾಡಲು ಸರ್ಕಾರ ಕ್ರಮಕ್ಕೆ ಮುಂದಾಗಿದೆ. ಅದರ ಫಲವಾಗಿ ಬಿಪಿಎಲ್ ಕಾರ್ಡ್‌ಗೆ ಕೆವೈಸಿ ಮಾಡುವುದು, ಆಧಾರ್ ಜೋಡಣೆಯನ್ನು ಕಡ್ಡಾಯಗೊಳಿಸಿದೆ. ಇದರಿಂದ ಉಚಿತ ಕೊಡುಗೆಗಳು ಮಾತ್ರವಲ್ಲ ಸಾಲ ಮನ್ನಾದಂತಹ ಯೋಜನೆ ದುರುಪಯೋಗವಾಗುವುದಕ್ಕೂ ತಡೆಹಾಕಿದಂತಾಗಿದೆ. ಇದು ಸಂಪೂರ್ಣವಾಗಿ ಫಲಪ್ರದವಾಗಲು ಒಂದಷ್ಟು ಕಾಲಾವಕಾಶ ಬೇಕಾಗುತ್ತದೆ.

ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಹೀಗೆಯೇ ಮುಂದುವರಿಯುವುದಿಲ್ಲ. ಜಿಎಸ್‌ಟಿ ಮಂಡಳಿ ಪ್ರತಿ ತಿಂಗಳು ಸಭೆ ಸೇರುತ್ತದೆ. ಅಲ್ಲಿ ಬೆಲೆ ಯಾವುದಕ್ಕೆ ಜಾಸ್ತಿ, ಕಡಿಮೆ ಮಾಡಬೇಕು, ಜನರಿಗೆ ಏನು ಹೊರೆಯಾಗಿದೆ ಎಂಬುದರ ಬಗ್ಗೆ ವಿಸ್ತೃತ ಚರ್ಚೆ ಆಗುತ್ತದೆ. ಹೀಗಾಗಿ ಹೆಚ್ಚಳಗೊಂಡಿರುವ ಅಗತ್ಯ ವಸ್ತುಗಳ ಬೆಲೆ ಮುಂದಿನ ಆರು ತಿಂಗಳಲ್ಲಿ ಕಡಿಮೆ ಆಗಬಹುದು.

ಇನ್ನೊಂದು ಮಾತು... ಚುನಾವಣೆ ಹತ್ತಿರ ಬಂದಾಗ ಮಾತ್ರ ಸರ್ಕಾರವು ಡೀಸೆಲ್, ಪೆಟ್ರೋಲ್, ಅನಿಲ ಸಿಲಿಂಡರ್‌ನಂತಹ ಅಗತ್ಯ ವಸ್ತುಗಳ ಬೆಲೆ ಇಳಿಸುತ್ತದೆ. ನಂತರ ಏರಿಕೆ ಮಾಡುತ್ತದೆ ಎಂದು ವಿರೋಧಿಗಳು ದೂರುತ್ತಾರೆ. ಆದರೆ ಅದು ಹಾಗೆ ಅಲ್ಲ. ಕರ್ನಾಟಕದಲ್ಲಿಯೇ ಇನ್ನೆರಡು ತಿಂಗಳಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗೆ ಚುನಾವಣೆ ನಡೆಯಲಿದೆ. ಮುಂದಿನ ಆರು ತಿಂಗಳಲ್ಲಿ ವಿಧಾನಸಭೆಗೂ ಚುನಾವಣೆ ಘೋಷಣೆಯಾಗಲಿದೆ. ಇನ್ನು ದೇಶದಲ್ಲಿ ಪ್ರತೀ ಮೂರು ಇಲ್ಲವೇ ಆರು ತಿಂಗಳಿಗೊಮ್ಮೆ ಯಾವುದಾದರೂ ಚುನಾವಣೆ ನಡೆಯುತ್ತಲೇ ಇರುತ್ತವೆ. ಹೀಗಾಗಿ ಬೆಲೆ ಏರಿಕೆ ಅಥವಾ ಇಳಿಕೆಗೆ ಚುನಾವಣೆ ಜತೆಗೆ ಸಂಬಂಧವಿಲ್ಲ. ಬದಲಿಗೆ ಅಂತರರಾಷ್ಟ್ರೀಯ ವಿದ್ಯಮಾನಗಳು, ಮಾರುಕಟ್ಟೆಯಲ್ಲಿನ ಸ್ಥಿತ್ಯಂತರಗಳು, ಹವಾಮಾನ ವೈಪರೀತ್ಯ, ಸಾಂಕ್ರಾಮಿಕಗಳು ಕೂಡ ಕೆಲವೊಮ್ಮೆ ದೇಶದ ಆರ್ಥಿಕತೆಯ ಸ್ಥಿತಿಗತಿ ನಿರ್ಧರಿಸುತ್ತವೆ. ಇಲ್ಲಿ ಸರ್ಕಾರಕ್ಕೆ ಚುನಾವಣೆಗಳಿಗಿಂತ ದೇಶದ ಹಣಕಾಸು ಸ್ಥಿತಿಯ ಆರೋಗ್ಯ, ಸಾಮಾನ್ಯ ಜನರ ಹಿತ ಬಹಳ ಮುಖ್ಯ.

ಲೇಖಕ: ವಿಧಾನಪರಿಷತ್‌ನ ಬಿಜೆಪಿ ಸದಸ್ಯ

ನಿರೂಪಣೆ: ವೆಂಕಟೇಶ ಜಿ.ಎಚ್

ಪದಬಂಧ 5027

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಎಲ್ಲಾ ರಂಗದಲ್ಲೂ ಪರಿಣಿತಿ ಹೊಂದಿರುವ ಪಂಡಿತ(4)
3.ದರ ಹೇಳುತ್ತಿರುವವ ವಂಚಕ!(4)
5.ಕುಂಬಾರನ ಚಕ್ರ(3)
7.ರಾಣಿ ಹಿಡಿದಿರುವ ತೊಗಲಿನ ಹಗ್ಗ(2)
8.ಸಸಾರವಾಗಿ ಹರಿಯುತ್ತಿರುವ ದ್ರವ(2)
11.ಮೃತ್ಯು ದೇವತೆ ಇಲ್ಲಿ ಪ್ರತ್ಯಕ್ಷ!(2)
13.ಪಾಠಶಾಲೆಯಲ್ಲಿ ನೇಣು ಕಾಣುತ್ತಿದೆಯಲ್ಲಾ?(2)
14.ಇದು ಮೃದುವಲ್ಲ!ಒರಟು!(3)
16.ಸರಣಿಯಲ್ಲಿರುವ ಚೈನು ಕಾಣುತ್ತಿದೆಯೇ?(4)
17.ಕತ್ತಿಯನ್ನು ಹೊತ್ತಿರುವ ಕಾಡುಕೋಣ!(4)

ಮೇಲಿಂದ ಕೆಳಕ್ಕೆ

1.ಟಪಾಲು ತೆಗೆದುಕೊಂಡಿರುವ ಹಿಸ್ಸೆದಾರ(4)
2.ತರಬೇತಿಯಲ್ಲಿರುವ ಗುಂಪು(2)
3.ಆಳವಾದ ಕಮ್ಮರಿ(2)
4.ಮಣಿ ಧರಿಸಿರುವ ಸುಂದರಿ(3)
6.ವಸ್ತುಗಳನ್ನು ಕೂಡಿಟ್ಟ ಮಳಿಗೆ(3)
7.ಹಿಡಿತದಲ್ಲಿ ಖರ್ಚುಮಾಡುವಿಕೆ(4)
9.ವೇಷ ಧರಿಸಿದವರೆಲ್ಲರೂ ಒಟ್ಟುಗೂಡುವಿಕೆ!(4)
10.ಕ್ಷಾಮ ಬಂದಿದ್ದಕ್ಕೇ ಇದು ನಿಸ್ಸಾರ!(3)
12.ಸವತಿಯ ಸುತನಿವನು(4)
13.ಪಾಯ ತೋಡುವಾಗ ವಿತರಿಸಿದ ಸಿಹಿ ಭಕ್ಷ್ಯ(3)
14.ಅಗಣಿತವಾಗಿ ಕಾಣುತ್ತಿರುವ ಆಶ್ರಯಸ್ಥಾನ!(2)
15. ಸಖನಿಗೆ ಬಂದಿರುವ ನೆಮ್ಮದಿ (2)



5026ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಕ್ಷ 3.ಬಿಂಕ5. ಪಳೆಯುಳಿಕೆ6.ಗಡವ7. ಪಾರ್ಥಿವ 8.ಸಾರ್ವಜನಿಕ9. ಸಂಧಾನ10.ಪ್ರಶಾಂತ13. ಉಪಕರಣ14.ನಿಷ್ಠೆ 15.ಕುರಿ

ಮೇಲಿಂದ ಕೆಳಕ್ಕೆ: 1.ಅನುರಾಗ2. ಆಯುಧ4.ಕಲರವ5. ಪರ್ಯಾವಸಾನ 7.ಪಾಕಪ್ರವೀಣ9. ಸಂಜೀವಿನಿ10. ತಲೋದರಿ12.ಸಂಕಲ್ಪ

ಸುಡೊಕು 5413

		6		4		3		5
	3		5					
	9	2		3		7		1
2	1		9		3	6		
				1			5	3
3	8			5			7	
9		8						7
				9			3	
4		3			1	2		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5412 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 23, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದಶಮಿ ಗಂ. 11-28 **ನಕ್ಷತ್ರ:** ಕೃತ್ತಿಕಾ ಗಂ. 19-03
ಯೋಗ: ಗಂಡ ಗಂ. 13-07, ಕರಣ: ವಿಷ್ಟಿ ಗಂ. 11-28,
ಕರ್ಕಾಟಕ ಮಾಸದ 06 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30 , ಸೂರ್ಯೋದಯ : 06-17 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 23 ಜುಲ್‌ಹಿಜಾನ್ ಅದೃಷ್ಟ ಸಂಖ್ಯೆ : 8, 12

ಮೇಷ : ಕಾರ್ಖಾನೆ ಮತ್ತು ಭೂ ಸಂಬಂಧಿತ ವ್ಯವಹಾರ ನಡೆಸುವವರಿಗೆ ಕಾರ್ಯಗಳು ಚುರುಕು ಗತಿಯಲ್ಲಿ ಸಾಗಲಿದೆ. ಕೋರ್ಟು ಕಚೇರಿಗಳಲ್ಲಿನ ಕೆಲಸಗಳಿಗೆ ಅಲೆದಾಟ ಕಡಿಮೆಯಾಗುವುದು.

ವೃಷಭ : ಸ್ವಂತ ಉದ್ಯೋಗಸ್ಥರಿಗೆ ಅಲ್ಪ ಶ್ರಮದಿಂದ ಹೆಚ್ಚಿನ ಗಳಿಕೆಯಾಗಲಿದೆ. ನೆಮ್ಮದಿ ಕಾಪಾಡಿಕೊಳ್ಳಲು ಹೆಂಡತಿಯ ಮಾತುಗಳಿಗೆ ಪ್ರಾಮುಖ್ಯತೆ ನೀಡಿರಿ. ವಿದೇಶಿ ವಸ್ತುಗಳ ಖರೀದಿಯು ಮನಸ್ಸಿಗೆ ಸಂತೋಷ ಉಂಟುಮಾಡುತ್ತದೆ.

ಮಿಥುನ : ಅನಿರೀಕ್ಷಿತವಾಗಿ ನಡೆದ ದುರ್ಘಟನೆಗಳಿಂದ ವಿಚಲಿತರಾಗದೆ ಸಂಯಮದಿಂದ ಕಾರ್ಯ ನಿರ್ವಹಿಸಿ. ಸಜ್ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳಿ. ಯೋಗಾಭ್ಯಾಸದಿಂದ ಆಸ್ಪತ್ರೆ ಖರ್ಚುಗಳು ತಗ್ಗುವುದು.

ಕರ್ಕಾಟಕ : ಔಷಧ ಮಾರಾಟಗಾರರಿಗೆ ಅಥವಾ ಪ್ರತಿನಿಧಿಗಳಿಗೆ ಕಾರ್ಯಾನುಕೂಲವಾಗಲಿದೆ. ರಾಜಕೀಯದಲ್ಲಿ ತಮ್ಮವರಿಂದಲೇ ತೋರಿ ಬರುವ ವಿರೋಧ ಜಾಣ್ಮೆಯಿಂದ ನಿವಾರಿಸಿ. ಕೆಲಸ ಕಾರ್ಯಗಳಲ್ಲಿ ಅಚ್ಚುಕಟ್ಟುತನ ಬೆಳೆಸಿಕೊಳ್ಳಿರಿ

ಸಿಂಹ : ಅಮೂಲ್ಯ ವಸ್ತುವನ್ನು ಕಳೆದುಕೊಳ್ಳುವ ಯೋಗವಿದೆ. ನಿಮ್ಮ ಕಾರ್ಯ ವೈಖರಿ ಇತರರನ್ನು ಚಕಿತಗೊಳಿಸಲಿದೆ. ಶೀಘ್ರ ಹಾಗೂ ಸಕಾಲಿಕ ನಿರ್ಧಾರಗಳು ಹಣಕಾಸಿನ ಲಾಭವನ್ನು ತರುತ್ತದೆ. ಬಾಕಿ ಇರುವ ಸಣ್ಣ ಕೆಲಸಗಳನ್ನು ಮಾಡಿ.

ಕನ್ಯಾ : ಕೊಡು ಕೊಳ್ಳುವಿಕೆ ವ್ಯವಹಾರಗಳು ಮಂದಗತಿಯಲ್ಲಿ ಸಾಗಿ ಆರ್ಥಿಕ ಹಿನ್ನಡೆ ಉಂಟಾಗಬಹುದು. ಅಧಿಕಾರ ಕೈತಪ್ಪಿ ಹೋಗದಂತೆ ನೋಡಿಕೊಳ್ಳು-ವುದರ ಬಗ್ಗೆ ಈ ದಿನ ಮುಖ್ಯ ಪ್ರಯತ್ನವಿರಲಿ.

ತುಲಾ : ಧಾರ್ಮಿಕ ವಿದ್ವಾಂಸರಿಗೆ ಮನ್ನಣೆ , ಗೌರವ ಹೆಚ್ಚುವುದು. ವಿದೇಶ ಪ್ರಯಾಣಕ್ಕೆ ಹಣಕಾಸಿನ ಹೊಂದಿಕೆಯಾಗುವುದು .ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವುದರಿಂದ ನೆಮ್ಮದಿ ಮೂಡುವುದು.

ವೃಶ್ಚಿಕ : ವೃತ್ತಿರಂಗದಲ್ಲಿ ತಮ್ಮತನ ಕಾಯ್ದುಕೊಳ್ಳುವುದರಿಂದ ಮುಂದಿನ ಅಭಿವೃದ್ಧಿಗೆ ಪೂರಕವಾಗಲಿದೆ. ಪಶುಸಂಗೋಪನೆ ಮಾಡುವವರಿಗೆ ಅಥವಾ ಸಾಕು ಪ್ರಾಣಿಗಳಿಂದಲೇ ಸಣ್ಣಪುಟ್ಟ ಹಾನಿ ಉಂಟಾಗಬಹುದು, ಜಾಗ್ರತೆ ಇರಲಿ.

ಧನು: ಅಪರಾಧಿ ಸ್ಥಾನದಲ್ಲಿರುವ ನಿಮಗೆ ನಿರಪರಾಧಿ ಎನ್ನುವುದು ಸಾಬೀತಾಗಿ ನ್ಯಾಯಾಲಯದಲ್ಲಿ ಜಯ ಸಿಗುವುದು. ತಾಂತ್ರಿಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಹುಡುಕಿಕೊಂಡು ಬರಲಿದೆ. ಕೆಲಸದಲ್ಲಿ ಒತ್ತಡ ಹೆಚ್ಚುತ್ತದೆ.

ಮಕರ : ಯಂತ್ರೋಪಕರಣಗಳ ಮಾರಾಟಗಾರರು ಹೆಚ್ಚಿನ ಲಾಭವನ್ನು ಪಡೆಯುವರು. ಚಾಲಕ ವೃತ್ತಿಯವರ ಸಮಯ ಪ್ರಜ್ಞೆ ಅಪಘಾತವನ್ನು ತಪ್ಪಿಸಲಿದೆ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಆರ್ಥಿಕ ಸಹಾಯ ಬೇಕಾಗುವುದು.

ಕುಂಭ : ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವಿರಿ. ಮಕ್ಕಳ ವಿದ್ಯಾಭ್ಯಾಸದತ್ತ ಗಮನ ಹರಿಸಿ. ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಪಾಠವಲ್ಲದೇ, ಇತರೆ ಚಟುವಟಿಕೆಗಳಿಗೂ ಅಲ್ಪ ಸಮಯ ನೀಡಿ.

ಮೀನ: ಬಾಕಿ ಉಳಿದ ಕೆಲಸವನ್ನು ಪೂರ್ತಿಗೊಳಿಸಲು ಪ್ರಶಸ್ತ ದಿನ. ಅಕೌಂಟೆಂಟ್‌ಗಳಿಗೆ ಹೆಚ್ಚಿನ ಕೆಲಸದ ಒತ್ತಡದಿಂದ ದೇಹಾಯಾಸವಾಗಿ ವೃತ್ತಿಯಲ್ಲಿ ತಪ್ಪುಗಳು ಸಂಭವಿಸಬಹುದು.

ದೆಹಲಿ ಅಬಕಾರಿ ನೀತಿ ಅನುಷ್ಠಾನದಲ್ಲಿ ಅಕ್ರಮ ಆರೋಪ: ಲೆಫ್ಟಿನೆಂಟ್ ಗವರ್ನರ್ ಶಿಫಾರಸು

ಸಿಸೋಡಿಯಾ ವಿರುದ್ಧ ಸಿಬಿಐ ತನಿಖೆ

ನವದೆಹಲಿ (ಪಿಟಿಐ): ದೆಹಲಿ ಸರ್ಕಾರದ 'ಅಬಕಾರಿ ನೀತಿ: 2021–22' ಕುರಿತು ತನಿಖೆ ನಡೆಸುವಂತೆ ದೆಹಲಿ ಲೆಫ್ಟಿನೆಂಟ್ (ಎಲ್‌.ಜಿ) ಗವರ್ನರ್ ವಿ.ಕೆ. ಸಿನ್ಹಾ ಅವರು ಸಿಬಿಐಗೆ ಶಿಫಾರಸು ಮಾಡಿದ್ದಾರೆ. ಈ ನೀತಿಯ ಅನುಷ್ಠಾನದಲ್ಲಿ ಅಬಕಾರಿ ನಿಯಮಗಳು ಮತ್ತು ಪ್ರಕ್ರಿಯೆಗಳನ್ನು ಉಲ್ಲಂಘಿಸಲಾಗಿದೆ ಎಂದು ಅವರು ತಮ್ಮ ಶಿಫಾರಸಿನಲ್ಲಿ ವಿವರಿಸಿದ್ದಾರೆ.

ಲೆಫ್ಟಿನೆಂಟ್ ಗವರ್ನರ್ ಅವರ ಈ ಕ್ರಮವನ್ನು ಎಎಪಿ ಟೀಕಿಸಿದೆ. ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ಅಬಕಾರಿ ಖಾತೆಯನ್ನು ನಿರ್ವಹಿಸುತ್ತಿದ್ದಾರೆ. ಸಿಸೋಡಿಯಾ ಅವರನ್ನು ಸಿಲುಕಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ ಎಂದು ಎಎಪಿ ಆರೋಪಿಸಿದೆ.

'ದೆಹಲಿ ಸರ್ಕಾರದ 'ಅಬಕಾರಿ ನೀತಿ'ಗೆ ಸಂಬಂಧಿಸಿದಂತೆ ದೆಹಲಿ ಮುಖ್ಯ ಕಾರ್ಯದರ್ಶಿ ಸಲ್ಲಿಸಿದ್ದ ವರದಿ ಆಧಾರದಲ್ಲಿ ಈ ಶಿಫಾರಸು ಮಾಡಲಾಗಿದೆ. ಅಬಕಾರಿ ನೀತಿಯ ಅನುಷ್ಠಾನದ ಸಂದರ್ಭದಲ್ಲಿ ಜಿಎನ್‌ಸಿಟಿಡಿ ಕಾಯ್ದೆ–1991, ಟಿಒಬಿಆರ್ ನಿಯಮಗಳು–1993, ದೆಹಲಿ ಅಬಕಾರಿ ಕಾಯ್ದೆ–2009 ಮತ್ತು ದೆಹಲಿ ಅಬಕಾರಿ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಲೆಫ್ಟಿನೆಂಟ್ ಗವರ್ನರ್ ಅವರ ಕಚೇರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮುಖ್ಯ ಕಾರ್ಯದರ್ಶಿಗಳ ವರದಿಯ ಒಂದು ಪ್ರತಿಯನ್ನು ಮುಖ್ಯಮಂತ್ರಿಗಳ ಕಚೇರಿಗೂ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆರೋಪಗಳು

- ಅಬಕಾರಿ ಸಚಿವರ ಕೆಲವು ಕ್ರಮಗಳಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಆದಾಯ ನಷ್ಟವಾಗಿದೆ. ಅವರು ಅಬಕಾರಿ ಸನ್ನದುದಾರರಿಗೆ ಟೆಂಡರೋತ್ತರ ಅನುಕೂಲ ಮಾಡಿಕೊಡುವ ಮೂಲಕ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ
- ಅಬಕಾರಿ ಸನ್ನದುದಾರರು ನೀಡಬೇಕಿದ್ದ ₹144.36 ಕೋಟಿ ಪರವಾನಗಿ ಶುಲ್ಕವನ್ನು ಕೋವಿಡ್–19 ಸಾಂಕ್ರಾಮಿಕದ ನೆಪದಲ್ಲಿ ಮನ್ನಾ ಮಾಡಲಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ
- 'ವಿಮಾನ ನಿಲ್ದಾಣ ವಲಯ'ದಲ್ಲಿ ಮದ್ಯ ಮಾರಾಟ ಮಾಡಲು ಪರವಾನಗಿ ಪಡೆದಿದ್ದವರು ಸರ್ಕಾರಕ್ಕೆ ಪಾವತಿಸಿದ್ದ ₹30 ಕೋಟಿ ಶುಲ್ಕವನ್ನು ವಾಪಸ್ ಮಾಡಲಾಗಿದೆ. ವಿಮಾನ ನಿಲ್ದಾಣ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಪಡೆಯಲು ವಿಫಲವಾದ ಕಾರಣವನ್ನು ನೀಡಿ, ಶುಲ್ಕವನ್ನು ಹಿಂತಿರುಗಿಸಲಾಗಿದೆ. ಆದರೆ ದೆಹಲಿ ಅಬಕಾರಿ ನಿಯಮಗಳ ಪ್ರಕಾರ ಒಮ್ಮೆ ಪಾವತಿಸಿದ್ದ ಶುಲ್ಕವನ್ನು ವಾಪಸ್ ಮಾಡಲು ಅವಕಾಶವಿಲ್ಲ. ಈ ನಿಯಮವನ್ನು ಉಲ್ಲಂಘಿಸಲಾಗಿದೆ
- ಆಮದು ಮಾಡಿಕೊಳ್ಳಲಾದ ಬಿಯರ್‌ಗಳ ಪ್ರತಿ ಕೇಸ್‌ನ ಮೇಲೆ ವಿಧಿಸಲಾಗುತ್ತಿದ್ದ ₹50ರ 'ಆಮದು ಪಾಸ್ ಶುಲ್ಕ'ವನ್ನು ಅಬಕಾರಿ ಇಲಾಖೆಯು ರದ್ದುಪಡಿಸಿದೆ. ಇದರಿಂದ ಮಾರಾಟಗಾರರಿಗೆ ಹೆಚ್ಚು ಲಾಭವಾಗುತ್ತಿದೆ ಮತ್ತು ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ. ಇಂತಹ ಮಹತ್ವದ ತೀರ್ಮಾನವನ್ನು ತೆಗೆದುಕೊಳ್ಳುವಾಗ ಸಂಬಂಧಿತ ಪ್ರಾಧಿಕಾರದ ಅನುಮತಿಯನ್ನು ಅಬಕಾರಿ ಇಲಾಖೆಯು ಪಡೆದುಕೊಂಡಿಲ್ಲ
- ಮದ್ಯ ಮಾರಾಟ ಪರವಾನಗಿ ನೀಡುವಾಗ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಟೆಂಡರ್‌ನಲ್ಲಿ ಹಲವು ನಿಯಮಗಳನ್ನು ಸಡಿಲಗೊಳಿಸಲಾಗಿದೆ. ಇದರಿಂದ ಮಾರಾಟಗಾರರಿಗೆ ಅನುಕೂಲವಾಗಿದೆ
- ದೆಹಲಿಯಲ್ಲಿ ಮದ್ಯ ಮಾರಾಟದ 32 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಕಪ್ಪು ಪಟ್ಟಿಗೆ ಸೇರಿಸಲಾಗಿರುವ ಕಂಪನಿಗಳಿಗೆ, ಇಂತಹ ಎರಡು ವಲಯಗಳನ್ನು ಹಂಚಿಕೆ ಮಾಡಲಾಗಿದೆ
- ಅಬಕಾರಿ ಇಲಾಖೆಯು ತೆಗೆದುಕೊಂಡ ಕೆಲವು ಕಾನೂನುಬಾಹಿರ ನಿರ್ಧಾರಗಳಿಗೆ ಸಚಿವ ಸಂಪುಟದ ಒಪ್ಪಿಗೆಯನ್ನು ಘಟನೋತ್ತರವಾಗಿ ಪಡೆದುಕೊಳ್ಳಲಾಗಿದೆ. ಇದೂ ಅಕ್ರಮ

> ಕೋವಿಡ್ ಸಂದರ್ಭದಲ್ಲಿ ಬಡವರ ನೆರವಿಗೆ ಧಾವಿಸುವ ಬದಲು ಎಎಪಿ ಸರ್ಕಾರವು ಮದ್ಯ ಮಾರಾಟ ಪರವಾನಗಿ ನೀಡುವತ್ತ ಗಮನ ಕೇಂದ್ರೀಕರಿಸಿತ್ತು
>
> **ಗೌತಮ್ ಗಂಭೀರ್**, ಬಿಜೆಪಿ ಸಂಸದ

ಬಿಜೆಪಿ ಪರವಾಗಿ ಎಲ್‌.ಜಿ ಕೆಲಸ: ಎಎಪಿ

> ಎಎಪಿ ಮತ್ತು ಅರವಿಂದ ಕೇಜ್ರಿವಾಲ್ ಅವರ ಜನಪ್ರಿಯತೆ ಹೆಚ್ಚಿದ್ದನ್ನು ನೋಡಿ ಪ್ರಧಾನಿ ನರೇಂದ್ರ ಮೋದಿ ಹೆದರಿದ್ದಾರೆ. ಹೀಗಾಗಿ ನಮ್ಮ ಎಲ್ಲಾ ಸಚಿವರ ಬಂಧನಕ್ಕೆ ಯತ್ನಿಸುತ್ತಿದ್ದಾರೆ
>
> **ಸೌರವ್ ಭಾರದ್ವಾಜ್**, ಎಎಪಿ ವಕ್ತಾರ

'ಸುಳ್ಳು ಪ್ರಕರಣದಲ್ಲಿ ಮನೀಷ್ ಸಿಸೋಡಿಯಾ ಅವರನ್ನು ಕೇಂದ್ರ ಸರ್ಕಾರವು ಕೆಲವೇ ದಿನಗಳಲ್ಲಿ ಬಂಧಿಸಲಿದೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಕಳವಳ ವ್ಯಕ್ತಪಡಿಸಿದ್ದಾರೆ. ಸಿಸೋಡಿಯಾ ಅವರು ಅತ್ಯಂತ ಪ್ರಾಮಾಣಿಕ ಮತ್ತು ದೇಶಭಕ್ತ ವ್ಯಕ್ತಿ ಎಂದಿದ್ದಾರೆ.

ಅಬಕಾರಿ ನೀತಿ ಅನುಷ್ಠಾನದ ತನಿಖೆ ನಡೆಸುವಂತೆ ದೆಹಲಿ ಲೆಫ್ಟಿನೆಂಟ್ ಗವರ್ನರ್ ಅವರು ಸಿಬಿಐಗೆ ಶಿಫಾರಸು ಮಾಡಿದ ಬೆನ್ನಲ್ಲೇ, ಕೇಜ್ರಿವಾಲ್ ಅವರು ಸುದ್ದಿಗೋಷ್ಠಿ ನಡೆಸಿದ್ದಾರೆ. 'ಮನೀಷ್ ಸಿಸೋಡಿಯಾ ವಿರುದ್ಧ ಒಂದು ಪ್ರಕರಣವನ್ನು ಸಿಬಿಐಗೆ ನೀಡಲಾಗಿದೆ. ಕೆಲವೇ ದಿನಗಳಲ್ಲಿ ಅವರನ್ನು ಸಿಬಿಐ ಬಂಧಿಸಲಿದೆ. ಇದೊಂದು ಸುಳ್ಳು ಪ್ರಕರಣ. ಈ ಪ್ರಕರಣದಲ್ಲಿ ಕಿಂಚಿತ್ತೂ ಸತ್ಯಾಂಶವಿಲ್ಲ. ಸಿಸೋಡಿಯಾ ಅವರನ್ನು 22 ವರ್ಷಗಳಿಂದ ಬಲ್ಲೆ. ಅವರು ಅತ್ಯಂತ ಪ್ರಾಮಾಣಿಕ ವ್ಯಕ್ತಿ. ನ್ಯಾಯಾಲಯದಲ್ಲಿ ಈ ಪ್ರಕರಣ ನಿಲ್ಲುವುದಿಲ್ಲ' ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಎಎಪಿ ಸಚಿವರಲ್ಲಿ ಯಾರೊಬ್ಬರೂ ತಪ್ಪು ಮಾಡಿಲ್ಲ, ಹಾಗಾಗಿಯೇ ಜೈಲಿಗೆ ಹೋಗಲು ಯಾರಿಗೂ ಭಯ ಇಲ್ಲ ಎಂದೂ ಅವರು ಹೇಳಿದ್ದಾರೆ.

ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಿನ್ಹಾ ಅವರು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಎಎಪಿ ಆರೋಪಿಸಿದೆ.

'ದೆಹಲಿ ಸರ್ಕಾರದ ಎಲ್ಲಾ ಸಚಿವರನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಎಎಪಿಯನ್ನು ಇಕ್ಕಟ್ಟಿಗೆ ಸಿಲುಕಿಸುವುದೇ ಬಿಜೆಪಿಯ ಗುರಿ ಆಗಿದೆ' ಎಂದು ಎಎಪಿ ಮುಖ್ಯ ವಕ್ತಾರ ಸೌರವ್ ಭಾರದ್ವಾಜ್ ಆರೋಪಿಸಿದ್ದಾರೆ.

ಸುದ್ದಿ 2 ನಿಮಿಷ

'ಮನೆಗಳಲ್ಲಿ ರಾಷ್ಟ್ರಧ್ವಜ ಹಾರಿಸಿ'

ನವದೆಹಲಿ (ಪಿಟಿಐ): ಆಗಸ್ಟ್ 13-15ರ ನಡುವೆ ರಾಷ್ಟ್ರಧ್ವಜವನ್ನು ತಮ್ಮ ಮನೆಯಲ್ಲಿ ಹಾರಿಸುವ ಅಥವಾ ಪ್ರದರ್ಶಿಸುವ ಮೂಲಕ 'ಹರ್ ಘರ್ ತಿರಂಗ' ಅಭಿಯಾನ ಬಲಪಡಿಸುವಂತೆ ಪ್ರಧಾನಿ ಮೋದಿ ಜನತೆಗೆ ಮನವಿ ಮಾಡಿದರು.

ಸರಣಿ ಟ್ವೀಟ್ ಮಾಡಿರುವ ಮೋದಿ, ಈ ಅಭಿಯಾನ ತ್ರಿವರ್ಣ ಧ್ವಜದ ಜೊತೆಗಿನ ಬಾಂಧವ್ಯ ವೃದ್ಧಿಸುತ್ತದೆ. 1947ರ ಜುಲೈ 22ರಂದು ರಾಷ್ಟ್ರ ಧ್ವಜವನ್ನು ಅಂಗೀಕರಿಸಲಾಯಿತು. ಸ್ವತಂತ್ರ ಭಾರತದ ಧ್ವಜದ ಕನಸು ಕಂಡ ಎಲ್ಲರ ಪ್ರಯತ್ನದ ಮತ್ತು ಶೌರ್ಯದ ಸ್ಮರಣೆ ಮಾಡುತ್ತಿದ್ದೇವೆ. ಅವರ ಕನಸಿನಂತೆ ರಾಷ್ಟ್ರವನ್ನು ಸದೃಢವಾಗಿಸಲು ಬದ್ಧರಾಗಿದ್ದೇವೆ ಎಂದು ಮೋದಿ ತಿಳಿಸಿದ್ದಾರೆ.

ಈ ವರ್ಷ 'ಆಜಾದಿ ಕಾ ಅಮೃತ ಮಹೋತ್ಸವ' ಆಚರಿಸುತ್ತಿದ್ದೇವೆ. ಹರ್ ಘರ್ ತಿರಂಗ ಅಭಿಯಾನ ಪ್ರಬಲಗೊಳಿಸೋಣ. ಇದು ರಾಷ್ಟ್ರ ಧ್ವಜದೊಂದಿಗಿರುವ ಬಾಂಧವ್ಯವನ್ನು ಮತ್ತಷ್ಟು ಆಳವಾಗಿಸುತ್ತದೆ' ಎಂದು ಮೋದಿ ಹೇಳಿದ್ದಾರೆ.

ತ್ರಿವರ್ಣ ಧ್ವಜ ಅಂಗೀಕಾರದ ಆಸಕ್ತಿಕರ ಮಾಹಿತಿ ಹಂಚಿಕೊಂಡಿರುವ ಮೋದಿ, ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅನಾವರಣಗೊಳಿಸಿದ ಮೊದಲ ತ್ರಿವರ್ಣ ಧ್ವಜದ ಚಿತ್ರವನ್ನು ಪೋಸ್ಟ್ ಮಾಡಿದ್ದಾರೆ.

ಭಾರತದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ 'ಹರ್ ಘರ್ ತಿರಂಗ' (ಪ್ರತಿಯೊಬ್ಬರ ಮನೆ ಯಲ್ಲಿ ತ್ರಿವರ್ಣ ಧ್ವಜ) ಅಭಿಯಾನ ಹಮ್ಮಿಕೊಂಡಿದೆ.

'ವೈದ್ಯರ ಸಲಹೆ ಇಲ್ಲದೇ ಅಂಗವಿಕಲರಿಗೆ ವಿಮಾನ ಪ್ರಯಾಣ ನಿರಾಕರಿಸುವಂತಿಲ್ಲ'

ನವದೆಹಲಿ (ಪಿಟಿಐ): ವಿಮಾನ ಪ್ರಯಾಣದ ವೇಳೆ ಅಂಗವಿಕಲ ಪ್ರಯಾಣಿಕರ ಆರೋಗ್ಯ ಹದಗೆಡುತ್ತಿದೆ ಎನಿಸಿದರೆ ವಿಮಾನಯಾನ ಸಿಬ್ಬಂದಿ, ನಿಲ್ದಾಣದಲ್ಲಿನ ವೈದ್ಯರನ್ನು ಸಂಪರ್ಕಿಸಿ, ಪ್ರಯಾಣಕ್ಕೆ ಅವಕಾಶ ನಿರಾಕರಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯ(ಡಿಜಿಸಿಎ) ಶುಕ್ರವಾರ ಹೇಳಿದೆ.

ಒಂದು ವೇಳೆ ವಿಮಾನಯಾನ ಸಂಸ್ಥೆಯು ಅಂಗವಿಕಲ ಪ್ರಯಾಣಿಕರಿಗೆ ವಿಮಾನ ಹತ್ತಲು ಅವಕಾಶ ನಿರಾಕರಿಸುವ ನಿರ್ಧಾರ ಕೈಗೊಂಡರೆ, ತಕ್ಷಣವೇ ಆ ಪ್ರಯಾಣಿಕರಿಗೆ ಲಿಖಿತವಾಗಿ ಮಾಹಿತಿ ನೀಡಬೇಕು ಮತ್ತು ಕಾರಣಗಳನ್ನೂ ದಾಖಲಿಸಬೇಕು ಎಂದು ಡಿಜಿಸಿಎ ಹೇಳಿಕೆಯಲ್ಲಿ ತಿಳಿಸಿದೆ.

ವಿಮಾನ ಬೋರ್ಡಿಂಗ್ ಮತ್ತು ಪ್ರಯಾಣದಲ್ಲಿ ಸುಧಾರಣೆ ತರಲು ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಅಂಗವಿಕಲತೆ ಅಥವಾ ಅಸಹಾಯಕತೆಯ ಆಧಾರದ ಮೇಲೆ ಯಾವುದೇ ಪ್ರಯಾಣಿಕರಿಗೆ ವಿಮಾನ ಹತ್ತಲು ನಿರಾಕರಿಸಬಾರದು ಎಂಬುದು ತಿದ್ದುಪಡಿ ಮಾಡಲಾದ ನಿಯಮಗಳಲ್ಲಿದೆ.

ಗೆಲುವಿನ ಪತ್ರ

ರಾಷ್ಟ್ರಪತಿಯಾಗಿ ಚುನಾಯಿತರಾದ ದ್ರೌಪದಿ ಮುರ್ಮು ಅವರಿಗೆ ರಾಷ್ಟ್ರಪತಿ ಚುನಾವಣೆಯ ಚುನಾವಣಾಧಿಕಾರಿ ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿ ಪಿ.ಸಿ.ಮೋದಿ ಅವರು ಚುನಾವಣಾ ಗೆಲುವಿನ ಪ್ರಮಾಣಪತ್ರವನ್ನು ಶುಕ್ರವಾರ ನೀಡಿದರು –ಪಿಟಿಐ ಚಿತ್ರ

ರೈಲು ಪ್ರಯಾಣ ದರ: ಹಿರಿಯರಿಗೆ ರಿಯಾಯಿತಿ ರದ್ದು– ವರುಣ್ ಆಕ್ರೋಶ

ನವದೆಹಲಿ (ಪಿಟಿಐ): ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣ ದರಗಳಲ್ಲಿ ನೀಡಲಾಗಿದ್ದ ರಿಯಾಯಿತಿಯನ್ನು ರದ್ದು ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ಬಿಜೆಪಿ ಸಂಸದ ವರುಣ್ ಗಾಂಧಿ ಶುಕ್ರವಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ ವಿಮಾನಗಳ ತುರ್ತು ಭೂಸ್ಪರ್ಶದ ಪ್ರಕರಣಗಳು ದೇಶದಲ್ಲಿ ಪದೇ ಪದೇ ನಡೆಯುತ್ತಿರುವುದಕ್ಕೆ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ವರುಣ್,'ರೈಲುಗಳ ಪ್ರಯಾಣ ದರಗಳಲ್ಲಿ ಸಂಸದರಿಗೆ ರಿಯಾಯಿತಿ ಮುಂದುವರಿದಿದೆ. ಆದರೆ, ಹಿರಿಯ ನಾಗರಿಕರಿಗೆ ನೀಡಿರುವ ರಿಯಾಯಿತಿಯನ್ನು ಕೇಂದ್ರವು 'ಹೊರೆ' ಎಂದು ಯಾಕೆ ಪರಿಗಣಿಸಿದೆ' ಎಂದು ಅವರು ಪ್ರಶ್ನಿಸಿದ್ದಾರೆ.

ವಿಮಾನಗಳ ತುರ್ತು ಭೂಸ್ಪರ್ಶ ಪ್ರಕರಣಗಳು ಹೆಚ್ಚಾಗಿವೆ. ಯಾವುದಾದರೂ 'ದೊಡ್ಡ ಘಟನೆ' ಸಂಭವಿಸಲಿ ಎಂದು ಕೇಂದ್ರ ಕಾಯುತ್ತಿರುವಂತಿದೆ ಎಂದು ವರುಣ್ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಈ ಕುರಿತು ಗಂಭೀರವಾಗಿ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದ್ದಾರೆ.

ಪ್ರಯಾಣಿಕರಿಗೆ ದರಗಳಲ್ಲಿ ರಿಯಾಯಿತಿ ನೀಡುವುದು 'ಭಾರಿ ಹೊರೆ'ಯಾಗಿದೆ ಎಂದು ರೈಲ್ವೆ ಸಚಿವಾಲಯವು ಲೋಕಸಭೆಗೆ ತಿಳಿಸಿತ್ತು. ಪ್ರಯಾಣಿಕರಿಗೆ ರಿಯಾಯಿತಿ ನೀಡುವುದಿಲ್ಲ ಎಂದೂ ಹೇಳಿತ್ತು.

> ಈ ನಿರ್ಧಾರವು ದುರದೃಷ್ಟಕರ. ಜೀವನದ ಸಂಧ್ಯಾಕಾಲದಲ್ಲಿರುವವರ ಕುರಿತು ಇಂಥ ನಿರ್ಧಾರ ತೆಗೆದುಕೊಳ್ಳುವುದು ಸಂವೇದನಾರಹಿತ
>
> **ವರುಣ್ ಗಾಂಧಿ**, ಸಂಸದ

2ನೇ ಸ್ಥಾನದಲ್ಲಿ ಬೆಂಗಳೂರು ವಲಯ

ಸಿಬಿಎಸ್‌ಇ 10, 12ನೇ ತರಗತಿ ಫಲಿತಾಂಶ ಪ್ರಕಟ • ಬಾಲಕಿಯರ ಮೇಲುಗೈ

ನವದೆಹಲಿ (ಪಿಟಿಐ): ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದೆ. 10ನೇ ತರಗತಿಯ ಶೇ 94.40 ಹಾಗೂ 12ನೇ ತರಗತಿಯ ಶೇ 92.71ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಈ ಎರಡೂ ಪರೀಕ್ಷೆಗಳ ಫಲಿತಾಂಶದಲ್ಲಿ ಬೆಂಗಳೂರು ವಲಯ ಉತ್ತಮ ಸಾಧನೆ ಮಾಡಿದ್ದು, ವಲಯವಾರು ಫಲಿತಾಂಶ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದೆ. ಸಿಬಿಎಸ್‌ಇ ಇದೇ ಮೊದಲ ಬಾರಿಗೆ ಎರಡೂ ಪರೀಕ್ಷೆಗಳ ಫಲಿತಾಂಶವನ್ನು ಒಂದೇ ದಿನ ಪ್ರಕಟಿಸಿದೆ.

ಈ ವರ್ಷ 12ನೇ ತರಗತಿಯ ಫಲಿತಾಂಶ ಕಳೆದ ವರ್ಷಕ್ಕಿಂತ ಶೇ 6.66 ಹಾಗೂ 10ನೇ ತರಗತಿ ಫಲಿತಾಂಶದಲ್ಲಿ ಶೇ 4.64ರಷ್ಟು ಕುಸಿತವಾಗಿದೆ. 2021ರಲ್ಲಿ 12ನೇ ತರಗತಿಯಲ್ಲಿ ಶೇ 99.37ರಷ್ಟು ಹಾಗೂ 10ನೇ ತರಗತಿಯಲ್ಲಿ ಶೇ 99.04ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಕಳೆದ ವರ್ಷ ಕೋವಿಡ್ ಸಾಂಕ್ರಾಮಿಕದ ಕಾರಣ ಪರೀಕ್ಷೆ ನಡೆಸದೆ, ವಿಶೇಷ ಮೌಲ್ಯಮಾಪನ ವಿಧಾನ ಅನುಸರಿಸಿ ಫಲಿತಾಂಶ ಪ್ರಕಟಿಸಿತ್ತು. ಈ ವರ್ಷ ಎರಡು ಹಂತಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು.

12ನೇ ತರಗತಿಯ ಒಟ್ಟಾರೆ ವಿದ್ಯಾರ್ಥಿಗಳ ಪೈಕಿ 33,432 (ಶೇ 2.33) ವಿದ್ಯಾರ್ಥಿಗಳು ಶೇ 95ಕ್ಕಿಂತ ಹೆಚ್ಚು ಹಾಗೂ 1,37,797 (ಶೇ 9.39) ವಿದ್ಯಾರ್ಥಿಗಳು ಶೇ 90ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ. 10ನೇ ತರಗತಿಯಲ್ಲಿ ಶೇ 95ಕ್ಕಿಂತ ಹೆಚ್ಚು ಅಂಕಗಳನ್ನು 64,908 (ಶೇ 3.10) ಹಾಗೂ ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು 2,36,993 (ಶೇ 11.32) ವಿದ್ಯಾರ್ಥಿಗಳು ಪಡೆದಿದ್ದಾರೆ.

ವಲಯವಾರು ಫಲಿತಾಂಶ: 12ನೇ ತರಗತಿಯಲ್ಲಿ ತಿರುವನಂತಪುರ ವಲಯವು ಶೇ 98.83ರಷ್ಟು ಫಲಿತಾಂಶ ಪಡೆದು ಮೊದಲ ಸ್ಥಾನದಲ್ಲಿದ್ದರೆ, ಬೆಂಗಳೂರು ವಲಯವು ಶೇ 98.16ರಷ್ಟು ಫಲಿತಾಂಶ ಪಡೆದು ಎರಡನೇ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿ ಚೆನ್ನೈ ವಲಯವಿದೆ (ಶೇ 98.97). ಅಂತೆಯೇ 10ನೇ ತರಗತಿಯಲ್ಲೂ ತಿರುವನಂತಪುರ ವಲಯ (ಶೇ 99.68), ಬೆಂಗಳೂರು ವಲಯ (ಶೇ 99.22) ಹಾಗೂ ಚೆನ್ನೈ ವಲಯ (ಶೇ 98.97) ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ.

ಜೆಎನ್‌ವಿ ಉತ್ತಮ ಸಾಧನೆ: 12ನೇ ತರಗತಿಯಲ್ಲಿ ಜವಾಹರ ನವೋದಯ ವಿದ್ಯಾಲಯಗಳು (ಜೆಎನ್‌ವಿ) ಉತ್ತಮ ಸಾಧನೆ ಮಾಡಿದ್ದು ಶೇ 98.93ರಷ್ಟು ಫಲಿತಾಂಶ ಪಡೆದಿವೆ. ಕೇಂದ್ರೀಯ ಟಿಬೆಟಿಯನ್ ಸ್ಕೂಲ್ ಅಡ್ಮಿನಿಸ್ಟ್ರೇಷನ್ (ಸಿಟಿಎಸ್‌ಎ) ಶೇ 97.96, ಕೇಂದ್ರೀಯ ವಿದ್ಯಾಲಯಗಳು ಶೇ 97.04, ಅನುದಾನಿತ ಶಾಲೆಗಳು ಶೇ 94.81, ಸರ್ಕಾರಿ ಶಾಲೆಗಳು ಶೇ 93.38 ಹಾಗೂ ಖಾಸಗಿ ಶಾಲೆಗಳು ಶೇ 92.20ರಷ್ಟು ಫಲಿತಾಂಶ ಪಡೆದಿವೆ.

10ನೇ ತರಗತಿಯಲ್ಲಿ ಜವಾಹರ ನವೋದಯ ವಿದ್ಯಾಲಯಗಳು (ಜೆಎನ್‌ವಿ) ಶೇ 99.71, ಖಾಸಗಿ ಶಾಲೆಗಳು ಶೇ 96.86, ಕೇಂದ್ರೀಯ ವಿದ್ಯಾಲಯಗಳು ಶೇ 96.61, ಕೇಂದ್ರೀಯ ಟಿಬೆಟಿಯನ್ ಸ್ಕೂಲ್ ಅಡ್ಮಿನಿಸ್ಟ್ರೇಷನ್ (ಸಿಟಿಎಸ್‌ಎ) ಶೇ 91.27, ಸರ್ಕಾರಿ, ಅನುದಾನಿತ ಶಾಲೆಗಳು ಕ್ರಮವಾಗಿ ಶೇ 80.68 ಮತ್ತು ಶೇ 76.73ರಷ್ಟು ಫಲಿತಾಂಶ ಗಳಿಸಿವೆ.

ಈ ವರ್ಷವೂ ಮೆರಿಟ್ ಪಟ್ಟಿ ಇಲ್ಲ

ವಿದ್ಯಾರ್ಥಿಗಳ ನಡುವೆ 'ಅನಾರೋಗ್ಯಕರ ಸ್ಪರ್ಧೆಗೆ' ಅವಕಾಶ ನೀಡಬಾರದು ಎಂಬ ಕಾರಣಕ್ಕೆ ಮಂಡಳಿ ಈ ವರ್ಷವೂ 10 ಮತ್ತು 12ನೇ ತರಗತಿಯ ಮೆರಿಟ್ ಪಟ್ಟಿಯನ್ನು ಪ್ರಕಟಿಸಿಲ್ಲ ಎಂದು ಮಂಡಳಿಯ ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಪ್ರತಿಕ್ರಿಯಿಸಿದರು. ಅತಿ ಹೆಚ್ಚು ಅಂಕಗಳನ್ನು ಪಡೆದಿರುವ ಶೇ 0.1ರಷ್ಟು ವಿದ್ಯಾರ್ಥಿಗಳಿಗೆ 'ಮೆರಿಟ್' ಪ್ರಮಾಣ ಪತ್ರಗಳನ್ನು ಮಂಡಳಿ ವಿತರಿಸಲಿದೆ ಎಂದು ಅವರು ಹೇಳಿದರು. ಸಿಬಿಎಸ್‌ಇ 2020ನೇ ಸಾಲಿನಿಂದ ಮೆರಿಟ್ ಪಟ್ಟಿ ಪ್ರಕಟಿಸುವುದನ್ನು ನಿಲ್ಲಿಸಿದೆ.

ಬಾಲಕಿಯರ ಮೇಲುಗೈ

12ನೇ ತರಗತಿಯಲ್ಲಿ ಶೇ 94.54ರಷ್ಟು ಬಾಲಕಿಯರು ಹಾಗೂ ಶೇ 91.25ರಷ್ಟು ಬಾಲಕರು ಉತ್ತೀರ್ಣರಾಗಿದ್ದಾರೆ. ಶೇ 100ರಷ್ಟು ತೃತೀಯ ಲಿಂಗಿ ವಿದ್ಯಾರ್ಥಿಗಳು ಪಾಸಾಗಿದ್ದಾರೆ. 10ನೇ ತರಗತಿಯಲ್ಲಿ ಶೇ 95.21ರಷ್ಟು ಬಾಲಕಿಯರು, ಶೇ 93.8ರಷ್ಟು ಬಾಲಕರು ಹಾಗೂ ಶೇ 90ರಷ್ಟು ತೃತೀಯ ಲಿಂಗಿಗಳು ಉತ್ತೀರ್ಣರಾಗಿದ್ದಾರೆ.

ಫೆ. 15ರಿಂದ ಪರೀಕ್ಷೆ

ನವದೆಹಲಿ: ಪ್ರಸಕ್ತ ಶೈಕ್ಷಣಿಕ ವರ್ಷದ (2022–23) 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳನ್ನು ಮುಂದಿನ ವರ್ಷದ ಫೆಬ್ರುವರಿ 15ರಿಂದ ನಡೆಸಲಾಗುವುದು ಎಂದು ಮಂಡಳಿಯ ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ತಿಳಿಸಿದರು.

ಕಳೆದ ವರ್ಷ ನಡೆಸಿದಂತೆ ಎರಡು ಹಂತದಲ್ಲಿ ಬೋರ್ಡ್ ಪರೀಕ್ಷೆಗಳನ್ನು ಈ ವರ್ಷ ನಡೆಸುವುದಿಲ್ಲ. ಶೈಕ್ಷಣಿಕ ವರ್ಷಾಂತ್ಯದಲ್ಲಿ (2023) ಒಂದು ಬೋರ್ಡ್ ಪರೀಕ್ಷೆಯನ್ನು ಮಾತ್ರ ನಡೆಸಲಾಗುವುದು ಎಂದು ಅವರು ಪ್ರತಿಕ್ರಿಯಿಸಿದರು.

'ಜಾಗತಿಕವಾಗಿ ಕೋವಿಡ್ ಪ್ರಭಾವ ಕಡಿಮೆ ಆಗಿರುವುದನ್ನು ಗಮನಿಸಿ, 2023ರ ಫೆಬ್ರುವರಿ 15ರಿಂದ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಲಾಗಿದೆ. ಅಲ್ಲದೆ ವರ್ಷಕ್ಕೆ ಒಂದು ಪಬ್ಲಿಕ್ ಪರೀಕ್ಷೆ ನಡೆಸುವ ಮಂಡಳಿಯ ಸಾಂಪ್ರದಾಯಿಕ ಆಚರಣೆಯ ವಿಧಾನಕ್ಕೆ ಮರಳಲು ತೀರ್ಮಾನಿಸಲಾಗಿದೆ' ಎಂದು ಅವರು ವಿವರಿಸಿದರು.

ಕ್ರಿಪ್ಟೊ ಹೂಡಿಕೆ ರಹಸ್ಯ ಮಾಹಿತಿ ದುರ್ಬಳಕೆ

ಭಾರತೀಯರಿಬ್ಬರ ವಿರುದ್ಧ ಎಫ್‌ಬಿಐ ಪ್ರಕರಣ

ಮುಖ್ಯಾಂಶಗಳು
- ಕ್ರಿಪ್ಟೊ ಹೂಡಿಕೆ ಸಂಬಂಧ ಮೊದಲ ಬಾರಿ ಇಂತಹ ಪ್ರಕರಣ
- ಸ್ಟಾಕ್ ಎಕ್ಸ್‌ಚೇಂಜ್ ಕಮಿಷನ್ ದೂರು: ಕ್ರಮ

ನ್ಯೂಯಾರ್ಕ್ (ಪಿಟಿಐ): ಕ್ರಿಪ್ಟೊಕರೆನ್ಸಿ ಹೂಡಿಕೆಯ ರಹಸ್ಯ ಮಾಹಿತಿಗಳನ್ನು ನೀಡಿ, ಅಕ್ರಮವಾಗಿ ಹಣ ಸಂಪಾದಿಸಿದ ಆರೋಪದಲ್ಲಿ ಇಬ್ಬರು ಭಾರತೀಯ ಸೋದರರು ಮತ್ತು ಅವರ ಅಮೆರಿಕದ ಗೆಳೆಯನೊಬ್ಬನ ವಿರುದ್ಧ ಇಲ್ಲಿ ಪ್ರಕರಣ ದಾಖಲಾಗಿದೆ. ಕ್ರಿಪ್ಟೊಕರೆನ್ಸಿ ಹೂಡಿಕೆಗೆ ಸಂಬಂಧಿಸಿದಂತೆ ಇಂತಹ ಪ್ರಕರಣ ದಾಖಲಾಗಿದ್ದು ಇದೇ ಮೊದಲು.

ಭಾರತೀಯರಾದ ಇಶಾನ್ ವಾಹಿ (32), ಅವರ ತಮ್ಮ ನಿಖಿಲ್ ವಾಹಿ (26) ಮತ್ತು ಅಮೆರಿಕದ ಸಮೀರ್ ರಮಾನಿ (33) ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕ್ರಿಪ್ಟೊಕರೆನ್ಸಿ ಹೂಡಿಕೆ ನಿರ್ವಹಣಾ ಕಂಪನಿ 'ಕಾಯ್ನ್‌ಬೇಸ್ ಎಕ್ಸ್‌ಚೇಂಜ್'ನ ವಹಿವಾಟುಗಳ ಬಗೆಗಿನ ರಹಸ್ಯ ಮಾಹಿತಿಗಳನ್ನು ಆರೋಪಿಗಳು ಹೂಡಿಕೆದಾರರಿಗೆ ನೀಡುತ್ತಿದ್ದರು. ಈ ರೀತಿ ಅಕ್ರಮವಾಗಿ ಕೆಲವು ಹೂಡಿಕೆದಾರರಿಗೆ ಅನುಕೂಲವಾಗುವಂತೆ ಮಾಡಿದ್ದರು. ಇದರಿಂದ ಇತರ ಹೂಡಿಕೆದಾರರಿಗೆ ಮುಕ್ತ ವಹಿವಾಟಿನ ಅವಕಾಶ ತಪ್ಪಿ ಹೋಗುತ್ತಿತ್ತು ಎಂದು ಎಫ್‌ಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಈ ರೀತಿ ರಹಸ್ಯ ಮಾಹಿತಿಯನ್ನು ನೀಡುವ ಮೂಲಕ ಮೂವರೂ ಒಟ್ಟು ಸುಮಾರು ₹12 ಕೋಟಿ (15 ಲಕ್ಷ ಡಾಲರ್) ಹಣವನ್ನು ಅಕ್ರಮವಾಗಿ ಗಳಿಸಿದ್ದಾರೆ. ಈ ಸಂಬಂಧ ಅಮೆರಿಕದ ಸ್ಟಾಕ್ ಎಕ್ಸ್‌ಚೇಂಜ್‌ ಕಮಿಷನ್ ನೀಡಿದ್ದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ. ಮೂವರ ವಿರುದ್ಧವೂ ಆನ್‌ಲೈನ್ ವಂಚನೆಗೆ ಸಂಚು ರೂಪಿಸಿದ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಅಪರಾಧಕ್ಕೆ ಗರಿಷ್ಠ 20 ವರ್ಷಗಳ ಜೈಲುಶಿಕ್ಷೆಯಾಗುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Wanted

ಶ್ರೀ ಶಕ್ತಿ ಕೇರ್ ಗೆ ಯುವಕರು ಮಸಾಜ್ ಥೆರಪಿ ಕೆಲಸಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ. ವಯೋಮಿತಿ 20ರಿಂದ 30 ವರ್ಷದೊಳಗೆ. ತಿಂಗಳಿಗೆ ವೇತನ 15,000/- ರಿಂದ 17,000/- ಸ್ಥಳ: ಶೇಷಾದ್ರಿಪುರಂ, ಬೆಂಗಳೂರು- 90196 26612

Engg/ Production Technical

CAREER OPPORTUNITY !! Skilled & Semi Skilled CNC & Press Machine Operator. Experience : 0 - 5years. QUALIFICATION ITI/Diploma/GT&TC/NTTF. LOCATION Kumarswamy Layout JC Industrial Estate. Company Name Karnataka Enterprises. Mail your CV at kar_entp@yahoo.com Contact : 9740377949

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

★||ಶ್ರೀಕೇದಾರನಾಥ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ: ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರಗಳ ದೋಷಗಳ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ. 7676750280

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Banashankari

BANASHANKARI 2ND STAGE, Building (GF, FF) for Sale 30'x45' S/F opposite to Umamaheshwara Park 9341890909.

Sites

Bannerghatta Road

BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

DH DECCAN HERALD ಪ್ರಜಾವಾಣಿ

Classifieds EDUCATION SPECIAL

SPECIAL RATES FOR • Admission Notice, Education Success • Congratulation Ads

For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

WEEKEND CORNER

ಟೀ ಮಾರಾಟಕ್ಕೆ

ಮೇಘಮಲೈ, ತಲೆಯಾರ್, ರಾಕ್‌ವುಡ್, ಬ್ರಿಯಾರ್ ಟೀ ಎಸ್ಟೇಟ್‌ಗಳಿಂದ ಟೀ ಪ್ಯಾಕೆಟ್ ನೇರ ಮಾರಾಟ
ಸಂಪರ್ಕಿಸಿ 8870601744 / 9487531481
WOODBRIAR GROUP Coimbatore
Producers of Monica, Injipara, Srikundra, Pudhuthottam, Murugan, Venniar, Manalaar
Woodbriar, Sussex, Bulk Tea

ಪ್ರವಾಸ

Travel

ನೇಪಾಳ್, ಮುಕ್ತಿನಾಥ್, ಪೊಕ್ರಾ, ಕಾಶಿ 11ದಿನಗಳು. 18.8.2022 ಚಾರ್‌ಧಾಮ್‌ಯಾತ್ರೆ 5.9.2022 26.9.2022. 15.9.2022, 29.9.2022 17/35ದಿನಗಳ, ದೆಹಲಿ, ಜಯಪುರ ವೈಷ್ಣೋದೇವಿ ಅಲಹಾಬಾದ್ ಬುದ್ಧಗಯಾ ಅಮೃತ್ಸರ್ ಹರಿದ್ವಾರ ದಕ್ಷಿಣ ಭಾರತ ಮಧ್ಯ ಭಾರತ ಶಿರಡಿ ಪ್ರವಾಸ. 9.11.2022 ಸೋಮನಾಥ್ ದ್ವಾರಕಾ, ನಾಗೇಶಂ ಓಂಕಾರೇಶ್ವರ. ಸಂಪರ್ಕಿಸಿ: ಏಷ್ಯನ್ ಟ್ರಾವೆಲ್ ಏಜೆನ್ಸಿ, ಬೆಂಗಳೂರು-4. 26574131, 8317446683, 9916408171

ನೇಪಾಳ-ಕಠ್ಮಂಡು 10 ದಿನದ ವಿದೇಶ ಪ್ರವಾಸ. ಕುವೆಂಪು ಕಲಾನಿಕೇತನ ಸಂಸ್ಥೆಯ ವತಿಯಿಂದ ಅಂತರಾಷ್ಟ್ರೀಯ ವಿಶ್ವಮಾನವ ಕುವೆಂಪು ಕಲಾ ಉತ್ಸವ-2022. ದಿನಾಂಕ:12-09-2022 ರಿಂದ ನೇಪಾಳಕಠ್ಮಂಡು ಪೋಕ್ರಾ ಗೋರಕಪುರ ಲುಂಬಿನಿ ಮುಕ್ತಿನಾಥ ಚಿತವಾನ್ ಮನೋಕಾಮನ ಜನಕಪುರಿ. ಸಂಪರ್ಕಿಸಿ: 09880988298/ 09448025130.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಸತ್ ಕಲಾಪ ಸೋಮವಾರಕ್ಕೆ

ಅಂಟಾರ್ಕ್‌ಟಿಕ್ ಮಸೂದೆಗೆ ಲೋಕಸಭೆ ಒಪ್ಪಿಗೆ • ವಿರೋಧ ಪಕ್ಷಗಳ ಗದ್ದಲ

ಲೋಕಸಭಾ ಅಧಿವೇಶನ

ನವದೆಹಲಿ (ಪಿಟಿಐ): ಬೆಲೆ ಏರಿಕೆಯ ಕುರಿತು ಚರ್ಚೆ ನಡೆಸಬೇಕು ಎಂದು ಆಗ್ರಹಿಸಿ ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆಯೇ ಭಾರತೀಯ ಅಂಟಾರ್ಕ್‌ಟಿಕ್ ಮಸೂದೆ 2022ಕ್ಕೆ ಲೋಕಸಭೆಯು ಶುಕ್ರವಾರ ಅನುಮೋದನೆ ನೀಡಿತು. ಅಂಟಾರ್ಕ್‌ಟಿಕ್ ಪ್ರದೇಶದಲ್ಲಿ ಭಾರತವು ಸ್ಥಾಪಿಸಿರುವ ಸಂಶೋಧನಾ ಕೇಂದ್ರಗಳಿಗೆ ದೇಶೀಯ ಕಾನೂನು ಅನ್ವಯ ಮಾಡುವುದನ್ನು ವಿಸ್ತರಿಸುವುದಕ್ಕಾಗಿ ಈ ಮಸೂದೆ ರೂಪಿಸಲಾಗಿದೆ.

ಇದು ಈ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಅಂಗೀಕಾರವಾದ ಮೊದಲ ಮಸೂದೆಯಾಗಿದೆ.

ಎರಡು ಮುಂದೂಡಿಕೆಗಳ ಬಳಿಕ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಸದನವು ಸೇರಿತು. ಭೂ ವಿಜ್ಞಾನಗಳ ಖಾತೆಯ ಸಚಿವ ಜಿತೇಂದ್ರ ಸಿಂಗ್ ಅವರು ಮಸೂದೆಯನ್ನು ಮಂಡಿಸಿದರು. 1959ರಲ್ಲಿ ರೂಪುಗೊಂಡ ಅಂಟಾರ್ಕ್‌ಟಿಕ್ ಒಪ್ಪಂದಕ್ಕೆ ಭಾರತವು 1983ರಲ್ಲಿ ಸೇರ್ಪಡೆಯಾಯಿತು ಎಂದು ಜಿತೇಂದ್ರ ಅವರು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿಯೂ ವಿರೋಧ ಪಕ್ಷಗಳ ಸಂಸದರು ಗದ್ದಲ ನಿಲ್ಲಿಸಲಿಲ್ಲ. ಮಸೂದೆಯ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಸ್ಪೀಕರ್ ಸ್ಥಾನದಲ್ಲಿದ್ದ ರಾಜೇಂದ್ರ ಅಗರ್‌ವಾಲ್ ಅವರು ಮಾಡಿದ ಮನವಿಯೂ ಫಲ ನೀಡಲಿಲ್ಲ. ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ವಾರದಲ್ಲಿ ಮಹತ್ವದ ಯಾವುದೇ ಚಟುವಟಿಕೆ ನಡೆದಿಲ್ಲ.

ಮಸೂದೆಯ ಮೇಲಿನ ಚರ್ಚೆಗೆ ವಿರೋಧ ಪಕ್ಷಗಳು ಸಿದ್ಧ ಇವೆ. ಆದರೆ, ಬೆಲೆ ಏರಿಕೆ ಕುರಿತ ಚರ್ಚೆಗೆ ಸರ್ಕಾರ ಒಪ್ಪಬೇಕು. ಈಗಿನ ಬಿಕ್ಕಟ್ಟು ನಿವಾರಣೆಗೆ ಸದನ ನಾಯಕರ ಸಭೆ ಕರೆಯಬೇಕು ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಹೇಳಿದರು.

ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವ ದ್ರೌಪದಿ ಮುರ್ಮು ಅವರು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸೋಮವಾರ ಬೆಳಿಗ್ಗೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಸಂಸದರು ಅದರಲ್ಲಿ ಭಾಗಿಯಾಗುವುದು ಸಾಧ್ಯವಾಗುವಂತೆ ಕಲಾಪವನ್ನು ಸೋಮವಾರ ಮಧ್ಯಾಹ್ನ 2ರ ನಂತರ ನಡೆಸಲು ನಿರ್ಧರಿಸಲಾಗಿದೆ.

ರಾಜ್ಯಸಭೆ: ಅಲ್ಪ ಹೊತ್ತು ಪ್ರಶ್ನೋತ್ತರ

ರಾಜ್ಯಸಭೆಯ ಕಲಾಪವು ಊಟದ ವಿರಾಮದ ಹೊತ್ತಿಗೆ ಎರಡು ಬಾರಿ ಮುಂದೂಡಿಕೆಯಾಯಿತು. ಬೆಲೆ ಏರಿಕೆ ಮತ್ತು ಇತರ ವಿಚಾರಗಳ ಚರ್ಚೆಯಾಗಬೇಕು ಎಂದು ವಿರೋಧ ಪಕ್ಷಗಳು ನಿರಂತರವಾಗಿ ಪ್ರತಿಭಟನೆ ನಡೆಸಿದವು. ಮಧ್ಯಾಹ್ನ 12ರ ಬಳಿಕ ಸದನವು ಸೇರಿದಾಗ, ರಾಜ್ಯಸಭಾ ಉಪಸಭಾಪತಿ ಹರಿವಂಶ ನಾರಾಯಣ್ ಸಿಂಗ್ ಅವರು 'ಪ್ರಶ್ನೋತ್ತರ ವೇಳೆ'ಯನ್ನು ಕೈಗೆತ್ತಿಕೊಂಡರು.

ಕೆಲ ಸಚಿವರು ಪ್ರಶ್ನೆಗಳಿಗೆ ಉತ್ತರ ನೀಡಿದರು. ಆದರೆ, ಗದ್ದಲ ನಿಲ್ಲದ ಕಾರಣ ಕಲಾಪವನ್ನು ಸೋಮವಾರ ಮಧ್ಯಾಹ್ನ 2ರವರೆಗೆ ಮುಂದೂಡಲಾಗಿದೆ.

ಶ್ರೀಲಂಕಾ: ರಾಜಪಕ್ಸ ಕುಟುಂಬದ ನಿಕಟವರ್ತಿ

ದಿನೇಶ್ ಗುಣವರ್ಧನ ನೂತನ ಪ್ರಧಾನಿ

ದಿನೇಶ್ ಗುಣವರ್ಧನ

ಕೊಲಂಬೊ (ಪಿಟಿಐ): ಶ್ರೀಲಂಕಾದ ಹಿರಿಯ ರಾಜಕಾರಣಿ ಹಾಗೂ ರಾಜಪಕ್ಸ ಕುಟುಂಬಕ್ಕೆ ನಿಕಟರಾಗಿರುವ ದಿನೇಶ್ ಗುಣವರ್ಧನ ಅವರನ್ನು ನೂತನ ಪ್ರಧಾನಿಯನ್ನಾಗಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ಶುಕ್ರವಾರ ನೇಮಕ ಮಾಡಿದ್ದಾರೆ.

ವಿಕ್ರಮಸಿಂಘೆ ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಾಡಿದ ಮೊದಲ ನೇಮಕ ಇದಾಗಿದೆ.

ಗುಣವರ್ಧನ ಅವರು ಈ ಹಿಂದೆ ವಿದೇಶಾಂಗ ಮತ್ತು ಶಿಕ್ಷಣ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಗೊಟಬಯ ರಾಜಪಕ್ಸ ಅವರು ಅಧ್ಯಕ್ಷರಾಗಿದ್ದಾಗ ಗುಣವರ್ಧನ ಅವರನ್ನು ಗೃಹಸಚಿವರಾಗಿ ನೇಮಕ ಮಾಡಿದ್ದರು.

73 ವರ್ಷದ ಗುಣವರ್ಧನ ಅವರು ಆಡಳಿತಾರೂಢ ಶ್ರೀಲಂಕಾ ಪೊದುಜನ ಪೆರಮುನದ (ಎಸ್‌ಎಲ್‌ಪಿಪಿ) ಘಟಕ ಪಕ್ಷವಾದ ಮಹಾಜನ ಏಕ್ಸತ್ ಪೆರಮುನದ (ಎಂಇಪಿ) ನಾಯಕರಾಗಿದ್ದಾರೆ.

ಪ್ರತಿಭಟನಕಾರರ ಬಂಧನ: ಶ್ರೀಲಂಕಾದ ಅಧ್ಯಕ್ಷರ ಸಚಿವಾಲಯದ ಬಳಿ ಪ್ರತಿಭಟನಕಾರರು ಸ್ಥಾಪಿಸಿದ್ದ ಶಿಬಿರಗಳಿಗೆ ಶುಕ್ರವಾರ ಭದ್ರತಾ ಪಡೆಗಳು ದಾಳಿ ನಡೆಸಿ, ಒಂಬತ್ತು ಮಂದಿಯನ್ನು ಬಂಧಿಸಿದ್ದಾರೆ. ಈ ವೇಳೆ ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗೊಟಬಯ ರಾಜಪಕ್ಸ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕವೂ ಪ್ರತಿಭಟನಕಾರರು ಅಧ್ಯಕ್ಷರ ಸಚಿವಾಲಯದ ಸೂಕ್ಷ್ಮ ಪ್ರದೇಶಗಳಲ್ಲೇ ಠಿಕಾಣಿ ಹೂಡಿದ್ದರು.

ಇಂಧನ ಖರೀದಿಗೆ ನಿಂತಿದ್ದ ಇಬ್ಬರ ಸಾವು

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ಇಂಧನ ಖರೀದಿಸಲು ಸರದಿ ಸಾಲಿನಲ್ಲಿ ನಿಂತಿದ್ದ ವೇಳೆ ಇಬ್ಬರು ಶುಕ್ರವಾರ ಮೃತಪಟ್ಟಿದ್ದಾರೆ.

ಕಿನ್ನಿಯಾ ಪಟ್ಟಣದ ಬಂಕ್ ಬಳಿ ಎರಡು ರಾತ್ರಿಗಳಿಂದ ಮೋಟರ್ ಸೈಕಲ್‌ನೊಂದಿಗೆ ಕಾಯುತ್ತಿದ್ದ 59 ವರ್ಷದ ವ್ಯಕ್ತಿ ಕುಸಿದು ಬಿದ್ದು, ಮೃತಪಟ್ಟಿದ್ದಾರೆ ಎಂದು ನ್ಯೂಸ್ ಪೋರ್ಟಲ್ ಲಂಕಾ ಫಸ್ಟ್ ತಿಳಿಸಿದೆ. ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ದೇಶದ ಪಶ್ಚಿಮ ಪ್ರಾಂತ್ಯದ ಮಥುಗಮದಲ್ಲಿ ಇಂಧನ ತುಂಬುವ ಕೇಂದ್ರದಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದ 70 ವರ್ಷದ ವ್ಯಕ್ತಿ ಸಹ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಜಾವೆಲಿನ್ ಥ್ರೋನಲ್ಲಿ ಪದಕ ನಿರೀಕ್ಷೆ, ಮಿಂಚಿದ ಪೌಲ್

ಫೈನಲ್‌ಗೆ ನೀರಜ್ ಚೋಪ್ರಾ

ಯೂಜೀನ್, ಅಮೆರಿಕ (ಪಿಟಿಐ): ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಪದಕದ ಭರವಸೆ ಎನಿಸಿರುವ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ನಿರೀಕ್ಷೆಯಂತೆಯೇ ಫೈನಲ್‌ಗೆ ಲಗ್ಗೆಯಿಟ್ಟರು.

ಇನ್ನೊಬ್ಬ ಜಾವೆಲಿನ್ ಥ್ರೋ ಸ್ಪರ್ಧಿ ರೋಹಿತ್ ಯಾದವ್ ಮತ್ತು ಟ್ರಿಪಲ್ ಜಂಪ್ ಅಥ್ಲೀಟ್ ಎಲ್ಡೋಸ್ ಪೌಲ್ ಅವರೂ ಫೈನಲ್‌ಗೆ ಲಗ್ಗೆಯಿಟ್ಟಿದ್ದು, ಭಾರತದ ಪಾಳೆಯದಲ್ಲಿ ಹರ್ಷಕ್ಕೆ ಕಾರಣರಾದರು.

ಗುರುವಾರ ನಡೆದ ಪುರುಷರ ವಿಭಾಗದ ಅರ್ಹತಾ ಹಂತದ 'ಎ' ಗುಂಪಿನಲ್ಲಿ ಸ್ಪರ್ಧಿಸಿದ ಒಲಿಂಪಿಕ್ ಚಾಂಪಿಯನ್ ನೀರಜ್, 88.39 ಮೀ. ಸಾಧನೆಯೊಂದಿಗೆ ಫೈನಲ್ ಪ್ರವೇಶಿಸಿದರು. ತಮ್ಮ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ಅವರು, ಒಟ್ಟಾರೆಯಾಗಿ ಎರಡನೇ ಸ್ಥಾನ ಗಳಿಸಿದರು. 'ಎ' ಗುಂಪಿನಲ್ಲಿ ಸ್ಪರ್ಧಿಸಿದ ಹಾಲಿ ಚಾಂಪಿಯನ್ ಗ್ರೆನಾಡದ ಆ್ಯಂಡರ್ಸನ್ ಪೀಟರ್ಸ್ 89.91 ಮೀ. ಸಾಧನೆಯೊಂದಿಗೆ ಅಗ್ರಸ್ಥಾನ ಗಳಿಸಿದರು.

ಫೈನಲ್ ಪ್ರವೇಶಿಸಿದ ಇತರ 10 ಅಥ್ಲೀಟ್‌ಗಳಲ್ಲಿ ಯಾರೂ 88 ಮೀ. ಗಿಂತ ಹೆಚ್ಚಿನ ಸಾಧನೆ ಮಾಡಿಲ್ಲ. ಆದ್ದರಿಂದ ಭಾನುವಾರ (ಭಾರತೀಯ ಕಾಲಮಾನ ಬೆಳಿಗ್ಗೆ 7.05ಕ್ಕೆ) ನಡೆಯಲಿರುವ ಫೈನಲ್‌ನಲ್ಲಿ ಚಿನ್ನದ ಪದಕ್ಕಾಗಿ ಚೋಪ್ರಾ ಮತ್ತು ಪೀಟರ್ಸ್ ನಡುವೆ ಪೈಪೋಟಿ ನಿರೀಕ್ಷಿಸಲಾಗಿದೆ.

ಚೋಪ್ರಾ ಈ ಋತುವಿನಲ್ಲಿ ಎರಡು ಸಲ ಪೀಟರ್ಸ್ ಅವರನ್ನು ಹಿಂದಿಕ್ಕಿದ್ದರು. ಆದರೆ ಸ್ಟಾಕ್‌ಹೋಂನಲ್ಲಿ ಜೂನ್ 30 ರಂದು ನಡೆದಿದ್ದ ಡೈಮಂಡ್ ಲೀಗ್‌ನಲ್ಲಿ ಚೋಪ್ರಾ ಅವರನ್ನು ಹಿಂದಿಕ್ಕಿ ಪೀಟರ್ಸ್ ಚಿನ್ನ ಜಯಿಸಿದ್ದರು.

2017 ರಲ್ಲಿ ಲಂಡನ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದ ನೀರಜ್ ಫೈನಲ್ ಪ್ರವೇಶಿಸಲು ವಿಫಲರಾಗಿದ್ದರು. ಅರ್ಹತಾ ಸುತ್ತಿನಲ್ಲಿ 82.26 ಮೀ. ಸಾಧನೆ ಮಾಡಿದ್ದರು. 2019ರಲ್ಲಿ ದೋಹಾದಲ್ಲಿ ನಡೆದಿದ್ದ ಚಾಂಪಿಯನ್‌ಷಿಪ್‌ನಲ್ಲಿ ಗಾಯದ ಕಾರಣ ಪಾಲ್ಗೊಂಡಿರಲಿಲ್ಲ.

ರೋಹಿತ್ ಅವರು 80.54 ಮೀ. ಸಾಧನೆಯೊಂದಿಗೆ 'ಬಿ' ಗುಂಪಿನಲ್ಲಿ ಆರನೇ ಹಾಗೂ ಒಟ್ಟಾರೆಯಾಗಿ 11ನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದರು. ತಮ್ಮ ಮೊದಲ ಥ್ರೋನಲ್ಲಿ ಅವರು ಈ ದೂರ ದಾಖಲಿಸಿದರು. ಎರಡನೇ ಥ್ರೋ ಫೌಲ್ ಆದರೆ, ಕೊನೆಯ ಅವಕಾಶದಲ್ಲಿ 77.32 ಮೀ. ಸಾಧನೆ ಮಾಡಿದರು.

ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸಿದ ನೀರಜ್ ಚೋಪ್ರಾ –ಪಿಟಿಐ ಚಿತ್ರ



ಎಲ್ಡೋಸ್ ಪೌಲ್ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು
- ಅರ್ಹತಾ ಸುತ್ತಿನಲ್ಲಿ 88.39 ಮೀ. ಸಾಧನೆ
- ಜಾವೆಲಿನ್: ರೋಹಿತ್ ಕೂಡಾ ಫೈನಲ್‌ಗೆ ಲಗ್ಗೆ
- ಟ್ರಿಪಲ್ ಜಂಪ್ ಫೈನಲ್‌ಗೆ ಎಲ್ಡೋಸ್ ಪೌಲ್

ಎಲ್ಡೋಸ್ ಐತಿಹಾಸಿಕ ಸಾಧನೆ: ಕೇರಳದ ಎಲ್ಡೋಸ್ ಪೌಲ್ ಅವರು ಟ್ರಿಪಲ್ ಜಂಪ್‌ನಲ್ಲಿ ಫೈನಲ್ ಪ್ರವೇಶಿಸಿ, ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎನಿಸಿಕೊಂಡರು. ಅರ್ಹತಾ ಸುತ್ತಿನಲ್ಲಿ 16.68 ಮೀ. ದೂರ ಜಿಗಿದ ಅವರು 'ಎ' ಗುಂಪಿನಲ್ಲಿ ಆರನೇ ಹಾಗೂ ಒಟ್ಟಾರೆಯಾಗಿ 12ನೇ ಸ್ಥಾನ ಗಳಿಸಿದರು.

ಕಣದಲ್ಲಿದ್ದ ಭಾರತದ ಇತರ ಇಬ್ಬರು ಸ್ಪರ್ಧಿಗಳಾದ ಪ್ರವೀಣ್ ಚಿತ್ರವೇಲ್ ಮತ್ತು ಅಬ್ದುಲ್ಲಾ ಅಬೂಬಕರ್ ಕ್ರಮವಾಗಿ 16.49 ಹಾಗೂ 16.45 ಮೀ. ಸಾಧನೆಯೊಂದಿಗೆ ಫೈನಲ್ ಪ್ರವೇಶಿಸಲು ವಿಫಲರಾದರು.

ಫೈನಲ್: ಜಾವೆಲಿನ್ ಥ್ರೋ: ಭಾನುವಾರ ಬೆಳಿಗ್ಗೆ 7.05
ಟ್ರಿಪಲ್ ಜಂಪ್: ಭಾನುವಾರ ಬೆಳಿಗ್ಗೆ 6.35 (ಭಾರತೀಯ ಕಾಲಮಾನ)

ಅನುರಾಣಿ ಇಂದು ಕಣಕ್ಕೆ

ಮಹಿಳೆಯರ ಜಾವೆಲಿನ್ ಥ್ರೊ ಸ್ಪರ್ಧೆಯ ಫೈನಲ್ ಭಾರತೀಯ ಕಾಲಮಾನ ಶನಿವಾರ ಬೆಳಿಗ್ಗೆ 6.30ಕ್ಕೆ ನಡೆಯಲಿದ್ದು, ಭಾರತದ ಅನುರಾಣಿ ಅವರು ಪದಕಕ್ಕಾಗಿ ಪೈಪೋಟಿ ನಡೆಸಲಿದ್ದಾರೆ.

ಅರ್ಹತಾ ಸುತ್ತಿನಲ್ಲಿ ಅವರು 59.60 ಮೀ. ಸಾಧನೆಯೊಂದಿಗೆ ಎಂಟನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದ್ದರು.

200 ಮೀ.: ಲೈಲ್ಸ್, ಶೆರಿಕಾ ಮಿಂಚು

ಅಮೆರಿಕದ ನೋವ ಲೈಲ್ಸ್ ಮತ್ತು ಜಮೈಕದ ಶೆರಿಕಾ ಜಾಕ್ಸನ್ ಅವರು 200 ಮೀ. ಓಟದ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆದರು.

ಲೈಲ್ಸ್ ಅವರು 19.31 ಸೆ.ಗಳಲ್ಲಿ ಗುರಿ ತಲುಪಿದರು. ಅಮೆರಿಕದವರೇ ಆದ ಕೆನ್ನಿ ಬೆನರೆಕ್ (19.77 ಸೆ.) ಹಾಗೂ ಎರಿಯೊನ್ ನೈಟನ್ (19.80 ಸೆ.) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು.

ಮಹಿಳೆಯರ ವಿಭಾಗದಲ್ಲಿ ಶೆರಿಕಾ 21.45 ಸೆ.ಗಳೊಂದಿಗೆ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಫ್ಲಾರೆನ್ಸ್ ಗ್ರಿಫಿತ್ ಜಾಯ್ನರ್ (21.34 ಸೆ.) ಬಳಿಕ 200 ಮೀ. ಓಟದ ಇತಿಹಾಸದಲ್ಲಿ ಎರಡನೇ ಅತಿವೇಗದ ಸಮಯ ಕಂಡುಕೊಂಡರು.

100 ಮೀ. ಓಟದಲ್ಲಿ ಚಿನ್ನ ಜಯಿಸಿದ್ದ ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ (21.81 ಸೆ.) ಬೆಳ್ಳಿ, ಬ್ರಿಟನ್‌ನ ಡಿನಾ ಅಶೆರ್ ಸ್ಮಿತ್ (22.02 ಸೆ.) ಕಂಚು ಪಡೆದುಕೊಂಡರು.

ಶಿಖರ್–ಶುಭಮನ್ ಆಸರೆ

ಕ್ರಿಕೆಟ್: ವೆಸ್ಟ್ ಇಂಡೀಸ್‌ಗೆ ಸವಾಲಿನ ಗುರಿ ನೀಡಿದ ಭಾರತ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಮೂರು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡ ಶಿಖರ್ ಧವನ್, ಭಾರತ ತಂಡವು ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ದೊಡ್ಡ ಮೊತ್ತ ಗಳಿಸಲು ಅಡಿಪಾಯ ಹಾಕಿದರು.

ಶಿಖರ್ (97; 99ಎ, 4X10, 6X3) ಮತ್ತು ಶುಭಮನ್ ಗಿಲ್ (64; 53ಎ, 4X6, 6X2) ಮೊದಲ ವಿಕೆಟ್‌ಗೆ 119 ರನ್ ಸೇರಿಸಿದರು. ಶ್ರೇಯಸ್ ಅಯ್ಯರ್ ಕೂಡಾ ಅರ್ಧಶತಕದ ಮೂಲಕ ಮಿಂಚಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗೆ 308 ರನ್ ಕಲೆಹಾಕಿತು.

ಗುರಿ ಬೆನ್ನಟ್ಟಿರುವ ವೆಸ್ಟ್ ಇಂಡೀಸ್ ತಂಡ 19 ಓವರ್‌ಗಳಲ್ಲಿ 1 ವಿಕೆಟ್‌ಗೆ 101 ರನ್ ಗಳಿಸಿತ್ತು.

ಕ್ವೀನ್ಸ್ ಪಾರ್ಕ್ ಓವಲ್‌ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡದ ನಾಯಕ ಶಿಖರ್ ಮತ್ತು ಗಿಲ್ ವಿಂಡೀಸ್ ಬೌಲರ್‌ಗಳ ಬೆವರಿಳಿಯುವಂತೆ ಮಾಡಿದರು.

ಶಿಖರ್ ಅವರಿಗಿಂತ ಗಿಲ್ ವೇಗವಾಗಿ ರನ್ ಗಳಿಸಿದರು. 120.75ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಎಡಗೈ ಬ್ಯಾಟರ್ ಶಿಖರ್ ಕೂಡ ಬಹುದಿನಗಳ ನಂತರ ಲಯ ಕಂಡುಕೊಂಡರು. ಆತ್ಮವಿಶ್ವಾಸ ಭರಿತ ಆಟವಾಡಿದರು. ಚೆಂದದ ಡ್ರೈವ್‌ಗಳನ್ನು ಪ್ರಯೋಗಿಸಿದರು. ಇದರಿಂದಾಗಿ ರನ್ ಗಳಿಕೆ ಮೇಲೆರಿತು. 18ನೇ ಓವರ್‌ನಲ್ಲಿ ಗಿಲ್ ರನ್‌ಔಟ್ ಆದರು.

ಕ್ರೀಸ್‌ಗೆ ಬಂದ ಶ್ರೇಯಸ್ ಅಯ್ಯರ್ (54; 57ಎ) ಅವರೊಂದಿಗೆ ಶಿಖರ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 94 ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು ಇನ್ನೂರರ ಗಡಿ ದಾಟಿತು. 34ನೇ ಓವರ್‌ನಲ್ಲಿ ಶಿಖರ್ ಎಡವಿದರು. ಗುಡಕೇಶ್ ಮೋತಿ ಎಸೆತವನ್ನು ಆಡುವ ಭರದಲ್ಲಿ ಶಾಮ್ರಾ ಬ್ರೂಕ್ಸ್‌ಗೆ ಕ್ಯಾಚಿತ್ತರು. ಇದರೊಂದಿಗೆ ಶತಕ ಗಳಿಸುವ ಅವರ ಉದ್ದೇಶ ಈಡೇರಲಿಲ್ಲ.

ಎರಡು ಓವರ್‌ಗಳ ನಂತರ ಶ್ರೇಯಸ್ ಕೂಡ ಮೋತಿ ಬೌಲಿಂಗ್‌ನಲ್ಲಿಯೇ ಔಟಾದರು. ಸೂರ್ಯಕುಮಾರ್ ಯಾದವ್ ಮತ್ತು ಸಂಜು ಸ್ಯಾಮ್ಸನ್ ದೊಡ್ಡ ಮೊತ್ತ ಗಳಿಸುವಲ್ಲಿ ವಿಫಲರಾದರು. ಕೊನೆಯಲ್ಲಿ ದೀಪಕ್ ಹೂಡಾ (27, 32 ಎ.) ಮತ್ತು ಅಕ್ಷರ್ ಪಟೇಲ್ (21, 21 ಎ.) ಉಪಯುಕ್ತ ಆಟವಾಡಿ ತಂಡದ ಮೊತ್ತವನ್ನು 300ರ ಗಡಿ ದಾಟಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ 50 ಓವರ್‌ಗಳಲ್ಲಿ 7ಕ್ಕೆ 308 (ಶಿಖರ್ ಧವನ್ 97, ಶುಭಮನ್ ಗಿಲ್ 64, ಶ್ರೇಯಸ್ ಅಯ್ಯರ್ 54, ಸೂರ್ಯಕುಮಾರ್ ಯಾದವ್ 13, ಸಂಜು ಸ್ಯಾಮ್ಸನ್ ಬ್ಯಾಟಿಂಗ್ 11, ದೀಪಕ್ ಹೂಡಾ 27, ಅಕ್ಷರ್ ಪಟೇಲ್ 21, ಗುಡಕೇಶ್ ಮೋತಿ 54ಕ್ಕೆ2, ಅಲ್ಜಾರಿ ಜೋಸೆಫ್ 61ಕ್ಕೆ 2) ವಿವರ ಅಪೂರ್ಣ.

ಶಿಖರ್ ಧವನ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಕಶ್ಯಪ್, ತನಿಶಾ ಪರಾಭವ

ತೈಪೆ (ಪಿಟಿಐ): ಪಿ.ಕಶ್ಯಪ್ ಮತ್ತು ತನಿಶಾ ಕ್ರಾಸ್ಟೊ ಅವರು ಇಲ್ಲಿ ನಡೆಯುತ್ತಿರುವ ತೈಪೆ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಸೋಲು ಅನುಭವಿಸಿದರು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲಿಗೆ ತೆರೆಬಿತ್ತು.

ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಕಶ್ಯಪ್ 12-21, 21-12, 17-21ರಲ್ಲಿ ಮಲೇಷ್ಯದ ಸೂಂಗ್ ಜೂ ವೆನ್ ಕೈಯಲ್ಲಿ ಪರಾಭವಗೊಂಡರು.

ಇಲ್ಲಿ ಮೂರನೇ ಶ್ರೇಯಾಂಕ ಹೊಂದಿದ್ದ ಭಾರತದ ಆಟಗಾರ 55 ನಿಮಿಷಗಳಲ್ಲಿ ಸೋಲೊಪ್ಪಿಕೊಂಡರು. ಮೊದಲ ಗೇಮ್ ಸೋತ ಕಶ್ಯಪ್, ಎರಡನೇ ಗೇಮ್‌ನಲ್ಲಿ ತಿರುಗೇಟು ನೀಡಿ ಸಮಬಲ ಸಾಧಿಸಿದರು. ಆದರೆ ನಿರ್ಣಾಯಕ ಗೇಮ್‌ನಲ್ಲಿ ಶಿಸ್ತಿನ ಆಟವಾಡುವಲ್ಲಿ ವಿಫಲರಾದರು.

ಮಿಶ್ರ ಡಬಲ್ಸ್‌ನಲ್ಲಿ ತನಿಶಾ- ಇಶಾನ್ ಭಟ್ನಾಗರ್ ಜೋಡಿ 19–21– 12–21 ರಲ್ಲಿ ಮಲೇಷ್ಯದ ಹು ಪಾಂಗ್ ರಾನ್–ತೊ ಇ ವೀ ಎದುರು ಸೋತಿತು.

ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ತನಿಶಾ- ಶ್ರುತಿ ಮಿಶ್ರಾ 16-21, 22-20, 18-21 ರಲ್ಲಿ ಹಾಂಗ್‌ಕಾಂಗ್‌ನ ಎಂಗ್ ತ್ಸೆ ಯು- ತ್ಸಾಂಗ್ ಹು ಯಾನ್ ಎದುರು ಪರಾಭವಗೊಂಡಿತು. ಈ ಹೋರಾಟ ಒಂದು ಗಂಟೆ ನಡೆಯಿತು.

ಬಿಸಿಸಿಐ ಎ ಪ್ಲಸ್ ಅಂಪೈರ್ ನಿತಿನ್ ಮೆನನ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಅಂಪೈರ್‌ಗಳಿಗೆಆಗಿ ಎ ಪ್ಲಸ್ ವಿಭಾಗವನ್ನು ಆರಂಭಿಸಿದೆ.

ಐಸಿಸಿ ಎಲೀಟ್ ಪ್ಯಾನೆಲ್ ಅಂಪೈರ್ ನಿತಿನ್ ಮೆನನ್ ಸೇರಿದಂತೆ ಹತ್ತು ಅಂಪೈರ್‌ಗಳು ಇದರಲ್ಲಿ ಸ್ಥಾನ ಪಡೆದಿದ್ದಾರೆ.

ಅನುಭವಿ ಅಂಪೈರ್‌ಗಳಾದ ಅನಿಲ್ ಚೌಧರಿ, ಮದನಗೋಪಾಲ್, ಜಯರಾಮನ್, ವೀರೇಂದ್ರಕುಮಾರ್ ಶರ್ಮಾ, ಕೆ.ಎನ್. ಅನಂತಪದ್ಮನಾಭನ್, ರೋಹನ್ ಪಂಡಿತ್, ನಿಖಿಲ್ ಪಟವರ್ಧನ್, ಸದಾಶಿವ್ ಅಯ್ಯರ್, ಉಲ್ಲಾಸ ಗಂಧೆ ಮತ್ತು ನವದೀಪ್ ಸಿಂಗ್ ಸಿಧು ಈ ವಿಭಾಗದಲ್ಲಿದ್ದಾರೆ.

ಸಿ. ಶಂಸುದ್ದೀನ್ ಸೇರಿದಂತೆ 20 ಅಂಪೈರ್‌ಗಳು ಎ ಗುಂಪಿನಲ್ಲಿ, 60 ಅಂಪೈರ್‌ಗಳು ಬಿ ಗುಂಪಿನಲ್ಲಿ, 46 ಅಂಪೈರ್‌ಗಳು ಸಿ ಮತ್ತು 11 ಅಂಪೈರ್‌ಗಳು ಡಿ ಗುಂಪಿನಲ್ಲಿದ್ದಾರೆ. 60–65 ವಯೋಮಿತಿಯೊಳಗಿನವರು ಇದರಲ್ಲಿದ್ದಾರೆ.

ಗುರುವಾರ ನಡೆದ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಈ ಕುರಿತು ನಿರ್ಧಾರ ಅಂತಿಮಗೊಳಿಸಲಾಯಿತು. ಮಾಜಿ ಅಂತರರಾಷ್ಟ್ರೀಯ ಅಂಪೈರ್‌ಗಳಾದ ಕೆ. ಹರಿಹರನ್, ಸುಧೀರ್ ಅಸ್ನಾನಿ ಮತ್ತು ಅಮೀಶ್ ಸಾಹೆಬಾ ಅವರು ಇರುವ ಅಂಪೈರ್ ಉಪಸಮಿತಿಯು ಶಿಫಾರಸು ಮಾಡಿತು.

ಎ ಪ್ಲಸ್ ಮತ್ತು ಎ ವಿಭಾಗಗಳ ಅಂಪೈರ್‌ಗಳು ಪ್ರಥಮ ದರ್ಜೆ ಪಂದ್ಯದಲ್ಲಿ ದಿನವೊಂದಕ್ಕೆ ₹ 40 ಸಾವಿರ, ಬಿ ಮತ್ತು ಸಿ ಗುಂಪಿನ ಅಂಪೈರ್‌ಗಳಿಗೆ ₹ 30 ಸಾವಿರ ಸಂಭಾವನೆ ನೀಡಲಾಗುತ್ತದೆ.

'ದೇಶಿ ಋತುವಿನ ಪಂದ್ಯಗಳಿಗೆ ನಿಯೋಜನೆ ಮಾಡುವಾಗಲೂ ಈ ಕೆಟಗರಿಗಳ ಅಧಾರದಲ್ಲಿ ಅವಕಾಶ ನೀಡಲಾಗುತ್ತದೆ. ಅದರಲ್ಲೂ ರಣಜಿ ಟ್ರೋಫಿ ಟೂರ್ನಿಯ ಪಂದ್ಯಗಳಲ್ಲಿ ಈ ಪದ್ಧತಿ ಕಟ್ಟುನಿಟ್ಟಾಗಿ ಪಾಲನೆಯಾಗಲಿದೆ' ಎಂದು ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿತಿನ್ ಮೆನನ್

ತೇಜೋವಧೆಯೇ ಉದ್ದೇಶ: ಗುಣಪಾಲ

ಪ್ರಜಾವಾಣಿ ವಾರ್ತೆ

ಮಂಗಳೂರು: 'ನನ್ನ, ಕಂಬಳ ಓಟಗಾರ ಶ್ರೀನಿವಾಸ ಗೌಡ ಮತ್ತು ಸ್ಕೈ ವ್ಯೂ ಸಂಸ್ಥೆಯ ರತ್ನಾಕರ ಅವರ ಮೇಲೆ ದೂರು ನೀಡಿ ಕಂಬಳ ಕ್ರೀಡೆಗೆ ಕೆಟ್ಟ ಹೆಸರು ತರಲು ಪ್ರಯತ್ನಿಸಿರುವ ಮುಚ್ಚೂರು ಲೋಕೇಶ್ ಶೆಟ್ಟಿ ನಮ್ಮೆಲ್ಲರ ತೇಜೋವಧೆಗೆ ಮುಂದಾಗಿದ್ದಾರೆ' ಎಂದು ಕಂಬಳ ಅಕಾಡೆಮಿ ಸ್ಥಾಪಕ ಗುಣಪಾಲ ಕಡಂಬ ಆರೋಪಿಸಿದರು.

ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕಂಬಳ ಸಂಸ್ಥೆ ಆರಂಭಿಸಲು ಮುಂದಾಗುತ್ತಿದ್ದಂತೆಯೇ, ನಾನು ಅದರ ಅಧ್ಯಕ್ಷನಾಗುವ ಸಾಧ್ಯತೆ ಇದೆ ಎಂದು ಮನಗಂಡು ಕುತಂತ್ರ ಮಾಡಲು ಕೆಲವರು ಮುಂದಾಗಿದ್ದಾರೆ. ಅದರ ಮುಂದುವರಿದ ಭಾಗವಾಗಿ ಪೊಲೀಸರಿಗೆ ದೂರು ನೀಡಲಾಗಿದೆ' ಎಂದರು.

'ಶ್ರೀನಿವಾಸ ಗೌಡ ಅವರನ್ನು ಉಸೇನ್ ಬೋಲ್ಟ್ ಅವರಿಗೆ ನಾನೆಲ್ಲೂ ಹೋಲಿಕೆ ಮಾಡಲಿಲ್ಲ. ಅದು ಮಾಧ್ಯಮದವರ ಸೃಷ್ಟಿ. ಹಾಗೆ ಬಿಂಬಿಸಿದ್ದರ ಹಿಂದೆ ಲೋಕೇಶ್ ಶೆಟ್ಟಿ ಅವರ ಕೈವಾಡವೂ ಇದೆ. ಅವರು ಮಾಡಿರುವ ಎಲ್ಲ ಆರೋಪಗಳು ಸತ್ಯಕ್ಕೆ ದೂರವಾಗಿವೆ' ಎಂದು ಕಡಂಬ ಹೇಳಿದರು.

ಸ್ಕೈವ್ಯೂ ಕಂಪನಿಯ ರತ್ನಾಕರ ಮತ್ತು ವಕೀಲ ಸುರೇಶ್ ಇದ್ದರು.


ಗುಣಪಾಲ

ಸೆ. 23 ರಿಂದ ಲೇವರ್ ಕಪ್ ಟೆನಿಸ್ ಟೂರ್ನಿ

ಕಣದಲ್ಲಿ ನಾಲ್ವರು ದಿಗ್ಗಜರು

ಪ್ಯಾರಿಸ್ (ರಾಯಿಟರ್ಸ್): ಪ್ರಸ್ತುತ ಟೆನಿಸ್ ಕ್ರೀಡೆಯ ನಾಲ್ವರು ದಿಗ್ಗಜರಾದ ರಫೆಲ್ ನಡಾಲ್, ನೊವಾಕ್ ಜೊಕೊವಿಚ್, ರೋಜರ್ ಫೆಡರರ್ ಮತ್ತು ಆ್ಯಂಡಿ ಮರೆ ಲಂಡನ್‌ನಲ್ಲಿ ನಡೆಯಲಿರುವ ಲೇವರ್ ಕಪ್ ಟೂರ್ನಿಯಲ್ಲಿ ಇದೇ ಮೊದಲ ಸಲ ಕಣಕ್ಕಿಳಿಯುತ್ತಿದ್ದಾರೆ.

ಆರು ಆಟಗಾರರ ಯುರೋಪ್ ತಂಡದಲ್ಲಿ ನಾಲ್ಕನೇಯವರಾಗಿ ವಿಂಬಲ್ಡನ್ ಚಾಂಪಿಯನ್ ಜೊಕೊವಿಚ್ ಶನಿವಾರ ಹೆಸರು ನೋಂದಾಯಿಸಿಕೊಂಡರು. ಸರ್ಬಿಯಾದ 35 ವರ್ಷದ ಜೊಕೊವಿಚ್ ತಮ್ಮ ಬದ್ಧ ಎದುರಾಳಿಗಳೊಂದಿಗೆ ಕಣಕ್ಕಿಳಿಯಲಿದ್ದಾರೆ.

ಸೆಪ್ಟೆಂಬರ್ 23 ರಿಂದ 25ರವರೆಗೆ ಈ ಟೂರ್ನಿಯು ನಡೆಯಲಿದೆ. ಇದರಲ್ಲಿ ಯುರೋಪ್‌ನ ಆರು ಆಟಗಾರರ ಬಳಗವು ರೆಸ್ಟ್ ಆಫ್ ವರ್ಲ್ಡ್ ತಂಡವನ್ನು ಎದುರಿಸಲಿದೆ.

'ತಂಡವಾಗಿ ಆಡುವ ಅವಕಾಶ ಇರುವ ಏಕೈಕ ಟೂರ್ನಿ ಇದು. ನನ್ನ ಸಾರ್ವಕಾಲಿಕ ಎದುರಾಳಿಗಳಾದ ನಡಾಲ್, ಫೆಡರರ್ ಮತ್ತು ಆ್ಯಂಡಿ ಅವರೊಂದಿಗೆ ಕಣಕ್ಕಿಳಿಯುತ್ತಿರುವುದು ವಿಶಿಷ್ಟ ಅನುಭವವಾಗಲಿದೆ' ಎಂದು ನೊವಾಕ್ ಹೇಳಿದರು.

ಜೊಕೊವಿಚ್, ಫೆಡರರ್, ರಫೆಲ್ ನಡಾಲ್ ಮತ್ತು ಆ್ಯಂಡಿ ಮರೆ –ಟ್ವಿಟರ್ ಚಿತ್ರ

ಷೇರುಪೇಟೆ ವಹಿವಾಟು 391



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,604
ಇಂದಿನ ಅಂತ್ಯ	16,719
▲	115
ದಿನದ ಗರಿಷ್ಠ	16,752

ವಿನಿಮಯ ದರ

$ ಡಾಲರ್	79.90
£ ಪೌಂಡ್	95.3
€ ಯುರೊ	81.02
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1640 (1640)
ಸೋಯಾ (ರಿಫೈಂಡ್)	₹1220 (1225)
ಸೂರ್ಯಕಾಂತಿ (ರಿಫೈಂಡ್)	₹1580 (1580)
ಪಾಮೋಲಿನ್	₹1185 (1185)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹312-510
ದ್ವಿತಳಿ (ಬಿ.ವಿ)	₹300-733

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹170.50
ಆರ್‌ಎಸ್‌ಎಸ್-5	₹161.50
ಗುಡ್ ಲಾಟ್	₹155.50

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಆಕಾಸಾ ಏರ್: ಬುಕಿಂಗ್ ಆರಂಭ, ಆ. 7ರಿಂದ ಸೇವೆ

ನವದೆಹಲಿ (ರಾಯಿಟರ್ಸ್): ಆಕಾಸಾ ಏರ್ ಕಂಪನಿಯು ಆಗಸ್ಟ್ 7ರಿಂದ ವಿಮಾನಯಾನ ಸೇವೆ ಆರಂಭಿಸಲಿದ್ದು, ಮುಂಬೈ-ಅಹಮದಾಬಾದ್ ನಡುವೆ ಮೊದಲ ಸೇವೆಯು ಆರಂಭ ಆಗಲಿದೆ ಎಂದು ಕಂಪನಿಯು ಶುಕ್ರವಾರ ತಿಳಿಸಿದೆ.

ಬುಕಿಂಗ್ ಆರಂಭ ಆಗಿದ್ದು, ಆಗಸ್ಟ್ 7ರಿಂದ ಮುಂಬೈ-ಅಹಮದಾಬಾದ್ ನಡುವೆ ವಾರದಲ್ಲಿ 28 ಬಾರಿ ಮತ್ತು ಆಗಸ್ಟ್ 13ರಿಂದ ಬೆಂಗಳೂರು–ಕೊಚ್ಚಿ ನಡುವೆ ವಾರದಲ್ಲಿ 28 ಬಾರಿ ಬೋಯಿಂಗ್ 737 ಮ್ಯಾಕ್ಸ್ ವಿಮಾನವು ಸಂಚರಿಸಲಿದೆ ಎಂದು ಕಂಪನಿಯು ತಿಳಿಸಿದೆ.

ದೇಶದಾದ್ಯಂತ ಮಹಾನಗರಗಳಿಂದ ಎರಡು ಮತ್ತು ಮೂರನೇ ಶ್ರೇಣಿಯ ನಗರಗಳಿಗೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಗಮನ ಹರಿಸಲಾಗಿದೆ ಎಂದು ಕಂಪನಿಯ ಸಹ ಸ್ಥಾಪಕ ಪ್ರವೀಣ್ ಅಯ್ಯರ್ ತಿಳಿಸಿದ್ದಾರೆ.

'ಐಟಿಆರ್ ಸಲ್ಲಿಕೆ ಗಡುವು ವಿಸ್ತರಣೆ ಆಲೋಚನೆ ಇಲ್ಲ'

ನವದೆಹಲಿ (ಪಿಟಿಐ): ಆದಾಯ ತೆರಿಗೆ ವಿವರ ಸಲ್ಲಿಕೆಯ (ಐಟಿಆರ್) ಗಡುವು ಇದೇ ತಿಂಗಳ 31ಕ್ಕೆ ಅಂತ್ಯವಾಗಲಿದ್ದು, ಅದನ್ನು ವಿಸ್ತರಿಸುವ ಆಲೋಚನೆ ಸರ್ಕಾರದ ಮುಂದೆ ಸದ್ಯಕ್ಕೆ ಇಲ್ಲ ಎಂದು ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಶುಕ್ರವಾರ ಹೇಳಿದ್ದಾರೆ.

2021–22ನೇ ಹಣಕಾಸು ವರ್ಷಕ್ಕೆ ಜುಲೈ 20ರವರೆಗೆ 2.3 ಕೋಟಿಗೂ ಅಧಿಕ ರಿಟರ್ನ್ಸ್‌ಗಳು ಸಲ್ಲಿಕೆ ಆಗಿವೆ. ರಿಟರ್ನ್ಸ್ ಸಲ್ಲಿಕೆ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪ್ರತಿ ಬಾರಿಯೂ ರಿಟರ್ನ್ಸ್ ಸಲ್ಲಿಕೆ ಅವಧಿಯು ವಿಸ್ತರಣೆ ಆಗುತ್ತದೆ ಎಂದು ಜನರು ಭಾವಿಸುತ್ತಾರೆ. ಹೀಗಾಗಿ ಆರಂಭದಲ್ಲಿ ರಿಟರ್ನ್ಸ್ ಸಲ್ಲಿಕೆ ಪ್ರಮಾಣ ಕಡಿಮೆ ಇರುತ್ತದೆ. ಆದರೆ ಈಗ ದಿನವೂ 15 ಲಕ್ಷದಿಂದ 18 ಲಕ್ಷ ರಿಟರ್ನ್ಸ್ ಸಲ್ಲಿಕೆ ಆಗುತ್ತಿದೆ. ಈ ಸಂಖ್ಯೆಯು ನಿಧಾನವಾಗಿ 25 ಲಕ್ಷದಿಂದ 30 ಲಕ್ಷಕ್ಕೆ ಏರಿಕೆ ಆಗಲಿದೆ ಎಂದು ಬಜಾಜ್ ಹೇಳಿದ್ದಾರೆ.

2020–21ನೇ ಹಣಕಾಸು ವರ್ಷದಲ್ಲಿ 5.89 ಕೋಟಿ ರಿಟರ್ನ್ಸ್ ಸಲ್ಲಿಕೆ ಆಗಿತ್ತು.

ಮುಂಬೈ ಧಾರಣೆ

ಶೇಂಗಾ

22-7-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1140 (1160)
ಪಾಮ್ ವಾರದ ಡೆಲಿವರಿ	1183 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,600 (49,900)
ಬೆಳ್ಳಿ ಕೆ.ಜಿ 54,950 (54,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-55500
ಹೊಸನಗರ	
ಬಿಳಿಗೋಟು	25399-29299
ಚಾಲಿ	35499-36409
ಕೆಂಪುಗೋಟು	34199-37399
ರಾಶಿ	47899-50170
ಕುಮಟ	
ಚಿಪ್ಪು	27509-31119
ಕೋಕ	19019-30111
ಹಳೆಚಾಲಿ	43101-46299
ಹೊಸಚಾಲಿ	39000-41500
ಶಿವಮೊಗ್ಗ	
ಬೆಟ್ಟೆ	51969-53700
ಗೊರಬಲು	17100-37999
ರಾಶಿ	45469-49419
ಸರಕು	60399-79896
ಪುತ್ತೂರು	
ಕೋಕ	11000-26000
ಹೊಸತು	31500-44500
ಸಿದ್ದಾಪುರ	
ಬಿಳಿಗೋಟು	24899-32689
ಚಾಲಿ	35599-39209
ಕೋಕ	24199-32969
ಕೆಂಪುಗೋಟು	26899-32619
ರಾಶಿ	43699-47969
ತಟ್ಟಿಬೆಟ್ಟೆ	35689-43899
ಶಿರಸಿ	
ಬೆಟ್ಟೆ	28099-44599
ಬಿಳಿಗೋಟು	22899-34099
ಚಾಲಿ	34899-39898
ರಾಶಿ	40723-49699
ಯಲ್ಲಾಪುರ	
ಬಿಳಿಗೋಟು	28612-33099
ಚಾಲಿ	34899-39899
ಕೋಕ	18212-29699
ಕೆಂಪುಗೋಟು	28899-34679
ರಾಶಿ	45519-54019
ತಟ್ಟಿಬೆಟ್ಟೆ	37509-44390

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15600	15750	215.85 ಸೆಂಟ್ಸ್
ಎಸಿ	8680	8300	8550	
ಆರ್‌ಪಿ	9500	9500	9650	ಲಂಡನ್
ಆರ್‌ಸಿ	4680	4500	4475	1987 ಡಾಲರ್ಸ್

ಕೆನರಾ ಎಐ1 ಆ್ಯಪ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ತನ್ನ ಗ್ರಾಹಕರಿಗಾಗಿ 'ಕೆನರಾ ಎಐ1' ಹೆಸರಿನ ಸೂಪರ್ ಆ್ಯಪ್ ಬಿಡುಗಡೆ ಮಾಡಿದೆ. ಗ್ರಾಹಕರ ಅಗತ್ಯಗಳನ್ನು ಪೂರೈಸುವ 250ಕ್ಕೂ ಹೆಚ್ಚಿನ ಸೌಲಭ್ಯಗಳು ಇದರಲ್ಲಿ ಇವೆ.

ಬ್ಯಾಂಕ್‌ನ ಬೇರೆ ಬೇರೆ ಸೇವೆಗಳನ್ನು ಪಡೆಯಲು ಒಂದಕ್ಕಿಂತ ಹೆಚ್ಚಿನ ಆ್ಯಪ್ ಬಳಸುವ ಅಗತ್ಯ ಇರುವುದಿಲ್ಲ ಎಂದು ಬ್ಯಾಂಕ್ ತಿಳಿಸಿದೆ. ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಎಲ್.ವಿ. ಪ್ರಭಾಕರ ಅವರು ಆ್ಯಪ್‌ಗೆ ಶುಕ್ರವಾರ ಚಾಲನೆ ನೀಡಿದರು.

ಆ್ಯಪ್‌ನ ಡ್ಯಾಶ್‌ಬೋರ್ಡ್ ಅನ್ನು ಬಳಕೆದಾರರು ತಮ್ಮ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಅವಕಾಶವಿದೆ. ಹನ್ನೊಂದು ಭಾಷೆಗಳಲ್ಲಿ ಇದು ಸೇವೆ ಒದಗಿಸುತ್ತದೆ. ಬಿಲ್ ಪಾವತಿ, ವಿಮಾನ ಟಿಕೆಟ್ ಕಾಯ್ದಿರಿಸುವುದು, ಹೋಟೆಲ್ ಅಥವಾ ಕ್ಯಾಬ್ ಬುಕಿಂಗ್, ಸಾಲ ಮರುಪಾವತಿ, ಠೇವಣಿ ಇರಿಸುವುದು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಸೇರಿದಂತೆ ಹಲವು ಸೌಲಭ್ಯಗಳನ್ನು ಆ್ಯಪ್ ಮೂಲಕ ಪಡೆಯಬಹುದು.

ರಿಲಯನ್ಸ್ ಲಾಭ ಶೇ 46ರಷ್ಟು ಏರಿಕೆ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಜೂನ್ ತ್ರೈಮಾಸಿಕದ ನಿವ್ವಳ ಲಾಭ ಶೇಕಡ 46ರಷ್ಟು ಹೆಚ್ಚಾಗಿದೆ. ತೈಲ ಸಂಸ್ಕರಣೆ, ದೂರಸಂಪರ್ಕ ಉದ್ದಿಮೆ ಮತ್ತು ರಿಟೇಲ್ ವಹಿವಾಟು ಉತ್ತಮವಾಗಿದ್ದು ಈ ಹೆಚ್ಚಳಕ್ಕೆ ಕಾರಣ. ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ₹ 17,955 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 12,273 ಕೋಟಿ ಲಾಭ ಗಳಿಸಿತ್ತು.

ವಿದೇಶಿ ಬಂಡವಾಳ ಒಳಹರಿವು: ಬ್ಯಾಂಕ್‌ಗಳ ಷೇರು ಮೌಲ್ಯ ವೃದ್ಧಿ

ವಾರದ ವಹಿವಾಟಿನಲ್ಲಿ ಶೇ 4 ಗಳಿಕೆ

ಬೆಂಗಳೂರು (ರಾಯಿಟರ್ಸ್): ದೇಶದ ಷೇರುಪೇಟೆಗಳು ಶುಕ್ರವಾರಕ್ಕೆ ಕೊನೆಗೊಂಡ ವಾರದಲ್ಲಿ ಶೇಕಡ 4ರಷ್ಟು ಗಳಿಕೆ ಕಂಡುಕೊಂಡಿವೆ. 2021ರ ಫೆಬ್ರುವರಿ ನಂತರ ವಾರದ ವಹಿವಾಟಿನಲ್ಲಿ ಕಂಡ ಉತ್ತಮ ಗಳಿಕೆ ಇದು.

ಶುಕ್ರವಾರದ ವಹಿವಾಟಿನಲ್ಲಿ ಎನ್‌ಎಸ್‌ಇ ನಿಫ್ಟಿ 50 ಸೂಚ್ಯಂಕ ಶೇ 0.7ರಷ್ಟು ಹೆಚ್ಚಾಗಿ 16,719 ಅಂಶಗಳಿಗೆ ತಲುಪಿತು. ಬಿಎಸ್‌ಇ ಮತ್ತು ನಿಫ್ಟಿ ಸೂಚ್ಯಂಕಗಳು ಜೂನ್ 3ರ ನಂತರದ ಗರಿಷ್ಠ ಮಟ್ಟವನ್ನು ತಲುಪಿದವು. ಬಿಎಸ್‌ಇ ಸೆನ್ಸೆಕ್ಸ್ 56,072 ಅಂಶಗಳಿಗೆ ತಲುಪಿತು. ಜೂನ್ 3ರ ನಂತರದ ಗರಿಷ್ಠ ಮಟ್ಟವನ್ನು ಎರಡೂ ಸೂಚ್ಯಂಕಗಳು ತಲುಪಿವೆ.

ನಿಫ್ಟಿ 50 ಸೂಚ್ಯಂಕದ ಈಚಿನ ಓಟಕ್ಕೆ ಬ್ಯಾಂಕ್ ಮತ್ತು ಆಟೊಮೊಬೈಲ್ ವಲಯಗಳ ಗಳಿಕೆ ಪ್ರಮುಖ ಕಾರಣ. ಜುಲೈನಲ್ಲಿ ಬ್ಯಾಂಕ್ ಸೂಚ್ಯಂಕ ಶೇ 9.9ರಷ್ಟು ಮತ್ತು ವಾಹನ ಸೂಚ್ಯಂಕ ಶೇ 8ರಷ್ಟು ಏರಿಕೆ ಆಗಿವೆ.

ವಿದೇಶಿ ಬಂಡವಾಳ ಹೂಡಿಕೆ ಮತ್ತೆ ಬರುತ್ತಿರುವುದು ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಗುಜರಾತ್ ಸ್ಟೇಟ್ ಫರ್ಟಿಲೈಸರ್ಸ್ ಆ್ಯಂಡ್ ಕೆಮಿಕಲ್ಸ್ ಕಂಪನಿಯು ಜೂನ್ ತ್ರೈಮಾಸಿಕದ ಫಲಿತಾಂಶ ಉತ್ತಮವಾಗಿದೆ. ಹೀಗಾಗಿ ಕಂಪನಿ ಷೇರು ಮೌಲ್ಯ ಶೇ 14.7ರಷ್ಟು ಏರಿಕೆ ಆಗಿದೆ. ಕ್ವಿಕ್ ಹೀಲ್ ಟೆಕ್ನಾಲಜೀಸ್ ಕಂಪನಿಯ ಷೇರು ಮರುಖರೀದಿ ಯೋಜನೆಗೆ ಒಪ್ಪಿಗೆ ದೊರೆತಿರುವುದರಿಂದ ಆ ಕಂಪನಿಯ ಷೇರು ಮೌಲ್ಯ ಶೇ 7ರಷ್ಟು ಹೆಚ್ಚಾಗಿದೆ.



ಬಿಎಸ್‌ಇನಲ್ಲಿ ದಿನದ ಗಳಿಕೆ(%)

ಅಲ್ಟ್ರಾಟೆಕ್	5.03
ಎಚ್‌ಡಿಎಫ್‌ಸಿ	2.37
ಎಚ್‌ಡಿಎಫ್‌ಸಿ ಬ್ಯಾಂಕ್	2.34
ಎಕ್ಸಿಸ್ ಬ್ಯಾಂಕ್	2.14
ಐಸಿಐಸಿಐ ಬ್ಯಾಂಕ್	1.74

ಕಚ್ಚಾ ತೈಲ ದರ ಇಳಿಕೆ ಮತ್ತು ವಿದೇಶಿ ಸಾಂಸ್ಥಿಕ ಬಂಡವಾಳ ಒಳಹರಿವಿನಿಂದಾಗಿ ಸೆನ್ಸೆಕ್ಸ್ 56 ಸಾವಿರದ ಮಟ್ಟವನ್ನು ಮೀರಲು ಸಾಧ್ಯವಾಯಿತು. ಅಮೆರಿಕದ ಫೆಡರಲ್ ರಿಸರ್ವ್ ಮತ್ತು ಆರ್‌ಬಿಐ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಮಾಡಲಿದೆ ಎನ್ನುವ ಆತಂಕವು ತುಸು ತಗ್ಗಿದಂತೆ ಕಾಣುತ್ತಿದೆ. ಹೀಗಾಗಿ ಆರ್ಥಿಕ ಸ್ಥಿತಿ ಉತ್ತಮವಾಗಿರುವ ಕಂಪನಿಗಳ ಷೇರುಗಳನ್ನು ಖರೀದಿಸಲು ಹೂಡಿಕೆದಾರರಿಗೆ ಅವಕಾಶ ಒದಗಿಬಂದಿದೆ ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ತಾಂತ್ರಿಕ ಸಂಶೋಧನೆಯ ಡೆಪ್ಯುಟಿ ಉಪಾಧ್ಯಕ್ಷ ಅಮೋಲ್ ಅಠಾವಳೆ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.51ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 103.33 ಡಾಲರ್‌ಗೆ ತಲುಪಿತು.

ಸೂಚ್ಯಂಕ ಏರಲು ಕಾರಣ
- ವಿದೇಶಿ ಬಂಡವಾಳ ಒಳಹರಿವು
- ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ದರ ಇಳಿಕೆ
- ಕಾರ್ಪೊರೇಟ್ ಫಲಿತಾಂಶ ಉತ್ತಮವಾಗಿರುವುದು

2 ವರ್ಷದಲ್ಲಿ ಇಂಡಿಯನ್‌ಮನಿ ಐಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಎರಡು ವರ್ಷಗಳಲ್ಲಿ ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮೊರೆ ಹೋಗುವ ಉದ್ದೇಶ ಇದೆ ಎಂದು ಇಂಡಿಯನ್‌ಮನಿ ಡಾಟ್ ಕಾಂ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸಿ.ಎಸ್. ಸುಧೀರ್ ತಿಳಿಸಿದರು.

ಕಂಪನಿಯು ಫ್ರೀಡಂ ಹೆಸರಿನ ಆ್ಯಪ್ ಮೂಲಕ ಹಣಕಾಸು ಸಾಕ್ಷರತೆ, ಕೃಷಿ ಮತ್ತು ವಾಣಿಜ್ಯೋದ್ಯಮ ಕುರಿತ ಶೈಕ್ಷಣಿಕ ಕೋರ್ಸ್‌ಗಳನ್ನು ಒದಗಿಸುತ್ತಿದೆ. 'ಶೀಘ್ರದಲ್ಲಿಯೇ ನಾವು ಬಾಂಗ್ಲಾದೇಶದಲ್ಲಿ ಚಟುವಟಿಕೆ ಆರಂಭಿಸಲಿದ್ದೇವೆ. ಬಂಗಾಳಿ ಭಾಷೆಯಲ್ಲಿಯೂ ನಮ್ಮ ಕೋರ್ಸ್‌ಗಳನ್ನು ಆರಂಭಿಸುವ ಕೆಲಸ ನಡೆದಿದೆ' ಎಂದು ಅವರು ಹೇಳಿದರು.

ಕಾರ್ಯಕ್ರಮವೊಂದರ ಸಂದರ್ಭದಲ್ಲಿ 'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ನಮ್ಮ ಕೋರ್ಸ್‌ಗಳಿಗೆ ಕನ್ನಡದಲ್ಲಿ ಅತಿಹೆಚ್ಚಿನ ಗ್ರಾಹಕರಿದ್ದಾರೆ. ಇಂಗ್ಲಿಷ್, ತೆಲುಗು ಮತ್ತು ಹಿಂದಿ ಭಾಷೆಗಳು ನಮ್ಮ ಕೋರ್ಸ್‌ನ ಗ್ರಾಹಕರ ಸಂಖ್ಯೆಯ ದೃಷ್ಟಿಯಿಂದ ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೆಯ ಸ್ಥಾನಗಳಲ್ಲಿವೆ' ಎಂದು ತಿಳಿಸಿದರು.

ಬಾಂಗ್ಲಾದೇಶದಲ್ಲಿ 'ಇಂಡಿಯನ್ ಮನಿ' ಎಂಬ ಹೆಸರಿನಲ್ಲಿ ವಹಿವಾಟು ನಡೆಸುವುದಿಲ್ಲ. ಅಲ್ಲಿ 'ಫ್ರೀಡಂ' ಆ್ಯಪ್ ಬ್ರ್ಯಾಂಡ್ ಅಡಿಯಲ್ಲಿ ವಹಿವಾಟು ನಡೆಯಲಿದೆ ಎಂದರು.

ಕಂಪನಿಯು ವಾರ್ಷಿಕ ₹ 500 ಕೋಟಿ ವರಮಾನ ಗಳಿಸುವ ಗುರಿ ಹೊಂದಿದೆ. ಆ ಗುರಿ ತಲುಪಿದ ತಕ್ಷಣ ಐಪಿಒ ನಡೆಸಲಾಗುತ್ತದೆ ಎಂದು ಸುಧೀರ್ ವಿವರಿಸಿದರು.

ಚಿನ್ನದ ದರ ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ ಶುಕ್ರವಾರ 10 ಗ್ರಾಂಗೆ ₹ 594ರಷ್ಟು ಏರಿಕೆ ಕಂಡು ₹ 50,341ರಂತೆ ಮಾರಾಟ ಆಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿರುವುದರಿಂದ ದೇಶದಲ್ಲಿ ಚಿನ್ನದ ದರ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 998ರಷ್ಟು ಹೆಚ್ಚಾಗಿ ₹ 55,164ಕ್ಕೆ ತಲುಪಿತು.

ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತೆರಳಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡ

ಆರು ಆಟಗಾರ್ತಿಯರಿಗೆ ಸಿಗದ ವೀಸಾ

ನವದೆಹಲಿ (ಪಿಟಿಐ): ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತೆರಳಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡದ ಆರು ಆಟಗಾರ್ತಿಯರಿಗೆ ಇನ್ನೂ ವೀಸಾ ಲಭಿಸಿಲ್ಲ.

ಹರ್ಮನ್‌ಪ್ರೀತ್ ಕೌರ್ ಬಳಗ ಭಾನುವಾರ ಇಂಗ್ಲೆಂಡ್‌ಗೆ ಪ್ರಯಾಣಿಸಬೇಕಿದೆ. ಕ್ರಿಕೆಟ್ ತಂಡವು ಬೆಂಗಳೂರಿನಲ್ಲಿ ನಡೆಯುತ್ತಿರುವ ಶಿಬಿರದಲ್ಲಿ ಅಭ್ಯಾಸ ನಡೆಸಿದೆ. ಆರು ಆಟಗಾರ್ತಿಯರಿಗೆ ವೀಸಾ ವ್ಯವಸ್ಥೆ ಮಾಡುವಂತೆ ಭಾರತ

ಹರ್ಮನ್‌ಪ್ರೀತ್ ಕೌರ್

ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯು ಭಾರತ ಒಲಿಂಪಿಕ್ ಸಂಸ್ಥೆಗೆ ಮನವಿ ಮಾಡಿದೆ.

‘ಕೆಲವು ವೀಸಾಗಳು ಇಂದು ಬಂದಿವೆ. ಆದರೆ, ಇನ್ನೂ ಆರು ಸದಸ್ಯರ ವೀಸಾ ಬರಬೇಕಿದೆ. ಅದರಲ್ಲಿ ಮೂವರು ನೆರವು ಸಿಬ್ಬಂದಿ ಇದ್ದಾರೆ. ಶನಿವಾರ ಎಲ್ಲ ವೀಸಾಗಳು ಬರಲೇಬೇಕು. ಈ ಪ್ರಕ್ರಿಯೆಯು ನಮ್ಮ ನಿಯಂತ್ರಣದಲ್ಲಿಲ್ಲ. ಬೇಸಿಗೆ ಋತುವಾಗಿರುವುದರಿಂದ ಇಂಗ್ಲೆಂಡ್ ವೀಸಾಗಳಿಗೆ ಬಹುಬೇಡಿಕೆ ಇದೆ’ ಎಂದು ಐಒಎ ಮೂಲಗಳು ತಿಳಿಸಿವೆ.

ಕೂಟದಲ್ಲಿ ಆಡಲು 15 ಆಟಗಾರ್ತಿಯರ ತಂಡವನ್ನು ಬಿಸಿಸಿಐ ಈಚೆಗೆ ಪ್ರಕಟಿಸಿದೆ. 29ರಂದು ಆಸ್ಟ್ರೇಲಿಯಾ ಎದುರು ಮೊದಲ ಪಂದ್ಯ ಆಡಲಿದೆ. 31ರಂದು ಪಾಕಿಸ್ತಾನದ ಎದುರು ಹಣಾಹಣಿ ನಡೆಸಲಿದೆ.

ಭಾರತ ತಂಡದ ಚೆಫ್ ಡಿ ಮಿಷನ್ ರಾಜೇಶ್ ಭಂಡಾರಿ ಅವರಿಗೆ ಶುಕ್ರವಾರ ವೀಸಾ ಲಭಿಸಿದೆ. ಡೆಪ್ಯುಟಿ ಚೆಫ್ ಡಿ ಮಿಷನ್ ಅನಿಲ್ ಧೂಪರ್ ಮತ್ತು ಮಣಿಂದರ್ ಸಿಂಗ್ ಅವರಿಗೆ ಇನ್ನೂ ಲಭಿಸಿಲ್ಲ. ಮೂರನೇ ಡೆಪ್ಯುಟಿ ಪ್ರಶಾಂತ್ ಖುಷ್ವಾಹ ಅವರಿಗೆ ಲಭಿಸಿದ್ದು ಶುಕ್ರವಾರ ಬೆಳಿಗ್ಗೆ ತೆರಳಿದ್ದಾರೆ.

ಬ್ಯಾಡ್ಮಿಂಟನ್‌ನಲ್ಲಿ ಮೂರು ಚಿನ್ನ: ತೃಪ್ತಿ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಬಾರಿಯ ಕಾಮನ್‌ವೆಲ್ತ್ ಕೂಟದ ಬ್ಯಾಡ್ಮಿಂಟನ್‌ನಲ್ಲಿ ಭಾರತಕ್ಕೆ ಮೂರು ಚಿನ್ನದ ಪದಕ ಗೆಲ್ಲುವ ಉತ್ತಮ ಅವಕಾಶವಿದೆ’ ಎಂದು ಹಿರಿಯ ಬ್ಯಾಡ್ಮಿಂಟನ್ ಆಟಗಾರ್ತಿ ತೃಪ್ತಿ ಮುರ್ಗುಂಡೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸೋನಿ ಸ್ಪೋರ್ಟ್ಸ್ ಶುಕ್ರವಾರ ಆಯೋಜಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ‘ತಂಡ ವಿಭಾಗ, ಮಿಶ್ರ ತಂಡ ವಿಭಾಗ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಭಾರತ ಚಿನ್ನದ ಪದಕ ಜಯಿಸಬಹುದು. ಇದಲ್ಲದೆ ಇತರ 2–3 ಪದಕಗಳನ್ನು ಗೆಲ್ಲುವ ಸಾಧ್ಯತೆಯೂ ಇದೆ’ ಎಂದಿದ್ದಾರೆ.

‘ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪಿ.ವಿ.ಸಿಂಧು ಚಿನ್ನ ಗೆಲ್ಲುವ ಫೇವರಿಟ್ ಎನಿಸಿಕೊಂಡಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲೂ ಭಾರತ ಚಿನ್ನ ಗೆದ್ದರೆ ಅಚ್ಚರಿಯಿಲ್ಲ. ಕೆ.ಶ್ರೀಕಾಂತ್ ಮತ್ತು ಲಕ್ಷ್ಯಸೇನ್ ಅವರು ಭರವಸೆ ಮೂಡಿಸಿದ್ದಾರೆ. ಇವರಿಬ್ಬರು ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಎದುರಾಗಬೇಕು ಎಂಬುದು ಎಲ್ಲರ ಬಯಕೆ’ ಎಂದರು.

ತೃಪ್ತಿ ಮುರ್ಗುಂಡೆ

‘ಮಲೇಷ್ಯಾ, ಸಿಂಗಪುರ ಮತ್ತು ಆತಿಥೇಯ ಇಂಗ್ಲೆಂಡ್‌ನ ಸ್ಪರ್ಧಿಗಳಿಂದ ಭಾರತಕ್ಕೆ ಪ್ರತಿರೋಧ ಎದುರಾಗಬಹುದು. ಮಲೇಷ್ಯಾದ ಕೆಲವು ಪ್ರಮುಖ ಆಟಗಾರರು ಕೂಟದಿಂದ ಹಿಂದೆ ಸರಿದಿದ್ದಾರೆ’ ಎಂದು ತಿಳಿಸಿದರು.

‘ಗಾಯದಿಂದ ಚೇತರಿಸಿಕೊಂಡ ಬಳಿಕ ಶ್ರೀಕಾಂತ್ ಉತ್ತಮವಾಗಿ ಆಡುತ್ತಿದ್ದಾರೆ. ಲಕ್ಷ್ಯ ಸೇನ್ ಕೂಡಾ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದು, ಇತ್ತೀಚೆಗೆ ತಾವಾಡಿದ ಎಲ್ಲ ಟೂರ್ನಿಗಳಲ್ಲೂ ಅವರು ಉತ್ತಮ ಆಟವಾಡಿದ್ದಾರೆ’ ಎಂದು ಹೇಳಿದರು.

ಸೆಹೆರ್ ಅತ್ವಾಲ್

ಗಾಲ್ಫ್: ಸೆಹೆರ್ ಚಾಂಪಿಯನ್

ಬೆಂಗಳೂರು: ಅಂತಿಮ ಹಂತದಲ್ಲಿ ಎದುರಾದ ಒತ್ತಡವನ್ನು ಸಮರ್ಥವಾಗಿ ಮೆಟ್ಟಿನಿಂತ ಸೆಹೆರ್ ಅತ್ವಾಲ್ ಇಲ್ಲಿ ಕೊನೆಗೊಂಡ ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್‌ನ 10ನೇ ಲೆಗ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಪ್ರೆಸ್ಟೀಜ್ ಗಾಲ್ಫ್‌ಶೈರ್ ಕೋರ್ಸ್‌ನಲ್ಲಿ ಶುಕ್ರವಾರ ಅಂತಿಮ ಸುತ್ತಿನಲ್ಲಿ ಸೆಹೆರ್, ಸ್ನೇಹಾ ಸಿಂಗ್, ನೇಹಾ ತ್ರಿಪಾಠಿ ಮತ್ತು ನಯನಿಕಾ ಸಂಗಾ ನಡುವೆ ತುರುಸಿನ ಪೈಪೋಟಿ ಕಂಡುಬಂತು. ಅಂತಿಮವಾಗಿ ಸೆಹೆರ್ (212) ಗೆಲುವಿನ ನಗು ಬೀರಿದರು. ದೆಹಲಿಯ ಗಾಲ್ಫರ್‌ಗೆ ಈ ಋತುವಿನಲ್ಲಿ ದೊರೆತ ಮೊದಲ ಪ್ರಶಸ್ತಿ ಇದು.

ನೇಹಾ ಮತ್ತು ನಯನಿಕಾ (211) ಜಂಟಿ ಎರಡನೇ ಸ್ಥಾನ ಪಡೆದುಕೊಂಡರೆ, ಸ್ನೇಹಾ ನಾಲ್ಕನೇ ಸ್ಥಾನ ಗಳಿಸಿದರು. ಪ್ರಣವಿ ಅರಸ್ (215) ಐದನೇ ಸ್ಥಾನ ಗಳಿಸಿದರು.

ತೇಜಸ್ವಿನ್‌ಗೆ ಕೊನೆಗೂ ಒಲಿದ ಅವಕಾಶ

ನವದೆಹಲಿ (ಪಿಟಿಐ): ಹೈಜಂಪ್ ಅಥ್ಲೀಟ್ ತೇಜಸ್ವಿನ್ ಶಂಕರ್ ಅವರಿಗೆ ಕೊನೆಗೂ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಅವಕಾಶ ಲಭಿಸಿದೆ.

ರಾಷ್ಟ್ರೀಯ ದಾಖಲೆ ಹೊಂದಿರುವ ತೇಜಸ್ವಿನ್ ಅವರ ಹೆಸರನ್ನು ತಡವಾಗಿ ನೋಂದಾಯಿಸಲಾಗಿದೆ ಎಂದು ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್ (ಸಿಜಿಎಫ್) ತಿರಸ್ಕರಿಸಿತ್ತು. ಸುಮಾರು ಒಂದು ತಿಂಗಳಿನಿಂದ ಭಾರತ ಒಲಿಂಪಿಕ್ ಸಂಸ್ಥೆಯು ತೇಜಸ್ವಿನ್ ಅವರನ್ನು ತಂಡಕ್ಕೆ ಸೇರಿಸಲು ಪ್ರಯತ್ನ ನಡೆಸಿತ್ತು. ಕಡೆಗೂ ಈ ಪ್ರಹಸನವು ಶುಕ್ರವಾರ ಸುಖಾಂತ್ಯ ಕಂಡಿತು.

ಅತಿಥಿ ನೋಂದಣಿ ಸಭೆ (ಡಿಆರ್‌ಎಂ) ಸಭೆಯಲ್ಲಿ ತೇಜಸ್ವಿನ್ ಸ್ಪರ್ಧೆಗೆ ಅನುಮೋದನೆ ನೀಡಲಾಯಿತು.

ಈ ಕುರಿತು ಪ್ರತಿಕ್ರಿಯಿಸಿದ ಶಂಕರ್, ‘ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತಿಲ್ಲ. ಇದೊಂದು ಏರಿಳಿತಗಳಿಂದ ಕೂಡಿದ ಸಮಯವಾಗಿತ್ತು. ಈಗಲೂ ನನಗೆ ನಂಬಲು ಸಾಧ್ಯವಾಗುತ್ತಿಲ್ಲ. ಸಿಕ್ಕಿರುವ ಅವಕಾಶವನ್ನು ಫಲಪ್ರದಗೊಳಿಸಿಕೊಳ್ಳುತ್ತೇನೆ’ ಎಂದರು.

ಭಾರತ ಅಥ್ಲೆಟಿಕ್ಸ್ ತಂಡದಲ್ಲಿ ಮೊದಲಿಗೆ ಅವರನ್ನು ಸೇರ್ಪಡೆ ಮಾಡಿರಲಿಲ್ಲ. ಅದನ್ನು ಪ್ರಶ್ನಿಸಿದ್ದ ಶಂಕರ್ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದರ ನಂತರ ಶಂಕರ್ ಅವರನ್ನು ಆರೋಕ್ಯ ರಾಜೀವ ಅವರ ಸ್ಥಾನದಲ್ಲಿ ಸೇರ್ಪಡೆ ಮಾಡಲಾಗಿದೆ ಎಂದು ಎಎಫ್‌ಐ ಕೋರ್ಟ್‌ಗೆ ತಿಳಿಸಿತ್ತು.